
ರಂಜನೆ ಬೋಧನೆ ಪ್ರಚೋದನೆ


ಲಂಕೇಶ್

ಗೌರೀಶ್ ಕಾಯ್ಕಿಣಿ ವ್ಯಕ್ತಿ-ವಿಚಾರ

ಸೆಪ್ಟೆಂಬರ್ 21, 2011 ಪುಟ 20 ರೂ. 14/-



ರೆಡ್ಡಿ ಗ್ಯಾಂಗ್ ಖಾರಾಪುಡಿ ಮಹೇಶನ ಕೊಲೆಗೆ ಸ್ಕೆಚ್?



ಡಿಟರ್ ೇಣುಕಾ ಾಪತ್ತೆ



ತ್ತರ ಕನ್ನಡ: ಧನಾಢ್ಯರಿಬ್ಬರ ದಗಲ್ಬಾಜಿ ರಾಜಕಾರಣ!



ಯಂಕೃಷಿ ಂಬ ಮತ್ತೊಂದು

ಚಾಮರಾಜನಗರ

ಅಷ್ಟಮಂಗಲ ಅಲ್ಲ ರೆಡ್ಡಿ ಸಂಹಾರ ಯಾಗ!



ಮೈಸೂರು ಟೈಕೂನ್ಸ್ ಇನ್ನೂರು ಕೋಟಿ ವಂಚನೆ

ಜನವರಿ 29 ರ ಬೆಳಗ್ಗೆ 6.55 ಕ್ಕೆ ನನಗೆ ಡೆಲಿವರಿ ಆಯಿತು. ಹೆಣ್ಣು ಮಗು. ಅವಳು ಎಷ್ಟು ಮುದ್ದಾಗಿದ್ದಳು ಅಂದರೆ ಅಷ್ಟು ಚೆಂದದ ಮಗುವನ್ನು ನಾನೆಲ್ಲೂ ನೋಡೇ ಇಲ್ಲ ಅನ್ನಿಸಿತು. ಲಂಕೇಶರು ನಮ್ಮ ಮೊದಲ ಮಗು ನೋಡಲು ಬಂದರು. ಆಗ ಚೆನ್ನವಜ್ಜಿ ಮಗಳನ್ನು ಬಟ್ಟೆಯಲ್ಲಿ ಬಿಗಿಯಾಗಿ ಸುತ್ತಿ ಅವರ ಕೈಗೆ ಕೊಟ್ಟರು. ಲಂಕೇಶರು ತಮ್ಮ ಮಗಳನ್ನು ಎಷ್ಟೋ ಹೊತ್ತು ಹಾಗೆಯೇ ನೋಡುತ್ತಾ ಕುಳಿತರು. ಅವತ್ತು ಅವರ ಕಣ್ಣಿನಲ್ಲಿ ಇದ್ದ ಆ ಸಂತೋಷವನ್ನು ನಾನು ಎಂದೂ ಮರೆಯಲು ಸಾಧ್ಯವಿಲ್ಲ.

ಮಗಳನ್ನೇ ದಿಟ್ಟಿಸುತ್ತಾ ಕೂತರು...

ಅಪ್ಪಯ್ಯ ಯಾವಾಗಲಾದರೊಮ್ಮೆ ನಮ್ಮ ಮನೆಗೆ ಬರುತ್ತಿದ್ದರು. ಅವರನ್ನು ಒಂಟಿತನ ಕಾಡಲಾರಂಭಿಸಿತ್ತು. ನನ್ನನ್ನು ಅವರು ತುಂಬಾ ಹಚ್ಚಿಕೊಂಡಿದ್ದರೂ ನಾನು ಈಗ ಅವರಿಂದ ದೂರವಾದೆ ಎಂದು ತುಂಬಾ ಕೊರಗುತ್ತಿದ್ದರು.

ನನ್ನ ಭಾವ ಶಿವರುದ್ರಪ್ಪ ವಾರದಲ್ಲಿ ಕನಿಷ್ಟ ಐದು ದಿನ ಶಿವಮೊಗ್ಗಕ್ಕೆ ಬೆಳಗ್ಗೆಯೇ ಬಂದು ಸಾಯಂಕಾಲ ಕೂನಗವಳ್ಳಿಗೆ ವಾಪಸ್ ಹೋಗುತ್ತಿದ್ದರು. ಅವರ ಜೊತೆಗೆ ಯಾವಾಗಲೂ ಇಬ್ಬರೋ ಮೂವರೋ ಜನ ಇದ್ದೇ ಇರುತ್ತಿದ್ದರು. ಅವರೆಲ್ಲರಿಗೆ ಒಂದು ಬಂಡಿ ಅನ್ನ ಸಾರು ಮಾಡಿ ಇಡುತ್ತಿದ್ದೆ.

ಅವರೆಲ್ಲ ಮಧ್ಯಾಹ್ನ ಊಟ ಮಾಡಿ ಹಾಲ್‌ನಲ್ಲಿ ಹಾಸಿಗೆ ಹಾಸಿಕೊಂಡು ಮಲಗುತ್ತಿದ್ದರು. ಬೀಡಿ ಸೇದಿ ಬೂದಿ ಮತ್ತು ಬೀಡಿ ಚೂರುಗಳನ್ನು ನೆಲದ ಮೇಲೆಲ್ಲ ಹಾಕುತ್ತಿದ್ದರು. ಅವರು ಹೋದಮೇಲೆ ಎಲ್ಲಾ ಗುಡಿಸಿ ಸ್ವಚ್ಛಗೊಳಿಸುತ್ತಿದ್ದೆ. ಲಂಕೇಶರು ಆಗ ಸಿಗರೇಟ್ ಸೇದುತ್ತಿದ್ದರು ಆದರೆ ಜಾಸ್ತಿ ಸೇದುತ್ತಿರಲಿಲ್ಲ.

ಒಮ್ಮೆ ಕಾಲೇಜ್‌ನಲ್ಲಿ ಒಂದು ತಮಾಷೆ ಆಯಿತು. ಲಂಕೇಶರ ಸಹೋದ್ಯೋಗಿಯಾಗಿದ್ದ ಒಬ್ಬರಿಗೆ ಯಾರನ್ನಾದರೂ ಲವ್ ಮಾಡಬೇಕು ಅಂತ ತುಂಬಾ ಆಸೆ ಇತ್ತು. ಆ ಲೆಕ್ಚರರ್‌ಗೆ ಒಂದು ದಿನ ಒಂದು ಪತ್ರ ಬಂತು. ಆದರೆ ಆ ಪತ್ರವನ್ನು ಬರೆದವರು ತನ್ನ ಹೆಸರನ್ನು ಬರೆದಿರಲಿಲ್ಲ. "ನಾನು ನಿಮ್ಮನ್ನು ತುಂಬಾ ಇಷ್ಟಪಡುತ್ತೇನೆ. ನೀವು ಪಾಠ ಮಾಡುವಾಗ ನೀವೇ ದುಷ್ಯಂತ, ನಾನೇ ಶಕುಂತಲೇ ಎಂದು ಕನಸು ಕಾಣುತ್ತಿರುತ್ತೇನೆ. ನಾನು ಯಾರು ಅಂತ ನೀವೇ ಕಂಡುಹಿಡಿಯಿರಿ. ದಿನಾ ನಿಮ್ಮ ಮುಂದೆ ಓಡಾಡುತ್ತಿರುತ್ತೇನೆ" ಎಂದೆಲ್ಲ ಪತ್ರದಲ್ಲಿ ಬರೆಯಲಾಗಿತ್ತು. ಆ ಪತ್ರವನ್ನು ಅವರು ಲಂಕೇಶ್‌ಗೆ



ಶಿವಮೊಗ್ಗೆಯಲ್ಲಿ ಆಡಿದ 'ಹ್ಯಾಮ್ಲೆಟ್' ನಾಟಕದ ದೃಶ್ಯದಲ್ಲಿ. ಹ್ಯಾಮ್ಲೆಟ್ ತಾಯಿಯ ಪಾತ್ರದಲ್ಲಿ ವೆಂಕೋಬರಾವ್ (1960)

ತೋರಿಸಿ "ಈಕೆ ಯಾರಿರಬಹುದು? ಹೇಗೆ ಕಂಡುಹಿಡಿಯುವುದು?" ಎಂದೆಲ್ಲ ಪೇಚಾಡಿಕೊಂಡರು.

ಒಂದು ವಾರ ಬಿಟ್ಟು ಇನ್ನೊಂದು ಪತ್ರ ಬಂತು. ಅದರಲ್ಲಿ "ನಿಮಗೆ ನನ್ನ ಕಷ್ಟವೇ ಅರ್ಥವಾಗುತ್ತಿಲ್ಲ. ನನ್ನ ಕಡೆ ನೀವು ತಿರುಗಿಯೂ ನೋಡುವುದಿಲ್ಲ. ಹೋಗಲಿ ಒಂದು ಕ್ಲೂ ಕೊಡುತ್ತೇನೆ. ನನ್ನ ಹೆಸರು 'ಲ' ಇಂದ ಪ್ರಾರಂಭ ಆಗುತ್ತೆ" ಅಂತ ಬರೆಯಲಾಗಿತ್ತು.

ಈ ಕ್ಲೂ ಸಿಕ್ಕಿದ್ದೇ ತಡ, ಆ ಮನುಷ್ಯ ಕಾಲೇಜ್‌ನಲ್ಲಿ ಇದ್ದಬದ್ದ 'ಲ'ಯಿಂದ ಪ್ರಾರಂಭವಾಗುವ ಎಲ್ಲಾ ಹುಡುಗಿಯರನ್ನು 'ಇವಳಿರಬಹುದೇ? ಇವಳಿರಬಹುದೇ?' ಅಂತ ನೋಡಿದ್ದೇ ನೋಡಿದ್ದು. ಆ ಮನುಷ್ಯನ ಕಷ್ಟ ನೋಡುವುದಕ್ಕೆ ಆಗುತ್ತಿರಲಿಲ್ಲ.

ಈ ಪತ್ರಗಳನ್ನು ಬರೆಯುತ್ತಿದ್ದದ್ದು ಲಂಕೇಶ್. ಈ ವಿಷಯ ನನಗೆ ಮತ್ತು ಇನ್ನೊಬ್ಬ ಲೆಕ್ಚರರ್‌ಗೆ ಮಾತ್ರ ಗೊತ್ತಿತ್ತು. ಇದು ಹೀಗೇ ಮುಂದುವರೆದರೆ ವಿಕೋಪಕ್ಕೆ ಹೋಗಬಹುದು ಅಂತ ಲಂಕೇಶರಿಗೆ ಅನ್ನಿಸಿ ಕೊನೆಗೊಂದು ದಿನ "ನಾನೇ ಆ ಪತ್ರಗಳನ್ನು ತಮಾಷೆಗೆ ಬರೆದದ್ದು" ಎಂದು ಹೇಳಿ ಅವರನ್ನು ಸಮಾಧಾನಪಡಿಸಿದರು. ಆ ಲೆಕ್ಚರರ್ ಆನಂತರ ಸಹ್ಯಾದ್ರಿ ಕಾಲೇಜಿನಿಂದ ಬೇರೆಡೆಗೆ ಟ್ರಾನ್ಸ್‌ಫರ್ ತೆಗೆದುಕೊಂಡು ಹೊರಟುಹೋದರು.

ಇವರ ಕಾಲೇಜಿನ ಅಧ್ಯಾಪಕರೆಲ್ಲ ಸೇರಿ ಒಮ್ಮೆ ಒಂದು ಇಂಗ್ಲಿಷ್ ಡ್ರಾಮಾ ಮಾಡಿದರು. ಅದಕ್ಕೋಸ್ಕರ ಲಂಕೇಶರು ತಮ್ಮ ಮೀಸೆ ಬೋಳಿಸಿದರು. ಆಗ ಅವರ ಮುಖ ನೋಡಲಿಕ್ಕೆ ಆಗುತ್ತಿರಲಿಲ್ಲ. ಆ್ಯಕ್ಟಿಂಗ್ ಕೂಡಾ ಕೆಟ್ಟದಾಗಿತ್ತು. "ಮೊದಲು ಮೀಸೆ ಬೆಳೆಸಿ" ಎಂದು ಹೇಳಿದೆ.

ಅವರು ಆಗಾಗ ಕಥೆ ಬರೆಯುತ್ತಿದ್ದರು. ಅದೇ ಸಮಯದಲ್ಲಿ ಅವರು 'ಗಿಳಿಯು ಪಂಜರದೊಳಿಲ್ಲ' ಎಂಬ ನಾಟಕ ಬರೆದದ್ದು. ಅದು ನಿಜವಾಗಲೂ ನಡೆದ ಒಂದು ಘಟನೆಯನ್ನು ಆಧರಿಸಿದೆಯಲ್ಲದೆ ಅದು ಒಂದು ರೀತಿಯಲ್ಲಿ ನಮ್ಮ ಬದುಕಿನ ಕಥೆ ಕೂಡ ಆಗಿತ್ತು. ಅದನ್ನು ಅವರು ಸ್ವಲ್ಪ ಬದಲಾಯಿಸಿದ್ದರು. ಸಮಯ ಸಿಕ್ಕಾಗಲೆಲ್ಲಾ ಅವರು ಓದುತ್ತಿದ್ದರು. "ನೀನೂ ಏನನ್ನಾದರೂ ಓದು. ಕಥೆ ಪುಸ್ತಕಗಳನ್ನು ತಂದುಕೊಡುತ್ತೇನೆ" ಅಂತ ಪುಸ್ತಕಗಳನ್ನು ತಂದು ಕೊಡಲು ಶುರು ಮಾಡಿದರು.

ನಾನು ಇವರನ್ನು ಮದುವೆ ಆಗುವ ತನಕ ಯಾವ ಕಥೆ ಪುಸ್ತಕವನ್ನೂ ಓದಿರಲಿಲ್ಲ. ಅದಕ್ಕೆ ಕಾರಣ ನನ್ನ ಅಪ್ಪಯ್ಯ. ಅವರು ಯಾವಾಗಲೂ ಬರೀ ಸ್ಕೂಲಿನ ಪಠ್ಯ ಪುಸ್ತಕ ಓದಬೇಕು ಎನ್ನುತ್ತಿದ್ದರು. ಹೆಚ್ಚೆಂದರೆ ದಿನಪತ್ರಿಕೆಯನ್ನು ಓದಲು ಹೇಳುತ್ತಿದ್ದರು. ಆಗ ನಮ್ಮ ಮನೆಗೆ ಒಂದು ಇಂಗ್ಲಿಷ್, ಒಂದು ಕನ್ನಡ ದಿನಪತ್ರಿಕೆಯಲ್ಲದೆ ವಾರ ಪತ್ರಿಕೆಯಾಗಿದ್ದ ಇಲಸ್ಟ್ರೇಡೆಡ್ ವೀಕ್ಲಿಯನ್ನು ಅಪ್ಪಯ್ಯ ತರಿಸುತ್ತಿದ್ದರು.

ಒಮ್ಮೆ ವೀಕ್ಲಿಯಲ್ಲಿ ಪ್ರಕಟಗೊಂಡಿದ್ದ ಒಂದು ಚಿತ್ರವನ್ನು ನೋಡಿ ಅದೇ ತರಹ ಬರೆದಿದ್ದೆ. ಅದು ತುಂಬಾ ಚೆನ್ನಾಗಿ ಮೂಡಿಬಂದಿತ್ತು. ಎಲ್ಲರೂ ಚೆನ್ನಾಗಿದೆ ಎಂದರು. ಆದರೆ ನನ್ನಪ್ಪಯ್ಯ ಅದನ್ನು ನೋಡಿ "ಪಾಠ ಓದು ಎಂದರೆ ಏನು ಮಾಡುತ್ತಿದ್ದೀಯ?" ಎಂದು ಬೈದಿದ್ದರು. ಅಷ್ಟೇ ಅಲ್ಲ, ನಾನು ಚೆಂದವಾಗಿ ಬರೆದಿದ್ದ ಚಿತ್ರವನ್ನೂ ಹರಿದು ಹಾಕಿಬಿಟ್ಟಿದ್ದರು.

ಆದರೆ ಈಗ ಲಂಕೇಶರು ನನ್ನನ್ನು ಪುಸ್ತಕ ಲೋಕಕ್ಕೆ ಪರಿಚಯಿಸಲಾರಂಭಿಸಿದ್ದರು...

* * * * *

ಒಂದು ದಿನ ಏನಾಯಿತೆಂದರೆ ನನ್ನ ಚಿಕ್ಕಪ್ಪ (ನನ್ನ ತಾಯಿಯ ತಂಗಿ ಕಮಲಕ್ಕಳ ಗಂಡ) ಸಿದ್ದಪ್ಪ ತಮ್ಮ ಎರಗನಾಳಿನಲ್ಲಿ (ಹೊನ್ನಾಳಿ ಹತ್ತಿರ ಇದೆ) ಗಲಾಟೆ ಮಾಡಿಕೊಂಡು ಅವರ ವಿರುದ್ಧ ಅರೆಸ್ಟ್ ವಾರೆಂಟ್ ಜಾರಿ ಆಗಿತ್ತು. ಆ ಹಳ್ಳಿಯಲ್ಲಿ ಲಿಂಗಾಯತರ ಎರಡು ಗುಂಪುಗಳ ನಡುವೆ ಘರ್ಷಣೆ ಆಗಿತ್ತು. ಪೊಲೀಸರಿಂದ ತಪ್ಪಿಸಿಕೊಂಡಿದ್ದ ಸಿದ್ದಪ್ಪ ಚಿಕ್ಕಪ್ಪನವರು ಅಡಗಿ ಕೊಳ್ಳಲು ಒಂದು ಜಾಗಕ್ಕಾಗಿ ಹುಡುಕುತ್ತಿದ್ದರು. ಆಗ ಲಂಕೇಶರು "ಅವರು ನಮ್ಮ ಮನೆಯಲ್ಲೇ ಇರಲಿ" ಎಂದರು.

ಸಿದ್ದಪ್ಪ ಚಿಕ್ಕಪ್ಪ ನಮ್ಮ ಮನೆಗೆ ಬಂದು ಕೆಲ ದಿನಗಳ ಕಾಲ ಬೆಳಕೇ ಇಲ್ಲದ ದೇವರ ಮನೆಯಲ್ಲಿ ಬಚ್ಚಿಟ್ಟುಕೊಂಡಿದ್ದರು. ಆಗ ಚಿಕ್ಕಪ್ಪನಿಗೆ ಲಂಕೇಶರು ತಮ್ಮ ಕಾಲೇಜಿನ ಲೈಬ್ರರಿಯಿಂದ ಪುಸ್ತಕಗಳನ್ನು ಮತ್ತು ಅಂಗಡಿಯಿಂದ ಬೀಡಿ ಇತ್ಯಾದಿಗಳನ್ನು ತಂದುಕೊಡುತ್ತಿದ್ದರು. ರಾತ್ರಿ ಆದಾಗ ಹೊರಗಡೆ ಯಾರೂ ಓಡಾಡುತ್ತಿಲ್ಲ ಎಂದು ಖಾತ್ರಿ ಮಾಡಿಕೊಂಡು ಲಂಕೇಶರು ಚಿಕ್ಕಪ್ಪನಿಗೆ "ಹೊರಗೆ ಬನ್ನಿ. ಸ್ವಲ್ಪ ಹೊತ್ತು ಆಚೆ ಕುಳಿತುಕೊಳ್ಳೋಣ" ಎಂದು ಕರೆದು ಅವರೊಂದಿಗೆ ಗಾರ್ಡನ್ನಿನಲ್ಲಿ ಮಾತಾಡುತ್ತಾ ಕುಳಿತುಕೊಳ್ಳುತ್ತಿದ್ದರು. ಲಂಕೇಶರು ಆಗ ಮನೆಯಲ್ಲಿ ಪೈಜಾಮ ಜುಬ್ಬ ಧರಿಸುತ್ತಿದ್ದರು. ಅವುಗಳನ್ನು ಚಿಕ್ಕಪ್ಪನಿಗೂ ಹಾಕಿಕೊಳ್ಳಲು ಕೊಟ್ಟಿದ್ದರು.

ಜಾಮೀನು ಸಿಕ್ಕ ನಂತರ ಚಿಕ್ಕಪ್ಪ ತಮ್ಮ ಊರಿಗೆ ಹೋದರು. ಈ ಪ್ರಕರಣದಿಂದ ಲಂಕೇಶರು ಹೊರಗೆ ಒರಟರಾಗಿದ್ದರೂ ಅವರ ಮನಸ್ಸು ಒಳ್ಳೆಯದ್ದು ಎಂದು ನನ್ನ ಸಂಬಂಧಿಕರಿಗೆ ಗೊತ್ತಾಯಿತು.


ನನ್ನ ಅಕ್ಕ ಸುಶೀಲ ಮದುವೆಯಾಗಿ ಹಲವು ವರ್ಷಗಳಾಗಿದ್ದರೂ ಆಕೆಗೆ ಮಗುವಾಗಿರಲಿಲ್ಲ. 1961ರಲ್ಲಿ ಆಕೆ ಮದುವೆಯಾಗಿ ಎಂಟು ವರ್ಷಗಳ ನಂತರ, ಪ್ರಥಮ



ಶಿವಮೊಗ್ಗೆಯಲ್ಲಿ 'ಉತ್ತಮ' ಕುಟುಂಬವಂತ (1961)

ಬಾರಿಗೆ ಪ್ರೆಗ್ನೆಂಟ್ ಆದಳು. ಅದೇ ವರ್ಷ ನಾನೂ ಗರ್ಭಿಣಿಯಾದೆ. ಆರು ತಿಂಗಳ ಗರ್ಭಿಣಿಯಾಗಿದ್ದ ಅಕ್ಕ ಬಾಣಂತನಕ್ಕೆ ಶಿವಮೊಗ್ಗೆಗೆ ಬಂದಾಗ ನಾನು ಮೂರು ತಿಂಗಳ ಬಸುರಿಯಾಗಿದ್ದೆ.

ಆಗ ನನಗೆ ತುಂಬಾ ಬಯಕೆ ಆಗುತ್ತಿತ್ತು. ಲಂಕೇಶರು ನನ್ನನ್ನು ಆಚೆ ಕರೆದುಕೊಂಡು ಹೋಗಿ ತಿಂಡಿ ಕೊಡಿಸುತ್ತಿದ್ದರು.



ಆದರೆ ತಿಂದಿದ್ದೆಲ್ಲ ವಾಂತಿ ಆಗುತ್ತಿತ್ತು. ಆಗ ಶಿವಮೊಗ್ಗೆಯಲ್ಲಿ ನಂಜುಂಡೇಶ್ವರ ಸ್ವೀಟ್ಸ್ ಎಂಬ ಅಂಗಡಿ ಇತ್ತು. ಅಲ್ಲಿ 5 ರೂ.ಗೆ 3 ಬಾದಾಮಿ ಹಲ್ವ ಸಿಗುತ್ತಿತ್ತು. ನನ್ನ ತಮ್ಮ ಶಿವಕುಮಾರ್‌ಗೆ ಐದು ರೂಪಾಯಿ ಕೊಟ್ಟು ಬಾದಾಮಿ ಹಲ್ವ ತರಿಸುತ್ತಿದ್ದೆ. ಅವನಿಗೆ ಒಂದು ಕೊಟ್ಟು ನಾನು ಎರಡು ಹಲ್ವಾ ತಿನ್ನುತ್ತಿದ್ದೆ.

ಹೆರಿಗೆಗೆಂದು ಅಕ್ಕ ಸುಶೀಲ ಶಿವಮೊಗ್ಗಕ್ಕೆ ಬಂದಾಗ ನಾನೂ ಅಪ್ಪಯ್ಯನ ಮನೆ ಸೇರಿದೆ. ಆದರೆ ನಮ್ಮ ಗ್ರಹಚಾರಕ್ಕೆ ಅದೇ ಹೊತ್ತಿಗೆ ನನ್ನ ಅಪ್ಪಯ್ಯನ ಮನೆಯಲ್ಲಿದ್ದ ಅಡುಗೆ ಕೆಲಸದವನು ಯಾರನ್ನೂ ಹೇಳದೆಕೇಳದೆ ಕೆಲಸ ಬಿಟ್ಟು ಓಡಿಹೋದ. ಬೇರೆ ಅಡುಗೆಯವರಿಗೆ ಪ್ರಯತ್ನಪಟ್ಟರೂ ಯಾರೂ ಸಿಗಲಿಲ್ಲ. ಆಗ ಅಡುಗೆ ಕೆಲಸವೆಲ್ಲ ಅಕ್ಕ, ಅಜ್ಜಿ ಚಿಕ್ಕವಜ್ಜಿ ಮತ್ತು ನನ್ನ ಮೇಲೆ ಬಿತ್ತು. ಲಂಕೇಶರು ಸಂಜೆ ಹೊತ್ತು ಬಂದು ನನ್ನನ್ನು ವಾಕ್‌ಗೆ ಕರೆದುಕೊಂಡು ಹೋಗುತ್ತಿದ್ದರು.

ಅಪ್ಪಯ್ಯ ನನಗೆ ಮತ್ತು ಅಕ್ಕನಿಗೆ ಒಟ್ಟಿಗೆ ಸೀಮಂತ ಮಾಡಿದರು. ನಮ್ಮಿಬ್ಬರನ್ನು ಅಂಗಡಿಗೆ ಕರೆದುಕೊಂಡು ಹೋಗಿ ಒಂದೇ ತರಹದ ಆದರೆ ಬೇರೆ ಬೇರೆ ಬಣ್ಣದ ಸೀರೆ ಕೊಡಿಸಿದರು. ನನ್ನ ಅತ್ತೆ ಮಾವ ಕೂಡಾ ನನಗೆ ಸೀಮಂತ ಮಾಡಿ ಸೀರೆ ಉಡಿಸಿದರು.

ಅಷ್ಟು ಹೊತ್ತಿಗೆ ಲಂಕೇಶರ ಅಕ್ಕನ ಮಗಳಿಗೂ (ಲಂಕೇಶರಿಗೆ ಮದುವೆ ಮಾಡಬೇಕೆಂದಿದ್ದ ಹುಡುಗಿ) ಮದುವೆಯಾಗಿ ಆಕೆಯ ಸೀಮಂತ ಕಾರ್ಯಕ್ರಮವನ್ನು ಊರಿನಲ್ಲಿ ಇಟ್ಟುಕೊಂಡಿದ್ದರು. ಅಲ್ಲಿಗೆ ಹೋದಾಗ ಆಕೆಗೆ ಏನನ್ನಾದರೂ ಕೊಡಬೇಕಿತ್ತು. ಆದರೆ ನಮ್ಮ ಹತ್ತಿರ ದುಡ್ಡಿರಲಿಲ್ಲ. ಆಗ ನನ್ನ ಅಪ್ಪಯ್ಯ ನನ್ನ ಸೀಮಂತಕ್ಕೆ ಕೊಟ್ಟಿದ್ದ ಸೀರೆಯನ್ನೇ ಆಕೆಗೆ ಕೊಟ್ಟೆ. ಆದರೆ ಅದರೊಂದಿಗೆ ಜಾಕೀಟ್ ಪೀಸ್ ಇಟ್ಟಿರಲಿಲ್ಲ. ಅದನ್ನು ಗಮನಿಸಿದ ಲಂಕೇಶರ ಕುಟುಂಬದವರು "ನಾವೇನು ವಡ್ಡರಾ ಜಾಕೀಟ್ ಇಲ್ಲದೆ ಸೀರೆ ಉಡಲು" ಎಂದು ಕಿಡಿಕಾರಿದರು. ಆಗ ನನಗೆ ಸೀರೆ ಜೊತೆ ಜಾಕೀಟ್ ಪೀಸ್ ಅನ್ನೂ ಕೊಡಬೇಕೆಂಬ ತಿಳಿವಳಿಕೆ ಇರಲಿಲ್ಲ.

ಅಪ್ಪಯ್ಯ ಆಗ ಎಲ್‌ಐಸಿಯಲ್ಲಿ ಇಡೀ ದಕ್ಷಿಣಕ್ಕೇ ಅತಿ ಹೆಚ್ಚು ಪಾಲಿಸಿಗಳನ್ನು ಮತ್ತು ಹೆಚ್ಚುಮೊತ್ತದ ಏಜೆನ್ಸಿಗಳನ್ನು ಮಾಡಿಸಿದ್ದಕ್ಕೆ ಅವರಿಗೆ ಎಲ್‌ಐಸಿಯಿಂದ ಅವಾರ್ಡ್ ಕೂಡ ಬಂದಿತ್ತು. ತಮ್ಮ ಕೆಲಸದ ಜೊತೆಜೊತೆಗೆ ಅಪ್ಪಯ್ಯ ಶಿವಮೊಗ್ಗೆಯಲ್ಲಿರುವ ಸಿದ್ಧರಾಮಯ್ಯ ಹಾಸ್ಟೆಲ್‌ಗೆ ಉಪಾಧ್ಯಕ್ಷರಾಗಿದ್ದರು ಮತ್ತು ಶಿವಮೊಗ್ಗ ಅರ್ಬನ್ ಕೋಆಪರೇಟಿವ್ ಸೊಸೈಟಿಗೆ ಸ್ಥಾಪಕ ಅಧ್ಯಕ್ಷರಾಗಿದ್ದರು. ಅವರು ತಮ್ಮ ಈ ಎಲ್ಲ ಕೆಲಸಗಳ ಕಡೆ ಜಾಸ್ತಿ ಗಮನ ಕೊಡುತ್ತಾ ಹೊತ್ತಿಗೆ ಸರಿಯಾಗಿ ಊಟ ಮಾಡ[...] ಆಸಿಡಿಟಿ ಆಗಿ ಡಾಕ್ಟರ್ ಅವರಿಗೆ ಖಾರ ತಿನ್ನಲ[...] ಅಂತ ಹೇಳಿದರು.

ನಾನು ಅಪ್ಪಯ್ಯನ ಮನೆ ಸೇರಿದ್ದರಿಂದ [...] ಒಬ್ಬರೇ ನಮ್ಮ ಮನೆಯಲ್ಲಿ ಇದ್ದರು. ಪ್ರತಿ ದಿನ [...] ತಿಂಡಿಗೆ ಅಪ್ಪಯ್ಯನ ಮನೆಗೆ ಬರುತ್ತಿದ್ದರು. ಒಮ್[...] ಬಂದಾಗ "ಮನೆ ಬೀಗ ಹಾಕಿಕೊಂಡು ಬ[...]" ಎಂದು ಕೇಳಿದೆ. ಅವರು "ಇಲ್ಲ" ಎಂದರು[...] ಓಡಿಹೋಗಿ ನಮ್ಮ ಮನೆಗೆ ಬೀಗ ಹಾಕಿ[...] ಅಷ್ಟೊಂದು ಮರೆವು ಲಂಕೇಶರಿಗೆ.

ಹಿಂದೊಮ್ಮೆ ಲಂಕೇಶರು ಅಪ್ಪಯ್ಯನ ಮನೆ[...] ಕಾಲೇಜ್‌ನಿಂದ ವಾಪಸ್ ಬಂದಾಗ ಮನೆಗೆ ಬೀಗ [...] ಆಗ ಇವರು ಯಾರಾದರು ಮನೆಗೆ ಬರುವುದಕ್ಕೆ [...] ಬದಲಾಗಿ ಕಲ್ಲಿನಿಂದ ಬೀಗ ಒಡೆದು ಮನೆ ಒಳಗೆ [...] ಕುಳಿತಿದ್ದರು. ಅದನ್ನು ನೋಡಿ ಅಪ್ಪಯ್ಯನಿಗೆ ಏನ್ನನಿಸಿ[...]

ನನ್ನ ಅಕ್ಕನಿಗೆ ಡೆಲಿವರಿ ಆಯಿತು. ಹೆಣ್ಣು[...] ತುಂಬಾ ಸಣ್ಣಗಿತ್ತು. ಆಕೆಯ ಮಗುವನ್ನು ನೋ[...] ತಮ್ಮ ಶಿವು "ಸುಶೀಲಕ್ಕನ ಹೊಟ್ಟೆ ಅಷ್ಟು ದಪ್ಪ [...] ಇಷ್ಟು ಸಣಕಲು ಮಗು ಹುಟ್ಟಿದೆ. ನಿನ್ನನ್ನ ನೋ[...] ನಿನಗೆ ಹೊಟ್ಟೆನೇ ಇಲ್ಲ, ಇನ್ನು ನಿನ್ನ ಮಗು [...] ಸಾರಿನ ಸೌಟಿನಷ್ಟು ಸಣ್ಣಗಿರುತ್ತೆ" ಅಂತ ತಮಾಷೆ [...]

ನನ್ನ ಅಕ್ಕನಿಗೆ ಡೆಲಿವರಿ ಮಾಡಿಸಿದ್ದ ಮೆಗ್ಗಾನ್ [...] ಲೇಡಿ ಮೆಡಿಕಲ್ ಆಫೀಸರಿಗೆ ನಾನು ಮತ್ತು [...] ಹೂವು, ಹಣ್ಣು ತೆಗೆದುಕೊಂಡು ಹೋದೆವು. ಆಗ [...] ನನ್ನನ್ನು ನೋಡಿ "ಏನು ಓದುತ್ತಿದ್ದಿಯಾ?" [...] ಕೇಳಿದರು. ಅದಕ್ಕೆ ಅಪ್ಪಯ್ಯ "ಇನ್ನು ಮೂರು ತಿ[...] ಇವಳೂ ನಿಮ್ಮ ಬಳಿ ಬರುತ್ತಾಳೆ" ಅಂದರು[...] ಡಾಕ್ಟರ್ "ಬಾ, ನಿನಗೂ ಚೆಕ್‌ಅಪ್ ಮಾಡೋಣ" [...] ಕರೆದುಕೊಂಡು ಹೋದರು. ನನ್ನನ್ನು ಟೆಸ್ಟ್ ಮಾಡು[...] ಡಾಕ್ಟರ್ "ಗಂಡು ಮಗು ಆಗುತ್ತೆ" ಅಂದರೆ ಹತ್ತಿ[...] ಇದ್ದ ಸಿಸ್ಟರ್ "ಹೆಣ್ಣಾಗುತ್ತೆ" ಅಂತ ಮಾತಾಡಿಕೊ[...]

ನನಗಂತೂ ಡೆಲಿವರಿ ಬಗ್ಗೆ ನೆನಸಿಕೊಂಡರೆ ಭಯ[...]ತ್ತಿತ್ತು. ನನ್ನಮ್ಮ ಮಗುವಿಗೆ ಜನ್ಮ ನೀಡಿದಾಗ [...] ನಾನೂ ಸತ್ತು ಹೋದರೆ ನನ್ನ ಮಗುವಿನ ಗತಿ [...] ನನ್ನನ್ನು ನನ್ನ ಅಪ್ಪಯ್ಯ ನೋಡಿಕೊಂಡಂ[...] ಗಂಡ ನನ್ನ ಮಗುವನ್ನು ಸಾಕುತ್ತಾರಾ? [...] ಏನೇನೋ ನೆನಸಿಕೊಂಡು ಅಳಲು [...] ಮಾಡಿದೆ. ಆಗ ಡಾಕ್ಟರ್ ನನ್ನ ಭಯಗಳ[...] ಕೇಳಿ "ಆಗಿನ ಕಾಲದಲ್ಲಿ ಒಳ್ಳೆಯ ಔಷಧಿ, [...] ಡಾಕ್ಟರ್, ಒಳ್ಳೆಯ ಆಸ್ಪತ್ರೆಯ ಸಂಪರ್ಕ ಹಳ್ಳಿ[...] ಇರಲಿಲ್ಲ. ಅದಕ್ಕೆ ಆಗ ಹಾಗಾಗಿತ್ತು. [...] ಹಾಗಿಲ್ಲ. ನಿನ್ನಕ್ಕನಿಗೆ ಹೆರಿಗೆ ಆಗಿಲ್ಲವಾ? ಹ[...] ಯೋಚಿಸಬೇಡ" ಅಂತ ಸಮಾಧಾನ ಮಾಡಿದರು[...] ಡಾಕ್ಟರ್ ಹೆಸರು ಸಿದ್ದಮ್ಮ ಅಂತ.

ಜನವರಿ 28 ಮಧ್ಯಾಹ್ನ ನನಗೆ ನೋ[...] ಕಾಣಿಸಿಕೊಂಡಿತು. ಲಂಕೇಶರು ಮತ್ತು ಅಪ್ಪಯ್ಯ ಇ[...] ನನ್ನನ್ನು ಮೆಗ್ಗಾನ್ ಆಸ್ಪತ್ರೆಗೆ ಕರೆದುಕೊಂಡು ಹೋ[...] ನನಗೆ ಡೆಲಿವರಿ ಆಗಲು ಇನ್ನೂ ಟೈಮ್ ಆಗುತ್ತೆ [...] ಡಾಕ್ಟರ್ ಹೇಳಿದಾಗ ಲಂಕೇಶರು ರಾತ್ರಿ ಒಂ[...] ಗಂಟೆಯವರೆಗೂ ಇದ್ದು ಮನೆಗೆ ಹೋದರು. ನನ್ನೊ[...] ಅಪ್ಪಯ್ಯ ಮತ್ತು ಚೆನ್ನವಜ್ಜಿ ಉಳಿದುಕೊಂಡರು.

ನನಗೆ ಸಿಸ್ಟರ್‌ಗಳು ಈಗಲೇ ಡೆಲಿವರಿ ಆಗಲ್ಲ, [...] ಓಡಾಡುತ್ತಿರು ಎಂದರು. ನನಗೆ ಏನೇನೋ ಯೋಚನೆ[...] ನಾನು ಅಳುವುದನ್ನು ನೋಡಿ ಅಪ್ಪಯ್ಯ ಕೂಡ ಅ[...] ಶುರು ಮಾಡಿದರು. ಕಿತ್ತಳೆಹಣ್ಣನ್ನು ಬಿಡಿಸಿ "ಸ್ವಲ್ಪ ತಿ[...]" ಅಂತ ತಿನ್ನಿಸುತ್ತಿದ್ದರು. ಅವರು ನನಗೆ ಸಮಾ[...] ಮಾಡುತ್ತಿದ್ದರೆ ನಾನು ಇನ್ನೂ ಜಾಸ್ತಿ ಅಳುತ್ತಿದ್ದೆ.


ನಾನು ಲೇಬರ್ ವಾರ್ಡ್‌ನಲ್ಲಿ ಇರುವಾಗ ಇನ[...] ಹೆಂಗುಸು ಡೆಲಿವರಿಗೆ ಬಂದಳು. ಅವಳು ಬಂದ [...] ನಿಮಿಷಕ್ಕೆಲ್ಲ ಅವಳಿಗೆ ಮಗು ಹುಟ್ಟಿತು. ನಾನು ಸಿಸ್ಟ[...] ಕರೆದು "ಅವರಿಗೆ ಇಷ್ಟು ಬೇಗನೆ ಹೆರಿಗೆ ಆಯಿ[...] ನನಗೇಕೆ ಇನ್ನು ಆಗುತ್ತಿಲ್ಲ?" ಅಂತ ಅಳುತ್ತಲೇ ಕೇ[...] ನನ್ನ ಪ್ರಶ್ನೆ ಕೇಳಿ "ಅವರಿಗೆ ಇದು ಎಂಟನೆ ಹೆರಿ[...]" ಎಂದ ಸಿಸ್ಟರ್ ನಗಲು ಶುರು ಮಾಡಿದರು.

ಜನವರಿ 29 ರ ಬೆಳಗ್ಗೆ 6.55 ಕ್ಕೆ ನನಗೆ ಡೆಲಿ[...] ಆಯಿತು. ಹೆಣ್ಣು ಮಗು. ಒಂಭತ್ತು ಪೌಂಡ್ ತೂಗುತ್ತಿ[...] ಮಗುವನ್ನು ನನಗೆ ತೋರಿಸಿದರು. ಅವಳು ಎ[...] ಮುದ್ದಾಗಿದ್ದಳು ಅಂದರೆ ಅಷ್ಟು ಚೆಂದದ ಮಗುವ[...] ನಾನೆಲ್ಲೂ ನೋಡೇ ಇಲ್ಲ ಅನ್ನಿಸಿತು. ನನ್ನ ಮಗು[...] ಮುಖ ನೋಡಿದ ತಕ್ಷಣ ನಾನು ಅನುಭವಿಸಿದ ನೋ[...] ನೆನಪೂ ಇಲ್ಲದಂತೆ ಮಾಯವಾಯಿತು. ನನ್ನನ್ನು ವಾರ್ಡ್[...] ಶಿಫ್ಟ್ ಮಾಡಿದರು. ಲಂಕೇಶರು ಆಗ ಸರ್ಕಾರಿ ಕಾಲೇಜಿ[...] ಕೆಲಸ ಮಾಡುತ್ತಿದ್ದರಿಂದ ನನಗೆ ಉಚಿತ ಸ್ಪೆಷಲ್ ವಾರ್ಡ್[...] ಅನುಕೂಲವಿತ್ತು. ಲಂಕೇಶರು ನಮ್ಮ ಮೊದಲ ಮ[...] ನೋಡಲು ಬಂದರು. ಆಗ ಚೆನ್ನವಜ್ಜಿ ಮಗಳನ್ನು ಬಟ್ಟೆಯ[...] ಬಿಗಿಯಾಗಿ ಸುತ್ತಿ ಅವರ ಕೈಗೆ ಕೊಟ್ಟರು.

ಲಂಕೇಶರು ತಮ್ಮ ಮಗಳನ್ನು ಎಷ್ಟೋ ಹೊ[...] ಹಾಗೆಯೇ ನೋಡುತ್ತಾ ಕುಳಿತರು. ಅವತ್ತು ಅವರ ಕಣ್ಣಿ[...] ಇದ್ದ ಆ ಸಂತೋಷವನ್ನು ನಾನು ಎಂದೂ ಮರೆಯ[...] ಸಾಧ್ಯವಿಲ್ಲ.

(ಮುಂದುವರೆಯುವು[...]

ಮಲೆನಾಡಿನ ತಿರುಗಾಟ ಮತ್ತು ಕಾರ್ನಾಡರ ಆತ್ಮಕತೆ



• ಗೌರಿ ಲಂಕೇಶ್
editorlankesh@gmail.com

ಪ್ರಜಾವಾಣಿಯಲ್ಲಿ ಪ್ರಕಟಗೊಂಡ ಗಿರೀಶ್ ಕಾರ್ನಾಡರ ಕಥನದ ಕಂತುಗಳನ್ನು ನಿಮ್ಮೆಲ್ಲರಂತೆ ನಾನೂ ಕೂಡ ಹಲದಿಂದ ಓದಿದ್ದೆ. ಅದು ಪುಸ್ತಕ ರೂಪದಲ್ಲಿ ಟಗೊಂಡಾಗ ಅದನ್ನು ಓದಲೇಬೇಕು ಎಂದುಕೊಂಡಿದ್ದೆ. ವಾಣಿಯಲ್ಲಿ ಅದರ ಭಾಗಗಳು ಪ್ರಕಟಗೊಂಡು ಬಹಳ ಳ ನಂತರ ಆ ಆತ್ಮಕಥನ ಪುಸ್ತಕದ ರೂಪದಲ್ಲಿ ಡುಗಡೆಗೊಂಡಿತು ಎಂದು ಗೊತ್ತಾದಾಗ ಅದನ್ನು ಯಲು ನಮ್ಮ ಆಫೀಸಿನ ಹತ್ತಿರವೇ ಇರುವ ಅಂಕಿತ ಸ್ತಕದ ಅಂಗಡಿಗೆ ಹೋಗಬೇಕು ಎಂದುಕೊಳ್ಳುತ್ತಿರು ಗಲೇ ಮನೋಹರ ಗ್ರಂಥ ಮಾಲೆಯವರು 'ಆಡಾಡುತಾ ಯುಷ್ಯ'ದ ಎರಡು ಪ್ರತಿಗಳನ್ನು ಕಳುಹಿಸಿದರು.

ಎರಡು ದಿನಗಳ ಕಾಲ ಆ ಪುಸ್ತಕ ಆಫೀಸಿನಿಂದ ನೆಗೆ, ಮನೆಯಿಂದ ಆಫೀಸಿಗೆ ನನ್ನೊಂದಿಗೆ ಸುತ್ತಾಡಿದರೂ ಸದ ಒತ್ತಡದ ನಡುವೆ ಅದರ ಮೊದಲನೆ ಪುಟವನ್ನೂ ಯಲಾಗಿರಲಿಲ್ಲ. ಕಳೆದ ವಾರ ತೀರ್ಥಹಳ್ಳಿಗೆ ಹೋದಾಗ ನ್ನು ಓದಲು ಸಮಯ ಸಿಗಬಹುದು ಎಂದು ಭಾವಿಸಿ ದನ್ನು ತೆಗೆದುಕೊಂಡು ಹೋಗಿದ್ದೆ. ಆದರೆ ರ್ಥಹಳ್ಳಿಯಲ್ಲಿನ ಪ್ರಗತಿಪರ ಗೆಳೆಯರಾದ ಸರ್ಜಾ ಶಂಕರ್ ಲೀಮಠ, ನೆಂಪೆ ದೇವರಾಜ್, ವಕೀಲ ನಾಗೇಶ್ ಅವರೆಲ್ಲ ರಿ ರೈತ ಮುಖಂಡ ತುಂಬೆಕೊಡಿಗೆ ಜಗನ್ನಾಥ ಅವರ ಪಿನಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮ ಮಧ್ಯಾಹ್ನ ಗಿಯುತ್ತಿದ್ದಂತೆ ಪ್ರೀತಿಯ ಕಡಿದಾಳು ಶಾಮಣ್ಣ ನನ್ನನ್ನು ಲ್ಲಿಂದ ಕಿಡ್ನಾಪ್ ಮಾಡಿದರು.

ತಮ್ಮ ಕಾರಿನಲ್ಲಿ ನನ್ನನ್ನು ಕೂರಿಸಿಕೊಂಡು ರ್ಥಹಳ್ಳಿಯ ಹತ್ತಿರವೇ ಇರುವ ಕಡಿದಾಳು ಮನೆಗೆ ನ್ನನ್ನು ಕರೆದುಕೊಂಡು ಹೋದರು. ಇವತ್ತಿಗೂ ಅಲ್ಲಿ ದಾಳು ಮನೆತನದ ಮೂಲಮನೆ ಇದೆ. ಇವತ್ತು ಮಣ್ಣರ ಕಿರಿಯ ಸಹೋದರ ಪ್ರಕಾಶ್ ಮತ್ತು ಅವರ ಟುಂಬ ಆ ಮನೆಯಲ್ಲಿ ವಾಸ ಮಾಡುತ್ತಿದ್ದಾರೆ. ಅಷ್ಟೇ ಲ್ಲ, ಪ್ರಕಾಶ್ ಮತ್ತು ಅವರ ಪತ್ನಿಗೆ ಆ ಮನೆಯ ಬಗ್ಗೆ ಷ್ಟು ಪ್ರೀತಿ ಅಂದರೆ ಅದರ ಮೂಲ ಸ್ವರೂಪವನ್ನು ಗೆ ಉಳಿಸಿಕೊಂಡಿದ್ದಾರಲ್ಲದೆ ಪುರಾತನ ಕಾಲದ ವಿವಿಧ ಸ್ತುಗಳನ್ನು ಸಂಗ್ರಹಿಸಿದ್ದಾರೆ.

ಬಿಡುವಿಲ್ಲದೆ ನಿರಂತರವಾಗಿ ಸುರಿಯುತ್ತಿದ್ದ ಮಲೆನಾಡಿನ ಳೆ, ಸುತ್ತಲೂ ಕಂಗೊಳಿಸುತ್ತಿದ್ದ ಹಸಿರು, ಅದರ ಮಧ್ಯೆ ಟ್ಟವಾಗಿಯೂ ಸುಂದರವಾಗಿಯೂ ಇರುವ ಮನೆ, ದರೊಳಗೆ ವಾಸಿಸುತ್ತಿರುವವರ ಬೆಚ್ಚನೆ ಮನಸ್ಸು... ಎಲ್ಲವೂ ಂದರವಾಗಿತ್ತು.

ಅಲ್ಲಿ ಸ್ವಲ್ಪ ಹೊತ್ತು ಇದ್ದು ಹೊರಟೆವು. ಶಾಮಣ್ಣ ಮಗಿನ್ನೂ 25ರ ಪ್ರಾಯ ಎಂಬಂತೆ ಮಜಬೂತಾಗಿ ರನ್ನು ಓಡಿಸುತ್ತಿದ್ದರು. ದಾರಿ ಮಧ್ಯದಲ್ಲಿ ಸಿಗುವ ಹಳ್ಳಿಗಳಲ್ಲಿ ಲ್ಲರೂ ಶಾಮಣ್ಣನವರನ್ನು ತಡೆದು ಮಾತನಾಡಿಸುವವರೆ.

ರ್ಥಹಳ್ಳಿಗೆ ವಾಪಸ್ ಬಂದಾಗ ಶಾಸಕ ಕಿಮ್ಮನೆ ರತ್ನಾಕರ್ ಅವರನ್ನು ಭೇಟಿ ಮಾಡಿದೆವು. ನಿಜವಾಗಲೂ ಇವತ್ತು ರ್ವ ಪ್ರಾಮಾಣಿಕ ರಾಜಕಾರಣಿ ನಮ್ಮ ರಾಜ್ಯದಲ್ಲಿ ಇದ್ದರೆ ಅದು ಕಿಮ್ಮನೆ ಅವರು ಮಾತ್ರ ಅನ್ನಿಸಿತು.

ಅಲ್ಲಿಂದ ಹೊರಟಾಗ ಶಾಮಣ್ಣ "ದಯಾನಂದನ ಮನೆಗೆ ಹೋಗೋಣ. ಅಲ್ಲಿಂದ ಶ್ರೀದೇವಿಗೆ ಹಲವು ಸಸಿಗಳನ್ನು ತೆಗೆದುಕೊಂಡು ಹೋಗಬೇಕಿದೆ" ಎಂದರು. ದಯಾನಂದ ಅವರು ಶಾಮಣ್ಣನವರ ಇನ್ನೋರ್ವ ತಮ್ಮ. ಅವರು ತೀರ್ಥಹಳ್ಳಿಯ ಹತ್ತಿರವಿರುವ ತಮ್ಮ ತೋಟದಲ್ಲಿ ಹಂಗಮ ಎಂಬ ರೆಸಾರ್ಟನ್ನು ನಡೆಸುತ್ತಾರೆ. ಆ ತೋಟದ ಮಧ್ಯೆ ತುಂಗಾನದಿ ಹರಿಯುತ್ತಿದ್ದು ಸುತ್ತಲಿನ ಪರಿಸರ ಷ್ಟು ಸುಂದರವಾಗಿದೆ ಎಂದರೆ ಅದನ್ನು ಆನಂದಿಸಲು ಎರಡು ಕಣ್ಣುಗಳು ಸಾಲದು. ಈ ಹಿಂದೆ ಒಮ್ಮೆ ಅಲ್ಲಿಗೆ ಚಂದನ್ ಗೌಡ ಮತ್ತು ಇತರೆ ಗೆಳೆಯರೊಂದಿಗೆ ಹೋಗಿದ್ದೆ.

ದಯಾನಂದ ಅವರು ತಮ್ಮ ತೋಟದಲ್ಲಿ ಒಂದು ನರ್ಸರಿಯನ್ನೂ ನಡೆಸುತ್ತಾರೆ. ಅಲ್ಲಿ ವಿವಿಧ ರೀತಿಯ ಸುಂದರ ಗಿಡಗಳ ಸಸಿಗಳು ಲಭ್ಯ. ಅಂತಹ ಹಲವು ಸಸಿಗಳನ್ನು ಶಾಮಣ್ಣ ತಮ್ಮ ಪತ್ನಿ ಶ್ರೀದೇವಿಯವರ ಕೋರಿಕೆ ಮೇರೆಗೆ ತೆಗೆದುಕೊಂಡು ಹೋಗಬೇಕಿತ್ತು. ಆದರೆ ಆ ಸಸಿಗಳನ್ನು ನೋಡಿದಾಗ ನನಗೂ ಅವುಗಳು ಬೇಕು ಎಂದೆ. ಆದರೆ ಅಷ್ಟುಹೊತ್ತಿಗೆ ಕೆಲಸದವರು ಮನೆಗೆ ಹೋಗಿದ್ದರಿಂದ ಮುಂದೆ ತಾವೇ ಅವುಗಳನ್ನು ಬೆಂಗಳೂರಿಗೆ ತಂದು ಕೊಡುವೆ ಎಂದು ದಯಾನಂದ ಅವರು ನನಗೆ ಭರವಸೆ ನೀಡಿದರು.

ಇಳಿಸಂಜೆ ಹೊತ್ತಿಗೆ ಶಿವಮೊಗ್ಗೆಗೆ ಅಲ್ಲಿಂದ ಮತ್ತೆ ನನ್ನ ಮತ್ತು ಶಾಮಣ್ಣನವರ ಪ್ರಯಾಣ ಶುರುವಾಯಿತು. ಅವತ್ತಿಗೆ ಗಣೇಶನ ಹಬ್ಬ ಮುಗಿದು ಮೂರು ದಿನಗಳಾಗಿದ್ದರಿಂದ ದಾರಿಯಲ್ಲಿ ಸಿಗುವ ಎಲ್ಲ ಹಳ್ಳಿಗಳ ಜನರು ಗಣೇಶ ಮೂರ್ತಿಗಳನ್ನು ವಿಸರ್ಜನೆಗೆ ತೆಗೆದುಕೊಂಡು ಹೋಗುತ್ತಿದ್ದರು. ಅಲ್ಲೆಲ್ಲ ಮೆರವಣಿಗೆ, ಹಾಡು, ಕುಣಿತ ಸಂಭ್ರಮದಿಂದ ನಡೆಯುತ್ತಿತ್ತು. ಅಲ್ಲೂ ಜನ ಶಾಮಣ್ಣನವರನ್ನು ನೋಡಿ ನಿಲ್ಲಿಸುತ್ತಿದ್ದರು ಅಥವಾ ಟಾಟಾ ಮಾಡುತ್ತ ನಮ್ಮ ಕಾರ್ ಮುಂದೆ ಸಾಗಲು ದಾರಿ ಮಾಡಿಕೊಡುತ್ತಿದ್ದರು.

ಕತ್ತಲಾಗುವ ಹೊತ್ತಿಗೆ ಶಿವಮೊಗ್ಗೆಯಲ್ಲಿನ ನನ್ನ ಮಾವ ಶಿವಕುಮಾರ್ ಮತ್ತು ಅಕ್ಕ ವಿಮಲಾಳ ಮನೆಗೆ ಶಾಮಣ್ಣನವರು ನನ್ನನ್ನು ಬಿಟ್ಟು ತಮ್ಮ ಮನೆ ಇರುವ ಭಗವತಿಕೆರೆಯತ್ತ ಸಾಗಿದರು. ಶಿವಮೊಗ್ಗೆಯಲ್ಲಿ ನಮ್ಮ ಚಂದ್ರೇಗೌಡ ಮತ್ತು ಅಜ್ಜಂಪುರ ವೆಂಕಟೇಶ್ ನನಗಾಗಿ ಕಾಯುತ್ತಿದ್ದರು. ಅವರೊಂದಿಗೆ ಊಟ ಮುಗಿಸಿ ರೈಲು ಹತ್ತಿ ಬೆಂಗಳೂರಿಗೆ ಹೊರಟೆ. ಈ ಪ್ರಯಾಣದಲ್ಲಿ ಒಂದಿಷ್ಟೂ ಪುರಸೊತ್ತು ಸಿಗದಿದ್ದರಿಂದ ಕಾರ್ನಾಡರ ಪುಸ್ತಕ ಸೂಟ್‌ಕೇಸಿನಿಂದ ಹೊರಬರಲೇ ಇಲ್ಲ.

ಭಾನುವಾರ ಮುಂಜಾನೆ ಬೆಂಗಳೂರಿಗೆ ಹಿಂದಿರುಗಿದೆ. ಅವತ್ತು ಆಫೀಸಿಗೆ ಹೋಗುವ ಜರೂರತ್ತು ನನಗೆ ಇರಲಿಲ್ಲ. ಅಮ್ಮ ಕೂಡ ಅವತ್ತು ಬೇಬಿ ಮನೆಗೆ ಹೋಗಿದ್ದರು. ಬಹಳ ದಿನಗಳ ನಂತರ ನಾನು ಒಬ್ಬಳೆ, ನನ್ನ ಬೆಚ್ಚಗಿನ, ನೆಮ್ಮದಿಯ, ಸದ್ದುಗದ್ದಲವಿಲ್ಲದ ಮನೆಯಲ್ಲಿ ಇದ್ದೆ. ಕೊನೆಗೂ ಸಮಯ ಸಿಕ್ಕಿತಲ್ಲ ಎಂದು ಹಾಲಿನಲ್ಲಿರುವ ದಿವಾನಾದ ಮೇಲೆ ಹೊರಳಿ ಕಾರ್ನಾಡರ ಪುಸ್ತಕ ತೆರೆದೆ. ಅವತ್ತು ಮನೆ ಕೆಲಸದವಳು ಹೋದ ಮೇಲೆ ಮುಚ್ಚಿದ ಮನೆ ಬಾಗಿಲನ್ನು ಮತ್ತೆ ತೆರೆಯಲಿಲ್ಲ. ಟಿವಿಯಂತೂ ಆನ್ ಆಗಲೇ ಇಲ್ಲ. ಯಾರಿಗೂ ಫೋನ್ ಮಾಡಲಿಲ್ಲ. ಯಾರ ಕರೆಯನ್ನೂ ಸ್ವೀಕರಿಸಲಿಲ್ಲ. ಸುಮ್ಮನೆ ಓದುತ್ತಾ ಹೋದೆ.

ರಾತ್ರಿ ಹೊತ್ತಿಗೆ 'ಆಡಾಡುತಾ ಆಯುಷ್ಯ'ದ ಮುಕ್ಕಾಲು ಭಾಗ ಮುಗಿಸಿದ್ದೆ. (ಉಳಿದ ಭಾಗವನ್ನು ಈ ಸಂಚಿಕೆಯ ಕೆಲಸ ಮುಗಿದ ಮೇಲೆ ಮುಗಿಸಬೇಕಿದೆ.) ಹಾಗೆ ಓದುತ್ತಿರುವಾಗ ಹಲವು ಭಾಗಗಳನ್ನು ಗುರುತು ಮಾಡಿದೆ. ಕಾರ್ನಾಡರು ತಮ್ಮ ಜೀವನದ ಬಗ್ಗೆ ಯಾವುದೆ ಮುಚ್ಚು ಮರೆ ಇಲ್ಲದೆ, ಆದಷ್ಟು ವಸ್ತುನಿಷ್ಠರಾಗಿ ಬರೆದಿದ್ದಾರೆ. ಆ ಪುಸ್ತಕದ ವಿಮರ್ಶೆಯನ್ನು ಬೇರೆಯವರು ಸದ್ಯದಲ್ಲೇ 'ಲಂಕೇಶ್'ಗೆ ಮಾಡಲಿರುವುದರಿಂದ ಅದರಲ್ಲಿ ಕಂಡುಬಂದ ಕೆಲವು ಆಯ್ದ ಕುತೂಹಲಕಾರಿ ಘಟನೆಗಳನ್ನು ನಮ್ಮ ಓದುಗರಿಗೆ ಇಲ್ಲಿ ನೀಡುತ್ತಿದ್ದೇನೆ. (ಆಡಾಡುತಾ ಆಯುಷ್ಯ: ಆತ್ಮ-ಕತೆಗಳು, ಗಿರೀಶ್ ಕಾರ್ನಾಡ, ಮನೋಹರ ಗ್ರಂಥ ಮಾಲೆ, ಧಾರವಾಡ, ಪುಟ: 339, ಬೆಲೆ: 300 ರೂ.):

ಗಾಂಧಿನಗರ ವಿತ್ತ ಪ್ರಪಂಚದ ನೈತಿಕ ವ್ಯೂಹರಚನೆಯಲ್ಲಿ ಜಿ.ವಿ.ಅಯ್ಯರ್ ಹೇಗೆ ಚಕ್ರವಕ್ರವಾಗಿ ಸುಳಿದಾಡುತ್ತಾರೆ ಎಂಬುದಕ್ಕೊಂದು ನಿದರ್ಶನ ನಮಗೆ ಕೆಲದಿನಗಳಲ್ಲೇ ಸಿಕ್ಕಿತು.


ಒಂದು ದಿನ ಅಯ್ಯರ್ ಒಬ್ಬ ಹಂಚಿಕೆದಾರರ ಆಫೀಸಿನೊಳಗಡೆ ಅವನೊಡನೆ 'ಖಾಸಗಿ' ಚರ್ಚೆ ನಡೆಸಿರುವಾಗ ನಾನು, ಕಾರಂತ, ಗೋಪಿ ಆಫೀಸಿನ ಹೊರಕೋಣೆಯಲ್ಲಿ ಕೂತಿದ್ದೆವು. ಆಗಲೇ ಒಬ್ಬ ವ್ಯಕ್ತಿ ಹೊರಗಿನಿಂದ ತರಾತುರಿಯಿಂದ ದಾಪುಗಾಲು ಹಾಕುತ್ತ ಬಂದು, ನಮ್ಮ ಕಡೆಗೆ ದೃಷ್ಟಿಯನ್ನೂ ಚೆಲ್ಲದೆ ಆಫೀಸಿನೊಳಕ್ಕೆ ನುಗ್ಗಿದ. ಕ್ಷಣಮಾತ್ರ ಆಫೀಸಿನ ಅಂತರಂಗದಿಂದ ಎತ್ತರಿಸಿದ ದನಿಯಲ್ಲಿ ವಾಗ್ವಾದ ಕೇಳಿಬರುತ್ತಿರುವಂತೆ, ಆ ವ್ಯಕ್ತಿ ಅಯ್ಯರರ ಅಂಗಿಯ ಕಾಲರನ್ನು ತನ್ನ ಎಡಮುಷ್ಟಿಯಲ್ಲಿ ಬಿಗಿಯಾಗಿ ಹಿಡಿದುಕೊಂಡು, ಅವರನ್ನು ದರದರ ಎಳೆದುಕೊಂಡು ಹೊರಗೆ ಬಂದ. ಅಯ್ಯರ್ 'ಇಲ್ಲಿ ಕೇಳಯ್ಯಾ ಒಂದು ನಿಮಿಷ' ಎಂದು ಸಮಾಧಾನಪಡಿಸಲೆತ್ನಿಸುತ್ತಿರುವಾಗಲೇ 'ಬಾರಯ್ಯಾ ಬಾ. ನಿನಗೆ ಈವತ್ತು ತೋರಿಸದಿದ್ದರೆ-ಈಗೆಲ್ಲಿ ತಪ್ಪಿಸಿಕೊಂಡು ಹೋಗತೀ ನೋಡೋಣ. ನಿನ್ನ ನಿನ-' ಎಂದೇನೋ ಬಯ್ಯುತ್ತ ಅವರನ್ನು ಎಳೆದುಕೊಂಡು ಮಾಯವಾದ.

ನಾವು ದಿಗ್ಭ್ರಾಂತರಾಗಿ ಕುಳಿತೆವು. ಕನ್ನಡದ ಸತ್ಯಜಿತ್ ರಾಯ್‌ರಾಗುವ ನಮ್ಮ ಕನಸು ಅಲ್ಲೇ ಕರಗಿ ಹರಿದಿತ್ತು. ನಮಗೆ ಏನು ಮಾಡಬೇಕೋ ತೋಚದಾಯಿತು.

ಕೆಲಹೊತ್ತಿನ ಬಳಿಕ ಅಯ್ಯರ್, ಆ ವ್ಯಕ್ತಿ ಮತ್ತೆ ಪ್ರತ್ಯಕ್ಷರಾದರು. ಈ ಸಲ ಆತ ತನ್ನ ಎಡಗೈಯನ್ನು ಪ್ರೀತಿಯಿಂದ ಅವರ ಹೆಗಲ ಸುತ್ತ ಹಾಕಿ, ಮೈದಡವಿ, ತನ್ನ ಬಲಗೈಯಿಂದ ಅವರ ಬಲಗೈಯನ್ನು ತನ್ನ ಎದೆಗೆ ಅವಚಿ ಹಿಡಿದು, ಹೊರಕೋಣೆಯಲ್ಲಿ ನಮ್ಮ ಎದುರಿಗೇ ನಿಂತು, 'ಅಯ್ಯೋ, ನನ್ನನ್ನು ಕ್ಷಮಿಸಿ ಬಿಡಿರಿ, ತಪ್ಪು ಮಾಡಿಬಿಟ್ಟೆ. ಥೂ ಏನು ಮಾಡೋದು ಈ ನನ್ನ ದರಿದ್ರ ಕೋಪಕ್ಕೆ! ಅದರ ಮನೆ ಹಾಳಾಗ! ಬೇಕಾದರೆ ನಿಮ್ಮ ಕಾಲಿಗೆ ಬೀಳುತ್ತೇನೆ' ಎಂದೇನೇನೋ ನರಳುತ್ತ ಅವರನ್ನು ಮತ್ತೆ ಮತ್ತೆ ನಮಸ್ಕರಿಸಿದ. ಅಯ್ಯರ್‌ರು ಅರಿಯದ ಬಾಲಕನನ್ನು ಕ್ಷಮಿಸುವಂತೆ, 'ಸರಿ ಸರಿ, ನೀ ಇನ್ನು ಹೊರಡು' ಎಂದು ಧೀಮಂತ ದನಿಯಲ್ಲಿ ಉಸುರಿ, ನಮಸ್ಕಾರ ಮಾಡುತ್ತ ಮಾಯವಾಗುತ್ತಿರುವ ಆ ವ್ಯಕ್ತಿಯ ಕಡೆಗಾಗಲಿ ನಮ್ಮ ಕಡೆಗಾಗಲಿ, ದೃಷ್ಟಿ ಕೂಡ ಚೆಲ್ಲದೆ, ಇದೇನೂ ಮಹತ್ವದ ಘಟನೆಯಲ್ಲ ಎಂಬ ರೀತಿಯಲ್ಲಿ ಆಫೀಸನ್ನು ಸೇರಿಕೊಂಡರು.

ಘಟಿಸಿದ್ದೇನು ಎಂದು ನಾವು ಆಮೇಲೆ ಕೇಳಿದಾಗ ಅವರು ವಿವರಿಸಿದ್ದು ಹೀಗೆ: 'ನಾನು ಅವನಿಗೆ ಹೇಳಿಬಿಟ್ಟೆ: "ನಾನು ನಿನ್ನ ಸಾಲ ತೀರಿಸಬೇಕಾದರೆ ಈ ಚಿತ್ರ ಆಗಬೇಕು. ಬಸವರಾಜಯ್ಯನೇ ಮಾಡತಿದಾನೆ. ಬೇಕಾದರೆ ಫೋನ್ ಮಾಡಿ ಕೇಳಿನೋಡು. ಆದರೆ ಈಗ ನೀನು ತೋರಿಸಿದ ಕೋತಿ ವ್ಯವಹಾರಕ್ಕೆ ಹೇಸಿ ಆ ಇಬ್ಬರು ಹುಡುಗರೇನಾದರೂ ಹೊರಟುಹೋದರೋ, ಈ ಫಿಲ್ಮ್ ಆಗೋದಿಲ್ಲ. ಆಗ ನಿನ್ನ ಒಂದೂ ಕಾಸು ಜನ್ಮಜನ್ಮಾಂತರದಲ್ಲೂ ನಿನಗೆ ಸಿಗೋದಿಲ್ಲ. ನೀನು ಮಾಡಿರೋ ಪ್ರಮಾದವನ್ನು ಮೊದಲು ಅವರೆದುರಿಗೆ ತಿದ್ದಿಕೋ" ಎಂದೆ. ಉಳಿದದ್ದನ್ನು ನೀವು ನೋಡಿದಿರಲ್ಲ' ಎಂದು ನಕ್ಕರು.

*****



ಕಡಿದಾಳು ಸಹೋದರರು, ಕಡಿದಾಳ ಮನೆ ಮತ್ತು ಪ್ರಕಾಶ



'ವಂಶವೃಕ್ಷ'ದಲ್ಲಿ 'ಪೃಥ್ವಿ'ಯ ಪಾತ್ರ ಚಿಕ್ಕದಾದರೂ ಆ ಕಲಾಕಾರನ ಕತೆಯನ್ನೂ ಇಲ್ಲಿ-ನೆನಪಿಸಿಕೊಳ್ಳಲೇಬೇಕು.

ಕಾನಕಾನಹಳ್ಳಿ ಗೋಪಿ ಹೋಟೆಲಿನಲ್ಲಿ ಚಹಾಕ್ಕೆ ದುಡ್ಡು ಕೊಡಲು ಚಿಲ್ಲರೆ ಇಲ್ಲದೆ ಚಡಪಡಿಸುತ್ತಿದ್ದಾಗ ಅವರಿಗೆ ಪರಿಚಯವಿದ್ದ ನ್ಯಾಷನಲ್ ಕಾಲೇಜಿನ ಸಂಪತ್ಕುಮಾರ ಎಂಬ ತರುಣ ಬಂದು 'ನಾನು ಚೇಂಜ್ ಕೊಡುತ್ತೇನೆ' ಎಂದನಂತೆ. ಕೂಡಲೇ ಗೋಪಿ ಅವನನ್ನು ವೈಎನ್ಕೆಯ ಮನೆಗೆ ಬಂದು ನನ್ನನ್ನು ಕಾಣಲು ಹೇಳಿದರು. 'ಗಿರೀಶ ಕಾರ್ನಾಡ ಫಿಲ್ಮ್‌ನಲ್ಲಿ ಒಂದು ಪಾತ್ರಕ್ಕಾಗಿ ತರುಣನನ್ನು ಹುಡುಕುತ್ತಿದ್ದಾರೆ. ತಪ್ಪದೆ ಬಾ' ಎಂದು ಎಚ್ಚರಿಕೆಯಿತ್ತರು.

ಮಾರನೆಯ ದಿನ ನಾನು ವೈಎನ್ಕೆಯ ಮನೆಯಲ್ಲಿ ಏನೋ ಕೆಲಸ ಮಾಡುತ್ತ ಒಬ್ಬನೇ ಕುಳಿತಿದ್ದೆ. ವೈಎನ್‌ಕೆ ಆಫೀಸಿಗೆ ಹೋಗಿರಬೇಕು. ಸಂಪತ್ಕುಮಾರ ಬಂದ, ಕೂತ. ತುಂಬ ಸ್ಫುರದ್ರೂಪಿ, ಎತ್ತರ ಮೈಕಟ್ಟು. ಸಿನಿಮಾ ನಾಯಕನಾಗಲು ಯೋಗ್ಯನಾಗಿದ್ದ. ವಯಸ್ಸು ಹದಿನೆಂಟು ಇರಬೇಕು. ಅವನ ಚಲನವಲನಗಳಲ್ಲೇ ಆತ್ಮವಿಶ್ವಾಸ ಎದ್ದು ಕಾಣುತ್ತಿತ್ತು.

'ನಿಮಗೆ ಅಭಿನಯದ ಅನುಭವವಿದೆಯೇ?' ಎಂದು ಕೇಳಿದೆ.

'ಓಹೋ, ನ್ಯಾಷನಲ್ ಕಾಲೇಜಿನಲ್ಲಿ ಎಲ್ಲ ನಾಟಕಗಳಲ್ಲಿ ಮುಖ್ಯ ಪಾತ್ರ ನನ್ನದೇ' ಎಂದ.

'ನೀವು ಚಲನಚಿತ್ರಗಳಲ್ಲಿ ಪಾತ್ರ ವಹಿಸಿದ್ದೀರಾ?' ಎಂದು ಕೇಳಿದೆ.

'ಇನ್ನೂ ಯಾವುದೂ ಪೂರ್ತಿಯಾಗಿಲ್ಲ. ಆದರೆ ಮೂರು ನಾಲ್ಕು filmಗಳನ್ನು sign ಮಾಡಿದ್ದೇನೆ. ಒಂದು ಹಿಂದೀ ಚಿತ್ರದಲ್ಲಿ ಕೂಡ ಹೀರೋ ರೋಲ್ ಮಾಡತಾ ಇದ್ದೇನೆ. ಅದರಲ್ಲಿ ಮಾಲಾ ಸಿನ್ಹಾ ನಾಯಕಿ.'

'ಅರೇ! ಮಾಲಾ ಸಿನ್ಹಾಳ ಜೊತೆಗೆ ಪಾತ್ರ ಮಾಡಲಿದ್ದೀರೇನು? ಅಂಥ ದೊಡ್ಡ ಸ್ಟಾರ್ ಜೊತೆಗೆ! ಆದರೆ ಆಕೆ ವಯಸ್ಸಿನಲ್ಲಿ ನಿಮಗಿಂತ ತುಂಬ ದೊಡ್ಡವಳಿರಬೇಕಲ್ಲ' ಎಂದೆ.

'ಅಯ್ಯೋ, ನೀವು ಆಕೆಯನ್ನು ನೋಡಿಲ್ಲ. ಹದಿನೆಂಟು ವಯಸ್ಸಿನ ಯುವತಿ ಇದ್ದ ಹಾಗಿದ್ದಾಳೆ. ಆಕೆಯ ಜೊತೆಗೆ ಒಂದು ಚಿತ್ರದ ಶೂಟಿಂಗ್ ಆರಂಭವಾಗಲಿಕ್ಕಿದೆ. ಇನ್ನೆರಡು ಚಿತ್ರಗಳ offer ಬಂದಿದೆ' ಎಂದು ಬೀಗುತ್ತಲೇ ಉತ್ತರಿಸಿದ.

'ಯಾವಾಗ?' ಎಂದೆ.

'ಮುಂದಿನ ತಿಂಗಳು outdoor ಇದೆ. ಹೊರಡತಿದ್ದೇವೆ. ಊಟಿಯಲ್ಲಿ song picturisation. ಆದರೆ ಕಾಶ್ಮೀರಿಗೂ ಹೋಗಬಹುದು' ಎಂದ.

'ಓಹೋ, ಹಾಗಾದರೆ ನಮಗೆ ನೀವು ಸಿಗುವುದಿಲ್ಲ. ನಾವು ಇನ್ನೊಂದು ಹದಿನೈದು ದಿನಗಳಲ್ಲಿ ಚಿತ್ರೀಕರಣ ಆರಂಭಿಸಬೇಕಲ್ಲ. pity!' ಎಂದೆ.

ಸಂಪತ್ಕುಮಾರ ಕೂತಲ್ಲೇ ಹೆಪ್ಪುಗಟ್ಟಿದಂತಾದ.

'ನೀವು ಯಾರು ತಿಳೀಲಿಲ್ಲ' ಎಂದು ಕೆಳದನಿಯಲ್ಲಿ ಕೇಳಿದ.

'ನನ್ನ ಹೆಸರು ಗಿರೀಶ ಕಾರ್ನಾಡ' ಎಂದೆ.

ಸಂಪತ್ಕುಮಾರನ ಆಢ್ಯತೆಯೆಲ್ಲ ಒಂದು ಕ್ಷಣದಲ್ಲಿ ಕುಸಿದು ಬಿತ್ತು. 'ಅಯ್ಯೋ, ನೀವು ಯಾರು ಅಂತ ಗೊತ್ತಾಗಲಿಲ್ಲ. ಕ್ಷಮಿಸಿ, ಸಾರ್. ನನ್ನ ಹಿಂದಿ shooting ಗೆ ಇನ್ನೂ ಸಮಯ ಇದೆ. ಮಾಲಾ ಸಿನ್ಹಾ ಬಹಳ busy

7ನೇ ಪುಟಕ್ಕೆ



ಮೈಸೂರು: ಬ್ಲೇಡ್ ಕಂಪನಿ ಟೈಕೂನ್ಸ್ ಎಂಪೈರ್ ಇನ್ನೂರು ಕೋಟಿ ಮಹಾ ವಂಚನ

ಮೈಸೂರಿನ ನಜರ್‌ಬಾದ್ ವ್ಯಾಪ್ತಿಗೆ ಬರುವ ಅತಿ ಐಷಾರಾಮಿ ಎಸ್.ಕೆ. ಕಾಂಟಿನೆಂಟಲ್ ಹೋಟೇಲಿನ ಆವರಣದಲ್ಲಿ ಶುರುವಾದ ಸಣ್ಣ ಹೊಗೆ ಬರೋಬ್ಬರಿ ಇನ್ನೂರು ಕೋಟಿ ವಂಚನೆಯ ಘಾಟೊಂದನ್ನು ಬೀದಿಗೆಳೆದು ಬೆತ್ತಲುಗೊಳಿಸಿದೆ. ದಿಡೀರ್ ದುಡ್ಡಿನ ಬೆನ್ನು ಹತ್ತುವ ಜನರ ದೌರ್ಬಲ್ಯವನ್ನೇ ಬಂಡವಾಳವನ್ನಾಗಿಸಿಕೊಳ್ಳುವ ಹತ್ತಾರು ಬ್ಲೇಡ್ ಕಂಪನಿಗಳ ಬಣ್ಣ ಕಣ್ಣೆದುರಿಗೇ ಬಯಲಾಗುತ್ತಿದ್ದರೂ ಜನ ಇನ್ನೂ ಬುದ್ಧಿ ಕಲಿತಿಲ್ಲ ಎಂಬುದಕ್ಕೆ ಇದು ಮತ್ತೊಂದು ತಾಜಾ ಉದಾಹರಣೆಯಷ್ಟೆ. ಮೈಸೂರಿನ ಮಂದಿ 'ಟೈಕೂನ್ಸ್ ಎಂಪೈರ್ ಇಂಟರ್‌ನ್ಯಾಷನಲ್ ಲಿಮಿಟೆಡ್' ಎಂಬ ಸುರಂಗ ಮಾರ್ಗದೊಳಕ್ಕೆ ಹಣ ಸುರಿದು ಇದೀಗ ಬಾಯಿ ಬಡಿದುಕೊಳ್ಳಲು ಶುರುಹಚ್ಚಿಕೊಂಡಿದ್ದಾರೆ.

ವಂಚನೆಯ ಪಿಕ್ಚರ್‌ನ ಮೊದಲನೇ ರೀಲು ಶುರುವಾಗುವುದು ಚೆನ್ನೈನ ಕೊಟ್ಟಿವಕ್ಕಮ್‌ನಿಂದ. 2008 ರಲ್ಲಿ ಕಮಲಾ ಕಣ್ಣನ್ ಅನ್ನೋ ವ್ಯಕ್ತಿ ಇಂಥದ್ದೊಂದು ಭರ್ಜರಿ ಸಂಸ್ಥೆಯನ್ನು ಹುಟ್ಟು ಹಾಕಿದ. ತಿಂಗಳಿಗೆ ಶೇ. 10 ಬಡ್ಡಿಯಂತೆ ವಿಚಿತ್ರ ಯೋಜನೆ ಮೂಲಕ ತಾವಿಟ್ಟ ಅಮೌಂಟಿಗೆ ಹಣವನ್ನು ಗುಣಿಸಿ ಕೊಡ್ತೀನಿ ಅಂತ ಆತ ಊದಿದ ಪುಂಗಿಗೆ ಜನ ತಲೆಯಾಡಿಸಿ ಕಂತೆ ಕಂತೆಗಳನ್ನು ಆಯಪ್ಪನ ಅಕೌಂಟಿಗೆ ಜಮಾ ಮಾಡಿದ್ದರು. ಈ ಪರಿ ನೀತಿಗೆಟ್ಟ ಬಿಜಿನೆಸ್‌ನ ಆರಂಭದಲ್ಲಿ ಅಭೂತಪೂರ್ವ ನಿಯತ್ತು ತೋರಿಸಬೇಕಿರುವುದು ಅಂತವರ ಪಾಲಿನ ಅಲಿಖಿತ ಸಂವಿಧಾನ. ಅದನ್ನಾತ ಚಾಚೂತಪ್ಪದೆ ಮಾಡಿದ. ಎಲ್ಲರಿಗೂ ತಾನು ಕೊಟ್ಟ ಆಶ್ವಾಸನೆಯಂತೆ ದುಡ್ಡಿನ ತುಪ್ಪ ಸವರಿದ. ಅವನ ಲೆಕ್ಕಾಚಾರ ಸರಿಯಾಗಿ ಕುದುರಿಕೊಳ್ಳುತ್ತಿದೆ ಅನ್ನುವ ಸಮಯಕ್ಕೆ ಅದೇನು ಯಡವಟ್ಟಾಯಿತೋ ಆ ಬ್ಲೇಡ್ ಕಂಪನಿಯನ್ನು ಬೇರೆಯವರಿಗೆ ಮಾರಿಬಿಟ್ಟ. ವಿನು ಆನಂದ್ ಅನ್ನೋ ಮೂವತ್ತರ ತರುಣ ಅದಕ್ಕೆ ಚೇರ್ ಪರ್ಸನ್ ಹಾಗೂ ಎಂ.ಡಿ ಯಾಗಿ ಬ್ಯಾಟಿಂಗ್ ಶುರುಮಾಡ್ತಾನೆ. ಮೊದಲಿನ ಆಸಾಮಿಯಂತೆ ಈತ ಏಕಾಂಗಿ ಹೋರಾಟಕ್ಕಿಳಿಯದೆ ಒಂದು ವ್ಯವಸ್ಥಿತ ಟೀಮು ಕಟ್ಟಿಕೊಂಡು ಕಂಪನಿಗೇ ಅಂತ ಅಚ್ಚುಕಟ್ಟಾದ ವೆಬ್‌ಸೈಟ್ ಡಿಸೈನ್ ಮಾಡಿದ. ರಾಜೇಶ್ ಎಂಬಾತನನ್ನು ವೈಸ್ ಚೇರ್ಮನ್‌ನನ್ನಾಗಿ ಸಿಯೂ, ಅಲೆಕ್ಸ್ ಎಂಬ ಮತ್ತೊಬ್ಬಾತನನ್ನು ಎಕ್ಸಿಕ್ಯೂಟಿವ್ ಡೈರೆಕ್ಟರನನ್ನಾಗಿಸಿಯೂ ದಕ್ಷಿಣ ಭಾರತದ ಅಷ್ಟೂ ರಾಜ್ಯಗಳ ಮೇಲೆ ಛೂಬಿಟ್ಟ. ಒಂದಲ್ಲ ಅಂತ ಟೈಕೂನ್‌ಮಾಲ್, ಟೈಕೂನ್ ಫೈನಾನ್ಷಿಯಲ್ ಸರ್ವಿಸ್, ಟೈಕೂನ್ ಫೌಂಡೇಶನ್, ಟೈಕೂನ್ ಟೆಕ್ನಾಲಜೀಸ್, ಟೈಕೂನ್ ಟ್ರಾವೆಲ್ಸ್ ಎಂಬಿತ್ಯಾದಿ ಸ್ಕೀಮುಗಳ ಮೂಲಕ ವೆರೈಟಿಯಾಗಿ ಜನಸಾಗರಕ್ಕೆ ತಿರುಪತಿ ದರ್ಶನ ಮಾಡಿಸುವ ಯೋಜನೆ ಹಾಕಿಕೊಂಡ. ಇಂತಹ ನಾಮದ ಯೋಜನೆಗಳು ಪಸರಿಸಲು ಹೆಚ್ಚು ಸಮಯವೂ ಬೇಕಾಗುವುದಿಲ್ಲ, ಪರಿಶ್ರಮದ ಅಗತ್ಯವೂ ಇರುವುದಿಲ್ಲ. ಅಂತೆಯೇ 'ಟೈಕೂನ್ಸ್ ಮಾಲ್ ರೀಟೈಲ್ ಎಂಪೈರ್ ಇಂಟರ್‌ನ್ಯಾಷನಲ್' ಕಂಪನಿಯೂ ಸಹ ಕೊಳೆಗಾಲದ ರಘುನಂದನ್ ಮೂಲಕ ಮೈಸೂರಿನಲ್ಲಿ ನೆಲೆ ಕಂಡುಕೊಂಡಿತು. ಕಷ್ಟ ಇಲ್ಲ, ಕೊಸರಾಟ ಇಲ್ಲ ದುಡ್ಡು ದುಪ್ಪಟ್ಟಾಗಿ ಬರುತ್ತೆ ಅಂದಿದ್ದೇ ತಡ ಜನ ಒಬ್ಬೊಬ್ಬರಾಗಿ ಹಣ ಇಡಲು ಪ್ರಾರಂಭಿಸಿದರು. ಕೇವಲ ಮೈಸೂರು ನಗರವೊಂದರಲ್ಲೆ ಅಜಮಾಸು 53 ಕೋಟಿ ರೂ. ಜಮಾವಣೆಯಾಯಿತು.

ಒಬ್ಬ ವ್ಯಕ್ತಿ ಕನಿಷ್ಠ 1000 ದಿಂದ ಹೆಚ್ಚೆಂದರೆ ಎರಡೂವರೆ ಲಕ್ಷದವರೆಗೆ ಹಣ ಹೂಡಬಹುದಾಗಿತ್ತು. ಪ್ರತಿ ತಿಂಗಳೂ ಶೇ.10 ರಂತೆ ಬಡ್ಡಿ ಸೇರಿಸಿ 36 ತಿಂಗಳು ಅಂದರೆ ಮೂರು ವರ್ಷದಲ್ಲಿ ಆತನಿಗೆ ಅಸಲೂ, ಬಡ್ಡಿಯನ್ನು ತಲುಪಿಸಿಬಿಡುತ್ತೇವೆ ಎಂಬುದು ಅವರ ಮೂಲ ಅಜೆಂಡಾ. ಹಾಗೆ ಹಣವನ್ನು ಪಾವತಿ ಮಾಡುವ ವಿಧಾನವೂ ವಿಚಿತ್ರವಾದುದ್ದೆ. ಅವರು ತಿಳಿಸಿದ ಅಕೌಂಟಿಗೆ ಸಂದಾಯವಾಗುವಂತೆ ಡಿಡಿ ಪಡೆದು ಕಳಿಸಬೇಕಿತ್ತು, ಅದು ತಲುಪಿದ ಕೂಡಲೆ ಒಂದು ಪಾಸ್‌ವರ್ಡ್ ಅನ್ನು ಇವರು ಇ-ಮೇಲ್‌ಗೆ ಕಳಿಸುತ್ತಿದ್ದರು. ಅದನ್ನು ಬಳಸಿಕೊಂಡು ವೆಬ್‌ಸೈಟ್‌ನಲ್ಲಿ ಇವರು ರಿಜಿಸ್ಟರ್ ಆಗಬೇಕಿತ್ತು, ಹಾಗೆ ಮಾಡಿದರೆ ಅವರ ಹೆಸರಿನಲ್ಲಿ ಒಂದು ಮೆಂಬರ್‌ಶಿಪ್ ಅಕೌಂಟು ಓಪನ್ ಆಗುತ್ತಿತ್ತು, ಇಡೀ ಪ್ರಕ್ರಿಯೆಯೆ ಕಣ್ಣಾಮುಚ್ಚಾಲೆ ಆಟದಂತಿದೆ. ಹಣ ಹೂಡುವವನು ನೇರವಾಗಿ ತಾನು ಯಾರ ಮುಸುಡಿಗೆ ದುಡ್ಡು ಸುರಿಯಬೇಕಿದೆ ಎಂಬುದನ್ನು ನೋಡಲೂ ಅವಕಾಶವಿಲ್ಲದಂತೆ ಬಲು ನೀಟಾಗಿ ವ್ಯವಸ್ಥೆ ಮಾಡಿಕೊಂಡಿದ್ದರು.

ಇದಿಷ್ಟೆ ಆಗಿಬಿದ್ದರೆ ಟೈಕೂನ್ ಕಂಪನಿ ಕೈಕಾಲು ಮುರಿದುಕೊಂಡು ಮೂಲೆ ಸೇರಬೇಕಾಗಿತ್ತು, ಇಂತಹ ವ್ಯವಹಾರಗಳಿಗೆಲ್ಲ ಮಧ್ಯವರ್ತಿಗಳ ಬ್ರದ್ದು ತುಂಬ ಅಗತ್ಯ. ಚೂರುಪಾರು ಹಣದ ಆಸೆಗೆ ನಂಬಿಕೆ ಇಟ್ಟವರ ನೋಟುಗಳನ್ನೆಲ್ಲ ಅದ್ಯಾರೊ ಮೂರನೆ ವ್ಯಕ್ತಿಯ ಮನೆಬಾಗಿಲಿಗೆ ಸುರಿದು ಬರುವ ಏಜೆಂಟರುಗಳ ಅನಿವಾರ್ಯತೆಯನ್ನು ಮನಗಂಡಿದ್ದ ಕಂಪನಿ ಹೊಸ ಗಿರಾಕಿಯನ್ನು ಕರೆತಂದು ಜೇಬು ಖಾಲಿ ಮಾಡಿಸುವ ಮನುಷ್ಯನನ್ನು ಏಜೆಂಟ್ ಅಂತ ಗುರುತಿಸಿ , ಹಾಗೆ ಕರೆತಂದ ಪ್ರತಿ ಗಿರಾಕಿಯ ಹೂಡಿಕೆ ಹಣದ ಶೇ.10 ರಷ್ಟು ಕಮೀಷನ್ ಕೊಡುವುದಾಗಿ ಪ್ರಕಟಿಸಿತ್ತು. ಅಂತಹ ಹತ್ತಾರು ಉತ್ಸಾಹಿ ಏಜೆಂಟರ ಗುಂಪನ್ನು ಸೇರಿಸಿ 'ಫ್ರಾಂಚೈಸಿ' ಶಾಖೆಯೊಂದನ್ನು ಪ್ರಾರಂಭಿಸುವ ಬುದ್ಧಿವಂತಿಕೆಯೂ ಕಂಪನಿಗಿತ್ತು.

ಆರಂಭದಲ್ಲಿ ಕಡಿಮೆ ಜನರಿದ್ದುದರಿಂದ ಎಲ್ಲ ಸಲೀಸಾಗಿ ನಡೆಯುತ್ತಿತ್ತು, ಅದೇ ನಂಬಿಕೆಯಲ್ಲಿ ಮೈಸೂರು ಮತ್ತು ಸುತ್ತಲ ಸ್ಥಳಗಳಲ್ಲಿ ಇದರದೇ ಸುದ್ದಿ, ನನಗಷ್ಟು ಬಂತು, ನಿನಗಿಷ್ಟು ಬಂತು ಎಂಬ ಪುಕಾರುಗಳು ಹೆಚ್ಚಾದದ್ದೇ ತಡ ಒಂದಷ್ಟು ಮಂದಿ ಏಜೆಂಟ್ ದಂಧೆಗೆ ಇಳಿದುಬಿಟ್ಟರು. ಆ ಲಿಸ್ಟಿನಲ್ಲಿ ಸಂತೋಷ್‌ಕುಮಾರ್, ಸಂದೀಪ್, ಸಂಜಯ್, ಪೊಲೀಸ್ ರವಿ, ಆನಂದ್, ಡಾ।। ಹರೀಶ್, ಕಿರಣ್,



ರಾಜೇಶ್, ಆರ್.ಎಂ.ಪಿ. ನಾಗರಾಜು, ಸಿದ್ಧರಾಜು ಮುಂತ
ಹೆಸರುಗಳು ಪ್ರಮುಖವಾಗಿ ಕಾಣಿಸಿಕೊಂಡಿದ್ದವು. ಇವರೆ
ಸೇರಿ ಮೈಸೂರಿನ ವಿನಾಯ ನಗರದಲ್ಲಿ ಒಂದು 'ಟೈಕೂ
ಫ್ರಾಂಚೈಸಿ ಕಚೇರಿಯನ್ನು ತೆರೆದರು. ಅದ್ಯಾವ ಮೂಲೆ
ಲಿಂಕಿತ್ತೋ ಕನ್ನಡದ ಉದಯೋನ್ಮುಖ ನಟ ಯಶ್ ಕೂ
ಬಂದು ಅದರ ಟೇಪು ಕತ್ತರಿಸಿಹೋದ. ಅಲ್ಲಿಗೆ ಮತ್ತ
ಪಬ್ಲಿಸಿಟಿ ಸಿಕ್ಕಿತು. ಕಚೇರಿಯ ಸ್ಥಳ, ವ್ಯವಹಾರ ನೋಡಿ
ಜನ ನೇರವಾಗಿ ತಮ್ಮ ಅಕೌಂಟು, ಕಪಾಟುಗಳಲ್ಲಿ ಕೈಯ
ಡಿಸಿ ಕಾಸು ಖಾಲಿ ಮಾಡಲು ಶುರುಮಾಡಿಕೊಂಡ
ತಿಂಗಳುಗಳು ಉರುಳುವುದರೊಳಗಾಗಿ ಬರೀ ಮೈಸೂ
ಜಿಲ್ಲೆಯ ವ್ಯವಹಾರವೇ ನೂರು ಕೋಟಿಗೂ ಮೀ
ಹೋಗಿತ್ತು.

ಈ ನಡುವೆ ಕಂಪನಿ ಹಠಾತ್ತನೆ ತನ್ನ ಕಚೇರಿಗೆ ಬ
ಜಡಿದು ಅಡ್ರೆಸ್ ಇಲ್ಲದಂತೆ ಮಂಗಮಾಯವಾಗಿಬಿಟ್ಟಿತ
ಆತಂಕಕ್ಕೆ ಬಿದ್ದ ಜನ ಚೆನ್ನೈನ ವಿಳಾಸಕ್ಕೆ ಹೋಗಿ ವಿಚಾರಿ
ದಾಗ ಬೆಚ್ಚಿ ಬಿದ್ದರು. ಏಕೆಂದರೆ ಅಂತಹ ಯಾವ ಕಂ
ನಿಯೂ ಅಲ್ಲಿರಲಿಲ್ಲ ಕೆಟ್ಟ ಮೇಲೆ ಬುದ್ಧಿಕಲಿತ ಕೆ
ಚಾಣಾಕ್ಷರು ರಿಸರ್ವ್ ಬ್ಯಾಂಕ್‌ನ ದಾಖಲಾತಿಗಳನ
ಪರಿಶೀಲಿಸಿದಾಗ ಆ ಕಂಪನಿ ನೋಂದಣಿಯೇ ಆಗಿಲ್ಲ ಎಂ
ಮತ್ತೊಂದು ಹಾರ್ಟ್ ಅಟ್ಯಾಕ್ ಸಂಗತಿ ತಿಳಿದುಬಂದಿತ
ಅಷ್ಟೇ ಅಲ್ಲ, ಇದೇ ಹೆಸರಿನ ಕಂಪನಿಯ ಮೇಲೆ ಕೇರ
ಮತ್ತು ದೆಹಲಿ ಹೈಕೋರ್ಟ್‌ಗಳಲ್ಲಿ ಡಜನ್ನುಗಟ್ಟಲೆ ಕೇಸ
ಜಮಾವಣೆಯಾಗಿರುವುದೂ ಗೊತ್ತಾಯಿತು. ಇದೊಂದ
ಪಕ್ಕಾ ಬೋಗಸ್ ಕಂಪನಿ ಅಂತ ದೃಢವಾಗಿದ್ದೇ ತಡದ
ಜನ ತಮ್ಮ ಹೂಡಿಕೆಗೆ ಸೇತುವೆಯಾಗಿದ್ದ ಏಜೆಂಟರುಗಳಿ
ದುಂಬಾಲು ಬಿದ್ದರು. ಫೆಬ್ರುವರಿಯಿಂದ ಈಚೆಗೆ ಹಣ
ಹೂಡಿದವರಿಗೆ ಹಣವೂ ಇಲ್ಲ, ಪೇರು ಪತ್ರವೂ ಇಲ

ಏಜೆಂಟರಾಗುವ ಮುನ್ನ

"ಇಂತಹ ಬ್ಲೇಡ್ ಕಂಪನಿಗಳಿಗೆ ಏಜೆಂಟರಾಗುವುದು ಬಲು ಅಪಾಯಕಾರಿ ಕೆಲಸ. ಮೈಸೂರಿನ ಪೊಲೀಸ್ ಕಮೀಷನರ್ ಕಚೇರಿಯಲ್ಲೇ ಕೆಲಸ ಮಾಡುವ ರವಿ ಎಂಬ ಆಸಾಮಿಯೇ ಸಿಕ್ಕಾಪಟ್ಟೆ ಜನರ ಹೂಡಿಕೆಗೆ ಏಜೆಂಟಾಗಿರುವುದು ವಿಪರ್ಯಾಸವೇ ಸರಿ. ಇನ್ನು ಸೀಮಾ ದೇವಿ ಅನ್ನೋ ಹೆಂಗಸು ತಾನೂ ಹಣ ಹೂಡಿರುವುದಲ್ಲದೆ ಇತರರಿಂದಲೂ ಒಟ್ಟು 48,50,000/- ಹಣ ಹೂಡಿಸಿ ಇವತ್ತು ಅವರೆಲ್ಲರ ಕಾಟ ತಾಳದೆ ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ ಅಂತ ಕಂಪನಿಗೆ ಉಪಯೋಗಕ್ಕೆ ಬಾರದ ಮೇಲ್ ಕಳಿಸುತ್ತಾ ಗೋಳಾಡುತ್ತಿದ್ದಾಳೆ. ಕಂಪನಿ ಮಾತ್ರ ತನ್ನೆಲ್ಲ ವೆಬ್‌ಸೈಟ್‌ಗಳನ್ನು ಬ್ಲಾಕ್ ಮಾಡಿಕೊಂಡು ಬೆಚ್ಚಗೆ ಕೂತಿದೆ.

ಚಾಮರಾಜನಗರ: ಅಷ್ಟಮಂಗಲ ಅಲ್ಲ ರೆಡ್ಡಿ ಸಂಹಾರ ಯಾಗ!

ಪರಪ್ಪನ ಅಗ್ರಹಾರ ಪ್ರವೇಶಕ್ಕೆ ದಿನಗಣನೆ ನಡೆಸುತ್ತಿರುವ ಯಡಿಯೂರಪ್ಪನ ಸ್ಥಿತಿ ಕಂಡು ಖುದ್ದು ಬಿಜೆಪಿ ಮಂದಿಯೇ ಕನಿಕರ ಪಡುತ್ತಿಲ್ಲ, ಇದು ಮಾಡಿದ ಹಡಬೆ ಕಸುಬಿನ ಬಾಬತ್ತೆಂಬ ಭಾವನೆ ಸಾರ್ವತ್ರಿಕವಾಗಿದೆ. ಆದರೆ ಯಡ್ಡಿಯ 'ಮಾನಸಿಕ' ಪುತ್ರ ಕಂ ಅಡ್ಡಕಸುಬಿ ರೇಣುಕಾಚಾರ್ಯ ಹಾಗೂ ಯಡ್ಡಿಯೊಂದಿಗೆ ಅದೆಂತಹದ್ದೊ 'ಬಂಧ' ಹೊಂದಿರುವ ಶೋಭಾ ಕರಂದ್ಲಾಜೆಗೆ ಸತ್ಯವನ್ನು ಅರಗಿಸಿಕೊಳ್ಳಲಾಗುತ್ತಿಲ್ಲ, ಇಂಥ ಮನಸ್ಥಿತಿಯಿಂದಲೇ ಶಾಪಗ್ರಸ್ತವೆಂಬ ಬಿರುದು ಹೊಂದಿರುವ ಚಾಮರಾಜನಗರದಲ್ಲಿ ಅಪ್ಪಟ ವಾಮಾಚಾರವೊಂದನ್ನು ಮಾಡಿ ಮುಗಿಸಿದ್ದಾರೆ.

ಮೇಲ್ನೋಟಕ್ಕಿದು ಜ್ಯೋತಿಷ್ಯ ಜಗತ್ತಿನ ತರಹೇವಾರಿ ವಂಚನೆಗಳಲ್ಲೊಂದಾದ ಅಷ್ಟಮಂಗಲ ಪ್ರಶ್ನೆಯಂತೆ ಬಿಂಬಿತವಾಗಿದೆ. ಆದರೆ ನಾಲ್ಕು ದಿನಗಳ ಕಾಲ ಚಾಮರಾಜೇಶ್ವರ ದೇವಾಲಯದಲ್ಲಿ ನಡೆದಿರುವುದು ಅಕ್ಷರಶಃ ಶತ್ರುಸಂಹಾರ ಯಾಗ. ಈ ಘನಂಧಾರಿ ಕೆಲಸದ ಹಿಂದಿದ್ದದ್ದು ಯಡಿಯೂರಪ್ಪನಿಗೆ ನಾನಾ ರೀತಿಯ ಕಾಟ ಕೊಟ್ಟವರೆಲ್ಲ ಆದಷ್ಟು ಬೇಗ ನೆಗೆದುಬಿದ್ದು ಹೋಗಲಿ ಎಂಬ ಅಂತರಾಳದ ಹರಕೆ!




ಈ ಅಷ್ಟಮಂಗಲ ಪ್ರಶ್ನೆ, ಶತ್ರು ಸಂಹಾರಯಾಗ, ಜ್ಯೋತಿಷ್ಯ-ವಾಸ್ತುಗಳೆಲ್ಲ ತಲೆ ಇಲ್ಲದವರನ್ನೇ ಗುರಿಯಾಗಿಸಿಕೊಂಡ ಭಯಂಕರ ದಂಧೆ. ವಾಮಾಚಾರದಿಂದ ವಿರೋಧಿಗಳನ್ನು ಹಣಿಯುವ ಹಾಗಿದ್ದಿದ್ದರೆ ಇಂದು ಕರ್ನಾಟಕ ರಾಜಕಾರಣದಲ್ಲಿ ದೇವೇಗೌಡ ಮತ್ತವರ ಸಂತಾನಿಗರು ಮಾತ್ರ ಇರುತ್ತಿದ್ದರು. ಆದರೆ ಮೌಢ್ಯದ ಮೂಟೆಗಳಂತಿರುವ ಬಿಜೆಪಿ ಜನರಿಗೆ ಈ ಸೂಕ್ಷ್ಮ ಗೊತ್ತಾಗುವಂತಹುದಲ್ಲ. ಈ ಮಾತಿಗೆ ಚಾಮರಾಜನಗರದಲ್ಲಿ ಹೋಮಹವನದ ಹೊಗೆ ಹಾರುತ್ತಿದ್ದಂತೆಯೇ ಬಿಜೆಪಿ ಪಾಳೆಯದಲ್ಲಿ ಹರಡಿದ್ದ ಭಯಾನಕ ರೂಮರುಗಳೇ ಸ್ಪಷ್ಟ ಸಾಕ್ಷಿ.


ಮೊದಲ ದಿನದ ಹೋಮಹವನ ಶುರುವಾಗುತ್ತಲೇ ಅದರ ಎಫೆಕ್ಟು ಕಂಡದ್ದು ಬಳ್ಳಾರಿಯಲ್ಲಿ, ರೆಡ್ಡಿ ಪಾಳೆಯದ ಮೆಂಟಲ್ ಶ್ರೀರಾಮುಲು ಇದ್ದಕ್ಕಿದ್ದಂತೆ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ ಏನೇನೊ ಒದರಾಡಿದ್ದ, ಇದಾದಬಳಿಕ ಮೂರನೇ ದಿನದ ಹೊತ್ತಿಗೆ ನಡೆದದ್ದು ಸುದರ್ಶನಾ ಹೋಮ. ಇದರ ಹೊಗೆ ಕೂಡಾ ನೇರ ಬಳ್ಳಾರಿಯತ್ತ ಮುಖ ಮಾಡಿತ್ತು, ಸದರಿ ಹೋಮಕುಂಡದ ಹೊಗೆ ಆರುವ ಮುನ್ನವೇ ಮಾಜಿ ಸಚಿವ ಹಾಗೂ ಹಾಲಿ ಗಣಿಕಳ್ಳ ಜನಾರ್ದನ ರೆಡ್ಡಿಯನ್ನು ಸಿಬಿಐನವರು ಆಂಧ್ರದ ಜೈಲಿಗೆ ಗದುಮಿದ್ದರು. ಯಡಿಯೂರಪ್ಪನ, ಬಗಲಲ್ಲಿದ್ದುಕೊಂಡೇ ಆತನ ಬುಡ ಅಲ್ಲಾಡಿಸಿದವರಲ್ಲಿ ರೆಡ್ಡಿ ಪಡೆ ಪ್ರಮುಖವಾದದ್ದು. ಆದುದರಿಂದಲೇ ಶತ್ರುಸಂಹಾರ ಯಾಗದ ಪ್ರಭಾವ ಮೊದಲನೆಯದಾಗಿ ಅವರನ್ನೇ ಬಲಿತೆಗೆದುಕೊಂಡಿದೆ. ಯಡ್ಡಿಗೆ ಕಾಟ ಕೊಟ್ಟ ಉಳಿಕೆ ಮಂದಿಗೂ ಅದೇಗತಿ ಶತಸ್ಸಿದ್ಧ!- ಇದು ಬಿಜೆಪಿ ಪಾಳೆಯದಲ್ಲಿ ಹರಿದಾಡಿದ, ಈ ಕ್ಷಣಕ್ಕೂ ಹರಿದಾಡುತ್ತಿರುವ ಭಯಪೂರಿತ ರೂಮರ್!

ಇದಕ್ಕೆ ಪೂರಕವಾದ ಮಂದಹಾಸ ಶೋಭಾ ಕರಂದ್ಲಾಜೆ, ಡಿಸ್ಕೋ ರೇಣುಕಾಚಾರ್ಯ ಮತ್ತು ಯಡಿಯೂರಪ್ಪನ ಮುಖದಲ್ಲಿ ಸೂಕ್ಷ್ಮವಾಗಿ ಲಕಲಕಿಸುತ್ತಿರುವುದು ಸತ್ಯ.

ಇದು ಈ ಜನರ ಮೂರ್ಖತನ. ಆದರೆ ಇದನ್ನೂ ಒಂದು ಸರ್ಕಾರಿ ಕಾರ್ಯಕ್ರಮದಂತೆಯೇ ನಡೆಸಿ, ಚಾಮರಾಜನಗರಕ್ಕೆ ಅಂಟಿದ ಶಾಪ ವಿಮೋಚನೆಗಾಗಿಯೇ ಇದನ್ನು ನಡೆಸುತ್ತಿರುವುದಾಗಿ ಘೋಷಿಸಿದರಲ್ಲ ಶೋಭಾ ಕರಂದ್ಲಾಜೆ ಮತ್ತಾಕೆಯ ಮತಿಹೀನ ಹಿಂಬಾಲಕರು? ಈ ದುಷ್ಟತನ ನಿಜಕ್ಕೂ ಅಕ್ಷಮ್ಯ. ಅಷ್ಟಮಂಗಲ ಪ್ರಶ್ನೆಯ ಮುಸುಕಿನಲ್ಲಿ ನಡೆದಿರುವ ಈ ಶತ್ರುಸಂಹಾರ ಯಾಗಕ್ಕೆ ಕನಿಷ್ಠ 20 ಲಕ್ಷ ಸುರಿಯಲಾಗಿದೆ. ಇದರ ಸಾರಥ್ಯ ವಹಿಸಿಕೊಂಡವನು ಕೇರಳದ ಕುಖ್ಯಾತ ಜ್ಯೋತಿಷಿ ರವಿ ನಂಬೂದಿರಿ ಎಂಬಾತ.

ಹೇಳಿಕೇಳಿ ಚಾಮರಾಜೇಶ್ವರ ದೇವಾಲಯ ಶೈವ ಪರಂಪರೆಯದ್ದು. ಇದು ಮುಜರಾಯಿ ಇಲಾಖೆಯ ಅಧೀನದಲ್ಲಿದೆ. ಹೀಗಿರುವುದರಿಂದ ಇದರಲ್ಲಿ ಯಾವುದೇ ಕಾರ್ಯಕ್ರಮ ನಡೆಯಬೇಕಾದರೂ ಸಂಬಂಧಿಸಿದ ಇಲಾಖೆಯಿಂದ ಅನುಮತಿ ಪಡೆಯಬೇಕೆಂಬ ನಿಯಮವಿದೆ. ಆದರೆ ಇಂತಹುದೊಂದು ವಾಮಾಚಾರ ಮಾಡೇ ತೀರುವ ಉತ್ಸಾಹಕ್ಕೆ ಬಿದ್ದ ಶೋಭಾ ಯಾರಿಗೂ ಯಾವ ಮಾಹಿತಿಯನ್ನು ಕೊಡದೆ ಮುಂದುವರೆದಿದ್ದರು. ಈ ವಿಚಾರದ ಬಗ್ಗೆ ಸ್ಥಳೀಯ ರಾಜಕೀಯ ವಲಯದಲ್ಲಿ ಯಾರೊಬ್ಬರೂ ತುಟಿಪಿಟಿಕೆನ್ನಲಿಲ್ಲ, ಆದರೆ ಪ್ರಗತಿಪರ ಸಂಘಟನೆಗಳವರು ಬೇಗನೆ ಎಚ್ಚೆತ್ತು ಬೀದಿಗಿಳಿದರು. ಇದು ಹೋರಾಟದ ರೂಪ ತಳೆಯುತ್ತಲೇ ಬೆದರಿದ ಶೋಭಾ ಕರಂದ್ಲಾಜೆಯ ಬೆಂಬಲಿಗರು ರಾತ್ರೋರಾತ್ರಿ ಸಮಿತಿಯೊಂದನ್ನು ಹುಟ್ಟಿಸಿ ಚಾಮರಾಜೇಶ್ವರ ಪೂಜಾ ಸಮಿತಿ ಅಂತ ಆತುರಾತುರವಾಗಿ ಹೆಸರಿಟ್ಟು ಅಖಾಡಕ್ಕಿಳಿದರು. ತದನಂತರ ಜಿಲ್ಲಾಧಿಕಾರಿ ಡಾ. ಚಂದ್ರಶೇಖರ್‌ಗೆ ಅರ್ಜಿ ಗುಜರಾಯಿಸಿ ವಿಶೇಷ ಪೂಜೆಯ ಹೆಸರಲ್ಲಿ ಅನುಮತಿಯನ್ನೂ ಪಡೆದರು. ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಆರ್. ಸುಂದರ್ ಹಾಗೂ ನಗರಸಭಾ ಸದಸ್ಯ ಗಣೇಶ್ ದೀಕ್ಷಿತ್ ಈ ಘನಕಾರ್ಯ ಮಾಡಿ ಮುಗಿಸಿದರು.





ಧಾರ್ಮಿಕ ರೀತಿನೀತಿಗಳ ಬಗೆಗಿನ ತಕರಾರುಗಳನ್ನು ಬದಿಗಿಟ್ಟು ನೋಡುವುದಾದರೆ ಪ್ರತಿ ದೇವಾಲಯಗಳಿಗೂ ಅದರದ್ದೇ ಆದ ಆಚಾರವಿಚಾರಗಳಿರುತ್ತವೆ. ಮುಜರಾಯಿ ಇಲಾಖೆಗೆ ಒಳಪಟ್ಟ ಬಳಿಕವೂ ಇಂಥವುಗಳನ್ನು ಮೀರುವಂತಿಲ್ಲ, ಈ ಅಘೋರ ಹೋಮ, ಚಂಡಿಕಾ ಹೋಮ, ಸುದರ್ಶನ ಹೋಮಗಳೆಲ್ಲ ವಿಷ್ಣು ದೇವಾಲಯದಲ್ಲಿ ನಡೆಯುವಂಥವುಗಳು. ಆದ
ಚಾಮರಾಜೇಶ್ವರ ದೇವಾಲಯ ಶೈವ ಪದ್ಧತಿಯಲ್ಲಿದ
ಇದರಲ್ಲಿ ಇಂಥ ಆಚರಣೆ ನಡೆಸಿದ್ದು ನಿಜಕ್ಕೂ ಸರ್ವಾಧಿಕಾ
ಧೋರಣೆ.

ಬಿಜೆಪಿಯ ಭಟ್ಟಂಗಿಗಳ
ಹೊಲಸು ತಿಂದರೂ ಮಡಿಮೈಲಿ
ಅಂತೆಲ್ಲ ಬಿಡುಬೀಸಾಗಿ ಮಾತಾಡಬ
ವರು. ಅಂಥಾದ್ದರಲ್ಲಿ ಸ್ವಹಿಂತಾಸಕ್ತಿಯ
ಕೆಲಸಕ್ಕೆ ಸಮಾಜಪರ ಲೇಪ ಹಚ
ವುದು ಯಾವ ಕಷ್ಟದ ಕೆಲಸ? ಸ
ಸದರಿ ಶತ್ರು ಸಂಹಾರ ಯಾಗದಲ್ಲ
ಇಂತಹದ್ದೇ ನಡೆದಿದೆ. ಶೋಭ
ಕರಂದ್ಲಾಜೆ 'ಚಾಮರಾಜನಗರಕ
ಅಂಟಿದ ಶಾಪ ವಿಮೋಚನೆಗಾಗಿಯೆ
ಅಷ್ಟಮಂಗಲ ಪ್ರಶ್ನೆ ನಡೆಸಲಾಗುತ್ತಿ
ಅಂತ. ತಮ್ಮ ಭಂಟರ ಮೂಲ
ಹೇಳಿಸಿದ್ದಾರೆ. ಇದು ಆಕೆಯ ವಂಚನೆ, ಮುಠ್ಠಾಳತನಗಳಿಗೆ
ಹಿಡಿದ ಕೈಗನ್ನಡಿ.

ಅಷ್ಟಕ್ಕೂ ಚಾಮರಾಜನಗರ ಜಿಲ್ಲೆಗಂಟಿರುವುದು ಯಾವ
ಸೀಮೆಯ ಶಾಪ? ಬಿಜೆಪಿಯ ಘಟಿಂಗರಿಗೆ ಇವರಂತಹುದೆ
ಕಾಯಿಲೆ ಇರುವ ಇತರೆ ಪಕ್ಷಗಳವರಿಗ
ಇದು ಶಾಪದಂತೆ ಕಾಣಿಸುತ್ತಿರ
ಬಹುದು. ಆದರೆ ಚಾಮರಾಜನಗರದ
ಸ್ಥಿತಿಗತಿಗಳನ್ನೊಮ್ಮೆ ನೋಡಿದರೆ ಅದು
ಈತನಕ ಆಳಿದವರ, ಈಗ ದರ್ಬಾರು
ನಡೆಸುತ್ತಿರುವವರ ದುಷ್ಟತನದ ಒಟ್ಟು
ಮೊತ್ತವೇ ಅಲ್ಲಿ ಸಮಸ್ಯೆಗಳಾಗಿ ತಾಂಡ
ವವಾಡುತ್ತಿರುವುದು ಸ್ಪಷ್ಟವಾಗುತ್ತದೆ.
ಕರ್ನಾಟಕದ ಬೇರೆ ಬೇರೆ ಭಾಗದಲ್ಲಿ
ಕಾಣಿಸುವ ಸಮಸ್ಯೆಗಳಿವೆಯಲ್ಲ? ಅವ
ಲ್ಲವೂ ಈ ಜಿಲ್ಲೆಯಲ್ಲಿ ಸಾಮೂಹಿಕ
ವಾಗಿ ತಳವೂರಿವೆ.

ಗಮನೀಯ ವಿಚಾರವೆಂದರೆ, ಚಾಮರಾಜನಗರವನ್ನು
ಬಾಧಿಸುತ್ತಿರುವ ಯಾವ ಸಮಸ್ಯೆಯೂ ಅಭಿವೃದ್ಧಿಯ ಅಸ್ತ್ರ

...ಈ ನಡುವೆ ಕಮಿಷನ್ ಆಸೆಗೆ ಕಂಡವರ ದುಡ್ಡನ್ನು ...ಗೆ ಚೆಲ್ಲಿಸಿದ್ದ ಏಜೆಂಟು ಮಹಾಶಯರುಗಳು ಸಿಗಬೇಕಾದ ...ಮಿಷನ್ ಸಿಗದೆ ತುಂಬಾ ಕೊರಗಿದ.. ಹೇಗಾದರೂ ...ಡಿ ತಾವಂದುಕೊಂಡ ಹಣ ಪಡೆದೇ ತೀರಬೇಕು ...ಬ ಹಠಕ್ಕೆ ಬಿದ್ದವರಿಗೆ ಕಂಪನಿಯಿಂದಂತೂ ಹಣ ...ರುವುದಿಲ್ಲ ಎಂಬುದು ತಿಳಿದಾಗಿತ್ತು. ಅದಕ್ಕೆ ಈಗಾಗಲೇ ...ಟ್ಟುಕೊಂಡಿರುವ ಜನರಿಂದಲೇ ಮತ್ತೊಂದು ಕಂತು ...ು ವಸೂಲಿ ಮಾಡಲು ಒಂದು ಪ್ಲ್ಯಾನ್ ರೆಡಿಮಾಡಿ ...ಂಡರು. ಕಿರಣ್ ಎಂಬಾತನ ಅಧ್ಯಕ್ಷತೆ ಮತ್ತು ಕೆ.ಎಲ್. ...ಜೇಶ್ ಎಂಬಾತನ ಕಾರ್ಯದರ್ಶಿತ್ವದಲ್ಲಿ 'ಅಖಿಲ ಭಾರತ ...ಟ್‌ವರ್ಕ್ ಮಾರ್ಕೆಟಿಂಗ್ ಅಸೋಸಿಯೇಷನ್' ಅನ್ನೋ ...ಘಟನೆಯ ಮೂಲಕ ಇದೇ ಸೆಪ್ಟಂಬರ್ 7 ರಂದು ...ಕೆ.ಕಾಂಟಿನೆಂಟಲ್ ಹೋಟೆಲ್‌ನಲ್ಲಿ ಶ್ರದ್ಧಾಂಜಲಿಯಂತಹ ...ಾರಂಭವನ್ನು ಆಯೋಜಿಸಿ ದುಡ್ಡು ಕಳೆದುಕೊಂಡವರನ್ನೆಲ್ಲ ...ಹ್ವಾನಿಸಿದ್ದರು. ಹಠಾತ್ತನೆ ಮಾಯವಾಗಿದ್ದ ಕಂಪನಿಯ ...ಧೀರನ ಸಭೆ ಸುದ್ದಿ ತಿಳಿದಾಕ್ಷಣ ಹಣ ವಾಪಾಸು ...ಬಹುದೆಂಬ ಆಸೆಯಲ್ಲಿ 500 ಕ್ಕೂ ಹೆಚ್ಚು ಜನ ...ಮಾಯಿಸಿದ್ದರು. ಅವರನ್ನೆಲ್ಲ ಉದ್ದೇಶಿಸಿ ಮೈಕ್ ಹಿಡಿದ ...ಘಟಕರು 'ನಿಮ್ಮ ದುಡ್ಡನ್ನು ನಿಮಗೆ ಖಂಡಿತ ನಮ್ಮ ...ಘಟನೆಯ ಮೂಲಕ ವಾಪಾಸು ಕೊಡಿಸುತ್ತೇವೆ. ...ಪನಿಯ ಮೇಲೆ ಕೇಸು ಜಡಿಯೋಣ, ಒಗ್ಗಟ್ಟಾಗಿ ...ೋರಾಟ ಮಾಡೋಣ. ಖಂಡಿತ ಹಣ ಸಿಗುತ್ತೆ. ಆದರೆ ...ವೆಲ್ಲ ಈ ನಮ್ಮ ಸಂಘಟನೆಗೆ ಸದಸ್ಯರಾಗಬೇಕು. ಅದಕ್ಕಾಗಿ ...ತಿಯೊಬ್ಬರೂ ರೂ. 1200ರನ್ನು ವಂತಿಕೆ ನೀಡಬೇಕು" ...ಬ ಅಮೋಘ ಐಡಿಯಾವನ್ನು ಅನೌನ್ಸ್ ಮಾಡಿದ್ದಾರೆ. ...ದಲೇ ದುಡ್ಡು ಕಳೆದುಕೊಂಡು ಕುದ್ದು ಹೋಗಿದ್ದ ...ಂದಿ ಮತ್ತದೇ ರಾಗ ಕೇಳಿದ್ದೆ ತಡ ಅಷ್ಟೂ ಜನ ...ಜೆಂಟರ ಮೇಲೆ ಮುಗಿಬಿದ್ದು ಜನಗಳಕ್ಕೆ ನಿಂತರು. ...ನ್ನೇನು ಜನ ಅವರನ್ನೆಲ್ಲ ಹರಿದು ಮುಕ್ಕುಬೇಕೆನ್ನುವಷ್ಟರಲ್ಲಿ ...ಜರ್‌ಬಾದ್ ಠಾಣೆಯ ಇನ್ಸ್‌ಪೆಕ್ಟರ್ ಮೋಹನ್‌ಕುಮಾರ್ ...ನ್ನು ಸಿಬ್ಬಂದಿಯೊಂದಿಗೆ ದೌಡಾಯಿಸಿ ಎಲ್ಲವನ್ನು ...ಿಗೊಳಿಸುವ ಪ್ರಯತ್ನ ಮಾಡಿದರು. ಆಗ ಮೂಲ ...ದಕುತ್ತಾ ಹೊರಟವರಿಗೆ ಟೈಕೂನ್ಸ್ ಎಂಬ ಕಂಪನಿ ...ಂದೂವರೆ ಸಾವಿರ ಕೋಟಿಯಷ್ಟು ವಂಚನೆ ನಡೆಸಿರುವುದು ...ಳಿದುಬಂತು. ದುರದೃಷ್ಟವೆಂದರೆ ಕಂಪನಿಯ ವಿರುದ್ಧ ...ದುವರೆವಿಗೂ ಯಾರೂ ದೂರನ್ನೇ ನೀಡಿಲ್ಲ. ಅಂತೂ ...ತೂ ಟೈಕೂನ್ಸ್ ಕಂಪನಿಯ ಕರ್ಮಕಾಂಡ ಇಂಟರ್‌ವಲ್ ...ರೆಗೆ ಬಂದುನಿಂತಿದೆ. ಕ್ಲೈಮ್ಯಾಕ್ಸ್ ಅದೆಷ್ಟು ಕೆಟ್ಟದಾಗಿರು ...ೋ ಕಾದು ನೋಡಬೇಕು. ಒಂದಂತೂ ಸತ್ಯ ಕ್ಲೈಮ್ಯಾಕ್ಸ್ ...ದೆಷ್ಟೇ ಭೀಕರವಾಗಿದ್ದರೂ ಜನ ಬುದ್ಧಿ ಕಲಿಯುವ ...ಭವನೀಯತೆ ಹತ್ತಿರದಲ್ಲೆಲ್ಲೂ ಕಂಡುಬರುತ್ತಿಲ್ಲ.

• ಗಿರೀಶ್ ತಾಳಿಕಟ್ಟೆ



...ಗ್ಗದಿರುವಂಥವಲ್ಲ. ಆಳುವವರ ದುಷ್ಟತನಗಳು ಅದಾಗಲು ...ಡುತ್ತಿಲ್ಲವೆಂಬುದು ಸತ್ಯ. ಯಡಿಯೂರಪ್ಪ ಕೂಡಾ ...ಧಿಕಾರಾವಧಿಯಲ್ಲಿ ಎಂದೂ ಈ ಜಿಲ್ಲೆಯ ಉದ್ಧಾರದತ್ತ ...ಮನಸು ಮಾಡಿಲ್ಲ. ಇದೀಗ ಆಪ್ತರಕ್ಷಕಿಯ ಪೋಸು ...ಡುತ್ತಿರುವ ಶೋಭಾ ಕರಂದ್ಲಾಜೆಗೂ ಕೂಡಾ ಆ ಇರಾದೆ ...ಂಡಿತಾ ಇಲ್ಲ. ಹೀಗೆ ಕೈಲಿರುವ ಅಧಿಕಾರ ಬಲದಿಂದ ...ಭಿವೃದ್ಧಿ ಮಾಡುವ ಯೋಗ್ಯತೆ ಇಲ್ಲದವರು ಅಷ್ಟಮಂಗಲ ...ಶ್ನೆಯೆಂಬ ದಗಲ್ಬಾಜಿತನಕ್ಕೆ ಮೊರೆಹೋದದ್ದು, ಕೆಲಮಂದಿ ...ದನ್ನೇ ಭಯಭಕ್ತಿಯಿಂದ ನಂಬುತ್ತಿರುವುದು ಮೂರ್ಖ ...ಸವಲ್ಲದೆ ಮತ್ತಿನೇನು?

ಒಟ್ಟಾರೆಯಾಗಿ ಚಾಮರಾಜನಗರದಲ್ಲಿ ಅಷ್ಟಮಂಗಲದ ...ೆಸರಲ್ಲಿ ಶತ್ರುಸಂಹಾರ ಯಾಗ ನಡೆದಿರುವುದು ಖರೆ. ...ಚರಂತವೆಂದರೆ ಈ ಮೂರ್ಖ ಕಾರ್ಯಕ್ರಮದಲ್ಲಿ ಜಿಲ್ಲಾ ...ಟ್ಟದ ಅಧಿಕಾರಿಗಳೇ ಪಾಲ್ಗೊಂಡಿದ್ದಾರೆ. ಯಡಿಯೂರಪ್ಪನ ...ಾದ ಚಪ್ಪರಿಸುವ ಭಂಟ ಕಾಪು ಸಿದ್ಲಿಂಗ ಸ್ವಾಮಿಯೂ ...ಕ್ತಿಯಿಂದ ಭಾಗವಹಿಸಿದ್ದಾನೆ. ಈ ಪವಿತ್ರ ಕಾರ್ಯಕ್ಕೆ ...ಯವಾದ ಲಕ್ಷಾಂತರ ರೂಪಾಯಿ ಜನರ ದುಡ್ಡು ಅಥವಾ ...ದ್ದಿ ಪಟಾಲಂ ಎತ್ತಿದ ತಿರುಪೆ ಕಾಸೆಂಬುದರಲ್ಲಿ ಯಾವುದೇ ...ಂಶಯಗಳಿಲ್ಲ. ಈ ರೀತಿ ಮೌಢ್ಯ ಬಿತ್ತುವ ಬಿಜೆಪಿ ...ಯತ್ನಗಳಿಗೆ ತಕ್ಷಣಕ್ಕೊಂದು ಬ್ರೇಕ್ ಬೀಳಬೇಕಿದೆ. ಇವರಿಗೆ ...ತ್ರುಸಂಹಾರ ಯಾಗ, ಅಷ್ಟಮಂಗಲ ಪ್ರಶ್ನೆಯಂಥ ...ನಿಷ್ಠಗಳಲ್ಲಿ ನಂಬಿಕೆಯಿದ್ದರೆ ಅವರವರ ಮನೆಗಳಲ್ಲೋ, ...ವರಿಗೆ ಸೇರಿದ ಕುಟುಂಬ ದೇವಳಗಳಲ್ಲೋ ನಡೆಸಿಕೊಂಡು ...ಾಳಾಗಿಹೋಗಲಿ. ಮುಜರಾಯಿ ಇಲಾಖೆಗೆ ಸೇರಿದ ...ೇವಾಲಯಗಳು ಜನರ ಆಸ್ತಿ ಇವರಪ್ಪನದಲ್ಲ.

ಈ ವಿಚಾರ ಯಡಿಯೂರಪ್ಪನ ಪರಿಪಾಲನೆಗೆ ...ಂತಿರುವ ಶೋಭಾ ಕರಂದ್ಲಾಜೆಗೆ, ಆಕೆಯ ಬಾಲಬಡುಕರಿಗೆ ...ಳಿಯಲಿ. ಅದಾಗದಿದ್ದರೆ ಜನರೇ ಬುದ್ಧಿ ಕಲಿಸುವ ದಿನ ...ೂರವಿಲ್ಲ.

• ಕೊಳ್ಳೇಗಾಲ ಚಿಕ್ಕಮಾಳಿಗೆ



ಟಿವಿ ಹುಡುಗಿಗೆ ಮಂತ್ರಿ ನಿರಾಣಿಯ ಪೋಲಿ SMS

ಅಯೋಗ್ಯನಿಗೆ ಅಧಿಕಾರ ಬರುವುದು ಮೊದಲ ಆಪತ್ತಾದರೆ ಆತನ ಕೈಗೆ ಸಂಪತ್ತು ಸೇರಿಬಿಟ್ಟರೆ ಇನ್ನೂ ವಿಪತ್ತು!

ಈ ಮಾತು ಭಾರೀ ಕೈಗಾರಿಕಾ ಮಂತ್ರಿ ಮುರುಗೇಶ್ ನಿರಾಣಿಗೆ ಹೊಂದುತ್ತೋ ಬಿಡುತ್ತೋ ಆ ಮಾತು ಬೇರೆ. ಆದರೆ ತನ್ನ ಮಗಳ ವಯಸ್ಸಿನ ಹುಡುಗಿಗೆ ಕಾಮಕೇಳಿ ಎಸ್ಸೆಮ್ಮೆಸ್ ಕಳಿಸುವುದು, ಅದೂ ಕೆಲಸ ಕೇಳಿಕೊಂಡು ಬಂದ ನಿರುದ್ಯೋಗಿ ಯುವತಿಯ ಮೊಬೈಲಿಗೆ ಸೆಕ್ಸ್ ಮೆಸೇಜ್‌ಗಳನ್ನು ಕಳಿಸುವುದಿದೆಯಲ್ಲ; ಒಬ್ಬ ಮಂತ್ರಿಯಾಗಿ, ಇಬ್ಬರು ಮಕ್ಕಳ ತಂದೆಯಾಗಿ ಎಲ್ಲಕ್ಕೂ ಮಿಗಿಲಾಗಿ ಓರ್ವ ಮನುಷ್ಯನಾಗಿ ಮಾಡುವ ಕೆಲಸವಂತೂ ಅಲ್ಲವೇ ಅಲ್ಲ!

9880679000 ಇದು ಮಂತ್ರಿ ನಿರಾಣಿ ಸಾಹೇಬರ ಖಾಸಗಿ ಮೊಬೈಲ್ ಸಂಖ್ಯೆ. ನಿರಾಣಿ ಸದ್ಯ ಯಡ್ಡಿ ಬಣದ ಉತ್ತರ ಕರ್ನಾಟಕದ ಲಿಂಗಾಯತ ನಾಯಕರ ಪೈಕಿ ಏಕಮೇವಾದ್ವಿತೀಯ. ವಯಸ್ಸು ಐವತ್ತನ್ನು ಸಮೀಪಿಸುತ್ತಿದೆ. ತಮ್ಮದೇ ಸಮೀಪದ ಸಂಬಂಧಿ ಕಮಲಾದೇವಿಯವರನ್ನು ಮದುವೆಯಾಗಿ 20 ವರ್ಷಗಳೇ ಕಳೆದಿವೆ. ಇಬ್ಬರು ಮಕ್ಕಳಿದ್ದಾರೆ. ಹಿರಿಯ ಮಗ ವಿದೇಶದಲ್ಲಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಓದುವಷ್ಟು ಬೆಳೆದಿದ್ದಾನೆ. ಮದುವೆ, ಪತ್ನಿ, ಮಕ್ಕಳ ಹೊರತಾಗ್ಯೂ ನಿರಾಣಿಯ ಪೌರುಷ, ರಸಿಕತೆ, ಪರಾಕ್ರಮ ಮತ್ತು ಈ ಸಂಬಂಧಿ ದುಸ್ಸಾಹಸಗಳದ್ದೇ ಭಯಾನಕ ಕತೆಗಳಿವೆ.



ನಿರಾಣಿಯ ಪತ್ನಿ ಕಮಲಾದೇವಿ

ಮಂತ್ರಿ ರೇಣುಕಾಚಾರ್ಯನ ಸೆಕ್ಸ್ ಸಿಡಿ, ಮಾಜಿ ಮಂತ್ರಿ ಹಾಲಪ್ಪನ ರೇಪ್ ಕೇಸು, ಲಿಂಬಾವಳಿಯ ಪ್ರಣಯ ಪ್ರಸಂಗದ್ದೇ ಇನ್ನೊಂದು ಸಿಡಿ–ಹೀಗೆ ಬಿಜೆಪಿಯ ಕಾಮುಕ ಮಂತ್ರಿಗಳ ಚಿತ್ರವಿಚಿತ್ರ ಖಯಾಲಿಗಳ ದೃಶ್ಯಾವಳಿಗಳೆಲ್ಲ ಯಾವ ನೀಲಿ ಚಿತ್ರಕ್ಕೂ ಕಮ್ಮಿ ಇಲ್ಲದಂತೆ ಒಂದೊಂದು ಹೊರಬಿದ್ದವಲ್ಲ; ಆಗ ನಿರಾಣಿ ಸಾಹೇಬರ ಭುಜಬಲ ಪರಾಕ್ರಮದ ಬಗ್ಗೆಯೂ ಸಿಡಿಯೊಂದು ಸೃಷ್ಟಿಯಾಗಿದೆ ಎಂಬ ಸುದ್ದಿ ಎಲ್ಲೆಡೆ ಹಬ್ಬಿತ್ತು. ಇದರ ಸತ್ಯಾಸತ್ಯತೆ ಏನೇ ಇರಲಿ, ನಿರಾಣಿಯವರು ಅಂಥವರಲ್ಲ, ಸಾಕ್ಷಾತ್ ಸತ್ಯ ಹರಿಶ್ಚಂದ್ರ ಎಂದೇ ಇಟ್ಟುಕೊಳ್ಳೋಣ.

ಆದರೆ ಈ ಪ್ರಸಂಗ ಮಾತ್ರ ಮಂತ್ರಿ ನಿರಾಣಿಯ ಮುಖವಾಡ ಕಿತ್ತೆಸೆದು ಆತನ ಕರಾಳ ಮುಖದರ್ಶನ ಮಾಡಿಸುತ್ತದೆ. ಸದ್ಯ ನಿರಾಣಿಯ ಕಾಮಪಿಪಾಸೆಗೆ ಬಲಿಯಾದ ಈ ಹೆಣ್ಣುಮಗಳು ಓರ್ವ ಟಿವಿ ವರದಿಗಾರ್ತಿ. ಹೆಸರು ನವೀನ ಎಂದಿಟ್ಟುಕೊಳ್ಳೋಣ. ಈ ಹಿಂದೆ ಉದಯ ಟಿವಿಯಲ್ಲಿದ್ದು ಸ್ನಾತಕೋತ್ತರ ಪದವಿಯ ಪರೀಕ್ಷೆ ನಿಮಿತ್ತ ಕೆಲಸ ಬಿಟ್ಟಿದ್ದು, ಪರೀಕ್ಷೆ ಮುಗಿಸಿಕೊಂಡು ಇನ್ನಾವುದಾದರೂ ಟಿವಿ ಚಾನಲ್ಲಿಗೆ ಅರ್ಜಿ ಹಾಕುವುದು ಆಕೆಯ ಉದ್ದೇಶವಾಗಿತ್ತು. ಮೂಲತಃ ಶಿವಮೊಗ್ಗದ ಹುಡುಗಿ. ವಯಸ್ಸಿನ್ನೂ ಇಪ್ಪತ್ತೈದಾಗಿರಲಿಲ್ಲ. ಹೇಗೂ ಉದಯ ಟಿವಿಯಲ್ಲಿ ಮತ್ತೆ ಕೆಲಸ ಕಷ್ಟ ಎನಿಸಿದಾಗಲೇ ಸತೀಶ್ ಜಾರಕಿಹೋಳಿಯ ಸಮಯ ಟಿವಿಯನ್ನು ಮಂತ್ರಿ ನಿರಾಣಿ ಖರೀದಿಸಿದ ಸುದ್ದಿ ಗೊತ್ತಾಗಿದೆ.

ಇಲ್ಲಿಗೆ ಮೂರು ತಿಂಗಳ ಹಿಂದಿನ ಮಾತು. ಬಹುಶಃ ಆವತ್ತು ಶುಕ್ರವಾರ ಜೂನ್ 3 ನೇ ತಾರೀಖಿರಬೇಕು. ಹೇಗೂ ನಿರಾಣಿಯವರೇ ಸಮಯ ಟಿವಿ ಖರೀದಿಸಿದ್ದರಿಂದ ಕೆಲಸ ಕೊಡಿ ಎಂದು ಅವರನ್ನೇ ನೇರವಾಗಿ ಕೇಳಿಬಿಟ್ಟರೆ ಅನುಕೂಲ ಎಂಬುದು ಹುಡುಗಿಯ ಭಾವನೆ. ಹಿಂದೊಮ್ಮೆ ಉದಯ ಟಿವಿಯಲ್ಲಿದ್ದಾಗ ನಿರಾಣಿಯವರನ್ನು ಸಂದರ್ಶನ ಮಾಡಿದ ಪರಿಚಯ ಬೇರೆ ಇತ್ತಲ್ಲ; ತನ್ನ ಜೊತೆಗೆ ಇನ್ನೊಂದು ಟಿವಿಯ ವರದಿಗಾರ್ತಿಯಾಗಿದ್ದ ಗೆಳತಿಯೊಬ್ಬಳನ್ನು ಕರಕೊಂಡಿದ್ದೇ ನೇರವಾಗಿ ನಿರಾಣಿಯ **9880679000** ನಂಬರಿಗೆ ಫೋನ್ ಮಾಡಿದ್ದಾಳೆ.

ಅತ್ತಿಂದ ನಿರಾಣಿಯೇ ಮಾತಾಡಿ 'ಬಾರಮ್ಮ, ಎದುರಾಬದುರಾ ಮಾತಾಡೋಣ....' ಎಂದು ಭಾರತೀಯ ವಿದ್ಯಾಭವನದ ಬಳಿ ಬರುವಂತೆ ಹೇಳಿದ್ದಾರೆ. ಸಾಮಾನ್ಯವಾಗಿ ಮಂತ್ರಿಯಾದವರು ಒಂದೋ ತಮ್ಮ ಗೃಹ ಕಚೇರಿಯಲ್ಲಿ ಸಾರ್ವಜನಿಕರನ್ನು ಮಾತಾಡಿಸುವುದು ಸಹಜ ಅಥವಾ ವಿಧಾನಸೌಧದ ಕೊಠಡಿಯಲ್ಲಿ ಭೇಟಿಯಾಗುವುದುಂಟು. ಆದರೆ ನಿರಾಣಿ ನವೀನಳನ್ನು ಬರಹೇಳಿದ್ದು ರೇಸ್‌ಕೋರ್ಸ್ ರಸ್ತೆಯ ಚಾಲುಕ್ಯ ಹೋಟೆಲ್ ಸಂದಿಯ ತಮ್ಮ ಅಧಿಕೃತ ನಿವಾಸಕ್ಕಲ್ಲ, ಆದರ ಎದುರಿಗಿರುವ ಭಾರತೀಯ ವಿದ್ಯಾಭವನದ ಮುಂಭಾಗದ ರಸ್ತೆಗೆ. ಅಂದರೆ ಖನಿಜ ಭವನದ ಎದುರಿನ ಸಂಚಾರ ದಟ್ಟನೆಯ ರೇಸ್ ಕೋರ್ಸ್ ರಸ್ತೆಗೆ!

ಎಷ್ಟೆಂದರೂ ಮಂತ್ರಿ ತಾನೆ? ಏನೋ ಕಾರ್ಯಕ್ರಮದ ಒತ್ತಡದ ಮಧ್ಯೆ ಭೇಟಿಯಾಗಿ ನಡುರಸ್ತೆಯಲ್ಲೇ ಮಾತಾಡಿಸಿ ಹೋಗಬಹುದೆಂದು ಲೆಕ್ಕ ಹಾಕಿ ತನ್ನ ಗೆಳತಿಯ ಜೊತೆ ನೇರವಾಗಿ ರೇಸ್‌ಕೋರ್ಸ್ ರಸ್ತೆಗೆ ಬಂದಿದ್ದಾಳೆ. ಅಲ್ಲಿ ಖನಿಜ ಭವನದ ಎದುರು ನಿಂತು ಮತ್ತೆ ನಿರಾಣಿಯ ಮೊಬೈಲಿಗೆ ಫೋನ್ ಮಾಡಿದ್ದಾಳೆ. ಬಹುಶಃ ಆಕೆಯ ಕರೆಯನ್ನೇ ಕಾದು ಕೂತವರಂತೆ ನಿರಾಣಿ ಮೂರೇ ನಿಮಿಷಕ್ಕೆ ತಮ್ಮ ಕೆಎ-05-299 ನಂಬರಿನ ಗೂಟದ ಕಾರಲ್ಲಿ ಖನಿಜ ಭವನದೆದುರು ಪ್ರತ್ಯಕ್ಷರಾಗಿದ್ದಾರೆ. ಪಾಪ ಹುಡುಗಿಗೇನು ಗೊತ್ತು ಮಂತ್ರಿ ಮನದ ವಿಷ ವಾಂಛೆ?

ಸಾಕ್ಷಾತ್ ಮಂತ್ರಿಯೇ ತಾನಿರುವಲ್ಲಿಗೆ ಬಂದದ್ದನ್ನು ಕಂಡ ಹುಡುಗಿ ಮಾತಾಡಲು ಮುಂದಾದರೆ ನಿರಾಣಿ 'ಬೇಡ, ನನ್ನ ಕಾರಲ್ಲೇ ಕೂತು ಮಾತಾಡೋಣ ಎಂದು ನವೀನ ಮತ್ತು ಆಕೆಯ ಗೆಳತಿಯನ್ನು ತಮ್ಮ ಗೂಟದ ಕಾರಿಗೆ ಹತ್ತಿಸಿಕೊಂಡಿದ್ದಾರೆ. ಕಾರು ರೇಸ್‌ಕೋರ್ಸ್ ರಸ್ತೆಯಲ್ಲಿ ಸಾಗಿ ಶಿವಾನಂದ ಸರ್ಕಲ್ಲಿನತ್ತ ಸಾಗಿದೆ. ನಿರಾಣಿ ಆಕೆಯ ಪೂರ್ವಾಪರಗಳನ್ನೆಲ್ಲ ವಿಚಾರಿಸಿದ್ದಾರೆ. ಡ್ರೈವರ್ ಬಿಟ್ಟರೆ ಮುಂದೆ ಪಿಎ ಎಂದು ಹೇಳಿಕೊಂಡವನೊಬ್ಬ ಕುಳಿತಿದ್ದ. ಸಮಯ ಟಿವಿಯಲ್ಲಿ ವರದಿಗಾರ್ತಿ ಹುದ್ದೆ ಖಾಲಿ ಇದೆಯೋ ಗೊತ್ತಿಲ್ಲ, ಅದನ್ನೇ ಈ ನನ್ನ ಪಿಎನೇ ನೋಡಿಕೊಳ್ತಾನೆ, ನಿಮ್ಮ ಮೊಬೈಲ್ ನಂಬರ್ ನನ್ನ ಬಳಿ ಇದೆ, ಯಾವುದಕ್ಕೂ ನಿಮಗೆ ವಿಷಯ ತಿಳಿಸ್ತೀನಿ ಎಂದಿದ್ದೆ ಕುಮಾರಪಾರ್ಕ್‌ನ ನೆಹರು ಸರ್ಕಲ್ ಬಳಿ ಗೆಳತಿಯರಿಬ್ಬರನ್ನೂ ನಿರಾಣಿ ತಮ್ಮ ಕಾರಿನಿಂದ ಇಳಿಸಿದ್ದಾರೆ.

ಸಮಯ ಟಿವಿಯಲ್ಲಿ ಶತಗತಾಯ ಕೆಲಸ ಗಿಟ್ಟಿಸಲೇಬೇಕೆಂಬ ಸಂದಿಗ್ಧಕ್ಕೆ ಬಿದ್ದಿದ್ದ ಹುಡುಗಿಗೆ ಮಂತ್ರಿ ತಾನಿದ್ದಲ್ಲಿಗೇ ಬಂದು ತನ್ನನ್ನು ಆತನ ಕಾರಲ್ಲೇ ಕೂರಿಸಿ ಮಾತಾಡಿಸಿದ್ದು ಅಚ್ಚರಿಯೆನಿಸಿದೆ. ಆದರೆ ಅದಕ್ಕಿಂತಲೂ ದೊಡ್ಡ ಅಚ್ಚರಿಯಾಗಿದ್ದು ಆ ರಾತ್ರಿ ಮಂತ್ರಿ ನಿರಾಣಿಯವರ ಖಾಸಗಿ ಮೊಬೈಲಿನಿಂದ **'Hello how r u good night'** ಎಂಬ ಎಸ್ಸೆಮ್ಮೆಸ್ ಬಂದ ಮೇಲೆ!

ಬಹುಶಃ ನಿರಾಣಿಯವರಿಗೆ ತನ್ನ ನೇರವಂತಿಕೆ ಹಿಡಿಸಿರಬೇಕು. ತನಗೆ ಸಮಯ ಟಿವಿಯಲ್ಲಿ ಕೆಲಸ ಗ್ಯಾರಂಟಿ ಎಂದು ನಿರ್ಧರಿಸಿಯೇ ಗುಡ್‌ನೈಟ್ ಮೆಸೇಜು ಕಳಿಸಿರಬೇಕೆಂದು ಭಾವಿಸಿದ್ದಾಳೆ. ಬೆಳಗ್ಗೆ ಏಳುವ ಹೊತ್ತಿಗೆ ಸರಿಯಾಗಿ ಆಕೆಗೆ ಮತ್ತೊಂದು ಅಚ್ಚರಿ ಕಾದಿತ್ತು, ಅದು ಮತ್ತೆ ನಿರಾಣಿಯ ಮೊಬೈಲಿನಿಂದ ಬಂದ **Hello... gud morning** ಎಂಬ ಇನ್ನೊಂದು ಎಸ್ಸೆಮ್ಮೆಸ್!



ಯುವತಿಯನ್ನು ಕರೆದೊಯ್ದ ಗೂಟದ ಕಾರು

ಇದರಲ್ಲಿ ತಪ್ಪೇನಿಲ್ಲವಲ್ಲ ಎಂದು ಭಾವಿಸಿದ ಆ ಹುಡುಗಿ ಪತ್ರಿಯಾಗಿ **Thank u sir, gud mrng to u** ಎಂಬ ಮೆಸೇಜು ರವಾನಿಸಿದ್ದಾಳೆ. ಇಷ್ಟಾದ ಮರುಕ್ಷಣಕ್ಕೆ ನಿರಾಣಿಯ ಮೊಬೈಲಿನಿಂದ ಮತ್ತೊಂದು ಎಸ್ಸೆಮ್ಮೆಸ್ ಬಂದಿದೆ. **Happiness is not a station to arrive at, it's a manner of travelling. Have a good day with colourful mrng.....!**

ಅಂದರೆ, ಸಂತೋಷವೆಂಬುದು ಬೇಕೆಂದಾಗ ಇಳಿಯುವ ಸ್ಟೇಷನ್ ಅಲ್ಲ, ಅದೊಂದು ಪಯಣದ ವೈಖರಿ ಮಾತ್ರ!

ಇದನ್ನು ಓದಿದ್ದೇ ತಡ, ಆಕೆಗೇನೋ ಗುಮಾನಿ ಶುರುವಾಗಿದೆ. ಆದರೂ ದುಡುಕುವುದು ಬೇಡವೆಂದು **'Yes sir....!'** ಎಂದು ಪ್ರತಿ ಮೆಸೇಜು ರವಾನಿಸಿದ್ದಾಳೆ. ಮತ್ತೆ ರಾತ್ರಿ ನಿರಾಣಿಯ ಮೊಬೈಲಿನಿಂದ ಗುಡ್‌ನೈಟ್ ಮೆಸೇಜು ಬಂದಿದೆ. ಆದರ ಮರುದಿನ ಮತ್ತೆ **'Hello....!'** ಎಂದಷ್ಟೇ ಮಾರ್ಮಿಕವಾಗಿ ನಿರಾಣಿ ಮೆಸೇಜು ಕಳಿಸಿದ್ದಾರೆ. ಏನೋ ಯಡವಟ್ಟಾಗುತ್ತಿದೆಯಲ್ಲ ಎನ್ನಿಸಿ ಆಕೆ ಸೌಜನ್ಯಕ್ಕೆಂಬಂತೆ ಗುಡ್ ಮಾರ್ನಿಂಗ್ ಸರ್ ಎಂದು ಪ್ರತಿ ಮೆಸೇಜು ಮಾಡಿದ್ದಾಳೆ.

ಆದರೆ ಮಧ್ಯಾಹ್ನದ ಹೊತ್ತಿಗೆ ನಿರಾಣಿಯ ಮೊಬೈಲಿನಿಂದ ಹಿಂದಿಗಿಂತಲೂ ಮಾರ್ಮಿಕ ಮತ್ತು ಮಾದಕ ಎಸ್ಸೆಮ್ಮೆಸ್ ಒಂದು ನವೀನಳ ಮೊಬೈಲಿಗೆ ಬಂದಿದೆ. **Good friends are like stars.... u don't always see them. but u know they are always there!**

ಇದರರ್ಥ ಒಳ್ಳೆಯ ಗೆಳೆಯರು ತಾರೆಗಳಿದ್ದಂತೆ. ಕೆಲವೊಮ್ಮೆ ನಿಮ್ಮ ಕಣ್ಣಿಗದು ಕಾಣದೇ ಹೋದರೂ ಅವು ಮಾತ್ರ ಇದ್ದಲ್ಲೇ ಇರುತ್ತವೆ!

ಮೊದಲು ಬರುತ್ತಿದ್ದ ಎಸ್ಸೆಮ್ಮೆಸ್ಸುಗಳಿಗಿಂತಲೂ ಇದು ಕೊಂಚ ಹಾದಿ ತಪ್ಪಿದ ಮೆಸೇಜಿನಂತೆ ಕಂಡರೂ ಆಕೆ ಸಹಿಸಿಕೊಂಡಿದ್ದಾಳೆ. ಅದರ ಒಳಾರ್ಥ ಏನೇ ಇದ್ದರೂ ಮೇಲುನೋಟಕ್ಕದು ಸಭ್ಯವಾಗೇ ಇತ್ತಲ್ಲ; ವಿನಾಕಾರಣ ಅಪಾರ್ಥಕ್ಕೆ ಅವಕಾಶವಾಗಬಾರದೆಂದು **'Yes Sir.....!'** ಎಂಬಂತೆ ಕಾಟಾಚಾರದ ಪ್ರತಿ ಎಸ್ಸೆಮ್ಮೆಸ್ ಕಳಿಸಿದ್ದಾಳೆ. ಆವತ್ತು ರಾತ್ರಿ ಕೂಡ ನಿರಾಣಿ ಮತ್ತೆ ಗುಡ್‌ನೈಟ್ ಸಂದೇಶ ಕಳಿಸಿದ್ದಾರೆ. ಮಾರನೆ ಬೆಳಿಗ್ಗೆ ನಿರಾಣಿಗೆ ಅಕ್ಷರಶಃ ಪಿತ್ಥ ಕೆರಳಿರಬೇಕು. ಅದು ಮೂರನೇ ದಿನ ಬೆಳಿಗ್ಗೆಯೇ ನಿರಾಣಿಯ ಮೊಬೈಲಿನಿಂದ **'Hellooooo....!'** ಎಂಬ ಮಾರ್ಮಿಕ ಎಸ್ಸೆಮ್ಮೆಸ್ ಬಂದಿದೆ. ಗುಡ್ ಮಾರ್ನಿಂಗ್ ಹೇಳುವ ಬದಲು ಮಂತ್ರಿ ಮೊಬೈಲಿನಿಂದ ಈ ಥರದ ವಿಚಿತ್ರ ಎಸ್ಸೆಮ್ಮೆಸ್ ಬಂದಿದ್ದಕ್ಕೆ ತಾಳ್ಮೆ ವಹಿಸಿದ ಆಕೆ ಮತ್ತೆ ಕಾಟಾಚಾರದ **'gud morng Sir'** ಎಂದು ಮಾರುತ್ತರ ರವಾನಿಸಿದ್ದಾಳೆ. ಆಕೆಯ ಅಳುಕು ಆತಂಕ, ಅನುಮಾನ ಗಳೆಲ್ಲವೂ ನಿಜವಾಗಿದ್ದು ರಾತ್ರಿ ಹೊತ್ತಿಗೆ. ಅದು ಮಂತ್ರಿ ಯೊಬ್ಬನ ಕರಾಳ ಮನದಾಳದ ಕಾಮದಾಹದ ಪ್ರತಿಫಲ ದಂತಿದೆ ಎಸ್ಸೆಮ್ಮೆಸ್!

Adjustment & Compromise r crucial in realtionships. Adjust when someone wants to be with you & compromise when you want to be with some one...!!! good night

ಸಂಬಂಧಗಳಲ್ಲಿ ಹೊಂದಾಣಿಕೆ ಮತ್ತು ರಾಜಿಯಾಗುವುದು ಮಹತ್ವವಾದದ್ದು. ಯಾರಾದರೂ ನಿನ್ನೊಂದಿಗೆ ಇರಬಯಸಿದ್ದೇ ಆದಲ್ಲಿ ಅವರೊಂದಿಗೆ ಹೊಂದಾಣಿಕೆ ಮಾಡಿಕೊ. ಹಾಗೊಮ್ಮೆ ನಿನಗೆ ಯಾರೊಂದಿಗಾದರೂ ಇರಬೇಕು ಅನ್ನಿಸಿದ ಪಕ್ಷದಲ್ಲಿ ನಿನ್ನ ಸ್ವಭಾವದಲ್ಲಿ ರಾಜಿಯಾಗು.... ಗುಡ್‌ನೈಟ್!

ಇದು ಮೂರನೇ ರಾತ್ರಿ ನವೀನಳ ಮೊಬೈಲಿಗೆ ಮಂತ್ರಿ ನಿರಾಣಿ ಕಳಿಸಿದ ವಿಚಿತ್ರ ಎಸ್ಸೆಮ್ಮೆಸ್. ಇದರರ್ಥ ಸ್ಪಷ್ಟವಾಗಿತ್ತು, ಮಂತ್ರಿ ನಿರಾಣಿ ಆಕೆಯೊಂದಿಗೆ ಎಂಥದೋ ರಿಲೇಷನ್‌ಶಿಪ್‌ಗಾಗಿ ಅಂದರೆ ಸಂಬಂಧಕ್ಕಾಗಿ ಹಾತೊರೆಯುತ್ತಿದ್ದಾರೆ. ಅದನ್ನು ಪರೋಕ್ಷವಾಗಿ ಯಾರಾದರೂ ನಿನ್ನೊಂದಿಗೆ ಇರಬೇಕೆಂದು ಬಯಸಿದಲ್ಲಿ ನೀನು ಅಂಥವರ ಜೊತೆ ಹೊಂದಿಕೊಂಡು ಹೋಗು ಅನ್ನುತ್ತಿದ್ದಾರೆ. ಅಥವಾ ಅಡ್ಜಸ್ಟ್ ಮಾಡಿಕೋ ಎನ್ನುತ್ತಿದ್ದಾರೆ. ಹಾಗೇ ನಿನಗೆ ಅಂಥವರ ಜೊತೆ ಇರಬೇಕೆನ್ನಿಸಿದರೆ ನಿನ್ನ ವ್ಯಕ್ತಿತ್ವದಲ್ಲಿ ರಾಜಿ ಮಾಡಿಕೋ ಅಥವಾ ನಿನಗೇ ನೀನೇ ಕಾಂಪ್ರೊಮೈಸ್ ಮಾಡಿಕೊಂಡು ಅಂಥವರ ಅಭಿಲಾಷೆಯನ್ನು ಈಡೇರಿಸು ಅನ್ನುತ್ತಿದ್ದಾರೆ.

ಮೇಲುನೋಟಕ್ಕಿದು ಪ್ರೇಮಾಲಾಪನೆಯಾಗಿ ಕಂಡರೂ ಇದರ ಆಳದಲ್ಲಿರುವುದು ಕಾಮಾಲಾಪನೆಯೇ. ನಿರಾಣಿಗೆ ಪತ್ನಿ ಮಕ್ಕಳಿದ್ದಾರೆ. ಪತ್ನಿಯಷ್ಟೇ ಅಲ್ಲದೆ ತಾನೇ ಬಯಸಿ ಕೈಹಿಡಿದ ಗೆಳತಿಯೂ ಇದ್ದಾರೆ. ಅಷ್ಟಕ್ಕೂ ನಿರಾಣಿ ಈ ರೀತಿ ಮೆಸೇಜ್ ಕಳಿಸುತ್ತಿರುವುದು ತನ್ನ ಮಗಳ ವಯಸ್ಸಿನ, ಸಮಯ ಟಿವಿಗೆ ಕೆಲಸ ಕೇಳಿಕೊಂಡು ಬಂದ ನಿರುದ್ಯೋಗಿ ಯುವತಿಗೆ. ನಿರಾಣಿಗೆ ನಿಜಕ್ಕೂ ಇಂಥದ್ದೇ ಒಬ್ಬ ಮಗಳಿದ್ದರೆ ಆಕೆಗೆ ಬೇರೆ ಯಾರಾದರೂ ಈ ಥರದ ಎಸ್ಸೆಮ್ಮೆಸ್ ಕಳಿಸಿದ್ದರೆ ಆಗ ನಿರಾಣಿಯ ಪ್ರತಿಕ್ರಿಯೆ ಏನಾಗಿರು ತ್ತಿತ್ತು? ತನ್ನ ಸಮಯ ಟಿವಿಗೆ ವರದಿ ಗಾರ್ತಿಯಾಗುವ ಆಸೆ ಹೊತ್ತು ಬಂದ ಆ ಹುಡುಗಿಗೆ ಕೆಲಸ ಕೊಡುವುದು ಹಾಳಾಗಲಿ; ನಿನ್ನನ್ನು ಯಾರಾದರೂ ಬಯಸಿದರೆಂದರೆ ಅಂಥವರ ಜೊತೆ ಹೊಂದಿಕೊಂಡು ಹೋಗು, ಅಂಥವರ ಜೊತೆ ರಾಜಿಯಾಗು ಎನ್ನುವ ನಿರಾಣಿಗೆ ಅಧಿಕಾರ ಮತ್ತು ಸಂಪತ್ತು ಬಿಟ್ಟರೆ ಯಾವ ಮೌಲ್ಯವಿದೆ? ಹೆಣ್ಣು ಮಕ್ಕಳೆಂದರೆ ನಿರಾಣಿಗೆ ಯಾವ ಭಾವನೆಯಿದೆ ಎಂಬುದಕ್ಕೆ ಇದಕ್ಕಿಂತ ಉದಾಹರಣೆ ಬೇಕೆ? ಇನ್ನು ಕೈಗಾರಿಕಾ ಇಲಾಖೆಯಲ್ಲಿ, ಆತನ ಫ್ಯಾಕ್ಟರಿಯಲ್ಲಿ, ಸಮಯ ಟಿವಿಯಲ್ಲಿ ಕೆಲಸ ಮಾಡುವ ಹುಡುಗಿಯರಿಗೆ ನಿರಾಣಿ ಕೊಡುವ ಗೌರವವೇನು? ನಿಸ್ಸಂಶಯವಾಗಿ ಇದು ಲೈಂಗಿಕ ದೌರ್ಜನ್ಯವಲ್ಲದೆ ಮತ್ತೇನಲ್ಲ. ಕೆಲಸ ಕೇಳಿಕೊಂಡು ಬಂದ ಮಗಳ ವಯಸ್ಸಿನ ಯುವತಿಗೆ ಕಾಮಕೇಳಿ ಎಸ್ಸೆಮ್ಮೆಸ್ ಕಳಿಸುವುದು, ಆಕೆ ಒಪ್ಪದೇ ಹೋಗಿದ್ದಕ್ಕೆ ಕೆಲಸವನ್ನೇ ನಿರಾಕರಿಸುವುದು ಕಾನೂನು ರೀತ್ಯ ಅಪರಾಧ.

ಈ ಮೂರನೇ ಎಸ್ಸೆಮ್ಮೆಸ್ ನೋಡಿದ್ದೇ ತಡ, ಆ ಹುಡುಗಿಗೆ ನಿರಾಣಿಯ ಕೀಚಕಬುದ್ಧಿ ಅರ್ಥವಾಗಿದೆ. ಆನಂತರ ಬಂದ ಬಹುತೇಕ ಎಸ್ಸೆಮ್ಮೆಸ್‌ಗಳಿಗೆ ಪ್ರತಿಕ್ರಿಯಿಸುವುದನ್ನೇ ನಿಲ್ಲಿಸಿದ್ದಾಳೆ. ಸಮಯ ಟಿವಿಯ ಧಣಿಯೇ ಹೀಗಾದ ಮೇಲೆ ಇನ್ನು ಅಲ್ಲಿ ಕೆಲಸ ಮಾಡುವುದರಲ್ಲಿ ಯಾವ ಪುರುಷಾರ್ಥವಿದೆ ಎನ್ನಿಸಿ ನಿರಾಣಿಯ ಫೋನ್ ಕರೆಗಳನ್ನು ರಿಸೀವ್ ಮಾಡುವುದನ್ನೇ ನಿಲ್ಲಿಸಿದ್ದಾಳೆ. ಇದರ ನಂತರ ನಿರಾಣಿ ಕಳಿಸಿದ ಎಸ್ಸೆಮ್ಮೆಸ್‌ಗಳಿವೆಯಲ್ಲ ಈ ಬಗ್ಗೆ ಪ್ರಸ್ತಾಪಿಸುವುದೇ ಅಸಹ್ಯ. ತಾನೊಬ್ಬ ಮಂತ್ರಿ ಎಂಬುದನ್ನೂ ಲೆಕ್ಕಿಸದೇ ಯಾರದೋ ಮನೆ ಹೆಣ್ಣುಮಕ್ಕಳ ಜೊತೆ ಕಾಮಕೇಳಿಗೆ ಹಾತೊರೆಯುವ ನಿರಾಣಿ ಇನ್ನೂ ಮಂತ್ರಿಯಾಗಿದ್ದಾನೆಂದರೆ ಅದು ಕರ್ನಾಟಕದ ದುರಂತವಲ್ಲದೇ ಮತ್ತೇನು?

• ರಾ. ಸೋಮನಾಥ್



ಎಚ್ಚರಿಕೆ! ಬಂದೈತೆ ಹೊಸಬ್ಲೇಡು!
ಸ್ವಯಂಕೃಷಿ
ಇದು ಮತ್ತೊಂದು ವಿನಿವಿಂಕ್

ಎಂಟುಕೋಟಿ ಸುರಿದು ಸೃಷ್ಟಿಸಿದ 'ಸ್ವಯಂಕೃಷಿ' ಸಿನಿಮಾಕ್ಕೆ ಕನಿಷ್ಠ ಎಂಟು ರೂಪಾಯಿ ಲಾಭವಾದರೂ ಬೇಡವೇ? ಹೋಗಲಿ; ಅದರ ಹೀರೋ ವೀರೇಂದ್ರಬಾಬು ಮುಖಕ್ಕೆ ನಾಲ್ಕು ನೊಣಗಳಾದರೂ ಥಿಯೇಟರಿಗೆ ಬರದಿದ್ದರೆ ಹೇಗೆ? ಹಾಳಾಗಲಿ, ಇಷ್ಟೆಲ್ಲ ಬಂಡವಾಳ ಹಾಕಿ ಮಾಡಿದ ಈ ಚಿತ್ರವನ್ನು ವಾರದ ಮೊದಲೇ ಥಿಯೇಟರ್‌ಗಳಿಂದ ಎತ್ತಲು ಚಿತ್ರ ಮಂದಿರಗಳ ಮಾಲೀಕರಿಗೆ ಕಿಂಚಿತ್ತಾದರೂ ದಯೆ-ಕರುಣೆ ಬೇಡವೇ? ಯಾಕೋ ಜನಾನೇ ಸರಿ ಇಲ್ಲ- ಸ್ವಯಂಕೃಷಿಯಂಥ ಅದ್ಭುತ ಚಿತ್ರ ಹಿಂದೆ ಬಂದಿಲ್ಲ, ಮುಂದೆ ಬರುವುದೂ ಇಲ್ಲ....!



ಈ ಮಾತನ್ನು ಯಾರು ಯಾರಿಗೆ ಯಾವಾಗ ಹೇಳಿದರೆಂದು ಯಾರೂ ತಲೆಕೆಡಿಸಿಕೊಳ್ಳಬೇಕಿಲ್ಲ. ಸ್ವಯಂಕೃಷಿ ಗ್ರೂಪ್ಸ್ ಅರ್ಥಾತ್ ಎಸ್.ಕೆ.ಇಂಡಿಯಾ ಎಂಟರ್‌ಟೇನ್‌ಮೆಂಟ್ ಪ್ರೈವೇಟ್ ಲಿಮಿಟೆಡ್, ಎಸ್‌ಕೆ ಕೊರಿಯರ್ ಅಂಡ್ ಕಾರ್ಗೋ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್, ಸ್ವಯಂಕೃಷಿ ಇನ್‌ಫೋಟೆಕ್ ಪ್ರೈವೇಟ್ ಉದಾಹರಣೆಯಂತಿದೆ ಸ್ವಯಂಕೃಷಿ ಗ್ರೂಪ್. ಎತ್ತಿಂದೆತ್ತ ನೋಡಿದರೂ ಸ್ವಯಂಕೃಷಿ ಗ್ರೂಪು ಬರಖತ್ತಾಗುವ ಲಕ್ಷಣಗಳಿಲ್ಲ. ಹಾಗಿದ್ದರೆ ನಂಬಿಕೆಯಿಟ್ಟು ಜನ ಹಾಕಿದ ದುಡ್ಡನ್ನು ಈಗ ತೋಪೆದ್ದು ಒಂದೇ ವಾರಕ್ಕೆ ಎತ್ತಂಗಡಿಯಾದ 'ಸ್ವಯಂಕೃಷಿ' ಯಂಥ ಬಕ್‌ವಾಸ್ ಚಿತ್ರಕ್ಕೆ ಹಾಕುತ್ತಿರಲಿಲ್ಲ.

ಅಷ್ಟಕ್ಕೂ 'ಸ್ವಯಂಕೃಷಿ' ಚಿತ್ರಕ್ಕೆ ಅದೇನೆಂದು ಎಂಟುಕೋಟಿ ಸುರಿದರು, ಏಕೆ ಈ ಪಾಟಿ ದುಡ್ಡು ಹಾಕಿ ಹೀರೋ-ಹೀರೋಯಿನ್ ಯಾರೂ ಇಲ್ಲದ ಸಿನಿಮಾ ನಿರ್ಮಿಸಿದ್ದು ಪುನೀತ್, ದರ್ಶನ್, ಉಪ್ಪಿಯಂಥ ಹೀರೋಗಳಿರುವ ಚಿತ್ರಕ್ಕೆ ಹಾಕುವ ಬಂಡವಾಳ ಐದು ಕೋಟಿಯನ್ನು ಮೀರುವುದಿಲ್ಲ. ಇಂಥಾದರಲ್ಲಿ ಯಾರೋ ಗುಲ್ಡೂ ಪಾರ್ಟಿಯನ್ನು ಹೀರೋ ಮಾಡಿ ಅದಕ್ಕೆ ಎಂಟು ಕೋಟಿ ಖರ್ಚಾಯಿತೆಂದು ಲೆಕ್ಕ ಕೊಟ್ಟರೆ ಕೇಳುವವರ್‍ಯಾರು?

ಸ್ವಯಂಕೃಷಿ ಎಂಬುದು ಹಿಂದೆಂದೋ ತೆಲುಗಿನಲ್ಲಿ ತೆರೆಕಂಡ ಚಿರಂಜೀವಿಯ ಹಿಟ್ ಸಿನಿಮಾದ ಹೆಸರು. ಬಹುಶಃ ಅದು ಯಂಡಮೂರಿಯ ಕತೆಯಾಧಾರಿತ ಚಿತ್ರವಿರಬೇಕು. ಅದರಲ್ಲಿ ನಿರುದ್ಯೋಗಿಯೊಬ್ಬ ಹೇಗೆ ಶ್ರದ್ಧೆವಹಿಸಿ ಕುಬೇರನಾಗುತ್ತಾನೆಂಬ ಕತೆಯಿದೆ. ಈ ಚಿತ್ರದ ಕತೆಯಿಂದ ಪ್ರೇರಣೆಗೊಂಡೋ ಅಥವಾ ಈ ರೀತಿ ಜನರನ್ನು ಯಾಮಾರಿಸಬಹುದೆಂದೋ ಲೆಕ್ಕಹಾಕಿ ಬ್ಲೇಡ್ ಕಂಪನಿಯನ್ನು ಶುರುಹಚ್ಚಿಕೊಂಡ ಧೂರ್ತದ್ವಯರೇ ಚಿಂತಾಮಣಿಯ ಎಂ.ಮುರಳಿ ಮತ್ತು ಶಿಡ್ಲಘಟ್ಟದ ವೀರೇಂದ್ರ ಬಾಬು. ಶುರುವಿನಲ್ಲಿ ಇವರಿಬ್ಬರೂ ಅಗ್ರಿಗೋಲ್ಡ್ ಎಂಬ ಮತ್ತೊಂದು ಬ್ಲೇಡ್ ಕಂಪನಿಯಲ್ಲಿ ಮನಿಕಲೆಕ್ಟರ್‌ಗಳಾಗಿದ್ದರು. ಅಂದರೆ ಮುಗ್ಧ ಜನರನ್ನು ಯಾಮಾರಿಸಿ ಷೇರು ಹಾಕಿಸುವುದೇ ಇವರ ಕಸುಬು.


ಯಾವತ್ತು ಅಗ್ರಿಗೋಲ್ಡ್ ಬರಖತ್ತಾಗದೆ ಹಣ ಹಾಕಿದ ಜನ ಗಲಾಟೆಗಿಳಿದರೋ ಆಗ ತಲೆಎತ್ತಿದ್ದು ಇದೇ ಮುರಳಿ ಮತ್ತು ವೀರೇಂದ್ರಬಾಬು. ಈ ಹಿಂದೆ ಅಗ್ರಿಗೋಲ್ಡ್‌ಗೆ ಷೇರು ಹಾಕಿ ಮೋಸಹೋದವರನ್ನೇ ಯಾಮಾರಿಸಿ ಸ್ವಯಂಕೃಷಿಯತ್ತ ರೊಕ್ಕ ಪೀಕಲಾರಂಭಿಸಿದರು. 2009ರಲ್ಲಿ ಹುಟ್ಟಿಕೊಂಡ ಸ್ವಯಂಕೃಷಿ ಗ್ರೂಪ್ ರಾತ್ರೋರಾತ್ರಿ ಏನೆಲ್ಲ ಚಿತ್ರವಿಚಿತ್ರ ಅವತಾರವೆತ್ತಿತೆಂದರೆ; ಸ್ವಯಂಕೃಷಿ ಫಾರ್ಮ್ ಎಸ್ಟೇಟ್ಸ್ ಪ್ರೈವೇಟ್ ಲಿಮಿಟೆಡ್, ಸ್ವಯಂಕೃಷಿ ಗಾರ್ಮೆಂಟ್ಸ್, ಸ್ವಯಂಕೃಷಿ ಸೌಹಾರ್ದ ಕ್ರೆಡಿಟ್ ಕೋಆಪರೇಟಿವ್ ಲಿಮಿಟೆಡ್, ಶ್ರೀಸುರಕ್ಷಾ ಇಂಡಿಯಾ ಚಿಟ್ಸ್ ಪ್ರೈವೇಟ್ ಲಿಮಿಟೆಡ್, ಶ್ರೀ ಸುರಕ್ಷಾ ಫೈನಾನ್ಸಿಯಲ್ ಸರ್ವೀಸಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್, ಎಸ್‌ಕೆ ಕೊರಿಯರ್ ಅಂಡ್ ಕಾರ್ಗೋ ಸರ್ವೀಸಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್, ಸ್ವಯಂಕೃಷಿ ಇನ್‌ಫೋಟೆಕ್ ಪ್ರೈವೇಟ್ ಲಿಮಿಟೆಡ್, ಎಸ್‌ಕೆ ಇಂಡಿಯಾ ಎಕ್ಸ್‌ಪೋರ್ಟ್ ಅಂಡ್ ಇಂಪೋರ್ಟ್ ಪ್ರೈವೇಟ್ ಲಿಮಿಟೆಡ್ ಹೀಗೆ ಬೇಕಾಬಿಟ್ಟಿ ಹೆಸರಿನ ಒಂದು ಡಜನ್ನಿಗೂ ಮೀರಿದ ಕಂಪನಿಗಳು ರಾತ್ರೋರಾತ್ರಿ ಸೃಷ್ಟಿಗೊಂಡವು.



ಸ್ವಯಂಕೃಷಿ ಚಿತ್ರದಲ್ಲಿ ವೀರೇಂದ್ರ ಬಾಬು

ಲಿಮಿಟೆಡ್... ಇತ್ಯಾದಿ 'ಸ್ವಯಂಕೃಷಿ' ಹೆಸರಿನ ಅಸಂಖ್ಯಾತ ಕಂಪನಿಗಳೂ, ಬೋರ್ಡುಗಳೂ, ಸಂಸ್ಥೆಗಳ ಯಾರೇ ಬ್ಲೇಡ್ ಗಿರಾಕಿಯನ್ನು ಹಿಡಿದು ಅದರ ಷೇರುದಾರರು ಲೆಕ್ಕ ಕೇಳಿದರೆ ಮೇಲ್ನೋಂಡ ಯಾವುದಾದರೂ ಒಂದು ಪ್ರಶ್ನೆ ಹಾಕಿಯೇ ಆತ ಜಾಗ ಖಾಲಿ ಮಾಡುವುದು.

ಜನ ವಿನಿವಿಂಕ್ ಶಾಸ್ತ್ರಿಯನ್ನು ನೋಡಾಗಿದೆ. ಅಕ್ಷಯ ಫೌಂಡೇಷನ್, ಜಿಎನ್‌ಎಸ್ ನಿಧಿ, ಅಗ್ರಿಗೋಲ್ಡ್... ಹೀಗೆ ತರಹೇವಾರಿ ಬ್ಲೇಡ್ ಕಂಪನಿಗಳೂ, ಡಬ್ಲಿಂಗ್ ದೊರೆಗಳೂ ಕೋಟಿಗಟ್ಟಲೇ ದುಡ್ಡು ನುಂಗಿ, ಜನಕ್ಕೆ ಟೋಪಿಹಾಕಿದ್ದೂ ಆಗಿದೆ. ಇಷ್ಟಾಗ್ಯೂ ಹಳ್ಳಕ್ಕೆ ಬೀಳುವವರು, ಯಾಮಾರುವವರ ಸಂಖ್ಯೆ ಮಾತ್ರ ಎಂದಿನಂತೆಯೇ ಇದೆ ಎಂಬುದಕ್ಕೆ ಲೇಟೆಸ್ಟ್

ಅಂಥ ಗುರುಟೀಕ್, ಕಂಟ್ರಿಕ್ಲಬ್, ವಿನಿವಿಂಕ್, ಅಕ್ಷಯ ಫೌಂಡೇಷನ್, ಅಗ್ರಿಗೋಲ್ಡ್, ಜಿಎನ್‌ಎಸ್ ನಿಧಿ ಕಂಪನಿಗಳೇ ಜನರ ದುಡ್ಡೆತ್ತಿ ಬರಖತ್ತಾಗಲಿಲ್ಲ. ಈಗ ವೀರೇಂದ್ರ ಬಾಬು-ಮುರಳಿ ಜೋಡಿ ಹುಟ್ಟಿಕೊಂಡಿದ್ದಾರೆ. ಈಗಾಗಲೇ 50 ಸಾವಿರಕ್ಕೂ ಅಧಿಕ ಠೇವಣಿದಾರರು ಸ್ವಯಂಕೃಷಿ ಗ್ಯಾಂಗಿನ ಬಣ್ಣದ ಮಾತಿಗೆ ಮರುಳಾಗಿ ದುಡ್ಡು ಹಾಕಿದ್ದಾರೆ. ಬೇರೆ ಬ್ಲೇಡ್ ಕಂಪನಿಗಳು ಕನಿಷ್ಠ ಆಸ್ತಿಯನ್ನಾದರೂ ಖರೀದಿಸುತ್ತಿದ್ದರು. ಜನರ ದುಡ್ಡಿಗೆ ಕನಿಷ್ಠ ಜಮೀನಿನ ಗ್ಯಾರಂಟಿಯಾದರೂ ಇರುತ್ತಿತ್ತು. ಆದರೆ ಸ್ವಯಂಕೃಷಿ ಪತ್ರಿಕೆ, ಟಿವಿ, ಸಿನಿಮಾದಂಥ ಅನುತ್ಪಾದಕಗ್ಯಾರಂಟಿಯಿಲ್ಲದ, ತಕ್ಷಣದ ಶೋಕಿಯ ಖಯಾಲಿಗೆ ನೀರಿನಂತೆ ರೊಕ್ಕ ಸುರಿಯುತ್ತಿದೆ.


ಮುರಳಿ


ವಿನಿವಿಂಕ್ ಶಾಸ್ತ್ರಿ

ಇದೆಲ್ಲವೂ ಮುಗ್ಧ ಜನರನ್ನು ಯಾಮಾರಿಸಿ ರೊಕ್ಕ ಕೀಳಲು ಮುರಳಿ ಮತ್ತು ವೀರೇಂದ್ರ ಬಾಬು ಹುಟ್ಟುಹಾಕಿದ ಬೋಗಸ್ ಕಂಪನಿಗಳೇ ಹೊರತು ವಾಸ್ತವವಾಗಿ ಅ... ಯಾವುದೇ ವ್ಯಾಪಾರ ವಹಿವಾಟುಗಳೇ ಇರಲಿಲ್ಲ. ಮೊದ... ದೇವನಹಳ್ಳಿಯ ಹಳೇ ಬಸ್‌ಸ್ಟ್ಯಾಂಡ್ ಪಕ್... ಬಿ.ಬಿ.ರೋಡ್‌ನಲ್ಲೊಂದು ಕಾರ್ಪೊರೇಟ್ ಆಫೀಸು ಶು... ವಾಯಿತು. ಆ ನಂತರ ಬೆಂಗಳೂರಿನ ಸಹಕಾರನಗರದ... ಸ್ವಯಂಕೃಷಿ ಇನ್‌ಫೋಟೆಕ್ ಕಂಪನಿಯ ಕಚೇರಿ ತ... ಯೆತ್ತಿತು. ಸ್ವಯಂಕೃಷಿ ಗಾರ್ಮೆಂಟ್ಸ್ ಎಂಬುದು ಹೆಸರಿಗ... ಎಲ್ಲಿ ಗಾರ್ಮೆಂಟ್ ನಡೆಸುತ್ತಿದ್ದೀರಿ ಎಂದರೆ 'ಇಲ್ಲ... ಜಯನಗರದಲ್ಲಿ ಒಂದು ದೊಡ್ಡ ಬಿಲ್ಡಿಂಗ್ ಖರೀದಿಸಿದ್ದೀ... ಇಷ್ಟರಲ್ಲೇ ನೋಡ್ತಾ ಇರಿ, ಯಾರೂ ಮಾಡದ ಗಾರ್ಮೆಂ... ಫ್ಯಾಕ್ಟರಿ ಶುರುಮಾಡ್ತೀವಿ' ಎಂದು ಮುರಳಿ ಕ... ಹಾರಿಸುತ್ತಿದ್ದ. ಸ್ವಯಂಕೃಷಿ ಫಾರ್ಮ್ ಎಸ್ಟೇಟ್ಸ್ ಇಂಡಿಯಾ... ಫಾರ್ಮ್ ಎಲ್ಲಿದೆ ಅಂದರೆ ತನ್ನ ಪರಿಚಿತರ ಹತ್ತಿರದ... ತೋಟವನ್ನೇ ತೋರಿಸಿ "ನೋಡಿ ಇದೇ ನಮ್ಮ ಹೊ... ಫಾರ್ಮ್. ಇಲ್ಲಿ ವೆನಿಲಾ ಬೆಳೆತೀವಿ. ಫಾರಿನ್ನಿಗೆ ಹೂ... ರಫ್ತು ಮಾಡ್ತೀವಿ" ಎಂದು ವೀರೇಂದ್ರ ಬಾಬು ಕತೆಕಟ್ಟಿ... ಕೊರಿಯರ್ ಮತ್ತು ಕಾರ್ಗೋ ಹೆಸರಿಗಷ್ಟೇ ಸೀಮಿ... ವಾಗಿತ್ತು. ಸ್ವಯಂಕೃಷಿ ಇನ್‌ಫೋಟೆಕ್ ಎಂಬುದು ಕೇವ... ಬೋರ್ಡು ಮಾತ್ರವೇ ಹೊರತು ಮುರಳಿ ಮತ್ತು ವೀರೇಂ... ಬಾಬುಗೆ ಕಂಪ್ಯೂಟರ್, ಇಂಟರ್‌ನೆಟ್ ಸಾಫ್ಟ್‌ವೇ... ಇತ್ಯಾದಿಗಳ ಸಾಮಾನ್ಯ ಜ್ಞಾನ ಕೂಡಾ ಇರಲಿಲ್ಲ. ಅಷ್ಟಕ್ಕೂ ವೀರೇಂದ್ರ ಬಾಬು ಓದಿದ್ದು ಏಳನೇ ತರಗತಿ. ಮುರ... ಪಿಯುಸಿಗೆ ಸುಸ್ತು ಹೊಡೆದಿದ್ದ ಇಂಥವರು ಇನ್‌ಫೋಟೆಕ್... ಇಂಪೋರ್ಟ್-ಎಕ್ಸ್‌ಪೋರ್ಟ್ ಕಂಪನಿಗಳ ಧಣಿಗಳಾ... ವುದು ಹೇಗೆ ಸಾಧ್ಯ?

ಅಷ್ಟಕ್ಕೂ ಈ ಧೂರ್ತದ್ವಯರು ಹಿಡಿಯುತ್ತಿದ್ದ... ನಗರವಾಸಿ ವಿದ್ಯಾವಂತರನ್ನಲ್ಲ, ವಿಶೇಷವಾಗಿ ಕೋಲಾ... ಶಿಡ್ಲಘಟ್ಟ, ಚಿಕ್ಕಬಳ್ಳಾಪುರ, ದೇವನಹಳ್ಳಿ, ಚಿಂತಾಮ... ಗೌರಿಬಿದನೂರು, ಮಾಲೂರು, ರಾಮನಗ... ಕುಣಿಗಲ್‌ನಂಥ ಹಳ್ಳಿಗಾಡಿನ ರೈತರನ್... ಹಿಡಿದು ಎರಡೇ ವರ್ಷಕ್ಕೆ ಡಬ್ಬಲ್ ಮಾಡಿಕೊಡ್ತೀವಿ, ಕಮ್ಮಿ ದುಡ್ಡು ಹಾಕಿ... ಮೂರು ವರ್ಷಕ್ಕೆ ಡಬಲ್ಲು, ಜಾಸ್ತಿ ದುಡ... ಹಾಕಿದ್ರೆ ಎರಡೇ ವರ್ಷದಲ್ಲಿ ಡಬಲ್ಲು ಎಂದ... ಕತೆ ಹೊಡೆದರು. ಇದ್ದಬದ್ದ ಜಮೀನ... ಮಾರಿ ಬಂದ ದುಡ್ಡನ್ನು ಏನ... ಮಾಡುವುದೆಂದು ಗೊತ್ತಾಗದೆ ಒಡ... ಕೊಂಡಿದ್ದ ರೈತರಿಗೆ ಹತ್ತೋ, ಇಪ್ಪತ್ತೋ ಸಾವಿರವನ್ನು ಸ್ವಯಂಕೃಷಿಗೆ ಹಾಕುವುದ... ಕಷ್ಟವೇನಲ್ಲ. ಎರಡೇ ವರ್ಷಕ್ಕೆ ದುಪ್ಪಟ್ಟಾಗ... ತ್ತದೆ ಎಂದು ದುರಾಶೆಗೆ ಬಿದ್ದು ಕೆಲವರ... ಐದೋ, ಹತ್ತೋ ಲಕ್ಷವನ್ನು ಕೊಟ್ಟರು... ಚಿಕ್ಕಬಳ್ಳಾಪುರದ ಪುಢಾರಿ ಯೊಬ್ಬನೇ 2... ಲಕ್ಷ ಹಾಕಿದ್ದಾನೆ. ಮಾಲೂ ರಿನ ಲ್ಯಾಂಡ್ ಬ್ರೋಕರ್ ಒಬ್ಬ 60 ಲಕ್ಷ ತಂದು ಎರಡ... ವರ್ಷಕ್ಕೆ ಡಬ್ಬಲ್ ಮಾಡಿಕೊಡುವಂ... ಮುರಳಿಯ ಕೈಗಿತ್ತಿದ್ದಾನೆ. ಕೆ.ಆರ್‌ಪುರ... ಬಿಜೆಪಿ ನಾಯಕನೊಬ್ಬ ಕೋಟಿ ಕೊಟ್ಟಿದ್ದಾನಂತೆ.


ಹೀಗೆ ಯಾರ್‍ಯಾರಿಂದ ರೊಕ್ಕ ಎತ್ತಿದ್ದಾರೋ ಅವರೆಲ್ಲರಿಗೂ ಇನ್ನೊಂದು ವರ್ಷದಲ್ಲಿ ದುಡ್ಡು ವಾಪಸು ಮಾಡಬೇಕು. ಅದೂ ಒಂದಕ್ಕೆರಡರಷ್ಟು!

ಹಕೀಕತ್ತೇನೆಂದರೆ ಈ ರೀತಿ ಕೋಟಿಗಟ್ಟಲೆ ಸಾರ್ವಜನಿಕರ ರೊಕ್ಕ ಲೆಕ್ಕದ ಪುಸ್ತಕದಲ್ಲಷ್ಟೇ ಇದೆಯೆ... ಹೊರತು ಕೊಟ್ಟ ದುಡ್ಡೆಲ್ಲ ಮುರಳಿ ಮತ್ತು ವೀರೇಂದ್ರ ಬಾಬು ಶೋಕಿಯಲ್ಲೇ ಪೋಲಾಗಿ ಹೋಗಿದೆ. ಸ್ವಯಂಕೃ... ಎಂಬ ಬ್ರಾಂಡ್‌ನಡಿಯಲ್ಲಿ ಮಿನರಲ್ ವಾಟರ್ ಪ್ಲಾಂಟ... ಒಂದನ್ನು ಮೈಸೂರಿನ ನಂಜನಗೂಡು ಸಮೀಪ... ಹಾಕುತ್ತಾರಂತೆ. ಉದ್ಯೋಗ, ಆಸ್ತಿ, ಆಟೋಮೊಬೈಲ್ಸ್... ಟ್ರಾವೆಲ್ಸ್ ದಂಧೆಯನ್ನೂ ಇಷ್ಟರಲ್ಲೇ ಶುರುಮಾಡ್ತೀವಿ... ಎನ್ನುತ್ತಾರೆ. ಇದಕ್ಕೆಂದೇ ಕನ್ಸಲ್ಟೆನ್ಸಿ ಸರ್ವೀಸ್ ಅನ್ನೋ... ಇನ್ನೊಂದು ಕಂಪನಿ ಹುಟ್ಟುಹಾಕುತ್ತಾರೆ.

ಸ್ವಯಂಕೃಷಿ ಡೈರಿ ಫಾರ್ಮಿಂಗ್ ಅಂಡ್ ಮಿಲ್... ಪ್ರಾಡಕ್ಟ್ಸ್, ಸ್ವಯಂಕೃಷಿ ಪೌಲ್ಟ್ರೀಸ್, ಸ್ವಯಂಕೃಷಿ ಹರ್ಬಲ್... ಮೆಡಿಸನ್ಸ್, ಸ್ವಯಂಕೃಷಿ ಹೌಸಿಂಗ್ ಅಂಡ್ ಲ್ಯಾಂಡ್ ಡೆವಲಪಿಂಗ್, ಸ್ವಯಂಕೃಷಿ ಸೀಡ್ ಕಲ್ಟಿವೇಶನ್ ಅಂಡ್ ಬಯೋ ಆರ್ಗಾನಿಕ್ಸ್, ಸ್ವಯಂಕೃಷಿ ಇನ್ಶೂರೆನ್ಸ್, ಸ್ವಯಂಕೃಷಿ ಕನ್‌ಸ್ಟ್ರಕ್ಷನ್.... ಹೀಗೆ ತಲೆಗೆ ಏನೇನು ತೋಚುತ್ತೋ... ಅವೆಲ್ಲವನ್ನೂ ಮಾಡುತ್ತಿದ್ದೇವೆಂದು ಮುರಳಿ-ಬಾಬು ಜೋಡಿ ಹೇಳಿಕೊಳ್ಳುತ್ತದೆ. ಏಕಕಾಲಕ್ಕೆ ಇಷ್ಟೆಲ್ಲ ಕಂಪನಿಗಳ ಮೂಲಕ ಈ ಪಾಟಿ ವಹಿವಾಟು ನಡೆಸುವುದು ಟಾಟಾ-ಬಿರ್ಲಾಗಳಂತ... ದೈತ್ಯರಿಗಿರಲಿ ಸ್ವತಃ ಸರ್ಕಾರಕ್ಕೆ ಸಾಧ್ಯವಿಲ್ಲ ಎಂಬ ಕನಿಷ್... ಜ್ಞಾನ ಕೂಡಾ ಇವರಿಗಿದ್ದಂತಿಲ್ಲ. ನಂಬಲು ಇವರಿಗೆ ವಿದ್ಯಾವಂತರೇನು ಬೇಕಿಲ್ಲವಲ್ಲ?

ಇಷ್ಟೆಲ್ಲ ಕಂಪನಿಗಳ ಮೂಲಕ ಏನೆಲ್ಲ ವಹಿವಾಟು ಹಮ್ಮಿಕೊಂಡ ಈ ಕಿಲಾಡಿ ಜೋಡಿ ಅಸಲಿಗೆ ನಡೆಸುತ್ತಿರುವುದು ಏನು? ಎಷ್ಟು ಸಾವಿರ ಮಂದಿ ನೌಕರರಿದ್ದಾರೆ?

......12



ಕಂಡೋರ ದುಡ್ಡಲ್ಲಿ ಸ್ವಯಂ ಖುಷಿ

ವ್ಯಾಪಾರ ಗೊತ್ತಿದ್ದರೆ ಏಕೆ ಸಿನಿಮಾ ಮಾಡುತ್ತಾರೆ?
ಸಿನಿಮಾ-ಪತ್ರಿಕೆ ಮಾಡಿ ಉದ್ಧಾರವಾದವರುಂಟಾ?


ಎಸ್.ಕೆ.ಗ್ರೂಪ್‌ನಲ್ಲಿರುವ ಪ್ರಳಯಾತಂಕರ ಪಟ್ಟಿ ಸಣ್ಣದೇನಲ್ಲ. ಎಂ.ಮುರಳಿ ಇದರ ಚೇರ್ಮನ್ ಮತ್ತು ಮ್ಯಾನೇಜಿಂಗ್ ಡೈರೆಕ್ಟರ್ ಆದರೆ ವೀರೇಂದ್ರ ಬಾಬು ಇದರ ಉಪಾಧ್ಯಕ್ಷ ಮತ್ತು ಎಕ್ಸಿಕ್ಯೂಟಿವ್ ಡೈರೆಕ್ಟರ್. ಇವರಲ್ಲದೇ ರಾಮಕೃಷ್ಣಾಚಾರಿ ಎಂಬಾತ ಇದಕ್ಕೆ ಮತ್ತೊಬ್ಬ ಡೈರೆಕ್ಟರ್. ಈತನ ವಿರುದ್ಧ ಚಿಕ್ಕಬಳ್ಳಾಪುರದಲ್ಲಿ ವಂಚನೆ ಕೇಸಿದೆ. ಕೆ.ಆರ್. ಆರತಿ ಎಂಬಾಕೆಯೂ ಮತ್ತೊಬ್ಬ ಡೈರೆಕ್ಟರ್. ಈಕೆ ಮುರಳಿಯ ರಬ್ಬರ್‌ಸ್ಟ್ಯಾಂಪ್. ಎನ್.ಸಿ.ನಾಗರಾಜರೆಡ್ಡಿ ಎಂಬ ಕಾಂಗ್ರೆಸ್ ಪುಢಾರಿ ಕೂಡಾ ಅದರ ಇನ್ನೊಬ್ಬ ಡೈರೆಕ್ಟರ್. ಈ ಹಿಂದೆ ಈತ ಲ್ಯಾಂಡ್ ಬ್ರೋಕರಿಕೆಯಲ್ಲಿದ್ದ. ಗೋವಿಂದರಾಜು, ವೆಂಕಟೇಶ್ ಬಾಬು ಮತ್ತು ಮಾರೇಗೌಡ ಎಂಬ ಒಂದಾನೊಂದು ಕಾಲದ ರಿಯಲ್ ಎಸ್ಟೇಟ್ ಬ್ರೋಕರ್‌ಗಳೇ ಇದರ ಉಳಿಕೆ ಡೈರೆಕ್ಟರ್‌ಗಳೆಂದರೆ ಅದಿನ್ನೆಂಥ ಇಂಪೋರ್ಟು-ಎಕ್ಸ್‌ಪೋರ್ಟ್ ಮಾಡಿಯಾರು? ಇವರ ಸಾಫ್ಟ್‌ವೇರ್ ಪರಿಜ್ಞಾನ ಹೇಗಿದ್ದೀತು? ಇಷ್ಟೆಲ್ಲ ಅಸಂಖ್ಯಾತ ಕಂಪನಿಗಳನ್ನು ಹುಟ್ಟುಹಾಕಿ ಇವರಿಂದ ಇನ್ನೆಂಥ ವ್ಯವಹಾರ ನಡೆಸಲು ಸಾಧ್ಯ? ಎಂಬುದನ್ನು ನೀವೇ ನಿರ್ಧರಿಸಿ!



ಗೃಹಶೋಭಾ ಟೈಪಿನ ಮತ್ತೊಂದು ಮಾಸಪತ್ರಿಕೆ, ಇನ್ನೆಂಥದ್ದೋ ಹೆಸರಿನ ಇನ್ನೊಂದು ಟ್ಯಾಬ್ಲಾಯಿಡ್.... ಹೀಗೆ ಸಿಕ್ಕಾಪಟ್ಟೆ ಪತ್ರಿಕೆಗಳನ್ನು ಮಾರುಕಟ್ಟೆಗೆ ಬಿಡುತ್ತಾರಂತೆ. ಬಹುಶಃ ಠೇವಣಿದಾರರು ಯಾಮಾರಿದ್ದಾರೆಂದರೆ ಇದೇ ವೀರೇಂದ್ರ ಬಾಬು ಮತ್ತೆ ಹೀರೋ ಆಗಿ ಇನ್ನೊಂದು ತಗಡು ಸಿನಿಮಾ ಮಾಡಿದರೂ ಅಚ್ಚರಿಯಿಲ್ಲ. ಆದರೆ ಇನ್‌ಫೋಟೆಕ್, ಮಿನರಲ್ ವಾಟರ್ ಪ್ಲಾಂಟ್, ಮೆಡಿಸನ್ಸ್ ಫ್ಯಾಕ್ಟರಿ, ಆಮದು-ರಫ್ತು ಘಟಕ, ಚಿಟ್‌ಫಂಡ್, ಕೋಆಪರೇಟಿವ್ ಸೊಸೈಟಿ ಎಂದೆಲ್ಲಾ ಕತೆಹೊಡೆಯುತ್ತಾರಲ್ಲ, ಅದು ನಿಜವೇ ಆಗಿದ್ದರೆ ಯಾಕೆ ಬೇಕಬಿಟ್ಟಿ ಪತ್ರಿಕೆಗಳು ಮತ್ತು ಸಿನಿಮಾಕ್ಕೆ ...ಯಿಡುತ್ತಿದ್ದರು?

ಠೇವಣಿದಾರರನ್ನು ನಂಬಿಸಲು ದೊಡ್ಡದೊಡ್ಡ ವಹಿವಾಟಿನ ಬೋರ್ಡುಗಳು ಬೇಕು. ಕಸುಬು ಗೊತ್ತಿಲ್ಲ, ವಿದ್ಯೆ ಮೊದಲೇ ಇಲ್ಲ. ಇನ್ನು ಜನರ ದುಡ್ಡಿಗೆ ಕಳ್ಳಲೆಕ್ಕ ತೋರಿಸಬೇಕಲ್ಲ? ಯಾರಾದರೂ ತನ್ನ ಮನೆ ದುಡ್ಡು ತಂದು ತಾನೇ ಹೀರೋ ಆಗುವುದುಂಟಾ? ವ್ಯಾಪಾರ ಬಲ್ಲವರು ಸಿನಿಮಾ ಸಹವಾಸಕ್ಕೆ ಬರುವುದುಂಟಾ? ಪೊಲೀಸರಿಗಿದು ಏಕೆ ಅರ್ಥವಾಗುತ್ತಿಲ್ಲ?

ಜಗನ್-ರೆಡ್ಡಿ ದಂಧೆಗಳು



ಜಗನ್‌ಮೋಹನ್ ರೆಡ್ಡಿಗೆ ಭಯ ಶುರುವಾಗಿದೆ.
ಅದು ಸಿಬಿಐನ ಭಯ!
ಅರೆಸ್ಟಾಗಿಬಿಡುವ ಭಯ!!

ಅಷ್ಟೇ ಅಲ್ಲ ಗಣಿಕಳ್ಳ ಗಾಲಿ ಜನಾರ್ದನ ರೆಡ್ಡಿ ಜೊತೆ ...ಸಿರುವ ತರಹೇವಾರಿ ಬೇನಾಮಿ ವ್ಯವಹಾರಗಳೆಲ್ಲ ಆಚೆ ...ದು ತನ್ನ ಸಾಮ್ರಾಜ್ಯವೇ ಕುಸಿದು ಬಿದ್ದೀತೇನೋ ಎನ್ನುವ ...ಯವದು.

ಈ ಸಿಬಿಐ, ಲೋಕಾಯುಕ್ತ ತರದ ತನಿಖಾ ಏಜೆನ್ಸಿಗಳ ... ಒಬ್ಬ ಗುಮಾಸ್ತನೋ, ಸಣ್ಣ ಲೆವೆಲ್‌ನ ಆಫೀಸರನೋ ...ಬಿದ್ದರೆ ಹೆಚ್ಚೆಂದರೆ ಕೆಲಸ ಹೋಗಬಹುದು, ಇಲ್ಲಾ ...ಕಾಲ ಜೈಲು, ಇಂತಿಷ್ಟು ಸಾವಿರ ರೂ. ದಂಡ ಅಂತ ...ಳಬಹುದು.


ಆದರೆ ರೆಡ್ಡಿ ಅಥವಾ ...ನ್ ತರದವರು ...ಬಿದ್ದರೆ ಕೆಲವೇ ...ವಾದರೂ ಸರಿ, ಒಂದು ... ಜೈಲಿಗೆ ಹೊರಟರೆ ...ಹುತಗಳು ಕ್ಯೂನಲ್ಲಿ ...ುತ್ತವೆ. ಅವರು ಕಟ್ಟಿರುವ ...ದ್ಯಮ ಸಾಮ್ರಾಜ್ಯ, ಓಟ್ ...ಂಕ್, ನಿರ್ಮಿಸಿಕೊಂಡ ...ಾವ ವಲಯಗಳೆಲ್ಲಾ ...ಕೆಗೆ ಸಿಕ್ಕ ಹೇಪರ್‌ನಂತೆ ...ದುಬೀಳುತ್ತವೆ.

ಜಗನ್‌ಗೆ ಭಯ ...ುವಾಗಿರುವುದು ಈ ...ಣಕ್ಕೇನೆ.

ಸೆಪ್ಟೆಂಬರ್ 8ರಂದು ...ತ್ ಅಧಿವೇಶನ ...ಗಿಯುತ್ತಿದ್ದಂತೆಯೇ ಸಿಬಿಐನವರು ಜಗನ್ ಕತ್ತಿಗೆ ...ಾಕಿ ಎಳೆದೊಯ್ಯುವ ಸಾಧ್ಯತೆ ನಿಚ್ಚಳವಾಗಿ ...ುಬರುತ್ತಿದೆ. ಜಗನ್‌ಗೂ ಅದರ ಬಿಸಿ ತಾಗುತ್ತಿದೆ. ...ಲಿಗೆ ಹೋಗಿ ಕಾಂಗ್ರೆಸ್ಸೂ ಸೇರಿದಂತೆ ಎಲ್ಲಾ ...ಗಳ ಲೀಡರ್‌ಗಳನ್ನೂ ಕಂಡು "ನೀವೇ ನೋಡಿ, ... ಮೇಲೆ ಸಿಬಿಐನ ಛೂ ಬಿಟ್ಟಿದ್ದಾರೆ. ಇದು ನ್ಯಾಯನಾ?" ಅಂತೆಲ್ಲಾ ಗೋಳಾಡುತ್ತಿದ್ದಾನೆ.

'ಜನಾರ್ದನ ರೆಡ್ಡಿಗೂ ನಿನಗೂ ಏನು ಸಂಬಂಧ?' ಅಂತ ಕೇಳಿದ ಪತ್ರಕರ್ತರ ಮೇಲೆ ಜಗಳ ಕಾಯುವನಂತೆ, 'ನನ್ನಾಕೆ ಕೇಳ್ತೀರಿ...? ಅವರ ಬಗ್ಗೆ ನನಗೇನೂ ಗೊತ್ತಿಲ್ಲ' ಅನ್ನುತ್ತಿದ್ದಾನೆ.

ಆದರೆ ವಿಚಾರ ಅಷ್ಟು ಸಲೀಸಾಗಿಲ್ಲ. ಕಳೆದ ನಾಲ್ಕಾರು ವರ್ಷಗಳಲ್ಲಿ ಜಗನ್ ಕಟ್ಟಿರುವ ಉದ್ಯಮ ಸಾಮ್ರಾಜ್ಯದ ಬೆಲೆ ಇವತ್ತು ಐವತ್ತು ಸಾವಿರ ಕೋಟಿ ರೂ.ಗಳಷ್ಟಿದೆ. ಜಗನ್‌ನ ಡಜನ್‌ಗಟ್ಟಲೆ ಇರುವ ಕಂಪನಿಗಳ ಪೈಕಿ ಕೆಲವದರಲ್ಲಿ ರೆಡ್ಡಿ ಬ್ರದರ್ಸ್ ಹಣ ಹಾಕಿದ್ದಾರೆ.



ಜಂಟಿ ದಂಧೆಗಳು

ಹೈದರಾಬಾದ್‌ನಲ್ಲಿರುವ ಜಗನ್‌ನ ಜಗತಿ ಪಬ್ಲಿಕೇಷನ್‌ನ ರಿಜಿಸ್ಟರ್ಡ್ ಕಚೇರಿ ಇರುವ ಬಂಜಾರ ಹಿಲ್ಸ್‌ನ ರೋಡ್ ನಂ.1ನ ವಿಳಾಸದಲ್ಲೇ ಇನ್ನೆರಡು ಖಾಸಗಿ ಕಂಪನಿಗಳೂ ಇವೆ. ಒಂದು ರೆಡ್‌ಗೋಲ್ಡ್ ಎಂಟರ್‌ಪ್ರೈಸಸ್, ಇನ್ನೊಂದು ಆರ್‌ಆರ್ ಗ್ಲೋಬಲ್ ಎಂಟರ್‌ಪ್ರೈಸಸ್!

ರೆಡ್ಡಿಗಳ ಓಬಳಾಪುರಂ ಮೈನಿಂಗ್ ಕಂಪನಿ ಹಾಗೂ ಜಗನ್‌ನ ಜಗತಿ ಪಬ್ಲಿಕೇಷನ್ ನಡುವಿನ ಬಂಡವಾಳ ಹೂಡಿಕೆ ಹಾಗು ಹಣದ ಹರಿವಿಗೆ ಈ ರೆಡ್‌ಗೋಲ್ಡ್ ಹಾಗೂ ಆರ್‌ಆರ್ ಕಂಪನಿಗಳೇ ಸಂಪರ್ಕ ಸೇತುವೆಯಂತೆ ಕೆಲಸ ಮಾಡುತ್ತಿದ್ದವೆಂದು ಸಿಬಿಐ ಅನುಮಾನಿಸಿದೆ.

ರೆಡ್‌ಗೋಲ್ಡ್ ಎಂಟರ್‌ಪ್ರೈಸಸ್‌ಗೆ ರೆಡ್ಡಿಯ ಓಎಂಸಿ ಕಂಪನಿಯು ತನ್ನ ಗಣಿಗಾರಿಕೆಯ ಶೇ.50ರಷ್ಟು ಅದಿರನ್ನೂ, ಉತ್ಪಾದನಾ ವೆಚ್ಚ ಹಾಗೂ ಶೇ.5ರ ಲಾಭ ಮಾತ್ರ ಇಟ್ಟುಕೊಂಡು ಸರಬರಾಜು ಮಾಡುವುದಾಗಿ ಲಿಖಿತ ಒಪ್ಪಂದ ಮಾಡಿಕೊಂಡಿದೆ. ಆದರೆ ಓಎಂಸಿ ಗಣಿಗಳಲ್ಲಿ ಉತ್ತಮ ಅದಿರು ಎಂದೂ ಸಿಕ್ಕಿಲ್ಲ. ಅಂದರೆ ರೆಡ್ಡಿಗಳು ಬಳ್ಳಾರಿಯ ಇನ್ನಿತರ ಗಣಿ ಮಾಲೀಕರಿಂದ ಬೆದರಿಸಿ ಕದಿಯುತ್ತಿದ್ದ ಅದಿರಿನ ಅರ್ಧಭಾಗ ರೆಡ್‌ಗೋಲ್ಡ್ ಕಂಪನಿಗೆ ತಲುಪುತ್ತಿತ್ತು ಎಂದಾಯಿತು. ಈ ದಂಧೆಯ ವಾರ್ಷಿಕ ವಹಿವಾಟು 400 ಕೋಟಿ ರೂ.ನಷ್ಟಿದೆ. ಅಲ್ಲದೆ ಅದೇ ಅಡ್ರೆಸ್‌ನಲ್ಲಿರುವ ಆರ್‌ಆರ್ ಗ್ಲೋಬಲ್ ಎಂಟರ್‌ಪ್ರೈಸಸ್ ಕಂಪನಿಯು ಸಾಕ್ಷಿ ಟಿವಿ ಹಾಗೂ ಸಾಕ್ಷಿ ಪತ್ರಿಕೆ ನಡೆಸುವ ಜಗತಿ ಪಬ್ಲಿಕೇಷನ್‌ನಲ್ಲಿ 44 ಕೋಟಿ ರೂ. ಬಂಡವಾಳ ಹಾಕಿರುವುದು ಈಗ ಪತ್ತೆಯಾಗಿದೆ.

ಈ ಎರಡೂ ಕಂಪನಿಗಳೊಂದಿಗೆ ರೆಡ್ಡಿಗೆ ಮತ್ತವನ ಓಎಂಸಿ ಕಂಪನಿಗೆ ವ್ಯವಹಾರಿಕ ಸಂಬಂಧಗಳಿರುವಾಗ ಈ ಜಗನ್ 'ರೆಡ್ಡಿ ಬಗ್ಗೆ ನನಗೇನೂ ಗೊತ್ತಿಲ್ಲ' ಅಂದರೆ ಯಾರು ನಂಬುತ್ತಾರೆ.

ಸಿಬಿಐ ತಾನೇ ಯಾಕೆ ನಂಬುತ್ತದೆ.

ಆಂಧ್ರ ಡೀಲುಗಳು

ವೈ.ಎಸ್.ರಾಜಶೇಖರ್ ರೆಡ್ಡಿ ಮುಖ್ಯಮಂತ್ರಿಯಾಗಿದ್ದಾಗ ಹಣ ಕದಿಯಲು ಕೆಲವು ಸರಳ ಉಪಾಯಗಳನ್ನು ಹುಡುಕಿಕೊಂಡಿದ್ದ. ಎಸ್‌ಇಜೆಡ್, ಬಂದರು ಟೌನ್‌ಶಿಪ್ ರಸ್ತೆ ಸೇತುವೆ, ಏರ್‌ಪೋರ್ಟ್... ಹೀಗೆ ಸಾವಿರಾರು ಕೋಟಿ ರೂ.ಗಳ ಪ್ರಾಜೆಕ್ಟ್‌ಗಾಗಿ ಅರ್ಜಿ ಹಾಕುವ ಬೃಹತ್ ಕಂಪನಿಗಳಿಗೆ ಒಪ್ಪಿಗೆ ಕೊಡುವುದು. ಅದಕ್ಕೆ ಕಿಕ್‌ಬ್ಯಾಕ್ ರೂಪದಲ್ಲಿ ಜಗನ್ ಶುರು ಮಾಡುವ ಕಂಪನಿಗಳಲ್ಲಿ ಅವರು ಷೇರು ಬಂಡವಾಳ ಹಾಕುವಂತೆ ಮಾಡುವುದು. ಸತ್ಯಂ ಕಂಪ್ಯೂಟರ್ಸ್ ಹಾಗೂ ಮೈತಾಸ್ ಕಂಪನಿಗಳೊಂದಿಗೆ ವೈಎಸ್‌ಆರ್-ಜಗನ್ ಇದೇ ರೀತಿ ಡೀಲ್‌ಗಳನ್ನು ಕುದುರಿಸಿದ್ದರು. ಜಗನ್ ತರಾತುರಿಯಲ್ಲಿ ಕ್ಲಾಸಿಕ್ ರಿಯಾಲಿಟಿ, ಕಾರಾಮೆಲ್ ಏಷ್ಯಾ, ಭವತಿ ಸನ್ನಿಧಿ ಎಸ್ಟೇಟ್ಸ್, ಭಾರತಿ ಸಿಮೆಂಟ್ಸ್, ಹರೀಶ್ ಇನ್‌ಫ್ರಾ, ಸಂಡೂರು ಪವರ್ ಕಂಪನಿ, ಜಗತಿ ಪಬ್ಲಿಕೇಷನ್, ಪುಲಿವೆಂದುಲು ಪಾಲಿಮರ್ಸ್ ಮುಂತಾದ ಹತ್ತಾರು ಕಂಪನಿಗಳನ್ನೂ ಶುರುಮಾಡಿದ.

ಇವುಗಳ ಪೈಕಿ ಕೆಲವದರಲ್ಲಿ ರೆಡ್ಡಿಗಳು ಹಣ ಹೂಡಿದ್ದಾರೆ.


ರೆಡ್ಡಿ-ವೈಎಸ್‌ಆರ್ ನಡುವಿನ ಗಿವ್ ಅಂಡ್ ಟೇಕ್ ಪಾಲಿಸಿ ಹೇಗಿತ್ತೆಂದರೆ 2007ರಲ್ಲಿ ಕಡಪ ಜಿಲ್ಲೆಯಲ್ಲಿ ರೆಡ್ಡಿಗಳು ಬ್ರಹ್ಮಿಣಿ ಸ್ಟೀಲ್ಸ್ ಕಾರ್ಖಾನೆಗೆ ಹತ್ತು ಸಾವಿರ ಎಕರೆ ಭೂಮಿ ಕೇಳಿದರೆ ವೈಎಸ್‌ಆರ್ 10657 ಎಕರೆ ಕಂದಾಯ ಭೂಮಿ ಕೊಟ್ಟರು. ಅದೂ ಎಕರೆಗೆ ಜುಜುಬಿ 20 ಸಾವಿರ ರೂ.ರೇಟಿನಲ್ಲಿ!

ಇದಕ್ಕೆ ಪ್ರತ್ಯುಪಕಾರವಾಗಿ ರೆಡ್ಡಿಗಳು ಆರ್‌ಆರ್ ಎಂಟರ್‌ಪ್ರೈಸಸ್ ಮೂಲಕ ಸಾಕ್ಷಿ ಟಿವಿಗೆ 44 ಕೋಟಿ ರೂ. ಕೊಟ್ಟರು.


ಕರ್ನಾಟಕದ ಡೀಲ್‌ಗಳು

ಕಳೆದ ಹನ್ನೆರಡು ವರ್ಷಗಳಿಂದಲೂ ಬೆಂಗಳೂರಿನಲ್ಲಿರುವ ಜಗನ್ ಇಲ್ಲೂ ಹತ್ತಾರು ತರದ ಬ್ಯುಸಿನೆಸ್‌ಗೆ ಕೈ ಇಟ್ಟಿದ್ದಾನೆ. ದೇವನಹಳ್ಳಿಯ ಏರ್‌ಪೋರ್ಟ್ ಏರಿಯಾದಲ್ಲೇ ಜಗನ್‌ಗೆ ಎರಡು ಸಾವಿರ ಕೋಟಿ ರೂಪಾಯಿ ಬೆಲೆಬಾಳುವಷ್ಟು ಜಮೀನುಗಳಿವೆ. ಬಾಗಲೂರಿನಲ್ಲಿ 20 ಎಕರೆ ವಿಸ್ತೀರ್ಣದಲ್ಲಿ ಎರಡು ದೊಡ್ಡ ಬಂಗಲೆಗಳಿವೆ. ಇಲ್ಲೇ ಇರುವ ಜಗನ್ ಸೋದರಿ ಶರ್ಮಿಳ ಬಾಗಲೂರಿನಲ್ಲೇ ಅಕ್ಷರಾ ಹಾಗೂ ಬಂಜಾರ ಎನ್ನುವ ಆಡಂಬರದ ಹೈಸ್ಕೂಲ್‌ಗಳನ್ನು ತೆರೆದಿದ್ದಾಳೆ. ಬೃಂದಾವನ ಎಂಬ ಕಾಲೇಜನ್ನೂ ನಡೆಸುತ್ತಾಳೆ.

ಹಾಗೆ ನೋಡಿದರೆ ವೈಎಸ್‌ಆರ್ ಫ್ಯಾಮಿಲಿಯ ಪ್ರತಿ ಮೆಂಬರೂ ಒಂದಲ್ಲ ಒಂದು ದಂಧೆ ನಡೆಸುತ್ತಾರೆ. ಅಪ್ಪನ ಮೂಲಕ ಹರಿದುಬರುತ್ತಿದ್ದ ಹಣವೆಂಬ ನದಿಗೆ ತಮ್ಮ ಶಕ್ತ್ಯಾನುಸಾರ ಹಾಗೂ ಇಚ್ಛಾನುಸಾರ ಉಪ ಕಾಲುವೆಗಳನ್ನು ತೋಡಿ ಚಿಕ್ಕ-ದೊಡ್ಡ ಡ್ಯಾಂಗಳನ್ನೇ ನಿರ್ಮಿಸಿಕೊಂಡಿದ್ದಾರೆ.


ವಿಶ್ವನಾಥ್

ಕರ್ನಾಟಕದಲ್ಲಿ ಎದ್ದು ಕಾಣುವ ಜಗನ್‌ನ ಬ್ಯುಸಿನೆಸ್ ಅಂದರೆ ಅದು ಸಂಡೂರು ಪವರ್ ಕಂಪನಿಯದ್ದು. ಪಶ್ಚಿಮಘಟ್ಟದ ವರಾಹಿ ನದಿಗೆ ಉಡುಪಿ-ಕುಂದಾಪುರ ನಡುವೆ ಅಡ್ಡಕಟ್ಟೆ ಹಾಕಿ ಜಲವಿದ್ಯುತ್ ಉತ್ಪಾದಿಸಿ ಮಾರುವ ಸ್ಕೀಂ ಇದಾಗಿದೆ. ರೆಡ್ಡಿಗಳ ಬೇನಾಮಿ ದುಡ್ಡು ಈ SPLL ಕಂಪನಿಯಲ್ಲಿದೆ. ಸುಮಾರು ಮುನ್ನೂರು ಕೋಟಿ ರೂ.ವೆಚ್ಚದ ವರಾಹಿ ಟೇಲ್‌ರೇಸ್ ಸ್ಮಾಲ್ ಹೈಡ್ರೋ ಪವರ್ ಪ್ರಾಜೆಕ್ಟ್ 2006 ರಲ್ಲಿ ಧರಂಸಿಂಗ್ ಸಿಎಂ ಆಗಿದ್ದಾಗ ಚಾಲ್ತಿಗೆ ಬಂದ ಯೋಜನೆ.



ಲಿಂಬಾವಳಿ

ಇದಲ್ಲದೆ ಬಿಡದಿ ಬಳಿ ಇರುವ ಜಗನ್‌ನ ವಾಟರ್‌ಪಾರ್ಕ್ ಯೋಜನೆಗೆ ಆಗ ರೆವಿನ್ಯೂ ಮಂತ್ರಿಯಾಗಿದ್ದ ಕರುಣಾಕರ ರೆಡ್ಡಿಯೂ ಕುಮ್ಮಕ್ಕು ಕೊಟ್ಟಿದ್ದ. 'ಲಂಕೇಶ್' ಈ ಹಿಂದೆಯೇ (23-9-2009ರಲ್ಲಿ) ಬರೆದಿರುವಂತೆ ಜಗನ್ ಬೆಂಗಳೂರಿನ ಬನ್ನೇರುಘಟ್ಟ ರಸ್ತೆಯ ಶಾಪರ್ಸ್ ಸ್ಟಾಪ್ ಮಳಿಗೆಯನ್ನು ನೂರೈವತ್ತು ಕೋಟಿ ರೂ.ಗೆ ಕೊಟ್ಟಿದ್ದಾನೆ.

ಕರುಣಾಕರ ರೆಡ್ಡಿ ಮೂಲಕ ಜಗನ್ ತನ್ನ ರಾಮ್ಕಿ‌ಸ್ ಕಂಪನಿಗೆ ದಾಬಸ್‌ಪೇಟ್ ಬಳಿ ಇನ್ನೂರೆಕರೆ ಭೂಮಿ ಲಪಟಾಯಿಸಿದ್ದಾನೆ. ನಗರದ ಆಸ್ಪತ್ರೆ ತ್ಯಾಜ್ಯವನ್ನು ಸಂಸ್ಕರಿಸುವ ಕೆಲಸ ಈ ರಾಮ್ಕಿಸ್‌ನದ್ದು. ಈಗ ಆ ಜಮೀನಿನ ಬೆಲೆಯೊಂದೇ ಇನ್ನೂರು ಕೋಟಿಗೂ ಹೆಚ್ಚಿದೆ.

ಜಗನ್ ಜೊತೆಗೆ ಕೇವಲ ರೆಡ್ಡಿಗಳು ಮಾತ್ರವಲ್ಲದೆ ಅರವಿಂದ ಲಿಂಬಾವಳಿ, ಯಲಹಂಕ ಶಾಸಕ ವಿಶ್ವನಾಥ್ ಕೂಡ ಡೀಲುಗಳನ್ನು ಕುದುರಿಸಿಕೊಂಡಿದ್ದಾರೆ.

ಸಿಬಿಐ ಒಂದು ವೇಳೆ ಜಗನ್ ವಿಚಾರಣೆ ನಡೆಸುವುದೇ ಆದರೆ ಈ ಎಲ್ಲಾ ಆಯಾಮಗಳತ್ತಲೂ ಗಮನ ಹರಿಸಲಿ. ಇವರೆಲ್ಲ ಕದಿಯುವಾಗ ಒಬ್ಬೊಬ್ಬರೆ ಕದಿಯದೆ ಜಂಟಿಯಾಗೇ ಹಣ-ಆಸ್ತಿ ನುಂಗಿದ್ದಾರೆ. ಹಾಗಾಗಿ ಜೈಲಿನಲ್ಲಿ ಒಬ್ಬೊಬ್ಬರೆ ಯಾಕಿರಬೇಕು? ಅಲ್ಲೂ ಜೊತೆಜೊತೆಯಾಗಿ ಇರುವುದು ನ್ಯಾಯವಲ್ಲವೇ?



...ಕಾರ್ನಾಡರ ಆತ್ಮಕತೆ

...ನೇ ಪುಟದಿಂದ

... ಇನ್ನೆಂಟು ತಿಂಗಳು ಸಿಗುವುದಿಲ್ಲವಂತೆ. ನೀವೇನೂ ಚಿಂತೆ ಮಾಡಬೇಕಾಗಿಲ್ಲ. ...ರ್. ನಾನು freeಯಾಗಿದ್ದೇನೆ. ನೀವು ಹೇಳಿದಾಗ ಬರತೇನೆ. ಹೇಳಿದಷ್ಟು ... ಇರತೇನೆ,' ಎಂದು ಒಂದರಮೇಲೆ ಇನ್ನೊಂದಾಗಿ ಉರುಳಿ ಬರುವ ...ಗಳಲ್ಲಿ ನನಗೆ ಶರಣಾಗತನಾದ.

... ಅವನು ಆವರೆಗೆ ಹೇಳಿದ್ದೆಲ್ಲ ನಾನೂ ಅವನಂತೆಯೇ star ಆಗಲು ...ದ ಇನ್ನೊಬ್ಬ ಅಭ್ಯರ್ಥಿ ನಟ ಎಂದು ತಿಳಿದುಕೊಂಡು ನನ್ನ ಮೇಲೆ ...pression ಬೀರಿ ನನ್ನನ್ನು ಹತಪ್ರಭಗೊಳಿಸುವ ಪ್ರಯತ್ನವಾಗಿತ್ತು.

... ಸಂಪತ್ಕುಮಾರನನ್ನು ನಾವು ಚಿತ್ರದ ಶ್ರೇಯಾವಳಿಯಲ್ಲಿ 'ಕುಮಾರ' ಎಂದು ...ದ್ದೆವು. 'ವಂಶವೃಕ್ಷ'ದಲ್ಲಿ ಅವನನ್ನು ನೋಡಿ, ಪುಟ್ಟಣ್ಣ ಕಣಗಾಲ್ 'ನಾಗರಹಾವು' ...ದಲ್ಲಿ ಮುಖ್ಯ ಪಾತ್ರ ಕೊಟ್ಟು 'ವಿಷ್ಣುವರ್ಧನ' ಎಂಬ ನಾಮಕರಣ ...ಾಡಿದರು. ಮುಂದೆ ವಿಷ್ಣುವರ್ಧನ ದೊಡ್ಡ star ಆದ ಎಂದು ...ಳಬೇಕಾಗಿಲ್ಲ. ನಾವಿಬ್ಬರೂ 'ಸೀ ಬರೆದ ಕಾದಂಬರಿ'ಯಲ್ಲಿ ಪಾತ್ರ ವಹಿಸಿದಾಗ ... ಪ್ರಸಂಗವನ್ನು ಪ್ರಾಮಾಣಿಕವಾಗಿ ಸ್ಮರಿಸಿ ತನ್ನ ಮುಗ್ಧತೆಗೆ ಹೊಟ್ಟೆತುಂಬ ... ಆದರೂ ಪತ್ರಿಕಾ ಸಂದರ್ಶನಗಳಲ್ಲೆಲ್ಲ 'ನನ್ನ ಪ್ರತಿಭೆಯನ್ನು ಕಂಡು ...ದವರು ಪುಟ್ಟಣ್ಣ ಕಣಗಾಲ್' ಎಂದು ಅವರಿಗೇ ಶ್ರೇಯಸ್ಸು ಕೊಡುತ್ತಿದ್ದ. ... ಮುಂದೆ ಹಲವಾರು ವರ್ಷಗಳ ನಂತರ ವಿಷ್ಣುವರ್ಧನ ನನ್ನ 'ತಲೆದಂಡ' ನಾಟಕವನ್ನಾಧರಿಸಿ ಚಿತ್ರವನ್ನು ಮಾಡಲೋಸುಗ ನನ್ನನ್ನು ತನ್ನ ಮನೆಗೆ ಆಮಂತ್ರಿಸಿದ. ಮನೆಯ ವಿಶಾಲವಾದ drawing room ನಲ್ಲಿ ಗೋಡೆಗಳಿಗೆ ಬುಡದಿಂದ ತುದಿಯವರೆಗೆ ಒಂದು ಮೂಲೆಯಿಂದ ಇನ್ನೊಂದು ಮೂಲೆಯವರೆಗೆ, ಒಂದಂಗುಲ ಬಿಡದೆ ಅವನ ಬೇರೆ ಬೇರೆ ಚಿತ್ರಗಳ mementos (ಸ್ಮರಣಿಕೆ), ಭಿತ್ತಿ ಚಿತ್ರಗಳನ್ನು ತೂಗಿಸಿತ್ತು. ಪ್ಲಾಸ್ಮಾ ಪರದೆಯಿರೋ ಒಂದು ಟೆಲಿವಿಷನ್ ಸೆಟ್ಟಿನಲ್ಲೂ ಅವನದೇ ಚಿತ್ರದ video ಓಡುತ್ತಿತ್ತು. ಎಲ್ಲಿ ನೋಡಿದಲ್ಲಿ ವಿಷ್ಣುವರ್ಧನನ ಚಹರೆಗಳೇ! ಅವುಗಳ ನಟ್ಟನಡುವೆ ಸಿನಿಮಾ ಸೆಟ್ಟುಗಳಲ್ಲಿರುವಂತೆ ಒಂದು ಮಾಳಿಗೆ ಆಕಳಿಸಿ ಮೈ ಮುರಿಯುತ್ತ ಮೇಲಕ್ಕೋಡುತ್ತಿತ್ತು. ಅದರ ಕಟಾಂಜನಕ್ಕೂ ಹೊಳೆಹೊಳೆಯುವ ಬಂಗಾರದ ಬಣ್ಣವಿತ್ತು.

ಮಾತು ಮುಗಿದಾಗ ವಿಷ್ಣುವರ್ಧನ 'ಎಲ್ಲ ಇದೆ ಗಿರೀಶ್, happiness ಒಂದಿಲ್ಲ' ಎಂದ. ಅವನ ಹೆಂಡತಿ ಭಾರತಿ ಎದುರಿಗೇ ಕುಳಿತಿದ್ದಳು.

'ಈ ಗೋಡೆಗಳನ್ನೊಡೆದು ಅವುಗಳಲ್ಲಿ ಒಂದೆರಡು ದೊಡ್ಡ ಕಿಟಕಿಗಳನ್ನು ಮಾಡಿ, ಗಾಳಿ ಓಡಾಡಲಿಕ್ಕೆ ಆಸ್ಪದ ಮಾಡಿಕೊಡು. Happiness ತಾನಾಗಿ ಬರತದೆ' ಎಂದು ಹೇಳೋಣ ಎಂದು ಮನಸ್ಸಾಯಿತು. ಅರ್ಥಾತ್ ಹೇಳಲಿಲ್ಲ.

* * * * *

ಒಂದು ದಿನ ಸ್ಟುಡಿಯೋದಲ್ಲಿ ನಾನು rushes ನೋಡುತ್ತಿದ್ದಾಗ ದುಂಡು ಮುಖದ, ಗುಂಗುರು ಕೂದಲಿನ, ಕತ್ತಿಯಲುಗಿನ ಚೂಪಾದ ಮೀಸೆಯ ವ್ಯಕ್ತಿಯೊಬ್ಬ ಹೊಳೆಯುವ ಬಿಳಿಯ ಪೋಷಾಕನ್ನು ಧರಿಸಿ ನನ್ನನ್ನೆದುರಿಸಿ, ಕೈಮುಗಿದು, ಆಳವಾದ ದನಿಯಲ್ಲಿ 'ಕನ್ನಡ ಚಿತ್ರರಂಗಕ್ಕೆ ಹೊಸ ದಿಕ್ಕಿನಲ್ಲಿ ಕೊಂಡೊಯ್ಯುವ ಸುತ್ಯ ಕಾರ್ಯಕ್ರಮದಲ್ಲಿ ತೊಡಗಿರುವ ಪ್ರತಿಭಾವಂತ ಗಿರೀಶ್ ಕಾರ್ನಾಡರಿಗೆ ಈ ಕಲಾವಿದನ ಹೃತ್ಪೂರ್ವಕ ನಮನ' ಎಂದೇನೋ ಗುಡುಗಿದ.

ನಾನು ಕಕ್ಕಾವಿಕ್ಕಿಯಾಗಿ 'ಯಾರು ಅಂತ ಗೊತ್ತಾಗಲಿಲ್ಲವಲ್ಲ' ಎಂದಾಗ, 'ನನಗೆ ಉದಯಕುಮಾರ ಅನ್ನುತ್ತಾರೆ' ಎಂಬ ಉತ್ತರ ಬಂತು.

ಅವನನ್ನು ಸುಪ್ರಸಿದ್ಧ ನಟರೆಂದು ಗುರುತಿಸಿ, ನಾನು ಇನ್ನಷ್ಟು ತತ್ತರಿಸಿ, 'ಶೂಟಿಂಗ್ ನಡೆದಿದೆಯೇ?' ಎಂದು ಕೇಳಿದೆ.

'ಹನ್ನೆರಡು ಚಿತ್ರಗಳಲ್ಲಿ ಮುಖ್ಯ ಪಾತ್ರ ಮಾಡುತ್ತಿದ್ದೇನೆ' ಎಂಬ ಉತ್ತರ ಅದೇ ಆಳವಾದ ದನಿಯಲ್ಲಿ ನಾಟಕೀಯ ಶೈಲಿಯಲ್ಲಿ ಬಂತು.


ಇದಾದ ಕೆಲವಾರಗಳ ಬಳಿಕ ನಾನು ಧಾರವಾಡದಲ್ಲಿ ಧಾರವಾಡ ಹೋಟೆಲ್‌ನಲ್ಲಿ ಓಡಾಡುತ್ತಿದ್ದಾಗ, 'ಲೋ ಗಿರೀಶ್!' ಎಂಬ ಆಳವಾದ ದನಿಯ ಅತಿಸಲುಗೆಯ ಕರೆ ಕೇಳಿ ಹೊರಳಿ ನೋಡಿದರೆ ಉದಯಕುಮಾರ್! ಬಾಲ್ಯದಿಂದಲೂ ನಮ್ಮಿಬ್ಬರ ಪರಿಚಯವಿದ್ದಂತೆ ಏಕವಚನದಲ್ಲೇ ಮಾತನಾಡಿ, 'ನೀನೂ ಬ್ರಾಹ್ಮಣ ಅಂತ ಹೇಳುತ್ತಿದ್ದೇನೆ. ಈ ನಮ್ಮ ಕನ್ನಡ ಫಿಲ್ಮ್ ಇಂಡಸ್ಟ್ರಿಯಲ್ಲಿ ಜನಿವಾರವಿದ್ದರೆ ಗತಿಯಿಲ್ಲ, ಜಾಗ್ರತೆ!' ಎಂದು ತನ್ನ ಅಂಗಿಯ ಕೊರಳಿನಲ್ಲಿ ಕೈ ತುರುಕಿ ಜನಿವಾರವನ್ನು ಹೊರಗೆಳೆದು, ಅದನ್ನು ಧನುಷ್ಯದ ಹೆದೆಯಂತೆ ಪ್ರದರ್ಶಿಸುತ್ತ,

'ಈ ಜೋದೆಳೆ ಕಂಡರೆ ಅದರಿಂದಲೇ ಕುತ್ತಿಗೆ ಕುಯ್ಯುತಾರೆ' ಎಂದು ಗರ್ಜಿಸಿದ. ಆ ಭೇಟಿ ಹೇಗೆ ಕೊನೆಗೊಂಡಿತೋ ನೆನಪಿಲ್ಲ.



ಯಶೋಧರ ನಾಯ್ಕ್

ಉತ್ತರ ಕನ್ನಡ ಧನಾಢ್ಯರಿಬ್ಬರ ದಗಲ್ಬಾಜಿ ರಾಜಕಾರಣ!



ಅನಿಲ್‌ಕುಮಾ

ಕರಾವಳಿಯ ಕುಮಟ ಮತ್ತು ಘಟ್ಟದ ಮೇಲಿನ ಯಲ್ಲಾಪುರ ಕ್ಷೇತ್ರದಲ್ಲಿ ಪಕ್ಕಾ ದಗಾಕೋರ ದಂಧೆಕೋರರಿಬ್ಬರು ಶಾಸಕರಾಗಿ ಮಾಡುತ್ತಿರುವ ಮಸಲತ್ತುಗಳೇ ಈಗ ಜಿಲ್ಲೆಯ ರಾಜಕಾರಣದ ಪಡಸಾಲೆಯಲ್ಲಿ ರೋಚಕ ಚರ್ಚೆಯ ಸಂಗತಿಯಾಗಿ ಹೋಗಿದೆ. ಮಲೆನಾಡು-ಅರೆಬಯಲು ಸೀಮೆಯಿಂದ ಆವೃತವಾದ ಯಲ್ಲಾಪುರ-ಮುಂಡಗೋಡ ಕ್ಷೇತ್ರದ ಶಾಸಕನಾಗೇ ತೀರಬೇಕೆಂಬ ಹಪಾಹಪಿಯಿಂದ ಡಿ. ಅನಿಲಕುಮಾರ್ ಎಂಬೋರ್ವ ಮಧ್ಯ ವಯಸ್ಕ ದೊಡ್ಡ ದುಡ್ಡಿನ ಚೀಲ ಹಿಡಿದುಕೊಂಡು ರೌಂಡ್ ಹಾಕುತ್ತಿದ್ದಾನೆ! ಒಟ್ಟಿನಲ್ಲಿ ಮುಂಬರುವ ಅಸೆಂಬ್ಲಿ ಇಲೆಕ್ಷನ್‌ನಲ್ಲಿ ಯಲ್ಲಾಪುರ-ಮುಂಡಗೋಡ ಭಯಾನಕ ಹಣದ ಹಣಾಹಣಿಯ ಅಖಾಡವಾಗುವುದಂತೂ ಖರೆ. ಮದುವೇಲಿ ಉಂಡೋನೇ ಜಾಣನೆಂದು ಅನಿಲ-ಶಿವರಾಮ ಹೆಬ್ಬಾರರ ಕಳ್ಳ ಗಂಟಿನ ಮೇಲೆ ಕಣ್ಣಿರುವವರು ಭೋಪರಾಕ್ ಹಾಕುತ್ತಿದ್ದಾರೆ.

ಉತ್ತರ ಕನ್ನಡದ ಆರೂ ಅಸೆಂಬ್ಲಿ ಕ್ಷೇತ್ರದಲ್ಲಿ ಎಮ್ಮೆಲ್ಲೆ ಚಟದಾರರು ನಿಧಾನಕ್ಕೆ ಫೀಲ್ಡಿಗೆ ಇಳಿಯಲಾರಂಭಿಸಿದ್ದಾರೆ. ಆಡಳಿತಾರೂಢ ಬಿಜೆಪಿಯಲ್ಲಿ ಆಗುತ್ತಿರುವ ಭರ್ಜರಿ ಭಾನ್ಗಡಿಗಳಿಂದ ಯಾವ ಕ್ಷಣದಲ್ಲಾದರೂ ವಿಧಾನಸಭೆ ವಿಸರ್ಜನೆಯಾಗಿ ಬಿಡಬಹುದೆಂಬ ಲೆಕ್ಕಾಚಾರದಿಂದ ತರಹೇವಾರಿ ಪುಢಾರಿಗಳು ಕ್ಷೇತ್ರ ಹದಗೊಳಿಸಿಕೊಳ್ಳಲು ಅಣಿಯಾಗಿದ್ದಾರೆ. ಅನುಮಾನಾಸ್ಪದ ಹಣ ಮೂಲದವರಂತೂ ಮಹಾನ್ ಸಮಾಜ ಸೇವಕರ ಗೆಟಪ್ಪಿನಲ್ಲಿ ಕಳ್ಳಕಾಸು ಹಳ್ಳದಂತೆ ಹರಿಸುತ್ತಿರುವುದು ಜನರಲ್ಲಿ ಈಗಾಗಲೇ ಕದನ ಕುತೂಹಲ ಕೆರಳಿಸುತ್ತಿದೆ.


ಕರಾವಳಿಯ ಕುಮಟ ಮತ್ತು ಘಟ್ಟದ ಮೇಲಿನ ಯಲ್ಲಾಪುರ ಕ್ಷೇತ್ರದಲ್ಲಿ ಪಕ್ಕಾ ದಗಾಕೋರ ದಂಧೆಕೋರರಿಬ್ಬರು ಶಾಸಕರಾಗಿ ಮಾಡುತ್ತಿರುವ ಮಸಲತ್ತುಗಳೇ ಈಗ ಜಿಲ್ಲೆಯ ರಾಜಕಾರಣದ ಪಡಸಾಲೆಯಲ್ಲಿ ರೋಚಕ ಚರ್ಚೆಯ ಸಂಗತಿಯಾಗಿ ಹೋಗಿದೆ. ಭಟ್ಕಳ ಕ್ಷೇತ್ರದಲ್ಲಿ ಎರಡೆರಡು ಬಾರಿ ಎಲೆಕ್ಷನ್‌ಗೆ ನಿಂತು ಪಲ್ಟಿ ಹೊಡೆದಿರುವ ಟ್ರಾನ್ಸ್‌ಪೋರ್ಟ್ ಉದ್ಯಮಿ ಯಶೋಧರ ನಾಯ್ಕ ಈಗ ಪಕ್ಕದ ಕುಮಟಾಕ್ಕೆ ನೆಗೆದು ನಖರಾ ಮಾಡುತ್ತಿದ್ದಾನೆ. ಅತ್ತ ಯಲ್ಲಾಪುರದಲ್ಲಿ 'ಎಲ್ಮಾಗ್ರೂಪ್ ಆಫ್ ಬಿಸಿನೆಸ್' ಎಂಬ ವಿಲಕ್ಷಣ ವ್ಯಾಪಾರಸ್ಥ ಅನಿಲ್‌ಕುಮಾರ್ ಅವಾಂತರ ಶುರುಹಚ್ಚಿಕೊಂಡಿದ್ದಾನೆ. ಜನಪರ ರಾಜಕಾರಣದ ಗಂಧಗಾಳಿಯೇ ಇಲ್ಲದ ಈ ಗಂಡಾಗುಂಡಿ ಪುಢಾರಿಗಳು ತಮ್ಮಲ್ಲಿರುವ ಕಪ್ಪು ಕಾಸೊಂದೇ ಶಾಸಕರಿಗೆ ಬೇಕಾದ ಕ್ಯಾಲಿಬರ್ ಎಂದು ನಂಬಿದ್ದಾರೆ....

ಯಶೋಧರ ಚರಿತೆ

ಹೊನ್ನಾವರದ ಹೊಳೆ ಸಾಲು ಏರಿಯಾದಲ್ಲಿ 2000 ದಶಕದ ಆರಂಭದಲ್ಲಿ 'ಬಿಳಿ ಶೂದ್ರ'ನೊಬ್ಬ ತಾನು "ಯಶೋಧರ ನಾಯ್ಕನಾದ ನಾನು ಮಹಾನ್ ಉದ್ಯೋಗ ರತ್ನ... ಟ್ರಾನ್ಸ್‌ಪೋರ್ಟ್ ಉದ್ಯಮಿ ... ಪ್ರತಿಷ್ಠಿತ ರಾಜಕಾರಣಿ ಸಿದ್ದರಾಮಯ್ಯನ ಪರಮಾಪ್ತ ಶಿಷ್ಯ... ಮೈಸೂರು ಪ್ರಿನ್ಸ್ ಶ್ರೀಕಂಠದತ್ತ ಒಡೆಯರ್ ನನ್ನ ಕ್ಲೋಸ್ ಫ್ರೆಂಡ್...." ಎಂದು ತನಗೆ ತಾನೇ ತಾರೀಫು ಮಾಡುತ್ತ ಅಂಡಲೆಯತೊಡಗುವವರೆಗೂ ಈತ ಯಾರೆಂದೇ ಆತನ ಬಂಧು-ಬಳಗಕ್ಕೂ ಗೊತ್ತಿರಲಿಲ್ಲ. ಈ ಯಶೋಧರ ನಾಯ್ಕ ಎಂಬ ದೌಲತ್ತಿನ ಆಸಾಮಿ ಹೊನ್ನಾವರದ ಶರಾವತಿ ದಡದ 'ಮೂಳ್ಕೋಡು' ಎಂಬ ದ್ವೀಪದವನೇನೋ ನಿಜ. ಆದರೆ ಬಡತನದ ಬೇಗೆ ತಾಳಲಾರದೆ ಬಾಲ್ಯದಲ್ಲೇ ತಮಿಳುನಾಡಿನ ಹೊಸೂರು ಸೇರಿಕೊಂಡಿದ್ದರಿಂದ ಆತನ ಪರಿಚಯ-ನೆನಪು ಊರಿನವರಿಗ್ಯಾರಿಗೂ ಇರಲಿಲ್ಲ. ಪ್ರೈಮರಿ ಹಂತದಲ್ಲೇ ಡ್ರಾಪ್ ಔಟ್ ಆಗಿ ಖಾಲಿ-ಪೋಲಿ ತಿರುಗುತ್ತಿದ್ದ ಯಶೋಧರನ ಅಣ್ಣ ಹನುಮಂತ ಆದಾಗಲೇ ಹೊಸೂರಿನ ಟಿಆರ್‌ಸಿ ಎಂಬ ಟ್ರಾನ್ಸ್‌ಪೋರ್ಟ್ ಕಂಪನಿಯಲ್ಲಿ ಸಣ್ಣ ನೌಕರಿಯಲ್ಲಿದ್ದ. ಆತ ತಮ್ಮನನ್ನು ಹೊಸೂರಿಗೆ ಕರೆಸಿಕೊಂಡು ಅದೇ ಕಂಪನಿಯಲ್ಲಿ ಡ್ರೈವರ್ ಕೆಲಸ ಕೊಡಿಸಿದ್ದ. ಕಂಪನಿ ದಾಸ್ಯ ಬೇಸರ ಮೂಡಿಸಿದಾಗ ಯಶೋಧರ ತಾನೇ ಒಂದು ಟೆಂಪೋ ಕೊಳ್ಳಲು ಯೋಚಿಸಿದನಂತೆ. ಆಗ ಮಿತ್ರರೆಲ್ಲ ಸ್ವಲ್ಪ-ಸ್ವಲ್ಪ ಹಣ ಕೂಡಿಸಿ ಆತನಿಗೆ ಕೊಟ್ಟರಂತೆ. ಆ ದುಡ್ಡಿನಿಂದ ಯಶೋಧರ 'ಫ್ರೆಂಡ್ಲಿ ಟ್ರಾನ್ಸ್‌ಪೋರ್ಟ್' ಎಂಬ ಟೆಂಪೋ ಸರ್ವೀಸ್ ಶುರು ಹಚ್ಚಿಕೊಂಡನಂತೆ. ಆ ನಂತರ ಆತನ ಬಿಸಿನೆಸ್ ವೃದ್ಧಿಯಾಗುತ್ತಾ ಹೋಯ್ತಂತೆ. ನೂರಾರು ಲಾರಿಗಳನ್ನು ಕೊಂಡುಕೊಂಡನಂತೆ. ಲಾಜಿಸ್ಟಿಕ್ಸ್ ದಂಧೆಯ 'ದೊರೆ'ಯಾದನಂತೆ. ಹಾಗಂತ ಯಶೋಧರ ನಾಯ್ಕನೇ ತನ್ನ ಯಶೋಗಾಥೆಯನ್ನು ಕಂಡಕಂಡಲ್ಲಿ ಇವತ್ತಿಗೂ ಕೊಚ್ಚಿಕೊಳ್ಳುತ್ತಾನೆ.

ಬೊಗಳೆಭೂಪ ಯಶೋಧರ್‌ಗೆ ಇನ್ನೊಂದು ಮುಖವಿದೆ. ಅದು ಅಷ್ಟು ಸುಲಭಕ್ಕೆ ಹೊನ್ನಾವರ-ಕುಮಟೆಯ ಮಂದಿಗೆ ಕಾಣಿಸುವುದಿಲ್ಲ. ತುಂಬ ಚಾಲಾಕಿ-ಕಿಲಾಡಿಯಾಗಿರುವ ಯಶುನ ಹೆಡ್‌ಕ್ವಾಟ್ರರ್ಸ್ ಮೈಸೂರು. ಅಲ್ಲವನಿಗೆ ತರಹೇವಾರಿ 'ದಂಧೆ'ಗಳಿವೆ. ಇದರಲ್ಲಿ ಟ್ರಾನ್ಸ್‌ಪೋರ್ಟ್ ಬಿಸಿನೆಸ್ ಒಂದೇ ಕಣ್ಣಿಗೆ ಕಾಣಿಸುವಂಥದ್ದು. ಈತನ ರಹಸ್ಯ ಉದ್ಯಮದಲ್ಲಿ , ಆಂಧ್ರದ ಒಂದಿಷ್ಟು ವ್ಯಾಪಾರಿ ರೆಡ್ಡಿಗಳು, ತಮಿಳುನಾಡಿನ ಪಾಲಿಟಿಷಿಯನ್‌ಗಳು ಇದ್ದಾರೆ. ಮೈಸೂರು-ಬೆಂಗಳೂರು-ಹೊಸೂರಲ್ಲಿ ಯಶುಗೆ ಅಪಾರ ಚರ-ಸ್ಥಿರಾಸ್ತಿಯಿದೆ. ಇದೆಲ್ಲ ಬರೀ ಟ್ರಾನ್ಸ್‌ಪೋರ್ಟ್ ವಹಿವಾಟಿನಿಂದ ಮಾತ್ರ ಬಂದಿದೆಯೆಂದರೆ ಯಾವ ಗಾಂಪನೂ ನಂಬುವುದಿಲ್ಲ. ತಮಿಳುನಾಡಿನ ಸಿಎಂ ಜಯಲಲಿತಾಳೂ ಯಶುನ ಬಿಸಿನೆಸ್‌ನಲ್ಲಿ ಪಾರ್ಟನರ್ ಎಂಬ ವದಂತಿಯೂ ಇದೆ. ಇಂಥ ರೂಮರ್ ಸ್ವತಃ ಯಶುನೇ ಹಬ್ಬಿಸಿಕೊಂಡಿದ್ದಾನೆಂಬ ಅನುಮಾನವೂ ಇದೆ.

ಅದಿರಲಿ, ಹೊನ್ನಾವರದ ದೀವರ (ಈಡಿಗ) ಪೋರ ಈ ಪಾಟ ಬೆಳೆದಿದ್ದಾದರೂ ಹೇಗೆ? ಸಿದ್ದ ರಾಮಯ್ಯನಂಥ ಖಡಕ್-ಹೆವಿವೈಟ್ ಪಾಲಿಟಿಷಿಯನ್‌ನ ಆಪ್ತ-ಗುಪ್ತ ವಲಯ ಸೇರಿದ್ದಾದರೂ ಹೇಗೆ? ಮೈಸೂರು ರಾಜ ಮನೆತನದ ಶ್ರೀಕಂಠದತ್ತನಂಥ 'ತೂಕ'ದ ವ್ಯಕ್ತಿಯ ಸಖ್ಯ ಕುದುರಿದ್ದಾದರೂ ಹೇಗಿರಬಹುದು? ಇದು ಇವತ್ತಿಗೂ ಹೊನ್ನಾವರ- ಭಟ್ಕಳ- ಕುಮಟಾ ಭಾಗದ ದೀವರ ಸಮಾಜ ವನ್ನು ಕಾಡುತ್ತಲೇ ಇದೆ.



ಶಿವರಾಂ

ಒಡೆಯರ್ ಫ್ಯಾಮಿಲಿ ಫ್ರೆಂಡ್‌ಶಿಪ್ ಯಶು ಗಳಿಸಿರುವ ಬಗ್ಗೆ ರಂಗು-ರಂಗಿನ ಸುದ್ದಿಗಳಿವೆ. ಯಶು ಹೆಂಡತಿ ಹೊಸೂರು ಕಡೆಯ ಅಯ್ಯಂಗಾರಿ ಬ್ರಾಹ್ಮಣ ಹೆಂಗಸು. ಯಶುಗೆ ಲಾಜಿಸ್ಟಿಕ್ಸ್ ದಂಧೆಯ ಹೊತ್ತಲ್ಲೇ ಆಕೆಯ ಪರಿಚಯವಾಗಿ ಅದು ಪ್ರಣಯವಾಗಿ ನಂತರ ಪರಿಣಯವೂ ಆಯ್ತು. ಈ ಹೆಣ್ಣುಮಗಳು ಒಡೆಯರ್ ವಂಶದ ರಾಜರೊಬ್ಬರ ದಾಸಿಯ ಮಗಳಂತೆ. ಆಕೆಯ ಮೂಲಕ ಯಶುಗೆ ಅಪಾರ ಸಂಪತ್ತು ಸಿಕ್ಕಿದೆಯಂತೆ. ಇದು ಎಷ್ಟು ನಿಜವೋ; ಎಷ್ಟು ಸುಳ್ಳೋ ತಿಳಿಯದು. ಹಾಗಂತ ರೂಮರ್‌ಗಳಂತೂ ಇವೆ. ಆದರೆ ಒಂದಂತೂ ಖರೆ; ಒಡೆಯರ್ ಮನೆತನದ ಲಿಂಕು ಯಶುಗೆ ಸಿಕ್ಕಿದ್ದೇ ಆತನ ಹೆಂಡತಿಯಿಂದ. ಶ್ರೀಕಂಠದತ್ತ ಒಡೆಯರ್‌ನ ಹಲವು ಫಾರಿನ್ ಕಂಪನಿಗಳೊಂದಿಗಿನ ಸಹಯೋಗದ ಬಿಸಿನೆಸ್‌ಗೆಲ್ಲ ಬಳಕೆಯಾಗುವುದೇ ಯಶುನ ಫ್ರೆಂಡ್ಲಿ ಟ್ರಾನ್ಸ್‌ಪೋರ್ಟ್ ಲಾರಿಗಳು.

ಒಟ್ಟಿನಲ್ಲಿ ಯಶು ತುಂಬ ಚಾಲಾಕಿ. ಯಾರ್‍ಯಾರಿಗೆ ಯಾವ್ಯಾವ ವೀಕ್‌ನೆಸ್‌ಗಳಿವೆಯೆಂದು ಸ್ಟಡಿಮಾಡಿ ತನ್ನ ದಂಧೆಗೆ ಬಳಸಿಕೊಳ್ಳಬಲ್ಲ ಈ ವ್ಯಾಪಾರಿ. ಈ ಲೆಕ್ಕಾಚಾರದಲ್ಲೇ ಸಿದ್ದರಾಮಯ್ಯನಂಥ ಸಿದ್ದರಾಮಯ್ಯರನ್ನೇ ಖೆಡ್ಡಾಕ್ಕೆ ಕೆಡವಿಕೊಂಡಿದ್ದಾನೆ. ಸಿದ್ದು ಅಧಿಕಾರದಲ್ಲಿದ್ದಾಗ ಅನೇಕ ಪ್ರಯೋಜನ ಈತ ಪಡೆದುಕೊಂಡಿದ್ದಾನೆ.. ಉಪ ಮುಖ್ಯಮಂತ್ರಿಯಾಗಿದ್ದಾಗ ಹೊನ್ನಾವರದ ಮೂಳ್ಕೋಡಿಗೂ ದೋಣಿ ಮೇಲೆ ಹೋಗಿ ರಾತ್ರಿ ಕಳೆದು ಸನ್ಮಿತ್ರ ಯಶುನ ಪ್ರತಿಷ್ಠೆ ಸಿದ್ದು ಹೆಚ್ಚಿಸಿ ಹೋಗಿದ್ದೂ ಇದೆ. ಮೂಳ್ಕೋಡಿನ ಸುತ್ತಲಿನ ಹಳ್ಳಿಗಾಡಲ್ಲಿ ಇದೇ ಸೆನ್ಸೇಷನಲ್ ಸುದ್ದಿಯಾಗಿತ್ತು.

ತಾನೊಬ್ಬ ಆಗರ್ಭ ಶ್ರೀಮಂತನಂತೆ ಪೋಸು ಕೊಡುವ ಯಶೋಧರ ನಾಯ್ಕ ಅಂಥ ಹಣವಂಥನೇನೂ ಅಲ್ಲವೆಂದು ಆತನನ್ನು ಹತ್ತಿರದಿಂದ ಬಲ್ಲವರು ಹೇಳುತ್ತಾರೆ. ಆದರೆ ಆತನ ಆಪ್ತವಲಯದಲ್ಲಿ ದೊಡ್ಡ ದೊಡ್ಡ ಇನ್‌ವೆಸ್ಟರ್ಸ್‌ಗಳಿದ್ದಾರೆ. ಅಧಿಕಾರಸ್ಥ ರಾಜಕಾರಣಿಗಳು, ಅಧಿಕಾರಿಗಳು ಇದ್ದಾರೆ. ಇವರನ್ನೆಲ್ಲ ತುಂಬ ಸಾಫಿಸ್ಟಿಕೇಟಡ್ ಆಗಿ ಯಶು ಬಳಸಿಕೊಳ್ಳುತ್ತಾನೆ. ಯಾವ್ಯಾವುದೋ ದಂಧೆಗಳಲ್ಲಿ ಅವರನ್ನು ತೊಡಗಿಸಿ ಲಾಭ ಹೊಡೆಯುತ್ತಾನೆ. ಆತನ ಬಿಸಿನೆಸ್ ತಂತ್ರಗಾರಿಕೆಗೆ ಇಲ್ಲೊಂದು ಸ್ಯಾಂಪಲ್ ಇದೆ ನೋಡಿ; ಶಿರಸಿಯ ದಿವಾಳಿಕೋರ ಪುಢಾರಿ ಎನ್.ಎಂ ನಾಯ್ಕನ ಹೆಸರುವಾಸಿ ಶಿವಾನಿ ಹೋಟೆಲ್ ಈಚೆಗೆ ಯಶು ನಾಯ್ಕ ಖರೀದಿಸಿದ್ದಾರೆ. ಎನ್ನೆಂ ನಾಯ್ಕನ ಋಣಮುಕ್ತನಾಗಿಸಿರುವ ಈ ಸೂತ್ರಸಿದ್ಧ ಡೀಲ್ ಕುದುರಿದ್ದು 6.85ಕೋಟಿಗೆಂಬ ಪ್ರತೀತಿಯಿದೆ. ಶಿವಾನಿ ಕೊಂಡುಕೊಳ್ಳಲೆಂದೇ ಒಂದು ಕಂಪನಿಯನ್ನು ಯಶು ಹುಟ್ಟುಹಾಕಿದ್ದಾನೆ. ಅದರಲ್ಲಿ ಇಬ್ಬರು ಆಂಧ್ರವಾಳ್ಳು ಇನ್‌ವೆಸ್ಟರ್‌ಗಳಿದ್ದಾರೆ. ಇವರಿಂದ ತಲಾ ಎರಡೆರಡು ಕೋಟಿ ಹಾಕಿಸಿರುವ ಯಶು ತಾನು 2.85 ಕೋಟಿ ಷೇರ್ ಹಾಕಿದ್ದೇನೆಂದು ಅವರನ್ನು ನಂಬಿಸಿದ್ದಾನೆ. ಆದರೆ ವಾಸ್ತವವೇ ಬೇರೆ. ವ್ಯಾಪಾರ ಆಗಿದ್ದೇ 4.85 ಕೋಟಿಗೆ. ಅಂದರೆ ಯಶು ಪಾಲು ಬರೀ 85 ಲಕ್ಷವಷ್ಟೇ. ಇದು ಯಶುನ ಅಸಲಿ ದಂಧೆ ಎನ್ನುತ್ತಾರೆ ಆತನ ಒಳ-ಹೊರಗು ಬಲ್ಲವರು.

ಒಣ ದೌಲತ್ತು-ದರ್ಪದ ಯಶೋಧರ ನಾಯ್ಕ ವೇದಿಕೆ ಮೇಲೆಷ್ಟು ಸೌಮ್ಯ-ಸಜ್ಜನನಂತೆ ನಾಟಕಮಾಡುತ್ತಾನೋ ಅಷ್ಟೇ ಸಿಡುಕು ಸ್ವಭಾವದವನು. ಆತ ಹೇಳಿದಂತೆಯೇ ಎಲ್ಲರೂ ಕೇಳಬೇಕು. ಇಲ್ಲದಿದ್ದರೆ ಬೈದು ಓಡಿಸಿಬಿಡುತ್ತಾನೆ. ಕೊಡುಗೈ ದಾನಿಯಂತೆ ಶೋ ಮಾಡುವ ಈತ ತನ್ನ ಎಲೆಕ್ಷನ್‌ನ ಪ್ರಚಾರಕ್ಕೆ -ಭೋಪರಾಕ್ ಹಾಕಲಿಕ್ಕೆ ಬಂದ ಬಾಡಿಗೆ ಬಂಟರಿಗೂ ಊಟ ಹಾಕಲಿಕ್ಕೆ-ಕೂಲಿ ಕೊಡಲಿಕ್ಕೆ ಹಿಂದೆ-ಮುಂದೆ ನೋಡುವ ಮಾರ್ವಾಡಿ. ಯಾವುದನ್ನೂ ಲಾಭವಿಲ್ಲದೆ ಆತ ಮಾಡುವ ಪೈಕಿಅಲ್ಲ. ಇಂಥ ತಿಕ್ಕಲು ಲೆಕ್ಕಾಚಾರದ ಯಶು ತೀರಾ ಈಚೆಗೆ ತನ್ನ ಮಗನ ಮದುವೆಯನ್ನು ಅದ್ದೂರಿಯಾಗಿ ಮಾಡಿ ಬೀಗಿದ್ದಾನೆ. ಬೀಗತನ ಕುದುರಿಸಿದ್ದು ಯಾರ ಜೊತೆ ಗೊತ್ತಾ? ದಿವಂಗತ ಮುಖ್ಯಮಂತ್ರಿ ದೇವರಾಜ ಅರಸರ ಮಗಳು ಭಾರತಿ ಅರಸ್‌ರ ಮಗಳನ್ನು ಯಶು ಸೊಸೆಯಾಗಿ ಮನೆ ತುಂಬಿಸಿಕೊಂಡಿದ್ದಾನೆ. ಈ ಭಾರತಿ ಅರಸ್ ಕೊಲೆ ಆರೋಪದಲ್ಲಿ ವರ್ಷಗಟ್ಟಲೆ ಜೈಲಲ್ಲಿದ್ದಾಗ ಆಕೆಯ ಕುಟುಂಬ ಪೊರೆದದ್ದು, ಆಕೆಗೆ ಕಾನೂನು ಇನ್ನಿತರ ಸಹಾಯವನ್ನು ಯಶುನಾಯ್ಕ ಕೊಟ್ಟಿದ್ದ. ಅನಂತರ ಆಕೆಯ ಮಗಳನ್ನು ತನ್ನ ಮಗನಿಗೆ ಮದುವೆ ಮಾಡಿ ತಂದಿದ್ದ ಈ ಪಕ್ಕಾ ಟ್ರೇಡರ್!!

ಇಂಥ ತಿಕ್ಕಲು ಯಶುಗೆ ರಾಜಕೀಯ ಖಯ[...] ಶುರುವಾಗಿದ್ದು; ಎಮ್ಮೆಲ್ಲೆ ಆಗುವ ಹುಕ್ಕಿ ಬಂದು 'ಸಮ[...] ಸೇವೆ' ಶುರು ಹಚ್ಚಿಕೊಂಡಿರುವುದು ಕುತೂಹಲಕರವಾ[...] 2004ರ ಅಸೆಂಬ್ಲಿ ಎಲೆಕ್ಷನ್‌ಗೆ ಕೆಲವೇ ದಿನ ಮೊದ[...] ಸಿದ್ದರಾಮಯ್ಯನ ಸ್ನೇಹ-ಸಲಿಗೆ-ಮಹಿಮೆಯಿಂದ ರೆಡಿಮೆ[...] ಜೆಡಿಎಸ್ ನಾಯಕನಾಗಿ ಭಟ್ಕಳ ಕ್ಷೇತ್ರದಲ್ಲಿ ಯ[...] ಅವತರಿಸಿದ್ದ! ಬರುತ್ತಿದ್ದಂತೆಯೇ ದಾನ-ಧರ್ಮದ ನಾ[...] ಶುರುಹಚ್ಚಿಕೊಂಡುಬಿಟ್ಟಿದ್ದ. ಮದುವೆ-ಮುಂಜಿ-ಸೋಬ[...] ತಿಥಿ, ಕ್ರೀಡಾಕೂಟ, ಸಾಂಸ್ಕೃತಿಕ ಮೋಜು, ಸನ್ಮಾ[...] ಸೀರೆ-ಕಂಬಳಿ ವಿತರಣೆ, ಹಣ ಹಂಚುವ ಚೀಪ್ ಗಿಮಿ[...] ಮಾಡತೊಡಗಿದ್ದ. ಸ್ಥಳೀಯ ಜೆಡಿಎಸ್ ಲೀಡರ್‌ಗಳ[...] ದಾಮೋದರ ಗರ್ಡೀಕರ್, ಗಣಪಯ್ಯ ಗೌಡನಂಥವರಿ[...] ಚೆಕ್ ಮೂಲಕವೇ ಕಾಸು ಕೊಟ್ಟು ಅವರೆಲ್ಲ ಟಿಕೆ[...] ಕೇಳದಂತೆ ಮಾಡಿದ್ದ. ಎದುರಾಳಿಗಳನ್ನು ಸಾಕ್ಷ್ಯಾಧಾರ ಸಮೇ[...] ಪಳಗಿಸುವ ಯಶು ದು(ದೂ)ರಾಲೋಚನೆ ದೋ[...] ಒಂದೆರಡಲ್ಲ. ಏನೇ ಮಾಡಿದರೂ ಈತನಿಂದ [...] ತವರೂರು ಸುತ್ತಲಿನ ಹೊನ್ನಾವರದ ಹೊಳೆಸಾಲಿನ ಸ್ವಜ[...] ದೀವರ ವಿಶ್ವಾಸವೇ ಗಳಿಸಲಾಗಲಿಲ್ಲ. ಈತ ಆಟ-ಹು[...] ಕಂಡ ಜನ ಸಂಶಯದಿಂದಲೇ ನೋಡುವಂತಾಗಿತ್ತು. ಹೀಗ[...] 2004ರ ಎಲೆಕ್ಷನ್‌ನಲ್ಲಿ ಯಶುಗೆ ಠೇವಣಿಯ[...] ಉಳಿಸಿಕೊಳ್ಳಲಾಗಲಿಲ್ಲ.

ಇಷ್ಟಾದರೂ ಆತನ ಶಾಸಕನಾಗುವ ತಲಬು ಮ[...] ಕಮ್ಮಿ ಆಗಲೇ ಇಲ್ಲ. 2008ರಲ್ಲಿ ಕಾಂಗ್ರೆಸ್ ಕ್ಯಾಂಡಿ[...] ಟಾಗಲು ಮೈಸೂರು-ಬೆಂಗಳೂರಲ್ಲಿ ತಿಪ್ಪರಲಾಗಹಾಕಿ[...] ಆದರೆ ಗಾಡ್‌ಫಾದರ್ ಸಿದ್ದುಗೆ ಈತನಿಗೊಂದು ಟಿಕೆ[...] ಕೊಡಿಸಲಾಗಲಿಲ್ಲ. ಎಮ್ಮೆಲ್ಲೆ ಆಗುವ ಅರ್ಜೆಂಟ್‌ನಲ್ಲಿ ಯಶು 'ಬಂ' ಪಾರ್ಟಿಯ ಕ್ಯಾಂಡಿಡೇಟಾಗಿ ಎಲೆಕ್ಷನ[...] ಇಳಿದಿದ್ದ. ಹಣ ಸಿಕ್ಕಾಪಟ್ಟೆ ವ್ಯಯಿಸಿದರೂ ಡಿಪಾಸಿ[...] ಮಾತ್ರ ಸಿಗಲಿಲ್ಲ. ಆ ಬಳಿಕ 'ಬಂ' ಸಂಗಡ ಕಾಂಗ್ರೆಸ್[...] ಬಂದ ಯಶುಗೆ ಸಿದ್ದು ಸಾಥ್ ಸಿಕ್ಕಿತ್ತು. ಈಗಾತ ಭಟ್ಕಳ[...] ಉಸಾಬರಿ ಬಿಟ್ಟು ಪಕ್ಕದ ಕುಮಟಾದಿಂದ ಶಾ[...] ಸಾಹೇಬನಾಗಲು ಹೊಸ ಪ್ರಹಸನ ಆರಂಭಿಸಿದ್ದಾನೆ.

ಭಟ್ಕಳದಲ್ಲಿರುವುದು ಕಾಂಗ್ರೆಸ್ ಎಮ್ಮೆಲ್ಲೆ ಈ ಪಿರ್ಕಿ[...] ಜೆ.ಡಿ.ನಾಯ್ಕ ಸೈತಾನ ದೇಶಪಾಂಡೆಯ ಅನುಯಾಯಿ[...] ಹೀಗಾಗಿ ಏನೇ ಮಾಡಿದರೂ ತನಗೆ ಭಟ್ಕಳ ಕಾಂಗ್ರೆ[...] ಟಿಕೆಟ್ ಸಿಗಲಾರದೆಂಬುದು ಯಶುಗೆ ಖಾತ್ರಿಯಾಗಿ[...] ಹಾಗಾಗಿ ಆತ ಕುಮಟಾಗೆ ವಲಸೆ ಹೋಗಿದ್ದಾನೆ. ಮತ್ತ[...] ದಾನ-ಡೊನೇಷನ್‌ನ ದಗಲ್ಬಾಜಿ ಕಾರ್ಯಾಚರಣೆ ಮಾ[...] ತ್ತಿದ್ದಾನೆ. ಸತ್ತವರ ಮನೆಗ್ಹೋಗಿ ಒಂದಿಷ್ಟು ಪುಡಿ ಕಾ[...] ಕೊಟ್ಟು ಫೋಟೊ ಹೊಡೆಸಿಕೊಂಡು ಪೇಪರ್‌ಗೆ ಕೊ[...] ತ್ತಿದ್ದಾನೆ. ಕುಮಟೆಯಲ್ಲೊಂದು ಮನೆ ಖರೀದಿಸಿ ಊರ[...] ಕಿಮ್ಮತ್ತಿಲ್ಲದ ಒಂದಿಷ್ಟು ಪಡಪೋಸಿಗಳನ್ನು ಗುಡ್ಡೆ ಹಾ[...] ಕೊಂಡಿದ್ದಾನೆ. ಮೈಸೂರ-ಹೊಸೂರು ಎಂದು ತನ್ನ ನಿಗೂ[...] ಬಿಸಿನೆಸ್‌ಗೆ ಓಡಾಡುವ ಯಶು ಶಾಸಕತ್ವದ ಚಟ ಕಾಡಿದಾ[...] ಕುಮಟಾಗೆ ಓಡೋಡಿ ಬರ್‍ತಾನೆ. ಬೋಗಸ್ ಸುದ್ದಿ-ಸ[...] ಮಾಡಿ ಮತ್ತೆ ನಾಪತ್ತೆ ಆಗ್ತಾನೆ. ಕುಮಟಾ ಕ್ಷೇತ್ರ[...] ಉದ್ದಗಲವೇ ಗೊತ್ತಿಲ್ಲದ ಈತ ತನ್ನ ನಿಧಿಯನ್ನೇ ನಂ[...] ನಾಚ್ ಮಾಡುತ್ತಿದ್ದಾನೆ....

ಇಷ್ಟೆಲ್ಲ ಹುಚ್ಚಾಟ ಮಾಡುತ್ತಿರುವ ಯಶುಗೆ ಕುಮಟೆ[...] ಕಾಂಗ್ರೆಸ್ ಟಿಕೆಟ್ ಸಿಕ್ಕೀತಾ? ಆ ಸಾಧ್ಯತೆಯೇ ಇ[...] ಅಂತಾರೆ ಕುಮಟೆಯಿಂದ ಬೆಂಗಳೂರು ವರೆಗಿನ ಕಾಂಗ್ರೆ[...] ಮಹಾಮಹಿಮರು. ಹಾಗೊಮ್ಮೆ ಸಿದ್ದು ಹಠ ಹಿಡಿದ[...]

ಕೊಡಿಸದರೆ, ಯಶು ಗೆಲ್ತಾನಾ? ಊಹುಂ, ತೂ ಈ ಅಪರಿಚಿತ ಮುಖೇಡಿಯಿಂದ ಸಾಧ್ಯವೇ ಅಂತಾರೆ ಕುಮಟೆಯ ಜನ! ಅಂತೂ ಯಶೋಧರ ನ ಕುರುಡು ಕಾಂಚಾಣ ಕುಮಟೆಯನ್ನು ಕುಲಗೆಡಿಸು !

ಆಡ್ನಾಡಿ ಅನಿಲನ ಪುರಾಣ

ಮಲೆನಾಡು-ಅರೆಬಯಲು ಸೀಮೆಯಿಂದ ಆವೃತವಾದ ಲ್ಲಾಪುರ-ಮುಂಡಗೋಡ ಕ್ಷೇತ್ರದ ಶಾಸಕನಾಗೇ ಬೇಕೆಂಬ ಹಪಾಹಪಿಯಿಂದ ಡಿ. ಅನಿಲಕುಮಾರ್ ೋರ್ವ ಮಧ್ಯ ವಯಸ್ಕ ದೊಡ್ಡ ದುಡ್ಡಿನ ಚೀಲ ದುಕೊಂಡು ರೌಂಡ್ಸ್ ಹಾಕುತ್ತಿದ್ದಾನೆ! ಸದ್ಯಕ್ಕವನ ಲ್ಲಿ ಜೆಡಿಎಸ್ ಝಂಡಾ ಇದೆ. ಆದರೀತ ಒರಿಜಿನಲಿ . ಆ ಪಾರ್ಟಿಯ ಹಿಂದೂತ್ವದ ರಾಜಕಾರಣಕ್ಕೆ ಷ್ಟು ಹಣ ಸುರಿದು ಸುಸ್ತಾಗಿದ್ದ ಅನಿಲ್ ಅಂತಿಮವಾಗಿ ಬ್ರಾಹ್ಮಣಶಾಹಿಯಿಂದ ಒದೆಸಿಕೊಂಡು ಜೆಡಿಎಸ್ ಗಿದ್ದಾನೆ. ತಾನು ಸ್ಥಳೀಯ ಪ್ರಬಲ ದೀವರ (ಈಡಿಗ) ಲಕನೆಂದು ಪೋಸು ಕೊಡುತ್ತಿದ್ದಾನೆ ಅನಿಲ್. ಆದರೆ ೋ ದೀವರು ಈತನನ್ನು ತಮ್ಮವನೆಂದು ಒಪ್ಪಲು ದೆಮುಂದೆ ನೋಡುತ್ತಿದ್ದಾರೆ.

ಇದಕ್ಕೆ ಮುಖ್ಯ ಕಾರಣ ಅನಿಲ್‌ನ 'ಜನ್ಮ ರಹಸ್ಯ' ಎಲ್ಲಿಂದಲೋ ಹಠಾತ್ ಯಲ್ಲಾಪುರಕ್ಕೆ ವಕ್ಕರಿಸಿದ ದೌಲತ್ತಿನ ಸ್ಟೈಲು. ನೂರಾರು ವರ್ಷದ ಹಿಂದೆ ಕಡೆಯಿಂದ ಅನಿಲ್‌ನ ತಂದೆ ಯಲ್ಲಾಪುರಕ್ಕೆ ಟ್ಟೆಪಾಡಿಗೆ ಬಂದಿದ್ದರು. ಈತ ಕೇರಳದ ತೀಯಾಸ್ ಯಾಳಿ ಬಿಲ್ಲವ) ಪಂಗಡಕ್ಕೆ ಸೇರಿದಾತ. ಬೆಳ್ಚಡ ೂ ಕರೆಯಲ್ಪಡುವ ಈ ಜನಾಂಗದ ಅನಿಲ್ ತಂದೆ ವೆಯಾಗಿದ್ದು ಮಾತ್ರ ಯಲ್ಲಾಪುರ ಕಡೆಯ ದೀವರ ನ್ನು. ಹೈಸ್ಕೂಲುವರೆಗೆ ಅನಿಲ್ ಯಲ್ಲಾಪುರದಲ್ಲೇ ದ್ದು. ಆ ಬಳಿಕ ಆತ ಎಲ್ಲಿ ಹೋದ, ಏನೇನು ಮಾಡಿದ, ಭರ್ಜರಿ ದುಡ್ಡು ಹೇಗೆ ಸಂಪಾದಿಸಿದ ಬದೇನೂ ಯಲ್ಲಾಪುರದವರಿಗೆ ಗೊತ್ತಿಲ್ಲ.

ಯಾವಾಗ ಭಟ್ಕಳದ ದೀವರ ಧೀರ ಶಿವಾನಂದ 'ಕೋ-ಜಾ' ಸರ್ಕಾರದಲ್ಲಿ ತ್ರಿಯಾದನೋ ಆಗ ಈ ನಿಧಾನಕ್ಕೆ ಉತ್ತರ ದಲ್ಲಿ ಬಾಲ ಪ್ರಾರಂಭಿಸಿದ. ಬೆಂಗಳೂರು ದಲ್ಲೇ ಜಾತಿ ಆಧಾರದಲ್ಲಿ ನ ಸಖ್ಯ ಬೆಳೆಸಿದ್ದ ಅನಿಲ್ ವನ ಅಣ್ಣ ರವಿಕುಮಾರ್ ಗೋಲ್‌ಮಾಲ್ ಮಿಗಳು ಬಿಜೆಪಿಯ ೂತ್ವ ರಾಜಕಾರಣಕ್ಕೆ-ದೀವರ ಫಂಕ್ಷನ್‌ಗಳಿಗೆ ಹಣ ಲಾರಂಭಿಸಿದ್ದರು. ಶಿವಾನಂದ -ಅಸ್ನೋಟಿಕರ್-ಕಾಗೇರಿಗೆಲ್ಲ ನ್ ಫಂಡ್ ಕೊಟ್ಟಿದ್ದರು.



ಾಗ ಬಿಜೆಪಿಯ ಅಧಿಕಾರಸ್ಥರ ಸಾಮೀಪ್ಯ ೋ ಆಗ ಅನಿಲ್‌ಗೆ ತಾನೇಕೆ ಎಮ್ಮೆಲ್ಸಿ ಅಥವಾ ಲ್ಲೆ ಆಗಬಾರದೆಂಬ ತೆವಲು ಶುರುವಾಯ್ತು. ವ್ಯಾಪಾರಿ ಬುದ್ಧಿಯ ಅನಿಲ್-ಅಣ್ಣ ಮಾರ್ ತಾವು ಅಧಿಕಾರಸ್ಥ ಜನಪ್ರತಿನಿಧಿಯಾದರೆ ಕಪ್ಪು-ಬಿಳುಪಿನ ಬಿಜಿನೆಸ್‌ಗೆಲ್ಲ ಅನುಕೂಲವೆಂಬ ಾರ ಹಾಕಿದ್ದರು.

ನೋಡುನೋಡುತ್ತಿದ್ದಂತೆಯೇ ಅನಿಲ್ ಯಲ್ಲಾಪುರ ತಾಯ್ನೆಲ ಎನ್ನುತ್ತ ಅಲ್ಲಿ 'ರಾಜಕೀಯ' ಶುರು ಬಿಟ್ಟರು. ಯಲ್ಲಾಪುರ-ಮುಂಡಗೋಡಿನ ಬೌಗೋಳಿಕ ಯವೇ ಇಲ್ಲದ ಅನಿಲ್-ರವಿಗೆ ಜನತಂತ್ರದ ಮೂಲ ವೇ ಗೊತ್ತಿಲ್ಲ. ಒಣಪ್ರತಿಷ್ಠೆ-ಖಾಸಗಿ ಉದ್ಯಮ ಾಜ್ಯದ ವಿಸ್ತರಣೆ-ರಕ್ಷಣೆಗೆ ರಾಜಕೀಯ ಹುದ್ದೆ -ರವಿಗೆ ಬೇಕಿತ್ತೇ ಹೊರತು ಜನೋದ್ಧಾರಕ್ಕಂತೂ ಆದರೆ ತನ್ನ ಸ್ವಾರ್ಥ ರಾಜಕಾರಣಕ್ಕೆ ಅನಿಲ್ ಜನ ಮ ಭರ್ಜರಿ ಮುಖವಾಡ ತೊಡಿಸಿಕೊಂಡು ಫೀಲ್ಡಿಗೆ ದ್ದ! ಹೀಗಾಗಿ ರಾತ್ರಿ ಬೆಳಗಾಗುವುದರಲ್ಲಿ ಈತ ಪುಢಾರಿಯಾಗಿ ಅವತರಿಸಿ ಬಿಟ್ಟ. ಯಲ್ಲಾಪುರದ ಜಾತ್ರೆಯಂಥ ಜನಜಂಗುಳಿ ಪ್ರದೇಶದಲ್ಲೆಲ್ಲ ಆತನ ರದ ಫ್ಲೆಕ್ಸ್ ಬೀಳತೊಡಗಿದ್ದು ಚೋದ್ಯವೇ ಸರಿ.

ಬಿಜೆಪಿಗೆ ತಾನು ಮಾಡಿದ 'ಉಪಕಾರ'ಕ್ಕೆ ಅನಿಲ್ ಆ ಯಿಂದ ಬಯಸಿದ ಮೊದಲ ಪ್ರತಿಫಲವೆಂದರೆ ಮು ಸಂಸ್ಥೆಯಿಂದ ವಿಧಾನಪರಿಷತ್‌ಗೆ ಸ್ಪರ್ಧಿಸುವ ಆಗಿತ್ತು. ಆದರೆ ಬಿಜೆಪಿ ಬ್ರಾಹ್ಮಣರು ಅನಿಲ್ ಗೆ ಕೆಲಸಕ್ಕೆ ಬಾರದ ಸಾತ್ ನಂಬರ್ ಕಾಲಿಗೇರು ಅಭಿವೃದ್ಧಿ ನಿಗಮದ ಅಧ್ಯಕ್ಷ ವಿನೋದ್ ಎಂಬ ಅನಾಮಧೇಯಕಾರಿ ಚಡ್ಡಿಗೆ ಟಿಕೆಟ್ ಕೊಟ್ಟು ಬಿಟ್ಟರು. ಕೆರಳಿದ ಅನಿಲ್ ತಾನೂ ಪಕ್ಷೇತರನಾಗಿ ದಕ್ಕೆ ಇಳಿದ. ಅಣ್ಣ ರವಿಕುಮಾರ್ ಉತ್ತರ ಕನ್ನಡದಲ್ಲಿ ದ ಚೀಲ ಹಿಡಕೊಂಡು ಕ್ಯಾಂಪ್ ಮಾಡಿದ. ಜೆಡಿಎಸ್ ಪ್ಲೆಗಾದ ಕುಮಟೆಯ ದಿನಕರ್ ಶೆಟ್ಟಿ, ಹಳಿಯಾಳದ

ಸುನೀಲ್ ಹೆಗಡೆ, ಪ್ರಮೋದ್ ಹೆಗಡೆ ವಗೈರೆಗಳನ್ನೆಲ್ಲಾ ಖರೀದಿಸಿದ. ಹಣದ ಹೊಳೆಯೇ ಹರಿಯಿತು. ತತ್ಪರಿಣಾಮವಾಗಿ ಬಿಜೆಪಿ ಮೂರನೇ ಸ್ಥಾನಕ್ಕೆ ತಳ್ಳಲ್ಪಟ್ಟು ಈ ಅನಿಲ ನಂಬರ್ ಟೂ ಆಗಿ ಅವತರಿಸಿದ. ಕಾಂಗ್ರೆಸ್‌ನ ಘೋಟನೇಕರ್ ಎದುರು ಸಣ್ಣ ಅಂತರದಲ್ಲಿ ಸೋತಿದ್ದೇ ತಡ,ಅನಿಲ್‌ಗೆ ಯಲ್ಲಾಪುರದ ಎಮ್ಮೆಲ್ಲೆ ಆಗುವ ಆಸೆ ಶುರುವಾಗಿಬಿಟ್ಟಿತು.

ಬಿಜೆಪಿಯಿಂದ ಹೊರಬಂದಿದ್ದ ಅನಿಲ್ ಪಟಾಲಂಗೆ ಒಂದು ಪಕ್ಷದ ಬ್ಯಾನರ್ ಬೇಕಿತ್ತು. ಕಾಂಗ್ರೆಸ್‌ಗೆ ದಾರಿಯಿರಲಿಲ್ಲ. ಆದರೆ ಖಾಲಿಖಾಲಿ ಇದ್ದ ಜೆಡಿಎಸ್‌ನಲ್ಲಿ ಸುಲಭದಲ್ಲಿ ಪ್ರವೇಶ ಸಿಕ್ಕಿತು. ಯಲ್ಲಾಪುರದವನೇ ಆಗಿರುವ ಜಿಲ್ಲಾ ಜೆಡಿಎಸ್‌ನ ಅಧ್ಯಕ್ಷ ಪ್ರಮೋದ್ ಹೆಗಡೆ ಎಂಬ ಬಂಡಲ್ ಭಾಷಣ ಭೂಪ, ಶಾಸಕ ಸುನಿಲ್, ಆತನ ಅಪ್ಪ ಮಾಜಿ ಎಮ್ಮೆಲ್ಸಿ ವಿ.ಡಿ. ಹೆಗಡೆಗಳೆಲ್ಲ ಸೇರಿ ಅನಿಲ್‌ನ ಜೆಡಿಎಸ್ ಯುವರಾಜ ಕುಮಾರಸ್ವಾಮಿ ಬಳಿಗೊಯ್ದರು. ಕುಮಾರ್ ದುಡ್ಡಿನ ಕುಳ ಅನಿಲ್‌ಗೆ ಜೆಡಿಎಸ್ ದೀಕ್ಷೆ ಕೊಟ್ಟರು. ಒಂದು ಹಂತದಲ್ಲಿ ಜಿಲ್ಲಾ ಜೆಡಿಎಸ್ ಅಧ್ಯಕ್ಷ ಅನಿಲ್ ಆಗೇ ಹೋದನೆಂಬ ಪರಿಸ್ಥಿತಿಯೂ ನಿರ್ಮಾಣವಾಗಿತ್ತು. ಆದರೆ ಬೆಂಗಳೂರು-ದುಬೈ-ಕೀನ್ಯಾ ದೇಶಗಳಲ್ಲಿರುವ ತನ್ನ ಕುಟುಂಬದ ತರಹೇವಾರಿ ಬಿಸಿನೆಸ್ ಸಫರ್ ಆಗುವ ಭಯದಿಂದ ಅನಿಲ್ ಕೇವಲ ಶಾಸಕನಷ್ಟೇ ಆಗುವುದಕ್ಕೆ ತನ್ನನ್ನು ಸೀಮಿತ ಗೊಳಿಸಿಕೊಂಡುಬಿಟ್ಟಿದ್ದ.

ಆ ನಂತರ ಯಲ್ಲಾಪುರ-ಮುಂಡಗೋಡು ಅನಿಲ್-ರವಿ ಬ್ರದರ್ಸ್‌ಗಳ 'ಕರ್ಮ'ಭೂಮಿ ಆಗಿಹೋಯ್ತು. ಮದುವೆ-ಮುಂಜಿ-ಬೊಜ್ಜು-ಪುಷ್ಪ-ಹಳ್ಳಿಗಳ ಕ್ರೀಡೋತ್ಸವ-ಸಾಂಸ್ಕೃತಿಕ ಕೂಟ, ಸನ್ಮಾನ-ದಾನ-ಡೊನೇಷನ್ ಪಾಲಿಟಿಕ್ಸ್ ಅನಿಲ್ ಅಂಡ್ ಕೋ ಆರಂಭಿಸಿತು. ಪ್ರಮೋದ್ ಹೆಗಡೆಯಂಥ ಜೆಡಿಎಸ್. ನಾಯಕರನ್ನು ಖರೀದಿಸಿ ಪಳಗಿಸಿಕೊಂಡಿತು. ನಿರ್ಲಜ್ಜ ಪ್ರಮೋದ್ ಸ್ವಂತಿಕೆ ಬಿಟ್ಟು ಅನಿಲ್ ತನ್ನ 'ಸಂಸ್ಕೃತಿ'ಯ ಉತ್ತರಾಧಿಕಾರಿ ಎಂದು ಬಹಿರಂಗವಾಗೇ ಬೊಬ್ಬೆ ಹೊಡೆಯತೊಡಗಿದ. ಅನಿಲ್‌ನ ದುಡ್ಡಿನ ರಾಜಕಾರಣ ಅದೆಷ್ಟು ಜೋರಾಯ್ತೆಂದರೆ, ಯಲ್ಲಾಪುರ ಪಟ್ಟಣ ಪಂಚಾಯ್ತಿಯ ಇಲೆಕ್ಷನಲ್ಲಿ ನೆಲೆ-ಬೆಲೆಯಿಲ್ಲದ ಜೆಡಿಎಸ್ ಆರೇಳು ಸೀಟು ಗೆದ್ದಿತು. ಆದರೆ ಆ ಕೌನ್ಸಿಲರ್‌ಗಳಲ್ಲಿ ಐವರನ್ನು ಕಾಂಗ್ರೆಸ್‌ನ ಗಣಿ ಧಣಿ ಶಿವರಾಮ ಹೆಬ್ಬಾರ್ ಎಂಬ ಎಮ್ಮೆಲ್ಲೆ ಆಕಾಂಕ್ಷಿ ಖರೀದಿಸಿ ಯಲ್ಲಾಪುರ ಪ.ಪಂ.ದಲ್ಲಿ ಕಾಂಗ್ರೆಸ್ ಆಡಳಿತ ತಂದಿದ್ದರು. ಆ ಮಾತು ಬೇರೆ ಬಿಡಿ.

ಈ ಹಿನ್ನೆಡೆಯ ನಂತರ ಥಂಡ ಹೊಡೆದಿದ್ದ ಅನಿಲ್ ಪರಿವಾರ ಈಗ ಮತ್ತೆ ಕ್ಷೇತ್ರದಲ್ಲಿ ಧೂಳೆಬ್ಬಿಸುತ್ತಿದೆ. ಜೆಡಿಎಸ್ ಸಮಾವೇಶಗಳ ಆರ್ಭಟ ಆಗುತ್ತಿದೆ. ಮರಿ ಪುಢಾರಿಗಳ ಖರೀದಿ ನಡೆದಿದೆ. ಕಾಂಗ್ರೆಸ್ ಪಾಲಾಗಿದ್ದ ಐವರು ಮುನ್ಸಿಪಾಲ್ಟಿ ಸದಸ್ಯರನ್ನು ಅನಿಲ್ ಮರಳಿ ಕೊಂಡುಕೊಂಡಿದ್ದಾರೆ. ಒಟ್ಟಿನಲ್ಲಿ ಯಲ್ಲಾಪುರದಲ್ಲೀಗ ಹಣದ ಹಣಾಹಣಿಯಾಗುವ ಸಕಲ ಲಕ್ಷಣಗಳೂ ಗೋಚರಿಸುತ್ತಿವೆ. ಇದಕ್ಕೆ ಸಮಾನಾಂತರವಾಗಿ ಕಾಂಗ್ರೆಸ್ ಅದಿರು ಕಳ್ಳ ಶಿವರಾಮ ಹೆಬ್ಬಾರ್ ಪ್ರತಿತಂತ್ರ ಹೆಣೆಯುತ್ತಿದ್ದಾನೆ. ಈತನದೂ ಧನಾಧಾರಿತ ದಗಲುಬಾಜಿಯೇ ಹೊರತು ಜನಪರ ಪಾಲಿಟಿಕ್ಸ್ ಅಲ್ಲ. ಸದ್ಯಕ್ಕಂತೂ ಯಲ್ಲಾಪುರ-ಮುಂಡಗೋಡ ರಾಜಕಾರಣ ಜೆಡಿಎಸ್‌ನ ಅನಿಲ್‌ಕುಮಾರ್‌ನ ಸುತ್ತಲೇ ಗಿರಕಿ ಹೊಡೆಯುತ್ತಿದೆ. ಆತನ ದುಡ್ಡಿನ ಮೂಲದ ಬಗ್ಗೆ ರಂಗು-ರಂಗಿನ ಚರ್ಚೆಗಳು ನಡೆಯುತ್ತಿವೆ.

ಹೆಚ್ಚು ಸಮಯ ಬೆಂಗಳೂರಲ್ಲೇ ಕಳೆವ ಅನಿಲ್ ಕ್ಷೇತ್ರ ಹದಗೊಳಿಸಿಕೊಳ್ಳಲು ಆಗಾಗ ಕ್ಷೇತ್ರಕ್ಕೆ ವಕ್ಕರಿಸುತ್ತಾನೆ. ಆತನ ಕುಟುಂಬಕ್ಕೆ ಬೆಂಗಳೂರು ಕೇಂದ್ರವಾಗಿರುವ ಹಲವು ದೇಶ-ವಿದೇಶದ ದಂಧೆಗಳಿವೆಯಂತೆ. ಸಿನಿಮಾ ಇಂಡಸ್ಟ್ರೀಯಲ್ಲೂ ಇರುವ ಈ ಅಣ್ಣ-ತಮ್ಮ 'ನಾ ಟಾಟಾ ನೀ ಬಿರ್ಲಾ'ದಂಥ ತಗಡು ಸಿನಿಮಾಗಳಿಗೆಲ್ಲ ನಿರ್ಮಾಪಕರು. ಬಿಜೆಪಿ ಬಿಟ್ಟ ನಂತರ ಅನಿಲ್ 'ವಿಲ್ಮಾ ಗ್ರೂಪ್'ನ ಕನ್‌ಸ್ಟ್ರಕ್ಷನ್ ವ್ಯವಹಾರಕ್ಕೆ ಹೊಡೆತ ಬಿದ್ದಿದೆ. ಹಾಗಾಗಿ ರವಿ-ಅನಿಲ್ ಈಗ ಹೋಟೆಲ್ ದಂಧೆ ಆರಂಭಿಸಿದ್ದಾರೆ. ದುಬೈ-ಕೀನ್ಯಾದಲ್ಲಿ ಹೋಟೆಲ್ ಮಾಡಿದ್ದಾರೆ. ಕೀನ್ಯಾದಲ್ಲಿ ಗಣಿ ಉದ್ಯಮವೂ ಅನಿಲ್-ರವಿಗಿದೆ. ಇದೆಲ್ಲ ಕಪ್ಪು-ಬಿಳುಪಿನ ವಹಿವಾಟು. ಈ ಉದ್ಯಮದ ಕೃಷ್ಣನ್ ಲೆಕ್ಕದ ಹಣ ಯಲ್ಲಾಪುರ-ಮುಂಡಗೋಡಿಗೆ ಅನಿಲ್ ಹರಿಸುತ್ತಿದ್ದಾರೆ.

ಒಟ್ಟಿನಲ್ಲಿ ಮುಂಬರುವ ಅಸೆಂಬ್ಲಿ ಇಲೆಕ್ಷನ್‌ನಲ್ಲಿ ಯಲ್ಲಾಪುರ-ಮುಂಡಗೋಡ ಭಯಾನಕ ಹಣದ ಹಣಾಹಣಿಯ ಅಖಾಡವಾಗುವುದಂತೂ ಖರೆ. ಹುಚ್ಚ ಮದುವೇಲಿ ಉಂಡೋಣ ಜಾಣನೆಂದು ಅನಿಲ-ಶಿವರಾಮ ಹೆಬ್ಬಾರರ ಕಳ್ಳ ಗಂಟಿನ ಮೇಲೆ ಕಣ್ಣಿರುವವರು ಛೋಪರಾಕ್ ಹಾಕುತ್ತಿದ್ದಾರೆ. ಜನ ಬೆರಗುಗಣ್ಣಿಂದ ನೋಡುತ್ತಿದ್ದಾರೆ!

• ನಹುಷ

ವದ್ದು, ವದ್ದು ನೇನು ಒಕ್ಕಡೆ ಪಣುಕೊಂಟಾನು!

ಬಳ್ಳಾರಿಯನ್ನೇ ವಿಜಯನಗರ ಸಾಮ್ರಾಜ್ಯ ಮಾಡಿಕೊಂಡು, ತಾನೇ ಶ್ರೀ ಕೃಷ್ಣದೇವರಾಯನೆಂದು ತಿಳಿದುಕೊಂಡು, ಅಣ್ಣ ಕರುಣಾಕರ ರೆಡ್ಡಿ ಮಹಾಮಂತ್ರಿ ತಿಮ್ಮರಸನೆಂದು ಭಾವಿಸಿ, ತಮ್ಮ ಸೋಮಶೇಖರ ರೆಡ್ಡಿ ತೆನಾಲಿಯಾಗಿ ಶ್ರೀರಾಮುಲು ಸೈನ್ಯಾಧಿಕಾರಿಯಾಗಿ, ಅವರೆಲ್ಲ ಸುತ್ತುವರೆದು ಅಹಂಕಾರದಿಂದ ಮೆರೆಯುತ್ತಿದ್ದ ಜನಾರ್ದನ ರೆಡ್ಡಿ ಸಾಮ್ರಾಜ್ಯ ದಿನಬೆಳಗಾಗುವುದರಲ್ಲಿ ಪತನಗೊಂಡಿತಂತಲ್ಲಾ, ಈಗ ಹೈದರಾಬಾದಿನ ಜೈಲು ಸೇರಿ ಅಂಗಾತ ಮಲಗಿ, ಇದು ನಿಜವೇ, ಸುಳ್ಳೆ ಎಂಬುದನ್ನು ಅರಿಯದಂತಾಗಿದೆಯಂತಲ್ಲಾ. ತನ್ನ ಪತನವನ್ನು ಮುಚ್ಚಿಡುವ ಸಲುವಾಗಿ "ನಾನು ತುಂಬ ಕಷ್ಟಪಟ್ಟು ಬೆಳೆದವನು. ನಮ್ಮಪ್ಪ ಪೊಲೀಸ್ ಕನಿಷ್ಟಬಲ್ಲೆಯಾಗಿದ್ದಾಗ ನಾವು ಪೊಲೀಸ್ ಕ್ವಾಟ್ರಸ್ಸಿನಲ್ಲಿದ್ದೆವು. ಆಗ ಒಂದು ಹಾಲು, ಒಂದು ಅಡಿಗೆ ಕೋಣೆ. ಅದರಲ್ಲೇ ನಾವು ಐದಾರು ಜನ ಮಲಗುತ್ತಿದ್ದೆವು. ಈಗ ನಾಲ್ಕು ಜನರೊಟ್ಟಿಗೆ ಮಲಗಲು ನನಗೆ ತುಂಬಾ ಇಷ್ಟವಾಗುತ್ತೆ. ನನ್ನ ಜೊತೆ ನಮ್ಮ ಶ್ರೀರಾಮುಲು ಇದ್ದರೆ ಚೆನ್ನಾಗಿರುತ್ತಿತ್ತು" ಎಂದನಂತಲ್ಲಾ, ಆಗ ರಾಮುಲು ತರಹವೇ ಇದ್ದ ಕೈದಿಯೊಬ್ಬ ರೆಡ್ಡಿಯ ಕೆನ್ನೆ ಮತ್ತು ಕಣ್ಣು ನೋಡಿ "ಸಾರ್, ನೇನು ನಿ ಜೊತೆಲು ಪಣುಕೊಂಟಾನು" ಎಂದನಂತಲ್ಲಾ, ಅದನ್ನು ಕೇಳಿ ಗಾಬರಿ ಬಿದ್ದ ರೆಡ್ಡಿ, "ವದ್ದು ವದ್ದು ನೇನು ಒಕ್ಕಡೆ ಪಣುಕೊಂಟಾನು" ಎಂದನಂತಲ್ಲಾ ಥೂತ್ತೇರಿ!

****



ಎಡೂರಪ್ಪನ ಪರ ವಕಾಲತ್ತು ವಹಿಸಿದ ಕಾರಣಕ್ಕೆ ತಲೆಮಾಸಿದ ಈಶ್ವರಪ್ಪನಂತವರಿಂದ ಶಿಸ್ತು ಉಲ್ಲಂಘನೆ ನೋಟಿಸ್ ಪಡೆದಿರುವ ಡಿ.ಬಿ. ಚಂದ್ರೇಗೌಡನನ್ನು ಮಾತನಾಡಬೇಕೆನಿಸಿತಲ್ಲಾ, ಆ ಕೂಡಲೇ ಫೋನ್ ಮಾಡಲಾಗಿ ರಿಂಗಾಯ್ತು.

ರಿಂಗ್ ಟೋನ್: "ತ್ರಿಮೂರ್ತಿ ರೂಪ ದತ್ತಾತ್ರೇಯ ತಿಗುಣಪೀತ ದತ್ತಾತ್ರೇಯ ಆದಿ......"

"ಹಲೋ ಯಾರು?"

"ನಾನು ಸಾರ್ ಯಾಹು ಅಂತ ಪತ್ರಕರ್ತ."

"ಆ ಹೇಳಿ ಯಾಹೂ ಹೇಗಿದ್ದಿರಿ?"

"ಚನ್ನಾಗಿದ್ದಿನಿ ಸಾರ್. ನೀವೇನು ಸಾರ್ ಹಿಂಗಾದ್ರಿ!"

"ನಾನೇನಾಗಿದ್ದಿನಿ? ಚನ್ನಾಗೇ ಇದ್ದಿನಲ್ಲ?"

"ಹಣಕಾಸಿನ ವಿಷಯದಲ್ಲಿ ಚನ್ನಾಗಿರಬಹುದು. ಈ ನೈತಿಕ ಪತನ ಹೇಳಿ."

"ಪತನ ಕಾಂಗ್ರೆಸ್ಸಿನಲ್ಲಿದ್ದಾಗ ಆಗಿತ್ತು, ಈಗ ಯಿಲ್ಲ, ಹುಚ್ಚ ಅಂತ ಹೇಳಿದ್ರು. ಆ ಮಾತಿಗೆ ಈಗ ಹೇರಳವಾದ ಸಾಕ್ಷಿ ಸಿಕ್ತಾ ಅವೆ ಸಾರ್."

"ಅವ್ರುದ್ಯಾಕೆ ಆ ತರ ಹೇಳ್ತರೆ. ಬಹಳ ಗೌರವಾನ್ವಿತ ರಾಜಕಾರಣಿ ಅವ್ರು."

"ಯಾವಾಗೇಳಿದ್ರು ಅಂದ್ರೇ, ನೀವು ಇದ್ದಕ್ಕಿದ್ದಂತೆ ಲೋಕಸಭಾ ಸ್ಥಾನಕ್ಕೆ ರಾಜೀನಾಮೆ ಕೊಟ್ಟು, ಇಂದ್ರಾಗಾಂಧಿ ಚಿಕ್ಕಮಗಳೂರಲ್ಲಿ ಚುನಾವಣೆಗೆ ನಿಂತಗಳಂಗೆ ಮಾಡಿದರಲ್ಲಾ, ಆಗ ವಿರೇಂದ್ರ ಪಾಟೀಲ್ರು ತಲೆ ಸರಿಯಿಲ್ಲದ ಹುಚ್ಚ ಮಾತ್ರ ಇಂತ ಕೆಲಸ ಮಾಡಬಲ್ಲರು ಅಂದಿದ್ರು."

"ನೋಡಿ, ಆಗಿನ ಸಂದರ್ಭಕ್ಕೆ ಯಾರು ಹೊಣೆ, ಯಾರು ಕಾರಣ ಅನ್ನೊ ಚರ್ಚೆ ಈಗ ಬೇಡಿ. ಇಂದಿರಾಗಾಂಧಿಗೆ ಪುನರ್ಜನ್ಮ ನೀಡೊ ಒಂದು ಮಹತ್ಕಾರ್ಯದ ಸಂದರ್ಭ ಅದು. ನನ್ನ ತರ ಬೇಕಾದಷ್ಟು ಜನ ಮಾಡಿದಾರೆ. ಸ್ಟೀಫನ್‌ಗಾಗಿ ಧರ್ಮಸಿಂಗ್, ಹೆಗಡೆಯವರಿಗಾಗಿ ಸಿಂಧ್ಯಾ, ಹೀಗೆ ಅನೇಕ ಉದಾಹರಣೆಗಳಿವೆ. ಹಾಗಾದ್ರೆ ಅವ್ರುರೆಲ್ಲಾ ಹುಚ್ಚರೆ?"

"ಅವರ ಹುಚ್ಚು ತೀರ್ಮಾನಕ್ಕೆ ನೀವು ಮಾದರಿಯಾದ್ರಿ ಅಷ್ಟೆ. ಯಾವುದೇ ವಿಷಯವನ್ನು ಗಹನವಾಗಿ ಮಾತನಾಡ್ತಿರಿ ನೀವು. ಇದೇ ಬಿಜೆಪಿ ಅಧಿಕಾರಕ್ಕೆ ಬರುವಾಗ, ಗೆದ್ದ ಅನ್ಯಪಾರ್ಟಿ ಜನರಿಂದ ರಾಜೀನಾಮೆ ಕೊಡಿಸಿ ಮರುಚುನಾವಣೆ ಮಾಡಿ ಅಧಿಕಾರ ಪಡೆದಾಗ, ಭಾರತದ ರಾಜಕಾರಣದಲ್ಲಿ ಇಂತಹ ಕೃತ್ಯ ನಡೆದಿರಲಿಲ್ಲ ಅಂದ್ರಿ. ಇದು ಡೆಮಾಕ್ರಸಿಯ ಪತನ ಅಂದಿದ್ರಿ ನೀವು."

"ಇರಬಹುದು. ಆಗಿನ ಸಂದರ್ಭ ಹಾಗಿತ್ತು."

"ಈಗಲೂ ಅಂತದೇ ಸಂದರ್ಭದ ವಕಾಲತ್ತಿಗೆ ನಿಂತಿದ್ದಿರಲ್ಲಾ ಸಾರ್?"

"ಒಂದು ಪಾರ್ಟಿಲಿದ್ದ ಮೇಲೆ ವಕಾಲತ್ತು ಮಾಡ್ಬೇಬೇಕಾಗುತ್ತೆ."

"ಮಾಡಿ ಸಾರ್. ಆದ್ರೆ ಎಡೂರಪ್ಪನಂತ ರಾಜಕಾರಣಿ ಅನಿವಾರ್ಯ. ಅವರ ಲೀಡರ್‌ಶಿಪ್ಪಲ್ಲೇ ಉಪಚುನಾವಣೆ ನೆಡಿಲಿ ಅಂತ ಹೇಳಿ ಆ ತಿರುಬೋಕಿ ಈಶ್ವರಪ್ಪನಿಂದ ನೋಟಿಸ್ ತಗತ್ತಿರಲ್ಲಾ ನೀವ್ಯಂತ ಗತಿಗೆಟ್ಟ ರಾಜಕಾರಣಿ?"

"ಈಶ್ವರಪ್ಪನವರನ್ನು ತಿರುಬೋಕಿ ಅನ್ನಬೇಡಿ."

"ಅಂಗಾದ್ರೆ ನಿಮ್ಮನ್ನೇ ಅನ್ನಲ್ಲಾ? ಅಲ್ಲ ಸಾರ್, ನೀವು ಕೊಟ್ಟಂತ ಹೇಳಿಕೆಗಿಂತ್ಲೂ ಕೆಟ್ಟ ಹೇಳಿಕೆಗಳನ್ನು ಬಿಜೆಪಿ ಅಧಿಕಾರಕ್ಕೆ ಬಂದಾಗಿನಿಂದ್ಲೂ ಆ ರೆಡ್ಡಿ ರಾಮುಲುಗಳು ಹೇಳಿಕೊಂಡು ಬಂದ್ರು. ಒಬ್ಬ ಕಂಸ ಅಂದ. ಒಬ್ಬ ನಾಮರ್ಧ ಅಂದ. ಇನ್ನೊಬ್ಬ ಶೋಭಾ ಕರಂದ್ಲಾಜೆ ಸೆರೆಗಿನ ಮರೆ ರಾಜಕಾರಣ ಅಂದ, ಆ ವರ್ತೂರು ಪ್ರಕಾಶ್‌ನಂತೂ ಸದಾನಂದ ಗೌಡ ಹೆಣ್ಣೂ ಅಲ್ಲ ಗಂಡೂ ಅಲ್ಲ ಹಲ್ಲುಗಿಸಗ ಅಂದ. ಅಂತ ಯಾರಿಗೂ ನೋಟಿಸ್ ಕೊಡದ ಈಶ್ವರಪ್ಪ, ನಿಮ್ಮಂತ ಮೌಲ್ಯಾಧಾರಿತ ಧೀಮಂತ ರಾಜಕಾರಣಿಗೆ ಕೊಟ್ನಲ್ಲ ಅಂತ ಬೇಜಾರಾಯ್ತು."

"ಮೌಲ್ಯಾಧಾರಿತ ಧೀಮಂತ ರಾಜಕಾರಣಿ ಅಂತ ವ್ಯಂಗ್ಯವಾಗಿ ಹೇಳೋದು ಬೇಡಿ. ನನಗೂ ಮಾತನಾಡಕ್ಕೆ ಬರುತ್ತೆ. ನಾನು ಜನತಾದಳದಲ್ಲಿದ್ದಾಗ ಮಾನ್ಯ ದೇವೇಗೌಡರು, ಬಿ.ಎಲ್. ಶಂಕರ್ ಕೊಡುತ್ತಿದ್ದ ತೊಂದ್ರೆ ಅನುಭವಿಸಕ್ಕಾಗದೆ ಕಾಂಗ್ರೆಸ್ಸಿಗೋದೆ. ನಂತರ ಕಾಂಗ್ರೆಸ್ಸಿಗರು ನನ್ನನ್ನು ತಾತ್ಸಾರ ಮಾಡಿ ಇವನ ಕತೆ ಮುಗಿತು ಅಂದ್ರು. ಹಾಗಾಗಿ ನಾನು ವಸ್ತುಶಃ ವಿರೋಧಿಸಿದ್ದ ಬಿಜೆಪಿಗೆ ಬರಬೇಕಾಯ್ತು. ಎಲ್ಲವೂ ಅನಿವಾರ್ಯ, ಆಕಸ್ಮಿಕ."

"ಬಿಜೆಪಿಗಳು ನಿಮ್ಮ ಸಾಲಾನೆಲ್ಲಾ ತೀರಿಸಿದರಂತೆ?"

"ನಾನು ಸಾಲಾನೇ ಮಾಡಿರಲಿಲ್ಲ."

"ಕಾರ್ಡ್ಸ್ ಆಡಿ ಆಡಿ ಮಾಡಿಕಂಡ ಸಾಲ ತೀರಿಸಿದ್ದಕ್ಕೆ ನೀವು ಬಿಜೆಪಿಗೆ ಮಾರಿಕಳದ ನೋಡಕ್ಕಾಗದೆ ನಿಮ್ಮ ಮಗಳೆ ನಿಮ್ಮನ್ನು ಮಾತನಾಡಿಸದೆ ಬಿಟ್ಟು ಅಂತ ಅವರ ಪಕ್ಕದ ಮನೆಯವರು ಹೇಳಿದ್ರು ಸಾರ್."

ಥೂತ್ತೇರಿ
• ಯಾಹೂ

"ಯಾವತ್ತೂ ಪಕ್ಕದ ಮನೆ ಮಾತನ್ನ ನಂಬಬೇಡಿ."

"ಅಯ್ಯೊ, ನಿಮ್ಮ ಎದುರುಗಡೆ ಮನೆ ಮಾತನ್ನೇ ಪರಿಗಣಿಸಿ ಹೇಳೋದಾದ್ರೆ ನೀವು ಕಷ್ಟಪಟ್ಟು ಚಿಕ್ಕಮಗಳೂರು ಜಿಲ್ಲೇಲಿ ಬಿಜೆಪಿ ಬೆಳೆಸಿದ್ರಿ. ಹಾಗೆ ತೀರ್ಥಹಳ್ಳಿಲೂ ಬಿಜೆಪಿ ಬೆಳೆಸಿದ್ರಿ. ಇದನ್ನ ಪರಿಗಣಿಸಿದ ಚಡ್ಡಿಗಳು ನಿಮ್ಮನ್ನ ಹಿಡಕೊಂಡು ಬಿಳಿ ಚಡ್ಡಿ ಬಿಚ್ಚಿ ಖಾಕಿ ಚಡ್ಡಿ ತೊಡಿಸಿದ್ರು. ಚುನಾವಣೆಲಿ ಗೆಲ್ಲಿಸಿದ್ರು. ಅವರ ಋಣಭಾರದ ಕಾರಣಕ್ಕೆ ನೀವು ತಲೆ ಕೆಟ್ಟ ಚಡ್ಡಿ ತರ ಮಾತಾಡ್ತಿರಿ ಅಂತ ಹೇಳ್ತರೆ. ಇದಕೇನೇಳ್ತೀರಿ?"


"ನೋಡಿ, ಯಾರು ಏನೇ ಹೇಳಿಕೊಳ್ಳಲಿ, ನಾನು ಈ ಸಂದರ್ಭದಲ್ಲಿ ಯಾರಿಗೂ ಉತ್ತರ ಕೊಡಲ್ಲ. ನನ್ನಂತ ಒಬ್ಬ ಅನುಭವೀ ರಾಜಕಾರಣಿನ ತಾತ್ಸಾರ ಮಾಡಿ ಮೂಲೆಗೆ ತಳ್ಳಿದಾಗ ಸುಮ್ಮನಿರಕ್ಕಾಗುತ್ತ?"

"ಅನುಭವಿ ರಾಜಕಾರಣಿ ಜನಗಳ ಜೊತೆಯಿದ್ರೆ ಯಾರೂ ಮೂಲೆಗೆ ತಳ್ಳಕ್ಕಾಗಲ್ಲ. ಐ.ಬಿ, ರೆಸಾರ್ಟು, ಕ್ಲಬ್ಬುಗಳಲ್ಲಿ ಕಾಲ ಕಳಿಯೋ ರಾಜಕಾರಣಿ ವಿಧಿ ಇಲ್ಲದೆ ಮನೆ ಸೇರತನೆ. ನಿಜವಾಗ್ಲು ನಿಮ್ಮಂತವರಿಗೆ ಸಲ್ಲಬೇಕಾದ ಸ್ಥಾನಮಾನಕ್ಕಿಂತ್ಲೂ ಹೆಚ್ಚಿನ ಸ್ಥಾನಮಾನ ನಿಮಗೆ ಸಿಕ್ಕಿದೆ. ಅರಸು ಸಂಪುಟದಲ್ಲಿ ನೀರಾವರಿ ಮಂತ್ರಿಯಾಗಿದ್ರಿ, ಹೆಗಡೆ ಅವಧಿಲಿ ಸ್ಪೀಕರ್ ಆಗಿದ್ರಿ, ಎಸ್ಸೆಂ ಕೃಷ್ಣನ ಸಂಪುಟದಲ್ಲಿ ಕಾನೂನು ಸಚಿವರಾಗಿದ್ರಿ, 2 ಬಾರಿ ಎಂಪಿಯಾಗಿದ್ರಿ. ನಿಮ್ಮ ಯೋಗ್ಯತೆಗೆ ಇಷ್ಟು ಮಾನ್ಯತೆ ಬಹಳ ದೊಡ್ಡದೆ ಆಗಿತ್ತು. ಆದ್ರಿಂದ ಮುಖಳಿ ಮುಚ್ಚಿಕೊಂಡು ಕಾಂಗ್ರೆಸ್ನಲ್ಲಿ ಇದ್ದು, ಬರೀ ಶಾಸಕರಾಗಿ, ಇದ್ದಬದ್ದ ಮಾನ ಕಾಪಾಡಿಕೊಳ್ಳದು ಬಿಟ್ಟು, ಆ ಈಶ್ವರಪ್ಪನಿಂದ ನೋಟಿಸ್ ತಗತ್ತಿರಲ್ಲ, ಬರೀ ಶಾಸಕರಾಗಿ, ಅಪರೂಪದ ರಾಜಕಾರಣಿಯಾಗಿ ಮಧ್ಯ ವಯಸ್ಸಿಗೇ ತೀರಿಕೊಂಡ ಸಮಾಜವಾದಿ ಗೋಪಾಲಗೌಡ್ರ ಕ್ಷೇತ್ರ ಪ್ರತಿನಿಧಿಸಿದ್ರಿ ನೀವು. ಅಲ್ವ ಸಾರ್?"

"!?"

"ಹಲೋ ಹಲೋ ಹಲೋ?"

ಥೂತ್ತೇರಿ!!!



ರೆಡ್ಡಿ ಗ್ಯಾಂಗ್ ಖಾರಾಪುಡಿ ಮಹೇಶನ ಕೊಲೆಗೆ ಸ್ಕೆಚ್?



ಜನಾರ್ದನ ರೆಡ್ಡಿಯ ಕುಂಡೆ ಮೇಲೊದ್ದು ಸಿಬಿಐನವರು ಅರೆಸ್ಟ್ ಮಾಡಿ ಎಳಕೊಂಡು ಹೋದರಲ್ಲವೆ. ಆ ಕ್ಷಣದಿಂದಲೇ ಮಹೇಶ್ ನಾಪತ್ತೆಯಾಗಿದ್ದಾನೆ. ಬಹುತೇಕ ಮಹೇಶನಿಗೆ ಸಿಬಿಐನವರ ಭಯಕ್ಕಿಂತ ರೆಡ್ಡಿ ಗ್ಯಾಂಗ್‌ನವರ ಮೇಲೆಯೇ ಜಾಸ್ತಿ ಅನುಮಾನವಿರುವಂತಿದೆ. ನಾಳೆ ತಾನೇನಾದರೂ ಅರೆಸ್ಟಾಗಿ ಸಿಬಿಐನವರಿಗೆ ರೆಡ್ಡಿಗಳ ಸಮಸ್ತ ಕಳ್ಳ ದಂಧೆಗಳ ಬಗ್ಗೆ ಬಾಯಿ ಬಿಟ್ಟುಬಿಡಬಹುದೆಂಬ ಡೌಟು ರೆಡ್ಡಿ ಕ್ಯಾಂಪಿಗೆ ಬಂದರೆ ಅವರು ತನ್ನನ್ನು ಉಳಿಸಲಾರರೆಂಬ ಭಯ ಖಾರಾಪುಡಿಗಿರುವಂತಿದೆ.

• ಪಾರ್ವತೀಶ

ಬಳ್ಳಾರಿಯ ಗಣಿಕಳ್ಳರಾದ ರೆಡ್ಡಿಗಳ ಬಲಗೈ ಬಂಟ ಖಾರಾಪುಡಿ ಮಹೇಶ್ ಒಂದೋ ಕೊಲೆಯಾಗಿದ್ದಾನೆ.....!

ಅಥವಾ

ಇನ್ನೇನು ಕೊಲೆಯಾಗಲಿದ್ದಾನೆ......!!

ಇಂಥದ್ದೊಂದು ಸುದ್ದಿ ಈಗ ಬಳ್ಳಾರಿಯ ತುಂಬಾ ಹರಿದಾಡುತ್ತಿದೆ. ಇಂತಹ ಸುದ್ದಿಗಳು ಆಧಾರವಿಲ್ಲದೆ ತೇಲುವುದೂ ಇಲ್ಲ. ಖಾರಾಪುಡಿ ಮಹೇಶನ ಹತ್ಯೆಯ ಸಾಧ್ಯತೆಗಳ ಬಗ್ಗೆ ಈಗ ಸುದ್ದಿ ಕೇಳಿಬರುತ್ತಿರುವುದಕ್ಕೂ ಕಾರಣವಿಲ್ಲದಿಲ್ಲ. ಕಳೆದ ಒಂದು ವಾರದಿಂದ ಖಾರಾಪುಡಿ ಮಹೇಶ್‌ನ ಪತ್ತೆಯಿಲ್ಲ!

ಮಹೇಶ್ ಸಿಬಿಐಗೆ ಹೆದರಿ ಎಲ್ಲಿಗೋ ಓಡಿಹೋಗಿದ್ದಾನೆಂದು ಕೆಲವರು ಹೇಳುತ್ತಿದ್ದಾರೇನೋ ಸರಿ.

ಆದರೆ,

ಖಾರಾಪುಡಿಯ ನಾಪತ್ತೆಗೆ ಇನ್ನೊಂದು ಆಯಾಮವೂ ಇದೆ.

ಗಣಿ ರೆಡ್ಡಿಗಳ ಹಾಗೂ ಬಳ್ಳಾರಿಯ ಇನ್ನಿತರ ಅಕ್ರಮ ಗಣಿ ದಂಧೆಕೋರರ ಡಾರ್ಲಿಂಗ್ ಆಗಿದ್ದ ಮಹೇಶ್ ರಿಸ್ಕ್ ಟ್ರಾನ್ಸ್‌ಪೋರ್ಟ್ ಹೆಸರಿನಲ್ಲಿ ಅಕ್ರಮ ಅದಿರು ಸಾಗಿಸುವ ದಂಧೆ ನಡೆಸುತ್ತಿದ್ದ. ಬೇಲೇಕೇರಿ ಬಂದರಿನಲ್ಲಿ ಲೋಕಾಯುಕ್ತರು ಸೀಜ್ ಮಾಡಿಟ್ಟಿದ್ದ 5 ಲಕ್ಷ ಟನ್ ಅದಿರನ್ನು ಕದ್ದು ಹೊರದೇಶಕ್ಕೆ ಸಾಗಿಸಲು ಕೈಜೋಡಿಸಿದ್ದ. ಸ್ವಸ್ತಿಕ್ ನಾಗರಾಜ್ ಎನ್ನುವ ಇನ್ನೊಬ್ಬ ಖದೀಮನ ಜೊತೆ ಸೇರಿ ಖಾರಾಪುಡಿ ಮಹೇಶ್ ಅದೆಂತಾ ಅಕ್ರಮ ಅದಿರು ಸಾಗಾಣಿಕ ದಂಧೆ ಬೆಳೆಸಿದ್ದನೆಂದರೆ ಅವರ ಪ್ರತಿ ವರ್ಷದ ವಹಿವಾಟೇ ಇನ್ನೂರು ಕೋಟಿ ರೂಪಾಯಿ ಮೀರುತ್ತಿತ್ತು.


ಕರ್ನಾಟಕ ಲೋಕಾಯುಕ್ತರ ತನಿಖಾ ವರದಿಯಲ್ಲಿ ಈ ಮಹೇಶ್ ಹಾಗೂ ಸ್ವಸ್ತಿಕ್ ನಾಗರಾಜ ನಡೆಸುತ್ತಿದ್ದ ದಂಧೆಗಳ ಬಗ್ಗೆ ಪುರಾವೆ ಸಹಿತದ ನಿರೂಪಣೆಗಳಿವೆ. ಕೇವಲ ಲೋಕಾಯುಕ್ತ ಮಾತ್ರವಲ್ಲದೆ ಸಿಬಿಐ ತನಿಖೆಯ ನಜರಿಗೂ ಖಾರಾಪುಡಿ ಮಹೇಶ ಬಿದ್ದಿದ್ದಾನೆ.

ಜನಾರ್ದನ ರೆಡ್ಡಿ ಅರೆಸ್ಟಾಗಿ ವಿಚಾರಣೆ ಎದುರಿಸಬೇಕಿರುವ ಈ ಹಂತದಲ್ಲಿ, ಕರ್ನಾಟಕ ಲೋಕಾಯುಕ್ತರ ತನಿಖಾ ವರದಿಯು ಸುಪ್ರೀಂಕೋರ್ಟ್‌ನ ಕೈ ಸೇರಿರುವ ಇಂಥ ಗಳಿಗೆಯಲ್ಲಿ ಮಹೇಶನ ನಾಪತ್ತೆ ಘಟನೆ ಅಸಹಜವಾಗಿ ಕಾಣುತ್ತಿದೆ.

ಇದೇ ಸಮಯದಲ್ಲಿ ಜನಾರ್ದನ ರೆಡ್ಡಿಯ ಖಾಸಾ ಆಡಿಟರ್ ರೇಣುಕಾ ಎಂಬಾಕೆಯೂ ಅಡ್ರೆಸ್ ಇರದೆ ಕಾಣೆಯಾಗಿರುವುದನ್ನೂ ನೋಡಿದರೆ ಖಾರಾಪುಡಿ ಮಹೇಶನ ಗತಿ



ಪದ್ಮಾವತಿ





ಟಪಾಲ್ ಗಣೇ



ಕುಮಾರ

ಏನಾಗಿದೆಯೋ ಎನ್ನುವ ಅನುಮಾನ ಬಾರದಿರದು. ಮಹೇಶನ ಮುಖ ಜನರಿಗೆ ಕೊನೆಯ ಸಾರಿ ಕಾಣಿಸಿದ್ದು ಶ್ರೀರಾಮುಲು ಶಾಸಕಗಿರಿಗೆ ರಾಜೀನಾಮೆ ಕೊಟ್ಟಾಗ. ಅವತ್ತು ರಾಮುಲನ ಬೆನ್ನಹಿಂದೆಯೇ ನಿಂತಿದ್ದ ದಾಂಡಿಗ ಮಹೇಶ ಆ ನಂತರ ಯಾರ ಕಣ್ಣಿಗೆ ಬಿದ್ದಿಲ್ಲ. ಅದರ ಮಾರನೆಯ ದಿನವೇ ಜನಾರ್ದನ ರೆಡ್ಡಿಯ ಕುಂಡೆ ಮೇಲೊದ್ದು ಸಿಬಿಐನವರು ಅರೆಸ್ಟ್ ಮಾಡಿ ಎಳಕೊಂಡು ಹೋದರಲ್ಲವೆ. ಆ ಕ್ಷಣದಿಂದಲೇ ಮಹೇಶ್ ನಾಪತ್ತೆಯಾಗಿದ್ದಾನೆ. ಬಹುತೇಕ ಮಹೇಶನಿಗೆ ಸಿಬಿಐನವರ ಭಯಕ್ಕಿಂತ ರೆಡ್ಡಿ ಗ್ಯಾಂಗ್‌ನವರ ಮೇಲೆಯೇ ಜಾಸ್ತಿ ಅನುಮಾನವಿರುವಂತಿದೆ. ನಾಳೆ ತಾನೇನಾದರೂ ಅರೆಸ್ಟಾಗಿ ಸಿಬಿಐನವರಿಗೆ ರೆಡ್ಡಿಗಳ ಸಮಸ್ತ ಕಳ್ಳ ದಂಧೆಗಳ ಬಗ್ಗೆ ಬಾಯಿ ಬಿಟ್ಟುಬಿಡಬಹುದೆಂಬ ಡೌಟು ರೆಡ್ಡಿ ಕ್ಯಾಂಪಿಗೆ ಬಂದರೆ ಅವರು ತನ್ನನ್ನು ಉಳಿಸಲಾರರೆಂಬ ಭಯ ಖಾರಾಪುಡಿಗಿರುವಂತಿದೆ.



ಇದು ಕೇವಲ ಕುತರ್ಕವಲ್ಲ. ಕಳೆದ ನಾಲ್ಕಾರು ವರ್ಷಗಳಲ್ಲಿ ರೆಡ್ಡಿ ಗ್ಯಾಂಗ್‌ಗೆ ಎದುರಾಗಿದ್ದ ಅನೇಕರ ಕೊಲೆಗಳಾಗಿರುವುದನ್ನು ಸ್ವತಃ ಖಾರಾಪುಡಿ ಮಹೇಶನೇ ಕಣ್ಣಾರೆ ನೋಡಿದ್ದಾನೆ. ಕೆಲವು ಹಲ್ಲೆ ಕೊಲೆ ಯತ್ನದ ಪ್ರಕರಣಗಳಲ್ಲಿ ಮಹೇಶನೇ ಭಾಗಿಯೂ ಆಗಿದ್ದಾನೆ.

ಕೊಲೆ-ಕೊಲೆಯತ್ನಗಳ ಸರಮಾಲೆ

ಕರ್ನಾಟಕದ ಬೇರೆ ಪ್ರಾಂತ್ಯಗಳಲ್ಲಿ ನಡೆಯುವ ಕೊಲೆಗಳಿಗೂ ಬಳ್ಳಾರಿ ಸೀಮೆಯಲ್ಲಿ ಜರುಗುವ ಹತ್ಯೆಗಳಿಗೂ ವ್ಯತ್ಯಾಸಗಳಿವೆ. ಬಳ್ಳಾರಿಯಲ್ಲಿ ಆಗಿಂದಾಗ್ಗೆ ನಡೆಯುವ ಹತ್ಯೆ, ನಾಪತ್ತೆ ಪ್ರಕರಣಗಳ ಹಿನ್ನಲೆಯಲ್ಲಿ ಗಣಿ ಮಾಫಿಯಾದ ಸಂಚು ಇದ್ದೇ ಇರುತ್ತದೆ.

ತೀರಾ ಇತ್ತೀಚೆಗೆ ನಡೆದ ಪೊಲೀಸ್ ರಾಮಚಂದ್ರನ ಕೊಲೆಯಿಂದ ಹಿಡಿದು ವರ್ಷದ ಹಿಂದೆ ನಡೆದ ಲಾರಿ ಮಾಲೀಕ ಸುಧಾಕರನ ಕೊಲೆಯತನಕ ಯಾವುದರಲ್ಲೇ ಆಗಲಿ ಅಲ್ಲಿ ಗಣಿ ನೆರಳಿದ್ದೇ ಇತ್ತು.

2010 ರ ಫೆಬ್ರವರಿ ನಾಲ್ಕರಂದು ಬಳ್ಳಾರಿ ಸಿಟಿಯೊಳಗೆ ಕಾರ್ಪೊರೇಟರ್ ಪದ್ಮಾವತಿಯ ಹತ್ಯೆಯಾಯಿತು. ಆಕೆ ಸೋಮಶೇಖರ ರೆಡ್ಡಿ ಎಂಬುವನ ಆಪ್ತ ಸಖಿಯಾಗಿದ್ದಳೆಂಬ ಕಾರಣಕ್ಕೇನೆ ಕರ್ನೂಲಿನಿಂದ ಸುಪಾರಿ ಕೊಲೆಗಾರರನ್ನು ಕರೆಸಿ ಕೊಲ್ಲಿಸಲಾಗಿತ್ತು.

ನಂತರ ಇದರ ತನಿಖೆ ಸಿಓಡಿಗೆ ಹೋಯಿತಾದರೂ ಯಾರನ್ನೂ ಅರೆಸ್ಟ್ ಮಾಡಲಾಗಲಿಲ್ಲ.

2010 ರ ಆಗಸ್ಟ್ ತಿಂಗಳಲ್ಲಿ ಗಣಿ ಧಣಿಗಳ ಕಷ್ಟ ನಿವಾರಿಸಲು 'ಶಿಶು ಬಲಿ' ಯೊಂದು ನಡೆಯಿತು. ಇದರ ತನಿಖೆಯೂ ಆಗಲಿಲ್ಲ. 2010 ರ ಜುಲೈನಲ್ಲಿ ಅದಿರು ಸಾಗಾಣಿಕೆ ದಂಧೆಯಲ್ಲಿದ್ದ ಲಾರಿಗಳ ಮಾಲೀಕ ಸುಧಾಕರ್ ಎಂಬುವನನ್ನು ಗಣಿ ಮಾಫಿಯಾಗಳು ಕೊಂದು ಹಾಕಿದರು.

ರಿಸ್ಕ್ ಟ್ರಾನ್ಸ್‌ಪೋರ್ಟ್‌ನಲ್ಲಿದ್ದ ಪೈಪೋಟಿಯೇ ಇದಕ್ಕೆ ಕಾರಣವಾಗಿತ್ತು.

ಇವೆಲ್ಲಾ ನಡೆದ ಹತ್ಯೆಗಳಾದರೆ ಕೊಲೆ ಪ್ರಯತ್ನಗಳ ಸರಮಾಲೆಯೇ ಬಳ್ಳಾರಿಯಲ್ಲಿ ನಡೆದಿವೆ.

ಸಿಬಿಐನ ಲಕ್ಷ್ಮಿನಾರಾಯಣ್ ಬಗ್ಗೆ



"I will take this to a logical end....."

-ಇದು ರೆಡ್ಡಿಯನ್ನು ಅರೆಸ್ಟ್ ಮಾಡಿದ ಸಿಬಿಐನ ಡಿಐಜಿ ಲಕ್ಷ್ಮಿನಾರಾಯಣರ ಖಡಕ್ ಮಾತು.

2009ರಿಂದಲೇ ರೆಡ್ಡಿ ಗ್ಯಾಂಗ್‌ನ ಕಳ್ಳದಂಧೆಯ ಬಗ್ಗೆ ತನಿಖೆ ನಡೆಸುತ್ತಿರುವ ಲಕ್ಷ್ಮಿನಾರಾಯಣ್ ಬಹಳ ಸರಳ ಮನುಷ್ಯ. ಆಂಧ್ರದ ಕರ್ನೂಲ್ ಜಿಲ್ಲೆಯ ನಂದಿಕೊತ್ತಕೂರಿನವರು ಈತನ carrer track record ರೋಚಕವಾಗಿದೆ.

ಸತ್ಯಂ ಕಂಪ್ಯೂಟರ್ಸ್‌ನ ರಾಮಲಿಂಗರಾಜುನ ವಂಚನೆಗಳನ್ನು ಪತ್ತೆಹಚ್ಚಿ ಜೈಲಿಗೆ ಕಳುಹಿಸಿದ್ದು ಇದೇ ಲಕ್ಷ್ಮಿನಾರಾಯಣ್. ಇಡೀ ಆಂಧ್ರವನ್ನೇ ನಡುಗಿಸಿದ ತೆಲುಗು ದೇಶಂ ಶಾಸಕ, ಮಾಜಿ ನಕ್ಸಲೈಟ್ ಪರಿಟಾಲ್ ರವಿಯ ಕೊಲೆ ಕೇಸಿನ ತನಿಖೆಯಲ್ಲೂ ಲಕ್ಷ್ಮಿನಾರಾಯಣ್ ಇದ್ದರು. ಆಂಧ್ರದ ಬಹುದೊಡ್ಡ ರೈಲ್ವೆ ಹಗರಣದ ತನಿಖೆ ನಡೆದಾಗಲೂ ವಂಚಕರನ್ನು ಪತ್ತೆಹಚ್ಚಿ ಜೈಲಿಗಟ್ಟಿದವರು ಇದೇ ಲಕ್ಷ್ಮಿನಾರಾಯಣ.

2009ರಲ್ಲಿ ಲಕ್ಷ್ಮೀನಾರಾಯಣ್ ಓಬಳಾಪುರಂ ಗಣಿ ವಂಚನೆಯ ತನಿಖೆ ಪ್ರಾರಂಭಿಸಿದಾಗ ರೆಡ್ಡಿಗಳು ಅವರಿಗೆ ಲಂಚದ ಆಮಿಷ ತೋರಿಸಲು ನೋಡಿ ವಿಫಲರಾಗಿದ್ದರು.


ಈ ಜನಾರ್ದನ ರೆಡ್ಡಿ ಒಮ್ಮೆ "ನಾನು ಗೋಲಿ ಆಡುವ ವಯಸ್ಸಿನಿಂದಲೂ ಯಾವುದರಲ್ಲೂ ಸೋತಿಲ್ಲ" ಎನ್ನುತ್ತಿದ್ದ. ಅಂತಾ ಘಟಿಂಗ ವಂಚಕನನ್ನು ಜೈಲಿನಲ್ಲಿ ಮುದ್ದೆ ಮುರಿಯುವ ಸ್ಥಿತಿಗೆ ತಂದು ನಿಲ್ಲಿಸಿರುವ ಸಿಬಿಐನ ಲಕ್ಷ್ಮಿನಾರಾಯಣ್ ಇವತ್ತು ಹೀರೋ....!

...010 ರ ಮಾರ್ಚ್ 29 ರಂದು ...ಕೋರ್ಟ್ ನೇಮಿಸಿದ್ದ Central Em-...ered Committee ಬಳ್ಳಾರಿಗೆ ...ದ್ದಾಗಲೇ ಟಪಾಲ್ ಗಣೇಶ್ ಕೊಲೆಗೆ ಪ್ರಯತ್ನ ...ತು. ಅವತ್ತು ಖುದ್ದು ಇದೇ ಖಾರಾಪುಡಿ ...ಶ್ ಹಾಗೂ ಸ್ವಸ್ತಿಕ್ ನಾಗರಾಜ್ ಕ್ರಿಮಿನಲ್‌ಗಳ ... ಕಟ್ಟಿಕೊಂಡು ಬಂದು ದಾಳಿ ನಡೆಸಿದ್ದರು. ...ರೆಡ್ಡಿ ಎಂಬ ಹುಡುಗನೊಬ್ಬ ಆಗ ಸಿಕ್ಕಿಬಿದ್ದಿದ್ದ. ...ವಿನ ಪತ್ರಕರ್ತ ಕುಮಾರ್ ರೈತನ ಮೇಲೂ ...ಮಾಗಿತ್ತು.

...010 ರ ಫೆಬ್ರವರಿಯಲ್ಲಿ ಆರಣ್ಯಾಧಿಕಾರಿ ...ಬಿಲ್ ಹತ್ಯೆಗೆ ಕಾರವಾರದ ಬಳಿ ಒಂದು ವಿಫಲ ...ಕ್ಷ ನಡೆಯಿತು. ಬೇಲೆಕೇರಿ ಬಂದರಿಗೆ ಅದಿರು ...ಮಾಗಿಸಿದ್ದನ್ನು ಪತ್ತೆಹಚ್ಚಲು ಗೋಕುಲ್ ...ಆಯುಕ್ತ ತಂಡದ ಡಾ. ಯು.ವಿ. ಸಿಂಗ್‌ರಿಗೆ ...ರೆಂಬ ಸಿಟ್ಟಿಗೆ ಗೋಕುಲ್‌ರನ್ನೇ ಮುಗಿಸಲು ...ಗಣಿ ಮಾಫಿಯಾಗಳು ಯತ್ನಿಸಿದ್ದರು.

...ದಕ್ಕೂ ಮುನ್ನ 2009 ರ ಡಿಸೆಂಬರ್‌ನಲ್ಲಿ ...ಪುರಂ ಕಂಪನಿಯಲ್ಲಿ ಕೆಲಸಕ್ಕಿದ್ದು ನಂತರ ...ಬಂದಿದ್ದ ಆಂಜನೇಯ ಎಂಬುವರ ಹತ್ಯೆಗೆ ...ನಲ್ಲಿ ವಿಫಲ ಪ್ರಯತ್ನವೊಂದು ಆಯಿತು. ಈ ...ನೇಯನು ಜನಾರ್ದನ ರೆಡ್ಡಿಯ ಅಕ್ರಮಗಳ ಬಗ್ಗೆ ...ಸಾಕ್ಷಿ ಹೇಳುವುದಾಗಿ ಸಿಬಿಐಗೆ ಪತ್ರ ...ದ್ದನ್ನು ನೋಡಿ ಹೆದರಿದ ಗಣಿ ಕಳ್ಳರು ...ನೇಯಲುನನ್ನೇ ಮುಗಿಸಲು ನೋಡಿದ್ದರು.

...ನ್ನೊಮ್ಮೆ ಸ್ವಸ್ತಿಕ್ ನಾಗರಾಜ್ ಬೆಂಗಳೂರಿನ ...ಜನೇ...



...ಟಿಯೊಬ್ಬಳನ್ನು ಮದುವೆಯಾಗುವುದಾಗಿ ... ಕೈಕೊಟ್ಟಾಗ ಆಕೆ ಪೊಲೀಸರಿಗೆ ಕಂಪ್ಲೇಂಟ್ ...ವ ಹಂತ ಬಂದಾಗ ಆಕೆಯನ್ನು ಕೊಲ್ಲುವ ...ನಡೆದಿತ್ತು. ಇದರ ದೂರೊಂದು ಈಗಲೂ ...ದ ಠಾಣೆಯಲ್ಲಿದೆ.

...ಖಾರಾಪುಡಿ ಮಹೇಶ ಇವೆಲ್ಲವನ್ನೂ ಕಣ್ಣಾರೆ ...ದ್ದಾನೆ. ಮೊದಲಾಗಿದ್ದರೆ ಗಣಿ ರೆಡ್ಡಿಗಳು ಏನು ...ವರೂ ಯಾರೂ ಕೇಳುವವರಿರಲಿಲ್ಲ, ಹಾಗಾಗಿ ... ಕೊಲೆಯತ್ನಗಳೆಲ್ಲ ಪಿಕ್‌ಪಾಕೆಟ್ ಲೆವೆಲ್ಲಿನ ...ಗಳಂತೆ ನಡೆಯುತ್ತಿದ್ದವು. ಬಳ್ಳಾರಿ ಪೊಲೀಸರು ... ಮಾಡದೆ ದುಡ್ಡು ತಿಂದು ತಿಪ್ಪೇ ...ತ್ತಿದ್ದರು. ಶ್ರೀರಾಮುಲು ಆರೋಗ್ಯ ...ಸಾಗಿದ್ದಾಗಲೇ 2010 ರ ಜುಲೈ 14 ನೇ ...ಬು ಬೆಂಗಳೂರಿನ ಪರಪ್ಪನ ಅಗ್ರಹಾರ ಜೈಲಿಗೆ ... ಕುಖ್ಯಾತ ಕ್ರಿಮಿನಲ್‌ಗಳಾದ ಸೈಕಲ್ ರವಿ, ...ಸರೆ ಮಂಜ ಮುಂತಾದವರೊಡನೆ ಚರ್ಚಿಸಿ ...ದ್ದ.

...ದ್ಯಾವ ಡೀಲೋ ಯಾರಿಗೆ ಗೊತ್ತಾಗಬೇಕು

...ಖಾರಾಪುಡಿಗೆ ಗಣಿ ಮಾಫಿಯಾದ ಈ ...ಮುಖಗಳೆಲ್ಲಾ ತಿಳಿದಿದ್ದೇ ಆಗಿದೆ. ಈ ಅಕ್ರಮ ...ದಂಧೆಯಲ್ಲಿ ಬಿಕ್ಕಟ್ಟು ಬಂದಾಗ, ದೊಡ್ಡವರ ...ಹೋಗುವ ಪ್ರಸಂಗ ಬಂದಾಗ ಕೆಳ ...ಸವರು ಒಂದೋ ಕೊಲೆ ಮಾಡಬೇಕು ಇಲ್ಲಾ ...ಯಾಗಬೇಕೆಂಬ ಸನ್ನಿವೇಶ ಬಂದೇ ಬರುತ್ತವೆ. ...ಖಾರಾಪುಡಿ ಮಹೇಶ ನಾಪತ್ತೆಯಾದರೆ ...ಲಾಭ ಆಗುವುದು ಈಗ ಸಿಬಿಐಗೆ, ಸಿಕ್ಕಿಬಿದ್ದಿರುವ ...ವರಿಗೆ, ಅಕಸ್ಮಾತ್ ಮಹೇಶ್ ಸಿಬಿಐಗೆ ...ಮ್ಮ ಎಲ್ಲಾ ರಹಸ್ಯಗಳನ್ನು ಒದರಿದರೆ ಈ ...ಖೋರರಿಗೆ ಜೈಲೇ ಖಾಯಂ ಆಗುವ ...ಗಳಿವೆ. ಖಾರಾಪುಡಿ ಮಹೇಶನ ನಾಪತ್ತೆ ...ಈಗ ಕುತೂಹಲಕ್ಕೆ ಕಾರಣವಾಗಿದೆ.

...ನಾಪತ್ತೆಯಾಗಿಲ್ಲ" ಎಂದು ಖಾರಾಪುಡಿಯೇ ...ಹೊರತು ಅವನ ನಾಪತ್ತೆ ಪ್ರಕರಣ ...ಯುವುದಿಲ್ಲ, ಒಂದು ವೇಳೆ ಅವನು ನಾಳೆ ...ಹೇಳಿಕೆ ಕೊಟ್ಟರೂ ಸಹ ನಾಡಿದ್ದು ...ಯಾಗಲಾರ ಎಂಬುದು ಗ್ಯಾರಂಟಿಯಾಗಿ ...ಗಿದೆ.

ಆಡಿಟರ್ ರೇಣುಕಾ ನಾಪತ್ತೆ



ರೇಣುಕಾ ಜೆ. ಆಚಾರ್ಯ ಅಂತ ಈಕೆಯ ಪೂರ್ತಿ ಹೆಸರು.

ಮೂಲತಃ ಬಳ್ಳಾರಿಯವರಾದ ರೇಣುಕಾ ರೆಡ್ಡಿ ಗ್ಯಾಂಗ್‌ನ ಸಮಸ್ತ ಹಣಕಾಸು ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದ ಚಾರ್ಟರ್ಡ್ ಅಕೌಂಟೆಂಟ್. ಕೆಲ ವರ್ಷ ಬಳ್ಳಾರಿಯಲ್ಲಿದ್ದ ರೇಣುಕಾ ಇತ್ತೀಚೆಗೆ ಬೆಂಗಳೂರಿನ ಎಂ.ಜಿ. ರಸ್ತೆಯ ಬಾರ್ಟನ್ ಸೆಂಟರ್‌ನಲ್ಲಿ ರೇಣುಕಾ ಅಂಡ್ ಕೋ ಹೆಸರಿನ ಸ್ವಂತ ಆಫೀಸ್ ಮಾಡಿಕೊಂಡಿದ್ದರು.

ರೆಡ್ಡಿ ಸಾಮ್ರಾಜ್ಯದ ಸಮಸ್ತ ವ್ಯವಹಾರ, ಒಳವ್ಯವಹಾರಗಳನ್ನೆಲ್ಲಾ ತಿಳಿದಿದ್ದ ಇಂತಾ ರೇಣುಕಾ ಈಗ ಕಾಣೆಯಾಗಿದ್ದಾರೆ!

ಕರ್ನಾಟಕ ಲೋಕಾಯುಕ್ತರು ರೆಡ್ಡಿಯ ಕಳ್ಳ ದಂಧೆಗಳ ಬಗ್ಗೆ ವರದಿ ನೀಡಿರುವಾಗಲೇ, ಅತ್ತ ಸಿಬಿಐ ರೆಡ್ಡಿಯನ್ನು ಅರೆಸ್ಟ್ ಮಾಡಿ ಅವನ ದೇಶ-ವಿದೇಶಗಳ ಹಣಕಾಸು ಡೀಲಿಂಗ್‌ಗಳ ಬಗ್ಗೆ ತನಿಖೆ ಆರಂಭಿಸಿರುವಾಗಲೇ ರೇಣುಕಾ ಕಾಣೆಯಾಗಿರುವುದು ಕುತೂಹಲಕಾರಿಯಾಗಿದೆ.

ಕೆಲವರ ಪ್ರಕಾರ ಆಕೆ ಇಂಡೋನೇಷಿಯಾಗೆ ಹೋಗಿಬಿಟ್ಟಿದ್ದಾರೆ ಎನ್ನಲಾಗಿದೆ.

ಆದರೆ ರೆಡ್ಡಿಯ ವಂಚನೆಗಳ ಆಳಅಗಲಗಳನ್ನು ಲೆಕ್ಕಹಾಕಿದರೆ ಈ ಪ್ರಕರಣದಲ್ಲಿ ರೇಣುಕಾರ ಸಾಕ್ಷ್ಯ-ಹೇಳಿಕೆಗಳು ಅತ್ಯಂತ ನಿರ್ಣಾಯಕವಾಗುವ ಸಾಧ್ಯತೆಗಳಿವೆ. ಹಾಗಾಗಿ ಆ ಕಾರಣದಿಂದಲೇ ರೇಣುಕಾರ ಪ್ರಾಣಕ್ಕೇ ಈಗ ಆಪತ್ತು ಬಂದಿರುವ ಸಾಧ್ಯತೆಯೂ ಇರಬಹುದು. ಆ ಕಾರಣದಿಂದಲೇ ಈಗ ಸಿಬಿಐ ಅಥವಾ ರೆಡ್ಡಿ ಗ್ಯಾಂಗ್ ಇವರಿಬ್ಬರ ಕೈಗೂ ಸಿಗದೆ ರೇಣುಕಾ ತಲೆ ಮರೆಸಿಕೊಂಡಿದ್ದಾರೆ ಎನ್ನುವ ರೂಮರ್‌ಗಳೂ ತೇಲಾಡುತ್ತಿವೆ.

ರೇಣುಕಾ ಹಿನ್ನೆಲೆ

ಬಳ್ಳಾರಿ ಟೌನಿನ ಬ್ರಾಹ್ಮಣ ಕುಟುಂಬಕ್ಕೆ ಸೇರಿದ ರೇಣುಕಾ ಬಿ.ಕಾಂ ಪದವೀಧರೆ. ಮೊದಲು ಗುರುಪ್ರಸಾದ್ ಎಂಬುವರೊಡನೆ ಆಕೆಗೆ ಮದುವೆಯಾಗಿತ್ತು. ಆತ ನಂತರ ತೀರಿಕೊಂಡ. ರೇಣುಕಾ 1996 ರ ಸುಮಾರಿಗೆ ಬೆಂಗಳೂರಿಗೆ ಬಂದರು. ನಂತರ ಆಕೆ ಡಾ. ವಿಕ್ರಮ್ ರಾಜ್ ಎಂಬುವನೊಡನೆ ಸಂಸಾರ ನಡೆಸಲು ಪ್ರಯತ್ನಿಸಿದರೆಂದು ಹೇಳಲಾಗಿದೆ. ಅವನಿಂದ ಸುಸ್ಮಿ ಎಂಬ ಹೆಣ್ಣು ಮಗು ಆಯಿತೆಂದು ಸ್ವತಃ ರೇಣುಕಾ ಬರೆದಿರುವ ಪತ್ರ ಇಂಟರ್‌ನೆಟ್‌ನಲ್ಲೇ ಕಾಣಸಿಗುತ್ತದೆ. ಇಂಟರ್‌ನೆಟ್‌ನಲ್ಲಿ ಈ ವಿಚಾರ ಯಾಕೆ ತೇಲಿದೆಯೆಂದರೆ ವಿಶ್ವಸಂಸ್ಥೆಯ ಪರಿಸರ ರಕ್ಷಣೆ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದ ರೇಣುಕಾಳ ಗಂಡ ಡಾ. ವಿಕ್ರಮ್ ರಾಜ್ ಒಬ್ಬ ವುಮೆನೈಸರ್ ಎಂದು ಅವನಿಂದ ವಂಚನೆಗೊಳಗಾದ ಕೆಲವು ಮಹಿಳೆಯರು ಜಗಳವಾಡಿದ್ದರು. ಆ ಕಿತ್ತಾಟದಲ್ಲಿ ಮಧ್ಯೆ ಪ್ರವೇಶಿಸಿದ್ದ ರೇಣುಕಾ ತನ್ನ ಹಾಗೂ ವಿಕ್ರಮ್ ರಾಜ್ ನಡುವಿನ ವಿಚಾರ ಹೇಳಿಕೊಂಡಿದ್ದಾರೆ.

ಅದಿರಲಿ, ಬಿಡಿ,

ಇತ್ತ ಬೆಂಗಳೂರಿಗೆ ಬಂದ ರೇಣುಕಾ ಮೊದಲಿಗೆ ವಸಂತನಗರದಲ್ಲಿ ಆನಂತರ ಎಂ.ಜಿ. ರೋಡಿನ ಬಾರ್ಟನ್ ಸೆಂಟರ್‌ನಲ್ಲಿ ರೇಣುಕಾ ಅಂಡ್ ಕೋ ಎನ್ನುವ ಚಾರ್ಟೆರ್ಡ್ ಅಕೌಂಟೆಂಟ್ ಆಫೀಸ್ ತೆರೆದರು. ಆಕೆಗೆ ಸೀಮಾ ಷಾ ಎನ್ನುವ ಪಾರ್ಟನರ್ ಕೂಡಾ ಇದ್ದಾರೆ. ಇವರಲ್ಲದೆ ಈ ಆಡಿಟರ್ ಆಫೀಸಿನಲ್ಲಿ ಕಿರಣ್‌ಕುಮಾರ್ ಜೈನ್, ರಾಮಾ ಶರ್ಮ, ಬಿಬೇಕಾನಂದ ಪಾಣಿ, ಕೇಶ ದುಬೆ ಹಾಗೂ ವಿನೋದ್ ಕುಮಾರ್ ಎಂಬ ಸಿಬ್ಬಂದಿ ಇದ್ದಾರೆ.

ಹಾಲಿ ರೇಣುಕಾರ ಕಂಪನಿಗೆ ಬಳ್ಳಾರಿಯ ಅಕ್ಕಸಾಲಿಗರ ಕಾಲನಿಯಲ್ಲಿ, ಬೆಂಗಳೂರಿನ ಎಂ.ಜಿ. ರೋಡಿನಲ್ಲಿ ಹಾಗೂ ಒರಿಸ್ಸಾದ ಕಟಕ್‌ನಲ್ಲೂ ಶಾಖಾ ಕಚೇರಿಗಳಿವೆ. ಈ ಕಂಪನಿ ಪ್ರಧಾನವಾಗಿ ಗಣಿ ದಂಧೆಯಲ್ಲಿರುವ ವ್ಯಾಪಾರಿಗಳ ಲೆಕ್ಕಪತ್ರ ವ್ಯವಹಾರ ನೋಡಿಕೊಳ್ಳುವ ಕೆಲಸ ಮಾಡುತ್ತಿವೆ.

ಈ ಲೆಕ್ಕದಲ್ಲಿ ರೇಣುಕಾ ಅಂಡ್ ಕಂಪನಿಯ ಬಹಳ ಮುಖ್ಯವಾದ ಗಿರಾಕಿಗಳೆಂದರೆ ಬಳ್ಳಾರಿಯ ರೆಡ್ಡಿ ಗ್ಯಾಂಗ್ ಆಗಿತ್ತು.

ಆದರೆ ರೇಣುಕಾ ಹಾಗೂ ರೆಡ್ಡಿಗಳ ನಡುವಿನ ವ್ಯವಹಾರಿಕ ಹಾಗೂ ವೈಯಕ್ತಿಕ ಪರಿಚಯಗಳು ಗಣಿ ದಂಧೆಗೂ ಮೊದಲಿನಿಂದಲೂ ಇದ್ದಿರುವ ಸಾಧ್ಯತೆಗಳಿವೆ.

ಯಾಕೆ ಗೊತ್ತೆ?

ರೇಣುಕಾ ಎನ್ನುವ ಈ ಸರ್ವೇಸಾಧಾರಣ ಆಡಿಟರ್‌ರನ್ನು ರೆಡ್ಡಿಗಳು ತಮ್ಮ ಬ್ರಹ್ಮಿಣಿ ಸ್ಟೀಲ್ಸ್ ಲಿಮಿಟೆಡ್ ಕಂಪನಿಯ ಬೋರ್ಡ್ ಆಫ್ ಡೈರೆಕ್ಟರ್ ಆಗಿ ತೆಗೆದುಕೊಂಡಿದ್ದರು.

ಇದನ್ನು ಕೊಂಚ ವಿಶ್ಲೇಷಿಸಿ.

ರೆಡ್ಡಿ ಗ್ಯಾಂಗಿನ ಅತ್ಯಂತ ಮಹತ್ವಾಕಾಂಕ್ಷೆಯ ಅಂದಾಜು ನಲವತ್ತು ಸಾವಿರ ಕೋಟಿ ರೂಪಾಯಿ ವೆಚ್ಚದ ಯೋಜನೆಯಾಗಿದ್ದ ಬ್ರಹ್ಮಿಣಿ ಸ್ಟೀಲ್ಸ್ ಕಂಪನಿಯ ನಿರ್ದೇಶಕರಾಗುವುದೆಂದರೆ ಹುಡುಗಾಟದ ಮಾತಲ್ಲ. ಬ್ರಹ್ಮಿಣಿಗೆ ಗಾಲಿ ಜನಾರ್ದನ ರೆಡ್ಡಿ ಮ್ಯಾನೇಜಿಂಗ್ ಡೈರೆಕ್ಟರ್ ಆದರೆ ಅವನ ಹೆಂಡತಿ ಲಕ್ಷ್ಮೀ ಅರುಣಾ ನಿರ್ದೇಶಕಿಯಾಗಿದ್ದಳು. ಜೊತೆಗೆ ಆಂಧ್ರ ಶಾಸಕ ಕೆ. ರಾಮಚಂದ್ರಾ ರೆಡ್ಡಿ, ಡಾ. ಬಿ.ಎಸ್. ಸಿಂಗ್ ಮುಂತಾದವರೆಲ್ಲಾ ಡೈರೆಕ್ಟರ್‌ಗಳಾಗಿದ್ದಾರೆ. ಇವರ ನಡುವೆ ಆಡಿಟರ್ ರೇಣುಕಾ ಸಹ ಡೈರೆಕ್ಟರ್ ಆಗುತ್ತಾರೆಂದರೆ ಯಾರಿಗಾದರೂ ಅನುಮಾನ ಬರಲೇಬೇಕಲ್ಲವ್ವೆ?

ಅದೇನೇ ಇರಲಿ, ರೇಣುಕಾ ಈ ಹುದ್ದೆ ಗಿಟ್ಟಿಸಿದ್ದು ಇನ್ನೊಬ್ಬ ಗಣಿಕಳ್ಳ ಗಾಲಿ ಕರುಣಾಕರ ರೆಡ್ಡಿಯ ಕೃಪೆಯಿಂದ ಎನ್ನಲಾಗುತ್ತಿದೆ. ರೇಣುಕಾರ ಬಗ್ಗೆ ಕರುಣಾಕರ ರೆಡ್ಡಿಗೆ ಬಹಳ ಕಾಳಜಿ ಇದ್ದುದ್ದೇ ಇದಕ್ಕೆ ಕಾರಣವಿರಬಹುದು.

ನಾಪತ್ತೆ ಯಾಕೆ?

ಈಗ ಜೈಲು ಪಾಲಾಗಿರುವ ಜನಾರ್ದನ ರೆಡ್ಡಿಯ ಓಬಳಾಪುರಂ ಮೈನಿಂಗ್ ಕಂಪನಿ ಹಾಗೂ ರೆಡ್ಡಿ ದಂಪತಿಗಳ ಅಸೋಸಿಯೇಟೆಡ್ ಮೈನಿಂಗ್ ಕಂಪನಿಗಳು ಮಾಡಬಾರದ ಅನಾಚಾರಗಳನ್ನೆಲ್ಲಾ ಮಾಡಿರುವುದು ಬೆಳಕಿಗೆ ಬಂದಿದೆ. ಜೊತೆಗೆ ಈ ಖದೀಮ ರೆಡ್ಡಿ ಸಿಂಗಪೂರ್‌ನಲ್ಲೂ ಒಂದು ಕಂಪನಿ ತೆರೆದು ಇಲ್ಲಿನ ಅದಿರನ್ನು ಅಲ್ಲಿನ ತನ್ನದೇ ಒಡೆತನದ ಕಂಪನಿಗೆ ಕಡಿಮೆ ರೇಟಿಗೆ ಮಾರಿ, ನಂತರ ಅಲ್ಲಿಂದ ಬೇರೆಯವರಿಗೆ ಒಂದಕ್ಕೆ ನಾಲ್ಕು ಪಟ್ಟು ಲಾಭಕ್ಕೆ ಮಾರಿಕೊಂಡಿದ್ದಾನೆ. ಈ ರೀತಿ ಸಂಪಾದಿಸಿದ ಹಣವನ್ನೆಲ್ಲಾ ಬ್ರಿಟಿಷ್ ವರ್ಜಿನ್ ಐಲ್ಯಾಂಡ್‌ಗೆ ಸಾಗಿಸಿ ಇಟ್ಟಿದ್ದಾನೆ. ಸಾವಿರಾರು ಕೋಟಿ ರೂಪಾಯಿಗಳ ವ್ಯವಹಾರವಿದು.

ಸಿಬಿಐ ಇದನ್ನೆಲ್ಲ ಈಗ ದಾಖಲೆ ಸಮೇತ ಪತ್ತೆ ಹಚ್ಚಿದೆ. ಈ ದಂಧೆಯಲ್ಲಿ ತೆರಿಗೆ ವಂಚನೆ, ವಿದೇಶಿ ವಿನಿಮಯ ಕಾಯ್ದೆಯ ಉಲ್ಲಂಘನೆ, ಅದಿರು ಸಾಗಾಣಿಕೆ ನಿಯಮಗಳನ್ನೆಲ್ಲಾ ಮೀರಿಸಿರುವ ಕಾರಣ ಸಿಬಿಐಗೆ ಕೇವಲ ರೆಡ್ಡಿ ಮಾತ್ರವಲ್ಲದೆ ಅವನ ಜೊತೆಗಾರರ ಹೇಳಿಕೆ-ಸಾಕ್ಷ್ಯಗಳೂ ಬೇಕಾಗುತ್ತದೆ. ಹಾಗಾಗಿ ಸಿಬಿಐ ಈಗ ರೆಡ್ಡಿಯ ಆಡಿಟರ್ ಆಗಿದ್ದ ರೇಣುಕಾರನ್ನು ಹುಡುಕುತ್ತಿದೆ.

ಆದರೆ ರೇಣುಕಾನೇ ಈಗ ನಾಪತ್ತೆಯಾಗಿದ್ದಾರೆ!

ಆಕೆ ಕಾನೂನಿಗೆ ಹೆದರಿ ತಲೆಮರೆಸಿಕೊಂಡಿದ್ದರೆ ಅದು ಬೇರೆ ಮಾತು.

ಆದರೆ

ರೇಣುಕಾ ಸಿಬಿಐನವರ ಕೈಗೆ ಸಿಕ್ಕರೆ ನೀಡಬಹುದಾದ ಹೇಳಿಕೆ, ಸಾಕ್ಷ್ಯಗಳು ರೆಡ್ಡಿ ಗ್ಯಾಂಗ್ ಅನ್ನು ಖಾಯಂ ಆಗಿ ಜೈಲಿಗೆ ತಳ್ಳುವ ಸಾಧ್ಯತೆಗಳೂ ಇದೆಯಾದ್ದರಿಂದ ಆಕೆಯ ಪ್ರಾಣಕ್ಕೂ ಈಗ ಅಪಾಯವಿದ್ದೇ ಇದೆ.

ರೇಣುಕಾ ನಾಪತ್ತೆಗೆ ಇದೂ ಒಂದು ಕಾರಣವಾಗಿರಲಿಕ್ಕೂ ಸಾಕು.

ಪೊಲೀಸರು ರೇಣುಕಾ ನಾಪತ್ತೆ ಬಗ್ಗೆ ಈಗಲಾದರೂ ಗಮನ ಹರಿಸಲಿ.



ಗಡ್ಕರಿಯೂ ಕಿತ್ತು ತಿಂದ

ಬಿಜೆಪಿ ರಾಷ್ಟ್ರಾಧ್ಯಕ್ಷ ನಿತಿನ್ ಗಡ್ಕರಿಯ ಮಾನಮರ್ಯಾದೆಯೆಲ್ಲಾ ಬೀದಿ ಪಾಲಾಗುವ ಸಂದರ್ಭ ಬರುತ್ತಿದೆಯೇ? ಗಣಿ ರೆಡ್ಡಿಯನ್ನು ಒದ್ದು ಒಳಗಾಕಿರುವ ಸಿಬಿಐ ರೆಡ್ಡಿ ಮನೆಯಿಂದ 30 ಕೆ.ಜಿ. ಚಿನ್ನ ವಶಪಡಿಸಿಕೊಂಡಿತಲ್ಲ, ಅದೇ ರೀತಿ ಈ ರೆಡ್ಡಿ ಯಾರ್‍ಯಾರಿಗೆ ಏನೇನು ಕಾಣಿಕೆ ಕೊಟ್ಟಿದ್ದಾನೆಂಬ ಬಗ್ಗೆಯೂ ಸಿಬಿಐ ತಿಳಿದುಕೊಳ್ಳುತ್ತಿದೆ. ಕಳೆದ ತಿಂಗಳು ಬಳ್ಳಾರಿಯಲ್ಲಿ ನಡೆದ ವರಮಹಾಲಕ್ಷ್ಮಿ ಹಬ್ಬಕ್ಕೆ ಬಂದ ಗಡ್ಕರಿಗೆ ರೆಡ್ಡಿಗಳು ಒಂದೂವರೆ ಕೆ.ಜಿ. ತೂಕದ ಚಿನ್ನದ ಕತ್ತಿಯೊಂದನ್ನು ಕಾಣಿಕೆಯಾಗಿ ಕೊಟ್ಟರು. ಅದರ ಬೆಲೆ 40 ಲಕ್ಷ ರೂ. ಜೊತೆಗೆ ಒಂದು ಕೋಟಿ ಎಂಭತ್ತು ಲಕ್ಷ ರೂಪಾಯಿ ಬೆಲೆಯ ಕಾರ್ ಕೂಡ ನೀಡಿದ್ದರು. ಇದು ಕಳ್ಳತನದಿಂದ ಸಂಪಾದಿಸಿದ್ದ ಹಣದಿಂದ ನೀಡಿರುವ ಕಾಣಿಕೆ ಅಂತಾ ಗೊತ್ತಿದ್ದರೂ ಲೋಭಿ ಗಡ್ಕರಿ ತೆಗೆದುಕೊಂಡು ಹೋಗಿದ್ದ. ಈಗೇನಾದರೂ ಸಿಬಿಐ ಗಡ್ಕರಿಯನ್ನು ತದುವಿಕೊಂಡರೆ ಬಿಜೆಪಿಗಳ ಮಾನ ಉಳಿಯುತ್ತದೆಯಾ?

ತಾಯಿಯ ರುಂಡ ಚೆಂಡಾಡಿದ ಮೆಂಟಲ್ ಮಗ!




ತಾನು, ತನ್ನ ಗಂಡ, ತನ್ನ ಸಂಸಾರ ಎಂಬುದು ಅವಳಿಗೆ ಬೇಡವಾಗಿತ್ತು. ತನ್ನ ಮಕ್ಕಳು ಮದುವೆ ವಯಸ್ಸಿಗೆ ಬಂದಿದ್ದರೂ ತನಗಿಂತ ಚಿಕ್ಕವನಾದ ಮನೆಕೆಲಸದವನಿಗಾಗಿ ಮನೆ, ಮಠ ತೊರೆದು ಓಡಿಹೋಗಿದ್ದಳು. ತನ್ನ ಈ ನಿರ್ಧಾರದಿಂದ ಮುಂದೆ ಗಂಡ-ಮಕ್ಕಳು ಎಷ್ಟು ಅಪಹಾಸ್ಯಕ್ಕೀಡಾಗುತ್ತಾರೆ, ಸಮಾಜದಲ್ಲಿ ಅವರ ಪರಿಸ್ಥಿತಿ ಏನಾಗಬಹುದು ಎಂಬ ಬಗ್ಗೆ ಆಕೆ ಯೋಚಿಸಲಿಲ್ಲ. ಕೊನೆಗೆ ಇಂತಹ ನಿರ್ಧಾರದಿಂದಾಗಿ ಆಕೆ ಹೆತ್ತ ಮಗನಿಂದಲೇ ಬರ್ಬರ ಸಾವು ತಂದುಕೊಂಡಳು.

ಧಾರವಾಡ ಜಿಲ್ಲೆಯ ನವಲಗುಂದ ತಾಲೂಕಿನಲ್ಲಿರುವ ಸೈದಾಪುರ ಒಂದು ಪುಟ್ಟಗ್ರಾಮ. ಈ ಗ್ರಾಮದ ಹಿರಿಯ ಮನೆತನದ ವಿರೂಪಾಕ್ಷಗೌಡ ಪಾಟೀಲರನ್ನು ಚಿಕ್ಕ ವಯಸ್ಸಿನಲ್ಲೇ ಮದುವೆಯಾಗಿದ್ದಳು. ಮದುವೆಯಾದ ನಂತರ ವಿರೂಪಾಕ್ಷಗೌಡ ಮತ್ತು ನಿರ್ಮಲಾಳಿಗೆ ಮೂವರು ಮಕ್ಕಳಾದರು. ಎರಡು ಗಂಡು ಒಂದು ಹೆಣ್ಣು. ಅವರಲ್ಲಿ ಕೊನೆಯವನಾದ ಆನಂದಗೌಡನಿಗಾಗಿ ವಿರೂಪಾಕ್ಷಗೌಡ ಮತ್ತು ನಿರ್ಮಲಾ ಹತ್ತಾರು ದೇವರಿಗೆ ಹರಕೆ ಹೊತ್ತಿದ್ದರು. ಆಕೆ ಆತನನ್ನು ಒಂಭತ್ತು ತಿಂಗಳು ಹೊತ್ತು, ಹೆತ್ತಿದ್ದಳು. ಈಗ ಆತನ ಕೈಯಿಂದಲೇ ನಿರ್ಮಲಾ ಕೊಲೆಯಾಗಿರುವುದು ವಿಚಿತ್ರ ಸ್ಟೋರಿ.


ವಿರೂಪಾಕ್ಷಗೌಡ ಪಾಟೀಲರ ಮನೆತನದ ಗೌಡಶಾನಿಯಾಗಿದ್ದ ನಿರ್ಮಲಾ ತನ್ನ ಮೂರು ಮಕ್ಕಳು ಮದುವೆ ವಯಸ್ಸಿಗೆ ಬರುವ ಹೊತ್ತಿಗೆ ಅದ್ಯಾವುದೋ ಸೆಳೆತಕ್ಕೆ ಸಿಕ್ಕಿಬಿಟ್ಟಳು. ಮನೆಗೆಲಸದ ಆಳಿನೊಂದಿಗೆ ಸಲುಗೆ ಬೆಳೆಸಿಕೊಂಡಳು. ಈ ವಿಚಾರ ಮನೆಮಂದಿಗೆ ಗೊತ್ತಾದದ್ದೇ ತಡ, ಗಂಡ, ಮಕ್ಕಳನ್ನು ಬಿಟ್ಟು ತನಗಿಂತ ಚಿಕ್ಕ ವಯಸ್ಸಿನವನಾದ ಪ್ರಿಯಕರನೊಂದಿಗೆ ಎಸ್ಕೇಪ್ ಆದಳು.

ಇದಾದದ್ದು ಐದು ವರ್ಷಗಳ ಹಿಂದೆ. ಆದರೆ ಅವತ್ತಿನಿಂದ ನಿರ್ಮಲಾ ಮಾಡಿದ ಈ ತಪ್ಪಿನಿಂದ ವಿರೂಪಾಕ್ಷ ಗೌಡ ಪಾಟೀಲರ ಇಡೀ ಕುಟುಂಬ ಸುತ್ತಲಿನ ಗ್ರಾಮದಲ್ಲಿ ತಲೆ ತಗ್ಗಿಸುವಂತಾಯಿತು. ಅಲ್ಲದೆ ಬೆಳೆದುನಿಂತ ಮಕ್ಕಳ ಮದುವೆಗೆ ಸಂಬಂಧಗಳು ಮುರಿದು ಬೀಳುವಂತಾಯಿತು. ಅದರಲ್ಲೂ ನಿರ್ಮಲಾಳ ಕೊನೆ ಮಗ ಆನಂದಗೌಡ ತನ್ನ ತಾಯಿ ಈ ರೀತಿ ಮಾಡಿದ್ದರಿಂದ ತನಗೆ ಹೆಣ್ಣು ಸಿಗುತ್ತಿಲ್ಲ ವೆಂದು ಆಕ್ರೋಶಗೊಂಡಿದ್ದ. ಗೆಳೆಯರ ಚುಚ್ಚು ಮಾತುಗಳಿಂದ ಕುದ್ದು ಹೋಗಿದ್ದ. ಕೊನೆಗೆ ಇದಕ್ಕೆಲ್ಲಾ ತಾಯಿ ನಿರ್ಮಲಾಳ ಸಾವೊಂದೇ ಪರಿಹಾರ ಎಂದು ಭಾವಿಸಿದ ಆನಂದ ತಾಯಿಯ ಹತ್ಯೆಯ ಸ್ಕೆಚ್ ರೂಪಿಸಿದ. ಮೊನ್ನೆ ಗಣೇಶ ಹಬ್ಬದ ಮರುದಿನ ಹೆತ್ತವ್ವನ ರುಂಡ ಚೆಂಡಾಡಲು ಮುಹೂರ್ತವಿಟ್ಟ.



ಮರ್ಯಾದಸ್ಥ ಕುಟುಂಬದ ಮಾನ ಹೋಯ್ತು


ಹೇಳಿಕೊಳ್ಳುವಷ್ಟು ಆಗರ್ಭ ಶ್ರೀಮಂತರಲ್ಲ ದಿದ್ದರೂ, ಸೈದಾಪುರ ಗ್ರಾಮಕ್ಕೆ ಹೊಂದಿ ಕೊಂಡಂತೆ ಎಂಟು ಕೂರಿಗೆ (32 ಎಕರೆ) ಜಮೀನಿನ ಒಡೆಯನಾಗಿ, ನೂರಾರು ಜನ ಬಡ ಕೂಲಿಕಾರರಿಗೆ ಉದ್ಯೋಗ ನೀಡಿ ಅವರ ಬದುಕಿಗೆ ದಾರಿ ಮಾಡಿಕೊಟ್ಟ ಮರ್ಯಾದಸ್ಥ ಕುಟುಂಬದ ಒಡೆಯನಾದ ವಿರುಪಾಕ್ಷಗೌಡ ತನ್ನ ಗ್ರಾಮ ಸೇರಿದಂತೆ ಸುತ್ತಲಿನ ಹತ್ತಾರು ಗ್ರಾಮಗಳಲ್ಲಿ ಖದರ್ ಹೊಂದಿದ್ದವ. ಸೌಮ್ಯ ಸ್ವಭಾವದವ ನಾದರೂ ಗೌಡಕೀಯ ಗತ್ತು ಅವನಲ್ಲಿತ್ತು. ಸೈದಾಪುರ ಹತ್ತಿರದ ವೆಂಕಟಾಪುರ ಗ್ರಾಮದ ನಿರ್ಮಲಾ ಎಂಬಾಕೆಯನ್ನು ಮದುವೆಯಾಗಿ ಮೂರು ಮಕ್ಕಳ ತಂದೆಯಾಗಿ ನೆಮ್ಮದಿಯಾಗಿದ್ದ. ಮಕ್ಕಳ್ಯಾರೂ ಹೇಳಿಕೊಳ್ಳುವಂಥಾ ಬುದ್ಧಿವಂತರಲ್ಲ, ಆದರೂ ಗೌಡಕಿಯ ದರ್ಪದಲ್ಲೇ ಬೆಳೆದವರು. ಇಬ್ಬರು ಗಂಡು ಮಕ್ಕಳಿಗೂ ವಿದ್ಯೆ ಹತ್ತಲಿಲ್ಲ. ಹೈಸ್ಕೂಲೇ ಅವರಿಗೆ ಭಾರವಾಗಿತ್ತು. ಆದರೂ ಗದ್ದೆ ತೋಟದ ಕೆಲಸದಲ್ಲಿ ತಂದೆಯೊಂದಿಗೆ ಕೈಜೋಡಿಸುತ್ತಿದ್ದರು. ಸಮಯ ಕಳೆದಂತೆ ವಿರೂಪಾಕ್ಷಗೌಡರ ಪ್ರೀತಿಯ ಹೆಂಡತಿ ನಿರ್ಮಲಾ ಮನೆಯಲ್ಲಿ ಹಿಡಿತ ಸಾಧಿಸಿದ್ದಳು. ಅದರ ಫಲವಾಗಿಯೇ ಮನೆಯಲ್ಲಿ ಯಾರಿಗೂ ಒಪ್ಪಿಗೆಯಿಲ್ಲದಿದ್ದೂ ತಾನೇ ಮುಂದೆ ನಿಂತು ತನ್ನ ತಮ್ಮನಿಗೆ ಹಿರಿ ಮಗಳನ್ನು ಮದುವೆ ಮಾಡಿಕೊಟ್ಟಳು. ಹಿಡಿದ ಹಠ ಸಾಧಿಸಲು ನಿರ್ಮಲಾ ಏನನ್ನು ಬೇಕಾದರೂ ಮಾಡಲು ಸಿದ್ಧಳಾಗುವಂತಹ ಸ್ವಭಾವದವಳು. ಕೆಲವೇ ವರ್ಷಗಳಲ್ಲಿ ಮಗಳ ಗಂಡ ಅನಾರೋಗ್ಯದಿಂದ ತೀರಿಕೊಂಡ.


ರಾಜು ಇಂದೂರ

ಇದೆಲ್ಲದರ ನಡುವೆ ನಿರ್ಮಲಾ ಮನೆಗೆಲಸದ ಆಳುಗಳೊಂದಿಗೆ ಸಲುಗೆ ಶುರು ವಿಟ್ಟುಕೊಂಡಳು. ಅಂಥವರಲ್ಲಿ ನಿರ್ಮಲಾ ಅತೀ ಹೆಚ್ಚು ಸಲುಗೆ ಬೆಳೆಸಿಕೊಂಡಿದ್ದು ರಾಜು ಇಂದೂರ ಎಂಬ ತನಗಿಂತ ಚಿಕ್ಕವಯಸ್ಸಿನ ಆಳಿನೊಂದಿಗೆ. ಇವರಿಬ್ಬರ ಕಳ್ಳಾಟ ಒಂದೂವರೆ ವರ್ಷ ಬಲು ಜೋರಾಗಿ ನಡೆದಿತ್ತು. ಆದರೆ ಯಾರ ಕೈಗೂ ರೆಡ್ ಹ್ಯಾಂಡಾಗಿ ಸಿಕ್ಕಿಬಿದ್ದಿರಲಿಲ್ಲ. ಬದಲಾಗಿ ಸಂಶಯದ ಗಾಳಿ ಮನೆಯಂಗಳದಿಂದ ಗ್ರಾಮದಲ್ಲೆಲ್ಲಾ ಬೀಸಿತ್ತು. ಆಗಲೇ ಕಿರಿಮಗ ಆನಂದಗೌಡ ಇವರಿಬ್ಬರಿಗೂ ವಾರ್ನ್ ಮಾಡಿದ್ದ. ರಾಜು ಇಂದೂರನಿಗೆ ಊರು ಬಿಡುವಂತೆ ಹೇಳಿದ್ದ.

ಆದರೆ ಮುಂದೆ ಆಗಿದ್ದೇ ಬೇರೆ.

ಪ್ರಿಯಕರ ರಾಜುನೊಂದಿಗೆ ಓಡಿ ಹೋಗುವ ಪ್ಲ್ಯಾನ್ ಮಾಡಿದ ನಿರ್ಮಲಾ ಅವನೊಂದಿಗೆ ಮನೆಯಿಂದ ಎಸ್ಕೇಪ್ ಆದಳು.



ಇದರಿಂದ ಮರ್ಯಾದಸ್ಥ ಕುಟುಂಬದ ಮಾನ ಮೂರು ಕಾಸಿಗೆ ಹರಾಜ್ ಆದಂತಾಯಿತು.

ಆಗ ನಿರ್ಮಲಾಳ ಅನೈತಿಕ ಸಂಬಂಧ ಇಡೀ ಊ[...] ಗೊತ್ತಾಯಿತು. ಗಂಡ, ಮಕ್ಕಳು ಇವಳನ್ನು ಕಂಡರೆ [...] ಕಡಿಯುತ್ತಿದ್ದರು. ತಾನು ಗ್ರಾಮದಲ್ಲೆ ಇದ್ದರೆ ಸಾವು [...] ಎಂಬುದು ನಿರ್ಮಲಾಳಿಗೆ ಗೊತ್ತಾಯಿತು. ಹೀಗ[...] ಪ್ರಿಯಕರನೊಂದಿಗೆ ಊರು ಬಿಡುವ ನಿರ್ಧಾರಕ್ಕೆ ಬ[...] ನಿರ್ಮಲಾ ಕಟ್ಟಿಕೊಂಡ ಗಂಡ, ಆಳೆತ್ತರಕ್ಕೆ ಬೆಳೆದು [...] ಮಕ್ಕಳನ್ನು ಲೆಕ್ಕಿಸದೆ ರಾತ್ರೋರಾತ್ರಿ ರಾಜು ಇಂದ[...]ನೊಂದಿಗೆ ಹುಬ್ಬಳ್ಳಿಯತ್ತ ಹೋದಳು.

ವಿಚಿತ್ರವೆಂದರೆ, ಇವಳಂತೆ ರಾಜು ಕೂಡಾ [...] ಸಂಸಾರವನ್ನು ತೊರೆದುಬಿಟ್ಟ. ಅವನಿಗೂ ಹೆಂಡತಿ ಹಾ[...] ಇಬ್ಬರು ಪುಟ್ಟ ಮಕ್ಕಳಿದ್ದರು.

ಸುಖದ ಸುಪ್ಪತ್ತಿಗೆಯಲ್ಲಿ ತಿಂದುಂಡಿದ್ದ ಇವರಿಬ್[...] ಖಾಲಿ ಕೈಯಲ್ಲಿ ಊರು ಬಿಟ್ಟು ಪಡಬಾರದ [...] ಎದುರಿಸಿದರು. ಯಾರಿಗೂ ಅನುಮಾನ ಬಾರದ [...] ಹುಬ್ಬಳ್ಳಿಯ ಗೋಕುಲ್ ರಸ್ತೆಯಲ್ಲಿರುವ ಸ್ಲಂ ಏರಿಯಾ[...] ಗುಪ್ತವಾಗಿ ಸಂಸಾರ ಹೂಡಿದರು. ರಾಜು ಗಾರೆ ಕೆಲಸ[...] ಮನೆ ನಡೆಸುತ್ತಿದ್ದ. ಹೀಗೆ ಸುಮಾರು ಮೂರೂವರೆ ವ[...] ಎಲ್ಲರಿಂದ ದೂರವಿದ್ದ ಇವರಿಬ್ಬರಿಗೆ ಇನ್ನು ಮುಂದೆ ತ[...] ತಂಟೆಗೆ ಯಾರೂ ಬರಲ್ಲ ಮನೆಯವರೆಲ್ಲಾ ಸುಮ್ಮನಾಗಿ[...] ಅನ್ನಿಸಿದೆ. ಆಗ ಅವರಿಬ್ಬರು ಪರಿಚಿತ ಊರಾದ ಅಣ್ಣಿಗೇ[...] ಬಂದು ನೆಲೆಸಿದ್ದಾರೆ. ಇಲ್ಲಿ ರಾಜುಗೂ ತನ್ನ ಕೆಲಸ[...] ಉತ್ತಮ ಆದಾಯ ದೊರೆತಿದೆ. ಎಲ್ಲಾ ಸುಸೂತ್ರವ[...] ನಡೆಯುತ್ತಿದ್ದಾಗ ಪಕ್ಕದ ಸೈದಾಪುರ ಗ್ರಾಮದ [...] ಇವರಿಬ್ಬರ ಕಳ್ಳ ಸಂಸಾರವನ್ನು ನೋಡಿ ತಮ್ಮ ಗ್ರಾಮದ[...] ಆಡಿಕೊಳ್ಳಲು ಶುರುಹಚ್ಚಿದ್ದಾರೆ. ಹೀಗೆ ಜನ ಏನೇ ಅಂದು[...] ಪಾಟೀಲರ ಮನೆಯವರು ಸುಮಾರು ಒಂದೂವರೆ ವ[...] ಸಹನೆ ಕಳೆದುಕೊಳ್ಳಲಿಲ್ಲ. ಆದರೆ ಯಾವಾಗ ಕಿರಿ ಮ[...] ಆನಂದ ಪಾಟೀಲನಿಗೆ ಮದುವೆ ಮಾಡಲು ಹೆ[...] ಹುಡುಕಲು ಪ್ರಾರಂಭಿಸಿದರೋ ಆಗ ಆ ಕುಟುಂ[...]

...6 ಬಂದೈತೆ ಹೊಸಬ್ಲೇಡು!


ಈತನಕ ಏನು ಕಡಿದು ಗುಡ್ಡೆಹಾಕಿದ್ದಾರೆ ಎಂದು ಕೆದಕ ಹೊರಟರೆ ಕಾಣುವುದು ಸ್ವಯಂಕೃಷಿ ಮುಸ್ಸಂಜೆ ಎಂಬ ತಗಡು ಸಂಜೆ ಪತ್ರಿಕೆ. ಇದು ಹೆಸರಿಗಷ್ಟೇ ಸಂಜೆ ಪತ್ರಿಕೆ. ಪ್ರತಿನಿತ್ಯ ಒಂದಷ್ಟು ಬಿಟ್ಟ ಪ್ರತಿಗಳನ್ನು ಪ್ರಿಂಟ್ ಹಾಕಿಸಿ ಪ್ರೆಸ್‌ಕ್ಲಬ್, ವಿಧಾನಸೌಧಗಳಿಗೆ ಬಿಟ್ಟಿಗೆ ಹಂಚುತ್ತಾರೆ. ಜೊತೆಗೆ ಶುಭೋದಯ ಎಂಬ ಮತ್ತೊಂದು




ದಿನಪತ್ರಿಕೆಯನ್ನು ತರುತ್ತಾರಂತೆ. ಪಬ್ಲಿಕ್ ಪವರ್ ಎಂಬ ವಾರಪತ್ರಿಕೆಯೂ ಇದೆಯಂತೆ. ಆದರೆ ಮುಸ್ಸಂಜೆ ಬಿಟ್ಟರೆ ಈ ಶುಭೋದಯ ದಿನಪತ್ರಿಕೆ ಹೇಗಿದೆ? ಯಾರು ಬರೆಯುತ್ತಾರೆ? ಎಂತೆಂಥ ಸುದ್ದಿಗಳಿರುತ್ತವೆ ಎಂದು ಕಂಡವರಿಲ್ಲ. ಇಷ್ಟರಲ್ಲೇ ಎಸ್.ಕೆ. ಟಿವಿ ಎಂಬ ಚಾನೆಲ್ ಕೂಡಾ ಶುರುಮಾಡುತ್ತಾರಂತೆ. ಆದರೆ ಅದರ ಲೈಸೆನ್ಸ್‌ಗೆ ಫೀಜ್ ಕಟ್ಟಲು ದುಡ್ಡಿಲ್ಲ.


ಗಾರ್ಮೆಂಟ್ಸ್ ಎಲ್ಲಿದೆ? ಕೊರಿಯರ್ ಮತ್ತು ಕಾರ್ಗೋ ಕಚೇರಿಲಿ, ಅದರ ಅಡ್ರೆಸ್ಸಾದರೂ ಇದೆಯಾ? ಲ್ಯಾಂಡ್ ಡೆವಲಪರ್ಸ್ ಬೇಡ ಕನಿಷ್ಠ ಬ್ರೋಕರ್‌ಗಿರಿಯಾದರೂ ಗೊತ್ತಾ? ಎಲ್ಲಿ ಚಿಟ್ ಫಂಡ್ ನಡೆಸುತ್ತಾರೆ? ನಂಬಿ ರೊಕ್ಕ ಹಾಕಿದ ಎಷ್ಟು ಮಂದಿಗೆ ದುಡ್ಡು ವಾಪಸ್ಸು ಮಾಡಿದ್ದಾರೆ? ಇತ್ಯಾದಿ ಯಾವುದಕ್ಕೂ ಈ ಜೋಡಿಯ ಬಳಿ ಉತ್ತರವಿಲ್ಲ. ಅಂಥ ಅಗ್ರಿಗೋಲ್ಡ್, ಕಂಟ್ರಿಕ್ಲಬ್, ಗುರುಟೀಕ್ ಕಂಪೆನಿಗಳೇ ಇಷ್ಟೊಂದು ದುಂದುವೆಚ್ಚ ಮಾಡುವುದಿಲ್ಲ. ಕನಿಷ್ಠ ಅಗ್ರಿಗೋಲ್ಡ್, ಕಂಟ್ರಿಕ್ಲಬ್, ಗುರುಟೀಕ್ ಕಂಪನಿಗಳ ಬಳಿ ಒಂದಷ್ಟು ಆಸ್ತಿ ಜಮೀನು, ನಿವೇಶನಗಳಾದರೂ ಇದ್ದವು. ಆದರೆ ಸ್ವಯಂಕೃಷಿ ಧೂರ್ತರು ಜನರ ದುಡ್ಡನ್ನು ಶೋಕಿ, ಖಯಾಲಿ, ಐಷಾರಾಮದಲ್ಲೇ ಹುಡಿಹಾರಿಸಿದ್ದಾರೆ.

ಕಂಪನಿ ಶುರುಹಚ್ಚಿಕೊಂಡು ಇನ್ನೂ ಮೂರು ವರ್ಷ ಕೂಡ ಕಳೆದಿಲ್ಲ. ಆಗಲೇ ವೀರೇಂದ್ರ ಬಾಬು ಒಂದು ಕೋಟಿಯ ಬಂಗಲೆ ಖರೀದಿಸಿದ್ದಾನೆ. ಮುರಳಿ ಕೂಡಾ ಹೆಬ್ಬಾಳದಲ್ಲಿ ಮತ್ತೊಂದು ಬಂಗಲೆಯನ್ನು ಲೀಸಿಗೆ ಹಾಕಿಕೊಂಡಿದ್ದಾನೆ. ಇಬ್ಬರ ಬಳಿಯೂ ಐದೈದು ಐಷಾರಾಮಿ ಕಾರುಗಳಿವೆ. ಕಂಡಕಂಡಲ್ಲಿ ಐಷಾರಾಮಿ ಆಫೀಸು ತೆರೆದು ಸಿಕ್ಕಾಪಟ್ಟೆ ಬೋರ್ಡ್ ಹಾಕಿದ್ದಾರೆ ನಿಜ. ಆದರೆ ದುಡ್ಡು ಹುಟ್ಟಬೇಕಾದರೆ ಏನಾದರೂ ಉತ್ಪಾದಕ ವಹಿವಾಟಿರ ಬೇಕಲ್ಲವೇ? ಮುಸ್ಸಂಜೆ ಪತ್ರಿಕೆಯೊಂದೇ ಪ್ರತಿನಿತ್ಯ 25 ಸಾವಿರ ರೂಪಾಯಿ ನುಂಗುತ್ತದೆ ದಿನನಿತ್ಯದ ಖರ್ಚೇ 50 ಸಾವಿರವನ್ನು ದಾಟುತ್ತದೆ. ಜೊತೆಗೆ ವರದಿಗಾರರು, ಕಾಗದ, ಪ್ರೆಸ್ಸು ಅಂತೆಲ್ಲ ಖರ್ಚು ಬೇರೆ. ಹೀಗೆ ಜನರಿಂದ ಎತ್ತಿದ ದುಡ್ಡಿಗೆ ಏನಾದರೂ ಒಂದು ಲೆಕ್ಕ ಕೊಡಬೇಕಲ್ಲ, ಆದಕ್ಕೆ ಸಿನಿಮಾ ಮಾಡಿ ಕೋಟಿಗಟ್ಟಲೇ ಲಾಸ್ ಆಯಿತೆಂದು ಕತೆಕಟ್ಟಬೇಕಲ್ಲ; ಇದಕ್ಕೆಂದೇ ಬಾಬು-ಮುರಳಿ ಜೋಡಿ ಕೈಯಿಟ್ಟದ್ದು ಸಿನಿಮಾ ದಂಧೆಗೆ.





ಸೆಪ್ಟೆಂಬರ್ 1ರ ಗುರುವಾರ ರಾಜ್ಯಾದ್ಯಂತ ತೆರೆಕಂಡ 'ಸ್ವಯಂಕೃಷಿ' ಚಿತ್ರಕ್ಕೆ ಹೀರೋ, ಡೈರೆಕ್ಟರ್, ಕತೆ, ಚಿತ್ರಕಥೆ ಎಲ್ಲವೂ ವೀರೇಂದ್ರಬಾಬುವೇ. ಬೆಂಗಳೂರಿನ ನರ್ತಕಿ, ಪ್ರಸನ್ನ, ಪಿವಿಆರ್ ಇತ್ಯಾದಿ ಚಿತ್ರಮಂದಿರಗಳಲ್ಲಿ ತೆರೆಕಂಡ ದಿನವೇ ಸ್ವಯಂಕೃಷಿ ನೊಣ ಹೊಡೆಯುತ್ತಿತ್ತು. ಅಂಬರೀಷ್, ಚರಣ್‌ರಾಜ್, ಸುಮನ್, ಉಮಾಶ್ರೀಯಂಥ ಹಳೇ ನಟರಿದ್ದರೂ ಇದೆಲ್ಲದಕ್ಕೂ ಅಪಾಲಜಿಯೋ ಎಂಬಂತೆ ತಾನೇ ಹೀರೋ ಆಗಿ ವೀರೇಂದ್ರ ಬಾಬು ಬಣ್ಣಹಚ್ಚಿದ್ದಾನೆ. ನೆಟ್ಟಗೆ ಕ್ಯಾಮೆರಾ ಮುಂದೆ ಕಣ್ಣು ಬಿಡುವುದಕ್ಕೂ ಗೊತ್ತಿಲ್ಲ, ನಗಲಾರ, ಅಳಲೂ ಬಾರದು. ಕೀ ಕೊಟ್ಟ ಮರದ ಗೊಂಬೆಯಂತೆ ಓಡಾಡುವುದು ಬಿಟ್ಟರೆ ನಟನೆ, ಅಭಿನಯದ ಗಂಧಗಾಳಿಯಿಲ್ಲ. ಅಷ್ಟಕ್ಕೂ ಹುಚ್ಚುಚ್ಚಾಗಿ ಆಡುವ ಹೀರೋ ಪಾತ್ರವೇ ಸ್ವಯಂಕೃಷಿಯ ಅತೀದೊಡ್ಡ ವೈಫಲ್ಯದಂತಿದೆ.




ತಮಾಷೆಯೆಂದರೆ ಇಂಥ ತಗಡು ಚಿತ್ರಕ್ಕೆ ಮುರಳಿ-ಬಾಬು ಜೋಡಿಕೊಡುತ್ತಿರುವುದು ಎ[...] ಕೋಟಿಯ ಲೆಕ್ಕವನ್ನು. ಖರ್ಚಾಗಿರುವುದು ಹೆಚ್ಚೆ[...] ಎರಡೋ-ಮೂರೋ ಕೋಟಿ ಮಾತ್ರ. ಉಳಿಕೆ [...] ಕೋಟಿಗೆ ಬೋಗಸ್ ಬಿಲ್ ಬರೆದು ಮುಂದೊ[...] ದಿನ ಜನ ಹಾಕಿದ ದುಡ್ಡೆಲ್ಲ ಸಿನಿಮಾದಲ್ಲಿ ಹೋಯಿತೆ[...] ಕತೆ ಹೊಡೆಯಬಹುದಲ್ಲ.

ಇದು ಸ್ವಯಂಕೃಷಿ ಧೂರ್ತರ ಹುನ್ನಾರ. ಅ[...] ಗುರುಟೀಕ್, ಕಂಟ್ರಿಕ್ಲಬ್, ವಿನಿವಿಂಕ್, ಅಕ್ಷ[...] ಫೌಂಡೇಷನ್, ಅಗ್ರಿಗೋಲ್ಡ್, ಜಿಎಸ್‌ಎಸ್ [...] ಕಂಪನಿಗಳೇ ಜನರ ದುಡ್ಡೆತ್ತಿ ಬರಕತ್ತಾಗಲಿಲ್ಲ. [...] ವೀರೇಂದ್ರ ಬಾಬು-ಮುರಳಿ ಜೋಡಿ ಹುಟ್ಟಿಕೊಂಡಿದ[...] ಈಗಾಗಲೇ 50 ಸಾವಿರಕ್ಕೂ ಅಧಿಕ ಠೇವಣಿದಾ[...] ಸ್ವಯಂಕೃಷಿ ಗ್ಯಾಂಗಿನ ಬಣ್ಣದ ಮಾತಿಗೆ ಮರು[...] ದುಡ್ಡು ಹಾಕಿದ್ದಾರೆ. ಬೇರೆ ಬ್ಲೇಡ್ ಕಂಪನಿಗಳು ಕ[...] ಆಸ್ತಿಯನ್ನಾದರೂ ಖರೀದಿಸುತ್ತಿದ್ದರು. ಜನರ ದುಡ್ಡಿಗೆ ಕ[...] ಜಮೀನಿನ ಗ್ಯಾರಂಟಿಯಾದರೂ ಇರುತ್ತಿತ್ತು. ಆ[...] ಸ್ವಯಂಕೃಷಿ ಪತ್ರಿಕೆ, ಟಿವಿ, ಸಿನಿಮಾದಂಥ ಅನುತ್ಪಾ[...] ಗ್ಯಾರಂಟಿಯಿಲ್ಲದ, ತಕ್ಷಣದ ಶೋಕಿಯ ಖಯಾ[...] ನೀರಿನಂತೆ ರೊಕ್ಕ ಸುರಿಯುತ್ತಿದೆ. ಕೇವಲ ಸಿನಿಮ[...] ಹೆಸರಲ್ಲೇ ಎಂಟು ಕೋಟಿ ಹುಡಿಹಾ[...]ದ್ದಾರೆಂದರೆ ಇನ್ನು ಮುಂದೆ ಠೇವಣಿದಾ[...] ರೊಕ್ಕಕ್ಕೆ ಏನೇನು ಗತಿ ಕಾದಿರಬೇಡ? ಯಾ[...]ದಕ್ಕೂ ಜನ ಹುಷಾರಾಗುವುದೊಳಿತು. ಎಲ್ಲ[...] ಮುನ್ನ ಪೊಲೀಸರು ಈ ಖದೀಮ ಜೋಡಿ[...] ಶೋಕಿ-ಐಷಾರಾಮದತ್ತ ಒಮ್ಮೆ ಕ[...] ಹಾಕಬೇಕು. ಯಾರದೋ ದುಡ್ಡು ಯಲ್ಲಮ[...] ಜಾತ್ರೆ ಎಂಬ ನಾಣ್ನುಡಿ ಗೊತ್ತಿದ[...] ಸ್ವಯಂಕೃಷಿಯ ಲೆಕ್ಕಾಚಾರದ ಬಗ್ಗೆ ಪೊಲೀಸ[...] ಮೌನ ವಹಿಸಿದರೆ ಮುಂದೊಮ್ಮೆ ಅನಾಹುತವಂ[...] ಕಟ್ಟಿಟ್ಟ ಬುತ್ತಿ.

• ವರದಿಗಾ[...]

...ವ ಟಾರ್ಚರ್ ಪ್ರಾರಂಭವಾಗಿದೆ. ಐದು ವರ್ಷಗಳ ... ಹಿಂದೆ ನಿರ್ಮಲಾ ಮಾಡಿಹೋದ ಅವಮಾನದಿಂದ ...ಕ ಸ್ಥಿರತೆ ಕಳೆದು ಕೊಂಡಂತಾಗಿದ್ದ ವಿರೂಪಾಕ್ಷಗೌಡ ... ಮಾಡದ ಸ್ಥಿತಿಗೆ ಬಂದು ನಿಂತಿದ್ದರು. ಆದರೆ ...ಗ ಆನಂದಗೌಡ ಮದುವೆಯಾಗೇ ತೀರುವೆನೆಂದು ... ಬಿದ್ದು ಸುಮಾರು ಮೂವತ್ತು ಹೆಣ್ಣುಗಳನ್ನು ...ದ್ದಾನೆ. ಆದರೆ, ಒಬ್ಬರೂ ಹೆಣ್ಣು ಕೊಡಲು ಮುಂದೆ ...ಲ್ಲ. ಕೊನೆಯದಾಗಿ ಕಳೆದ ತಿಂಗಳು ಹೊಸೂರ ...ದಲ್ಲಿ ನೋಡಿದ್ದ ಸಂಬಂಧ ಒಪ್ಪಿಗೆಯ ಹಂತ ...ದರೂ ಕೊನೆ ಗಳಿಗೆಯಲ್ಲಿ ಅದು ಕೂಡ ...ದುಬಿದ್ದಿತು. ಅಲ್ಲಿಯೂ ಹುಡುಗಿಯ ಮನೆಯವರಿಗೆ ...ವನ ತಾಯಿಯ ಅಕ್ರಮ ಸಂಬಂಧದ ವಿಚಾರ ...ಗಿ ಅವರು ಮಗಳನ್ನು ಆತನಿಗೆ ಕೊಡಲು ...ರಿಸಿದರು. ಹೆಣ್ಣು ನೋಡಿ ಗ್ರಾಮಕ್ಕೆ ಮರಳಿ ಬಂದ ...ವನನ್ನು ಸ್ನೇಹಿತರು ಹೀಯಾಳಿಸಿದರು. ಸೂಳೆಯ



... ಎಂದು ಪಟ್ಟ ಕಟ್ಟಿದರು. ತನ್ನ ಪರಿಸ್ಥಿತಿಗೆ ತಾಯಿ ...ಲಾಳೇ ಕಾರಣ ಎಂಬ ಸೇಡಿನ ಆಲೋಚನೆಗೆ ... ಆನಂದನ ತಲೆಗೆ ತೋಚಿದ್ದು ಆಕೆಯ ಕೊಲೆ.

...ನ್ನ ತಾಯಿಯಿಂದಾದ ಅವಮಾನವನ್ನು ಸಹಿಸಲಾಗದೆ, ...ಕ್ಕೆ ಅಂಟಿಕೊಂಡಿದ್ದ ಆನಂದಗೌಡ ಆಗಾಗ ಅಣ್ಣಿಗೇರಿ ...ಕ್ಕೆ ಬಂದು ತಾಯಿ ನಿರ್ಮಲಾಳ ಕುರಿತು ಅವರಿವ ... ವಿಚಾರಿಸತೊಡಗಿದ. ಕೊನೆಗೊಂದು ದಿನ ಐದು ...ಗಳ ಬಳಿಕ ಅವಳನ್ನು ಭೇಟಿಯಾಗಿ ಆಕೆಯ ಆರೋಗ್ಯ ...ಸಿ ಬಂದಿದ್ದ. ಆದರೆ ಅವಳ ಮುಂದೆ ತನ್ನ ಸಿಟ್ಟನ್ನು ...ದಿಸಿರಲಿಲ್ಲ. ಬದಲಾಗಿ ಆಕೆಯನ್ನು ಪ್ರೀತಿಯಿಂದ ...ನಾಡಿಸಿ ತನ್ನ ಮುಂದಿನ ದಾರಿ ಬಗ್ಗೆ ಸ್ಕೆಚ್ ಹಾಕಲು ...ಕೂಲ ವಾತಾವರಣ ಮೂಡಿಸಿ ಬಂದಿದ್ದ. ಬಹಳ ...ಗಳ ಬಳಿಕ ಭೇಟಿಯಾದ ತನ್ನ ಮಗ ಮುಂದೇನು ...ನು ಎಂಬ ಆಲೋಚನೆ ನಿರ್ಮಲಾಳಿಗೂ ಬಂದಿಲ್ಲ. ...ಮಗನ ಪ್ರೀತಿಯ ಮಾತುಗಳಿಗೆ ಮರುಳಾಗಿ ಆಗಾಗ ...ಬರುಹೋಗು ಎಂದು ಆನಂದನಿಗೆ ಹೇಳಿ ತನ್ನ ಸಾವನ್ನು ... ಸಮೀಪಿಸಿಕೊಂಡಿದ್ದಾಳೆ. ಹೀಗೆ ರಾಜು ಇಂದೂರ

ಹುಣಸೆಯಲ್ಲಿದ್ದ ಸಮಯದಲ್ಲಿ ಮೂರ್‍ನಾಲ್ಕು ಬಾರಿ ನಿರ್ಮಲಾಳನ್ನು ಭೇಟಿಯಾಗಿ ಬಂದಿದ್ದ ಆನಂದ ಒಂದು ದಿನ ಇಬ್ಬರನ್ನೂ ಮುಗಿಸುವ ಸ್ಕೆಚ್ ಹಾಕಿದ. ಅದನ್ನು ಅವರ ಮನೆಯಲ್ಲೆ ಮಾಡುವುದಾಗಿ ಸ್ನೇಹಿತರ ಮುಂದೆ ಪ್ರಮಾಣ ಕೂಡಾ ಮಾಡಿದ್ದ. ಈ ವಿಚಾರವನ್ನು ತನ್ನ ತಂದೆ ವಿರೂಪಾಕ್ಷಗೌಡನಿಗೂ ತಿಳಿಸಿದ್ದ. ಆದರೆ ಅವರ್‍ಯಾರೂ ಇವನ ಮಾತನ್ನು ಸೀರಿಯಸ್ ಆಗಿ ತೆಗೆದುಕೊಂಡಿಲ್ಲ.

ಹೆತ್ತವಳ ರುಂಡ ಚೆಂಡಾಡಿದ

ಆನಂದಗೌಡ ಮೊನ್ನೆ ಗಣೇಶ ಹಬ್ಬದ ಮರುದಿನ ಅಮ್ಮ ನಿರ್ಮಲಾಳ ಮನೆಗೆ ಕಾಲಿಟ್ಟಿದ್ದಾನೆ. ಅಲ್ಲಿ ಅವಳೊಂದಿಗೆ ಸಹಜವಾಗಿ ಮಾತನಾಡುತ್ತಾ ತಿನ್ನಲು ಏನನ್ನಾದರೂ ಕೊಡುವಂತೆ ಕೇಳಿದ್ದಾನೆ. ನಿರ್ಮಲಾ ಅವಲಕ್ಕಿ ಅಥವಾ ಉಪ್ಪಿಟ್ಟು ಮಾಡುವುದಾಗಿ ಸ್ಟೋವ್ ಹಚ್ಚಲು ಹೋಗುತ್ತಿದ್ದಂತೆ ಈತ ಮನೆಯ ಮೂಲೆಯಲ್ಲಿದ್ದ ಕೊಡಲಿಯನ್ನು ತೆಗೆದುಕೊಂಡು ಅವ್ವನ ಕತ್ತಿಗೆ ಕೊಡಲಿ ಬೀಸಿದ್ದಾನೆ. ಕ್ಷಣಾರ್ಧ ದಲ್ಲಿ ತಾಯಿ ನಿರ್ಮಲಾ ಎರಡು ತುಂಡಾಗಿದ್ದಾಳೆ. ಒಂದು ವೇಳೆ ರಾಜು ಬಂದಿದ್ದರೆ ಅವನೂ ಹೆಣವಾಗುತ್ತಿದ್ದ.

ತಾಯಿಯನ್ನು ಕೊಂದ ಸುದ್ದಿಯನ್ನು ತಾನೇ ಜನರಿಗೆ ತಿಳಿಸಬೇಕು ಎಂದವನೇ ಅಲ್ಲೇ ಇದ್ದ ಪ್ಲಾಸ್ಟಿಕ್ ಬ್ಯಾಗ್‌ವೊಂದರಲ್ಲಿ ನಿರ್ಮಲಾಳ ರುಂಡವನ್ನಿಟ್ಟುಕೊಂಡು ಇಡೀ ಅಣ್ಣಿಗೇರಿ ಸುತ್ತಿದ್ದಾನೆ. ಕೊನೆಗೆ ರುಂಡವಿದ್ದ ಬ್ಯಾಗ್ ಅನ್ನು ಅಂಬಿಗೇರ ಸರ್ಕಲ್‌ನಲ್ಲಿಟ್ಟು ಎದುರಿಗಿದ್ದ ವೈನ್ ಶಾಪ್‌ನಲ್ಲಿ ಕಂಠಪೂರ್ತಿ ಕುಡಿದಿದ್ದಾನೆ. ಕುಡಿದ ಮತ್ತಿನಲ್ಲಿ ತನ್ನ ತಾಯಿಯ ರುಂಡ ಕತ್ತರಿಸಿ ತಂದಿರುವುದಾಗಿ ಹೇಳಿದ್ದಾನೆ. ಇವನ ಮಾತಿನಿಂದ ಗಾಬರಿಗೊಂಡ ಜನ ಆ ಕ್ರೂರ ಭಯಾನಕ ದೃಶ್ಯ ನೋಡಿ ಪೊಲೀಸರಿಗೆ ತಿಳಿಸಿದ್ದಾರೆ.

ಸದ್ಯ ಜೈಲಿನಲ್ಲಿ ರೊಟ್ಟಿ ಮುರಿಯುತ್ತಿರುವ ಹಂತಕ ಮೆಂಟಲ್ ಮಗ ಆನಂದನಿಗೆ ತನ್ನ ತಾಯಿಯನ್ನು ಆ ಪರಿ ಕ್ರೂರವಾಗಿ ತುಂಡರಿಸಿ ರುಂಡ ತೆಗೆದಿರುವ ಬಗ್ಗೆ ಕಿಂಚಿತ್ತೂ ಅಳುಕಿಲ್ಲ. ಬದಲಾಗಿ ಹೆಮ್ಮೆಪಟ್ಟುಕೊಳ್ಳುತ್ತಿದ್ದಾನೆ. "ಕಳೆದ ಐದಾರು ವರ್ಷಗಳಿಂದ ಕಳೆದುಹೋಗಿದ್ದ ನೆಮ್ಮದಿ ಈಗ ಸಿಕ್ಕಿದೆ. ನನಗೆ ಪಾಪಪ್ರಜ್ಞೆ ಇಲ್ಲ" ಅಂತಿದ್ದಾನೆ.

ಸೈದಾಪುರ ಗ್ರಾಮದ ಪಾಟೀಲರ ಫ್ಯಾಮಿಲಿ ಬುಡಕ್ಕೆ ಬತ್ತಿ ಇಟ್ಟಿದ್ದ ರಾಜು ಇಂದೂರನನ್ನು ಪ್ರಕರಣಕ್ಕೆ ಸಂಬಂಧಿಸಿದಂತೆ ಅಣ್ಣಿಗೇರಿ ಪೊಲೀಸರು ಬಂಧಿಸಿದ್ದಾರೆ.

ತಾಯಿ ಮಕ್ಕಳ ಜಗಳ ಈ ರೀತಿ ದುರಂತ ಅಂತ್ಯ ಕಂಡಿದ್ದು ಇಡೀ ಅಣ್ಣಿಗೇರಿ ಪಟ್ಟಣ ಮೌನಕ್ಕೆ ಶರಣಾಗುವಂತೆ ಮಾಡಿರುವುದಂತೂ ಸತ್ಯ...

• ಹುರಳಿಕುಪ್ಪಿ ವಿನಯ

ಕಾರ್ಟೂನ್ ಕಾರ್ನರ್



ಕೊಪ್ಪಳ-ಉಪ ಚುನಾವಣೆ ಓಟು ಕೇಳೋಕೆ ಕಳ್ಳರು ಬರ್ತಾರೆ ಹುಷಾರ್!



ಅಕ್ಷರಶಃ ಕೊಪ್ಪಳಕ್ಕೆ ಕಳ್ಳರ ದಂಡೇ ಹರಿದುಬರುತ್ತಿದೆ. ಇಡೀ ರಾಜ್ಯವನ್ನು ಕೇವಲ ಮೂರೇ ವರ್ಷದಲ್ಲಿ ಮುಕ್ಕಾಲು ಭಾಗ ತಿಂದು ತೇಗಿರುವ ಫ್ಲವರ್ ಪಾರ್ಟಿಯ ಪರಮನೆಂಟ್ ಕಳ್ಳರು ಈಗ ಓಟು ಕೇಳೋಕೆ ಕೊಪ್ಪಳಕ್ಕೆ ತಾಮುಂದು, ನಾಮುಂದು ಎಂದು ಹೊರಟಿದ್ದಾರೆ. ಅಧಿಕಾರವಿದ್ದಾಗ ಬಡವರಿಗೆ ಕೊಡಬೇಕಿದ್ದ ಮನೆಗಳನ್ನೂ ಮಾರಿಕೊಂಡು ಗೂಟದ ಕಾರಿನಾಸೆಗೆ ಮಂಗನಂತೆ ಪಕ್ಷ ಬದಲಿಸುವ ಸೋಕಾಲ್ಡ್ ಕಳ್ಳ ಕರಡಿ ಸಂಗಣ್ಣನೆಂಬ ಕಮಂಗಿಯ ದೆಸೆಯಿಂದಾಗಿ ಇಂತಹುದೊಂದು ಸ್ಥಿತಿ ನಿರ್ಮಾಣಗೊಂಡಿದೆ. ಕಳೆದ ಬಾರಿ ಕರಡಿ ಎಂಬ ಮಂಗನಿಗೆ ಜನ ತಮ್ಮ ಓಟು ಕೊಟ್ಟಿದ್ದರು. ಆದರೆ ಆತ ಮುಲಾಜಿಲ್ಲದೆ ತನ್ನನ್ನು ಬೇರೆ ಪಾರ್ಟಿಗೆ ಮಾರಿಕೊಂಡು ಚೆಡ್ಡಿಗಳಿಂದ ಆಪರೇಷನ್ ಮಾಡಿಸಿಕೊಂಡನಲ್ಲದೆ ತನ್ನ ಕ್ಷೇತ್ರದ ಜನರಿಗೂ ಅನವಶ್ಯಕವಾಗಿ ಒತ್ತಾಯದ ಚುನಾವಣಾ ಆಪರೇಷನ್ ಮಾಡುತ್ತಿದ್ದಾನೆ. "ಕಳ್ಳರೆಲ್ಲಾ ಒಂದಾಗೋಣ ಬನ್ನಿ" ಎಂಬ ಬಿಜೆಪಿಯ ಕರೆಗೆ ಓಗೊಟ್ಟು ಜೆಡಿಎಸ್‌ಗೆ ಗುಡ್‌ಬಾಯ್ ಹೇಳಿ ಕಳ್ಳರ ಸಂಗ ಬೆಳೆಸಿರುವ ಸಂಗಣ್ಣನ ಪರವಾಗಿ ಓಟು ಕೇಳಲು ಅದೇ ಕಳ್ಳರು ಈಗ ಬರುತ್ತಿದ್ದಾರೆ.

ಇಲ್ಲಿಯ ಮತದಾರರು ಒಂದನ್ನು ಸ್ಪಷ್ಟವಾಗಿ ಈಗ ಅರ್ಥಮಾಡಿಕೊಳ್ಳಬೇಕಾಗಿದೆ. ಇದು ಸಾರ್ವತ್ರಿಕ ಚುನಾವಣೆಯಲ್ಲ. ಬದಲಾಗಿ ಮತದಾರರ ಆಯ್ಕೆಯನ್ನು ಧಿಕ್ಕರಿಸಿ ಐದು ವರ್ಷ ತಮ್ಮ ಪ್ರತಿನಿಧಿ ಆಗಲು ಜನ ನೀಡಿದ್ದ ತೀರ್ಮಾನಕ್ಕೆ ವಿರುದ್ಧವಾಗಿ ಸಂಗಣ್ಣ ಕರಡಿ ನಡೆದುಕೊಂಡ ಫಲದಿಂದ ಎದುರಾಗಿರುವ ಬಲವಂತದ ಚುನಾವಣೆ ಇದು. ಕಳೆದ ಬಾರಿ ಗೆಲ್ಲುತ್ತಲೇ ತನ್ನ ನಿಜರೂಪ ಬೆತ್ತಲಾಗಿಸುತ್ತ ಹೊರಟ ಸಂಗಣ್ಣ ಅಭಿವೃದ್ಧಿ ಕಾಣದೆ ಹಾಳು ಕೊಂಪೆಯಂತಿರುವ ಕ್ಷೇತ್ರ ಹಾಗೂ ಜಿಲ್ಲಾ ಕೇಂದ್ರ ಕೊಪ್ಪಳದ ಉದ್ಧಾರದ ಬಗ್ಗೆ ಯೋಚಿಸಲಿಲ್ಲ. ಬದಲಾಗಿ ಸರ್ಕಾರದಿಂದ ಬಂದ ಅನುದಾನದ ಹಣವನ್ನು ಯಾವ ಕಾಮಗಾರಿ ಹೆಸರಲ್ಲಿ ಬಿಲ್ ಹಾಕಿ ತೆಗೆದರೆ ಪರಸೆಂಟೇಜ್ ಸೇಫಾಗಿ ತನ್ನ ತಿಜೋರಿ ಸೇರುತ್ತೆ ಎಂಬುದರ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಂಡ. ಬಡ ಮತ್ತು ಮಧ್ಯಮ ವರ್ಗದ ಜನರಿಗೆ ನೆರಳಾಗಬೇಕಿದ್ದ ಆಶ್ರಯ ಯೋಜನೆಯ ಮನೆಗಳನ್ನು ತನ್ನ ಶ್ರೀಮಂತ ಚೇಲಾಗಳಿಗೆ ಕೊಡಿಸಿ ಉಳಿದವನ್ನು ತನ್ನ ಚೇಲಾ ಶಿಷ್ಯ ಗಡುಗಿನಮಠನೊಂದಿಗೆ ಸೇರಿ ಮಾರಿಕೊಂಡು ಕೋಟ್ಯಂತರ ರೂಪಾಯಿಯನ್ನು ಗುಳುಂ ಮಾಡಿದ್ದ. ಇಂಥಾ ಖದೀಮ ಸಂಗಣ್ಣನಿಗೆ ಮತ ಕೊಡಿ ಎಂದು ಬಿಜೆಪಿಗರು ಬಡವರ ಮನೆ ಬಾಗಿಲಿಗೆ ಅದ್ಯಾವ ಮುಖ ಹೊತ್ತು ಬರುತ್ತಾರೋ?

ಕಳ್ಳರು ಬಂದ್ರು, ದಾರಿ ಬಿಡಿ

ಹೆಸರಿಗೆ ಜಾತ್ಯತೀತ ದಳದಲ್ಲಿದ್ದರೂ, ಕೆಲಸವೆಲ್ಲಾ ಯಡ್ಡಿ ಹೇಳಿದಂತೆ ಮಾಡುತ್ತಿದ್ದ ಕರಡಿ ಯಡ್ಡಿಯ ಸೀಟು ಉಳಿಸಲು ತನ್ನ ಸೀಟಿಗೆ ರಾಜೀನಾಮೆ ಕೊಟ್ಟು ನಿಗಮ ಮಂಡಳಿ ಅಧ್ಯಕ್ಷಗಿರಿ ಹೊಡಕೊಂಡಿದ್ದ. ಈಗ ಇವನ ಗೆಲುವಿಗಾಗಿ ಅದೇ ಸ್ವಜಾತೀಯ ಯಡಿಯೂರಪ್ಪ ತುದಿಗಾಲ ಮೇಲೆ ನಿಂತಿದ್ದಾನೆ. ಆದರೆ ಬಿಜೆಪಿ ಹೈಕಮಾಂಡ್ "ಯಾವ ಮುಖ ಹೊತ್ತು ಅಲ್ಲಿಗೆ ಹೋಗ್ತೀಯ. ತಳ ಮುಚ್ಚಿಕೊಂಡು ಮನೆಯಲ್ಲೆ ಬಿದ್ದಿರು" ಎಂದು ಯಡ್ಡಿಗೆ ಬ್ರೇಕ್ ಹಾಕಿದೆ.

ಅಸಲಿಗೆ ಆರು ತಿಂಗಳ ಹಿಂದೆ ಸಂಗಣ್ಣ ತನ್ನ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡುವ ಧೈರ್ಯ ಮಾಡಿದ್ದೇ ಪಕ್ಕದ ಬಳ್ಳಾರಿಯ ಗಣಿ ಧಣಿಗಳ ಮೇಲಿನ ಭರವಸೆಯಿಂದ. ಆಗಾಗ ಮಾಜಿ ಮಂತ್ರಿಗಳಾದ ಜನಾರ್ದನ ರೆಡ್ಡಿ, ಕರುಣಾಕರ ರೆಡ್ಡಿ ಮತ್ತು ಶ್ರೀರಾಮುಲು ಕೊಪ್ಪಳಕ್ಕೆ ಬಂದು ತಮ್ಮ ಹಣಬಲದ ದರ್ಪ ತೋರಿಸಿ ಖದರ್ ಬೆಳೆಸಿಕೊಂಡಿದ್ದನ್ನೆ ಎನ್‌ಕ್ಯಾಶ್ ಮಾಡಿಕೊಂಡು ಅವರನ್ನು ಜನರಿಗೆ ತೋರಿಸಿ ಓಟು ಗಿಟ್ಟಿಸಿಕೊಳ್ಳಲು ಹವಣಿಸುತ್ತಿದ್ದ ಸಂಗಣ್ಣ ಸದ್ಯದ ಪರಿಸ್ಥಿತಿ ಕಂಡು ಖುದ್ದು ಮಂಗನಂತಾಗಿದ್ದಾನೆ. "ನಾನೇ ಎಲೆಕ್ಷನ್‌ನಲ್ಲಿ ನಿನ್ನನ್ನು ಗೆಲ್ಲಿಸುತ್ತೇನೆ" ಎಂದು ಹೇಳಿದ್ದ ಜನಾರ್ದನ ರೆಡ್ಡಿ ಈಗ ಹೈದರಾಬಾದಿನ ಜೈಲಿನ ಕೋಣೆಯಲ್ಲಿ ಚಾಪೆಹಾಸಿಕೊಂಡು ಮಲಗಿದ್ದಾನೆ. ಇನ್ನು ಅವರಣ್ಣ ಕರುಣಾಕರ ರೆಡ್ಡಿ ತಮ್ಮನನ್ನು ಹೇಗೆ ಬಚಾವ್ ಮಾಡಬೇಕು, ಜೈಲಿನಿಂದ ಹೇಗೆ ಹೊರತರಬೇಕು ಎಂಬುದರಲ್ಲೆ ಬ್ಯುಸಿಯಾಗಿದ್ದಾನೆ. ಆಂಧ್ರ ರೌಡಿಗಳಂತೆ ವರ್ತಿಸುತ್ತಾ ಅಲ್ಲೊಂದು ಇಲ್ಲೊಂದು ಗೂಂಡಾ ಅಭಿಮಾನಿ ಪಡೆ ಕಟ್ಟಿಕೊಂಡಿರುವ ರೆಡ್ಡಿಗಳ ಭಂಟ ರಾಮುಲು ಇತ್ತ ತಿರುಗಿ ನೋಡಲು ಆಗದಷ್ಟು ತ್ರಾಸು ಮಾಡಿಕೊಂಡಿದ್ದಾನೆ. ಒಂದು ವೇಳೆ ಬಳ್ಳಾರಿಯ ಈ ಮೈನಿಂಗ್ ಲೂಟಿಕೋರರು ಓಟು ಕೇಳಲು ಬಂದರೂ ಇವರ ಢೋಂಗಿ ನಾಟಕಕ್ಕೆ ಮರುಳಾಗಿ ಮತ ನೀಡುವಂತಹ ಪೆದ್ದು ಜನ ಇಲ್ಲಿಲ್ಲ.

ಸಂಗಣ್ಣನ ಜಾತಕ

ಕೊಪ್ಪಳ ಕ್ಷೇತ್ರದ ಇತಿಹಾಸದಲ್ಲಿ ಸತತ ಎರಡು ಬಾರಿ ಗೆದ್ದ ಪ್ರಥಮ ಶಾಸಕನಾಗಿರುವ ಸಂಗಣ್ಣ ಕರಡಿ ರಾಜಕೀಯ ಜೀವನ ಪ್ರಾರಂಭಿಸಿದ್ದು ಅಲ್ಪಸಂಖ್ಯಾತರ ಬೆಂಬಲದಿಂದ. ಯಾವ ಪಕ್ಷದಲ್ಲಿಯೂ ಗುರುತಿಸಿಕೊಂಡಿರದ ಇವನನ್ನು ತಾಲ್ಲೂಕು ಬೋರ್ಡ್, ಆನಂತರ ಜಿಲ್ಲಾ ಪಂಚಾಯ್ತಿ ಅಲ್ಲದೆ ಪಿ.ಎಲ್.ಡಿ ಬ್ಯಾಂಕಿಗೂ ಜನ ಆರಿಸಿ ಕಳುಹಿಸಿದ್ದರು. ನಂತರ 1994ರಲ್ಲಿ ಪಕ್ಷೇತರನಾಗಿ ಕೊಪ್ಪಳದಿಂದ ಶಾಸಕನಾದ ಸಂಗಣ್ಣ ಆಗಿನ ದಳದ ಸರ್ಕಾರಕ್ಕೆ ಬೆಂಬಲಿಸಿದ್ದ ಸಹ ಸದಸ್ಯ ಕೂಡಾ ಆಗಿದ್ದ. ಜನತಾದಳ ಒಡೆದು ಹೋಳಾದಾಗ ದೇವೇಗೌಡರ ಬಣಕ್ಕೆ ಜಿಗಿದಿದ್ದ ಸಂಗಣ್ಣ ನಂತರ ಪಟೇಲರ ಬಾಲ ಬಡಿಯಲು ಶುರು ಹಚ್ಚಿದ್ದ. 1999ರ ವಿಧಾನಸಭೆಗೆ ಜೆಡಿಎಸ್‌ನಿಂದ ಸ್ಪರ್ಧೆಗಿಳಿದ ಸಂಗಣ್ಣನನ್ನೆ ಇಲ್ಲಿಯ ಮುಸ್ಲಿಮರು ಮತ್ತು ಹಿಂದುಳಿದ ದಲಿತ ಸಮುದಾಯದ ಜನ ಭಾರೀ ಬಹುಮತದಿಂದ ಗೆಲ್ಲಿಸಿ ಕಳುಹಿಸಿದ್ದರು. ಆ ಸಮಯದಲ್ಲಿ ಕಾಂಗ್ರೆಸ್ಸಿನಿಂದ ಇವನಿಗೆ ಬುಲಾವು ಕೂಡಾ ಬಂದಿತ್ತು. ಸ್ವತಃ ಎಸ್.ಎಂ.ಕೃಷ್ಣ ಕಾಂಗ್ರೆಸ್ಸಿನಿಂದ ಸ್ಪರ್ಧಿಸುವಂತೆ ಕರಡಿಗೆ ಒತ್ತಾಯಿಸಿದ್ದರು. ಆದರೆ ಅಲ್ಲಿಗೆ ಹೋಗದೆ, ದಳದಿಂದ ನಿಂತು ಆರಿಸಿ ಬಂದು ತನ್ನ ಸ್ವಂತ ಕಮಾಯಿಗೆ ನಿಂತನೆ ಹೊರತು ತನ್ನನ್ನು ಗೆಲ್ಲಿಸಿದ್ದ ಜನರತ್ತ ತಿರುಗಿ ನೋಡಲಿಲ್ಲ.

2008ರಲ್ಲಿ ಜೆಡಿಎಸ್‌ನಿಂದ ವಿಧಾನಸಭೆಗೆ 3ನೇ ಬಾರಿಗೆ ಆಯ್ಕೆಯಾಗಿ ತನ್ನ ಹಲ್ಕಾ ಬುದ್ಧಿಯನ್ನು ಮತ್ತೆ ಜನರ ಮುಂದೆ ತೆರೆದಿಟ್ಟು ಈಗ ತನ್ನ ತೀಟೆಗಾಗಿ ಎಂಎಲ್‌ಎಗಿರಿಗೆ ರಾಜೀನಾಮೆ ಕೊಟ್ಟು ನಾಲ್ಕನೇ ಬಾರಿ ಆಯ್ಕೆಗಾಗಿ ಓಟು ಕೇಳಲು ಹೊರಟಿದ್ದಾನೆ. ಅಂತಹವನನ್ನು ಬೆಂಬಲಿಸಿಕೊಂಡು ಇಡೀ ನಾಡನ್ನೇ ಲೂಟಿ ಮಾಡಲು ಹೊರಟಿರುವ ಖದೀಮ ಚೆಡ್ಡಿಗಳು ಮತ ಕೇಳಲು ಕೊಪ್ಪಳಕ್ಕೆ ಕಾಲಿಡುತ್ತಿದ್ದಾರೆ. ಇದಕ್ಕಿಂತ ದುರಂತ ಇನ್ನೊಂದು ಬೇಕೇ?

ಹಗರಣಗಳೇ ಇವನ ಸಾಧನೆ

ತನ್ನ ಮೂರನೇ ಅವಧಿ ಮುಗಿಸಿ ನಾಲ್ಕನೇ ಅವಧಿಗೆ ಶಾಸಕನಾಗುವ ಕನಸು ಕಾಣುತ್ತಿರುವ ಸಂಗಣ್ಣ ಕರಡಿ ಹಗರಣಗಳನ್ನೇ ಆಭರಣದಂತೆ ಧರಿಸಿಕೊಂಡಿರುವಾತ. ಜಮೀನುಗಳನ್ನು ಸರಕಾರಿ ಯೋಜನೆಗಾಗಿ ಜನರಿಂದ ದಾನವಾಗಿ ಪಡೆದು ನಂತರ ಸರಕಾರಿ ಹಣದಲ್ಲೆ ಅವುಗಳನ್ನು ಅಭಿವೃದ್ಧಿಪಡಿಸಿ ನಂತರ ಇಂತಿಷ್ಟು ಅಂತಾ ಹಣ ನಿಗದಿಪಡಿಸಿ ಮಾರಿದ್ದಾನೆ. ಅವುಗಳಲ್ಲಿ ಆಶ್ರಯ ಮನೆ ಹಗರಣ ಸಿಓಡಿ ತನಿಖೆವರೆಗೂ ಸಾಗಿದೆ. ಸುಮಾರು 120 ಎಕರೆ ಜಮೀನನ್ನು ರೈತರಿಂದ ದಾನ ಎಂದು ಪತ್ರ ಬರೆಯಿಸಿಕೊಂಡು ನಂತರ ಅಲ್ಲಿ ನಗರಸಭೆಯಿಂದ ಅಭಿವೃದ್ಧಿ ಮಾಡಿ ಮನೆ ನಿರ್ಮಿಸಿ ಮನೆಯೊಂದಕ್ಕೆ 15-20 ಸಾವಿರದಂತೆ ಮಾರಿಕೊಂಡಿದ್ದಾನೆ. ಸುಮಾರು ಎರಡು ಸಾವಿರ ಮನೆಗಳು ಸಂಗಣ್ಣನಿಂದ ಬಿಕರಿಯಾಗಿವೆ. ಈ ಬಗ್ಗೆ ಅಸೆಂಬ್ಲಿಯಲ್ಲೂ ಚರ್ಚೆಯಾಗಿ ನಂತರ ಸಿಓಡಿಗೆ ತನಿಖೆ ಮಾಡಲು ಸೂಚಿಸಲಾಗಿದೆ. ಈ ಪ್ರಕರಣ ಮುಚ್ಚಿಹಾಕಲು ಹಿಂದಿನ ಯಡ್ಡಿ ಸರ್ಕಾರ ಮುಂದಾಗಿದ್ದದ್ದೇ ಸಂಗಣ್ಣನ ಬಿಜೆಪಿ ಪ್ರವೇಶಕ್ಕೆ ಹೂವಿನ ಹಾರ ಹಾಕಿದಂತಾಗಿದೆ ಅಷ್ಟೆ. ಕಳ್ಳನ ಸ್ವಾಗತಕ್ಕೆ ಖದೀಮರ ಸಿದ್ಧತೆ ಎಂಬಂತೆ ಚೆಡ್ಡಿಗಳು ಕರಡಿ ಸಂಗಣ್ಣನ ಎಲ್ಲಾ ಕಳ್ಳಾಟಗಳನ್ನು ತಿಪ್ಪೆ ಸಾರಿಸಲು ಸಜ್ಜಾಗಿದ್ದಾರೆ. 20 ಕೋಟಿ ಹಣದ ಜೊತೆಗೆ ಮಂತ್ರಿಗಿರಿ ಅಥವಾ ನಿಗಮ ಮಂಡಳಿ ಅಧ್ಯಕ್ಷತೆಯ ಒಪ್ಪಂದಕ್ಕೆ ಎಸ್ ಎಂದು ಬಿಜೆಪಿ ಸೇರಿ ಈಗ ಚುನಾವಣಾ ಅಖಾಡಕ್ಕಿಳಿದಿರುವ ಸಂಗಣ್ಣ ಅದೆಷ್ಟು ದಿನ ಗೂಟದ ಕಾರಿನಲ್ಲಿ ಓಡಾಡುತ್ತಾನೋ ನೋಡುತೇವಿ ಎಂದು ಅವನನ್ನು ಬೆಂಬಲಿಸುತ್ತಾ ಬಂದಿರುವ ಕೊಪ್ಪಳದ ಅಲ್ಪಸಂಖ್ಯಾತ ಹಾಗೂ ಹಿಂದುಳಿದವರು ಬಗ್ಗುಬಡಿಯಲು ಸಜ್ಜಾಗಿದ್ದಾರೆ.


ಒಟ್ಟಿನಲ್ಲಿ ಕೊಪ್ಪಳದ ಜನತೆಗೆ ಈ ಚುನಾವಣೆ ಬೇಡವಾಗಿತ್ತು. ಆದರೆ ಚೆಡ್ಡಿಗಳ ಕೊಳಕು ಆಪರೇಷನ್ ರಾಜಕಾರಣಕ್ಕೆ ಬಲವಂತವಾಗಿ ಎದುರಿಸಬೇಕಾಗಿದೆ. ಸಂಗಣ್ಣ ರಾಜೀನಾಮೆ ಕೊಟ್ಟ ಕೆಲ ದಿನಗಳಲ್ಲೇ ಚುನಾವಣೆ ಘೋಷಣೆಯಾಗಿದ್ದರೆ ಪರಿಣಾಮ ಏನಾಗುತ್ತಿತ್ತೋ. ಆದರೆ ಈಗ ಪರಿಸ್ಥಿತಿ ಬದಲಾಗಿದೆ. ಮೊಸಳೆ ಕಣ್ಣೀರಿನಿಂದ ಜನರನ್ನು ಮೂರ್ಖರನ್ನಾಗಿ ಮಾಡಿ ದಾರಿ ತಪ್ಪಿಸುತ್ತಿದ್ದ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಭೂ ಲೂಟಿಕೋರನಾಗಿ ಹೊರಹೊಮ್ಮಿದ್ದಾನೆ. ಮಾಡಿದ ತಪ್ಪಿಗಾಗಿ ಜೈಲು ಸೇರುವ ಹಂತದಲ್ಲಿದ್ದಾನೆ. ಅಲ್ಲದೆ. ಪ್ರಭಾವೀ ಮುಖಂಡರಂತೆ ಪೋಸು ಕೊಡುತ್ತಿದ್ದ ರೆಡ್ಡಿ ಬ್ರದರ್ಸ್‌ನಲ್ಲೊಬ್ಬ ಈಗಾಗಲೇ ಜೈಲು ಕೋಣೆಯಲ್ಲಿದ್ದಾನೆ. ಇಂತಹ ಲೂಟಿಕೋರರ ಫ್ಲವರ್‌ಪಾರ್ಟಿಯಲ್ಲಿ ಪರಮನೆಂಟಾಗಿರ್ತೀನಿ ಎಂದು ಹೇಳಿಕೊಂಡು ಪ್ರಚಾರಕ್ಕಿಳಿದಿರುವ ಸಂಗಣ್ಣ ಕರಡಿ ಕ್ಷೇತ್ರದ ಜನರಿಗೆ ಮಾಡುತ್ತಿರುವ ಮತ್ತೊಂದು ಚೀಟಿಂಗ್ ಅಲ್ಲದೆ ಬೇರೇನೂ ಅಲ್ಲ. ಈಗ ಈ ಕಳ್ಳರೆಲ್ಲಾ ಒಂದಾಗಿ ಕೊಪ್ಪಳಕ್ಕೆ ಕಾಲಿಟ್ಟು ತಮ್ಮ ಕೊಳಕು ರಾಜಕಾರಣ ತೋರಿಸಲು ಬರುತ್ತಿದ್ದಾರೆ. ಮತದಾರರೇ ಇನ್ನಾದರೂ ಎಚ್ಚರಾಗಿ...

• ಹುರಳಿಕುಪ್ಪಿ ವಿನಯ

ಗೌರೀಶರ ಅನನ್ಯ ವ್ಯಕ್ತಿತ್ವ

ಅವರ ಬರಹಗಳಲ್ಲಿ ಕಂಡಂತೆ

• ಜಿ.ರಾಜಶೇಖ



ಇದೇ ಸೆಪ್ಟೆಂಬರ್ 12 ರಂದು ಸಾಹಿತಿ ಗೌರೀಶ ಕಾಯ್ಕಿಣಿ ಅವರ ಜನ್ಮ ಶತಾಬ್ದಿ. ಮಾನವತಾವಾದಿಯೂ, ಹಲವಾರು ಕಿರಿಯ ಲೇಖಕರಿಗೆ ಮಾರ್ಗದರ್ಶಿಯೂ ಆಗಿದ್ದ ಗೌರೀಶ ಕಾಯ್ಕಿಣಿ ಅವರ ನೆನಪಿನಲ್ಲಿ ಅವರ ವ್ಯಕ್ತಿತ್ವ ಮತ್ತು ಬರಹವನ್ನು ಕುರಿತು ಚಿಂತಕ-ಬರಹಗಾರ ಜಿ.ರಾಜಶೇಖರ ಅವರು ಬರೆದಿರುವ ಲೇಖನ ಇಲ್ಲಿದೆ.

ಗೌರೀಶ್ ಕಾಯ್ಕಿಣಿ ತಮ್ಮ ಆತ್ಮಚರಿತ್ರೆ ಬರೆದಿಲ್ಲ; ಬರೆಯುವ ಯೋಚನೆಯೂ ಅವರಿಗೆ ಇದ್ದಿರಲಾರದು. ತಮ್ಮ ವೈಯಕ್ತಿಕ ನೆನಪು ಮತ್ತು ಅನುಭವಗಳ ಬಗ್ಗೆ ಅವರು ತಮ್ಮ ಬಿಡಿ ಬರಹಗಳಲ್ಲೇ ಹಲವೆಡೆ ಬರೆದಿದ್ದಾರೆ. ಆ ಬರಹಗಳು ಅವರ ಜೀವಿತ ಕಾಲದಲ್ಲಿ ಸಾರ್ವಜನಿಕ ಜೀವನದ ಮುನ್ನೆಲೆಗೆ ಬಂದ ವಾಗ್ವಾದಗಳ ಪರಿಶೀಲನೆಯೂ ಆಗಿದೆ. ಗೌರೀಶರ ಗದ್ಯದ ವೈಚಾರಿಕತೆಗೆ, ಅವರ ಸ್ವಂತದ ನೆನಪುಗಳು ಒಂದು ಸಂದರ್ಭವನ್ನೂ, ತುರ್ತನ್ನೂ ಒದಗಿಸುತ್ತವೆ ಮತ್ತು ಅವರ ನೆನಪುಗಳು ಕಾಲಕ್ಷೇಪದ ಲಹರಿಗಳಾಗದೆ ವಿಚಾರದ ತೂಕವನ್ನು ಪಡೆದುಕೊಳ್ಳುತ್ತವೆ. ಗೌರೀಶರು ಸ್ವಾಧ್ಯಾಯಿ; ತಮ್ಮ ಓದು, ಚಿಂತನೆ, ಸಂಶೋಧನೆಗಳನ್ನೆಲ್ಲ ಅವರು ಕೇವಲ ಸ್ವಾಂತಸುಖಾಯಃ ಎಂಬ ದೃಷ್ಟಿಯಿಂದ ಮಾಡಿರುವುದು, ಅದರ ಪರಿಣಾಮವಾಗಿ ಅವರ ಬರಹಗಳಲ್ಲಿ ಘನತೆ ಇದೆ. ಆದರೆ ಪಾಂಡಿತ್ಯದ ಶಿರೋಭಾರ ಇಲ್ಲ. ಪ್ರಾಚೀನ ಸಾಹಿತ್ಯದ ಜೊತೆಗಿನ ಅವರ ಒಡನಾಟ ಸಹೃದಯಿ ರಸಿಕನದ್ದೇ ವಿನಾ ವಿದ್ವಾಂಸನದ್ದಲ್ಲ. ಪರಂಪರೆಯ ಜೊತೆ ಗೌರೀಶರು ಹೊಂದಿದ್ದ ಸಂಬಂಧವಾದರೂ ಓರ್ವ ಗೃಹಸ್ಥನದ್ದೇ ಹೊರತು ಸಂತನದ್ದೂ ಅಲ್ಲ; ಕ್ರಾಂತಿಕಾರಿಯದ್ದೂ ಅಲ್ಲ. ಅವರ ಬರಹಗಳಿಂದ ನಮ್ಮ ಮನಸ್ಸಿನಲ್ಲಿ ಮೂಡುವ ಗೌರೀಶರ ಚಿತ್ರ ಅಡಿಗರ "ಸ್ವಾತಂತ್ರ್ಯ: 1958 ರ ಪಾಠ"ದ ಈ ಸಾಲುಗಳನ್ನು ನೆನಪಿಸುವಂತಹದ್ದು.

"ಎಷ್ಟೇ ಬಂದರು ಹಕ್ಕಿ ಅಷ್ಟು ಸಂತಸವುಕ್ಕಿ

ಗೃಹಸ್ಥ ಧರ್ಮದ ಗಂಧ ತೇಯುತ್ತದೆ"

ಗೌರೀಶರು ತಮ್ಮ ಬದುಕಿನಲ್ಲೂ, ಬರವಣಿಗೆಯಲ್ಲೂ ಶ್ರದ್ಧೆಯಿಂದ ಪಾಲಿಸಿದ ಈ ಗೃಹಸ್ಥ ಧರ್ಮವನ್ನು ಮನಗಾಣದವರು ಮಾತ್ರ ಅವರುದು ಪೂರ್ಣದೃಷ್ಟಿ ಇಲ್ಲದ ಭೌತವಾದ ಎಂದು ಆಕ್ಷೇಪಿಸಿಯಾರು. ಬಲಪಂಥೀಯ ಸಂಪ್ರದಾಯವಾದಿಗಳು ಆರೋಪಿಸುವಂತೆ ಗೌರೀಶರ ಚಿಂತನೆಗಳ ಮೇಲೆ ಭೌತವಾದದ ಪ್ರಭಾವವಿರುವುದು ನಿಜ. ಕರ್ನಾಟಕದಲ್ಲಿ ಮಾರ್ಕ್ಸ್‌ವಾದದ ಹೆಸರನ್ನೇ ಹೆಚ್ಚಿನವರು ಕೇಳಿರದ ಕಾಲದಲ್ಲಿ ಅವರು ಮಾರ್ಕ್ಸ್‌ವಾದ ಕುರಿತು ಒಂದು ಕಿರುಹೊತ್ತಗೆಯನ್ನು ಪ್ರಕಟಿಸಿದ್ದರು. ತನಗೆ ಒಳಿತು ಎಂದು ಕಂಡ ವಿಚಾರಗಳನ್ನು, ಅವುಗಳ ವ್ಯುತ್ಪತ್ತಿ ಹೇಗೇ ಇರಲಿ, ಅವು ಯಾವುದೇ ಮೂಲದವಾಗಿರಲಿ-ಗೌರೀಶರು ನಿರ್ಬಿಢೆಯಾಗಿ ಸ್ವೀಕರಿಸುತ್ತಿದ್ದರು. ಮಾರ್ಕ್ಸ್, ರಸೆಲ್, ವಿಲ್ ಡ್ಯೂರಂಟ್, ಡಾರ್ವಿನ್, ಎಂ.ಎನ್. ರಾಯ್, ರವೀಂದ್ರರು, ಪ್ರಾಚೀನ ಲೋಕಾಯತ ಮತ್ತಿತರ ವಿಚಾರವಾದಿಗಳು-ಹೀಗೆ ಗೌರೀಶರು ಎಲ್ಲ ಮೂಲಗಳಿಂದ ತಮಗೆ ಬೇಕಾದ್ದನ್ನು ಪಡೆದುಕೊಂಡರು; ಆದರೆ ಯಾವ ಪಂಥಕ್ಕೂ ಮಣೆ ಹಾಕಲಿಲ್ಲ. ಒಂದು ಸಂದರ್ಶನದಲ್ಲಿ ಅವರು ತಾನು ಮಾರ್ಕ್ಸ್‌ವಾದಿಯಾಗಿದ್ದರೂ ಕಮ್ಯುನಿಸ್ಟನಲ್ಲ ಎಂದು ಹೇಳಿಕೊಂಡಿದ್ದಾರೆ; ಇನ್ನೊಂದೆಡೆ ಅವರು ಸ್ಟಾಲಿನ್‌ನ ಕ್ರೌರ್ಯವನ್ನೂ, ಸರ್ವಾಧಿಕಾರವನ್ನೂ ಖಂಡಿಸಿದ್ದಾರೆ. ಹಾಗಾದರೆ ಗೌರೀಶರಿಗೆ ಆರೋಪಿಸಲಾಗಿರುವ ಭೌತವಾದದ ನಿಜವಾದ ನೆಲೆ ಯಾವುದು? ಸಮಾನತೆಯನ್ನು ಅವರು ತಮ್ಮ ಬದುಕಿನುದ್ದಕ್ಕೂ ಪ್ರತಿಪಾದಿಸಿದರು. ಜೊತೆಗೆ ಈ ಲೋಕದ ನಮ್ಮ ಜೀವನವೇ, ಅಲೌಕಿಕ ಮತ್ತು 'ಪರ'ದ ಕುರಿತ ನಮ್ಮ ಕಲ್ಪನೆಗಳಿಗೂ ಮೂಲಾಧಾರ ಎಂಬ ತಮ್ಮ ನಂಬಿಗೆಯಲ್ಲೂ ಅವರು ಓರ್ವ ಭೌತವಾದಿಯಾಗಿದ್ದರು. ಮತ್ತೆ ನನಗೆ ಅಡಿಗರ "ಸ್ವಾತಂತ್ರ್ಯ: 1958 ರ ಪಾಠ"ದ ಸಾಲು ನೆನಪಾಗುತ್ತದೆ.

"................. ಕಲ್ಪನೆಯೊಳಗೆ

ಬೀಜವೊಂದೇ ಹಬ್ಬಿ ತಬ್ಬಬಹುದಬಿಳಾಂಡ ಕೋಟಿಯನ್ನು

ಪ್ರಾಣವೋ ಅಸ್ಥಿ ಪಂಜರಬದ್ಧ....."

ವಾಸ್ತವಾನುಭವದ ನೆಲೆಗಟ್ಟು ಇಲ್ಲದ ಆದರ್ಶ, ಅಸ್ಥಿಪಂಜರದ ಕಸುವಿಲ್ಲದ ಪ್ರಾಣದಂತೆ ಎಂಬ ತಮ್ಮ ಗ್ರಹಿಕೆಯಲ್ಲಿ ಗೌರೀಶರು ಓರ್ವ ಭೌತವಾದಿ. ಅವರು ತಮ್ಮ ಸಮಕಾಲೀನ ಸಮಾಜವನ್ನೂ ಗತಕಾಲದ ಪರಂಪರೆಯನ್ನೂ ವಿಮರ್ಶೆಗೆ ಒಳಪಡಿಸಿದ್ದು ಸಹ ಈ ಗ್ರಹಿಕೆಯ ಮುಖಾಂತರವೇ. ಗೌರೀಶರ ಈ ವೈಚಾರಿಕತೆ, ಪಶ್ಚಿಮದ ಮಾನವತಾವಾದ, ಸಮಾಜವಾದ, ವಿಚಾರವಾದಗಳ ಜೊತೆಗೆ ಚಾರ್ವಾಕ, ನಿರೀಶ್ವರವಾದ, ಲೋಕಾಯತಗಳನ್ನು ಕಸಿ ಕಟ್ಟಿದಂತೆ ಎಂದು ದಾವೆ ಹಾಕುವುದೇ ಆದರೆ, ಈ ದಾವೆಯಲ್ಲಿ ಗೌರೀಶರೊಬ್ಬರನ್ನೇ ಪ್ರತಿವಾದಿಯನ್ನಾಗಿ ಮಾಡುವುದರಲ್ಲಿ ಅರ್ಥವಿಲ್ಲ. ಈ ವಿಚಾರಗಳ ಕಸಿಕಟ್ಟುವಿಕೆ ಅಥವಾ ಸಂಕರದ 'ಅಪರಾಧ'ವನ್ನು ಎಸಗದ ಆಧುನಿಕ ಭಾರತದ ಧೀಮಂತರು ಯಾರಿದ್ದಾರೆ?

ಗೌರೀಶರು ಕನ್ನಡ ನವೋದಯ ಮತ್ತು ದೇಶದ ಸ್ವಾತಂತ್ರ್ಯ ಚಳವಳಿಯ ಸ್ವಾತಂತ್ರ್ಯ ಸಮಾನತೆ ಹಾಗೂ ಪ್ರಜಾಪ್ರಭುತ್ವದ ಆಶಯಗಳಿಗೆ ತಮ್ಮ ಪ್ರಬಂಧಗಳಲ್ಲಿ ಮಾತಿನ ರೂಪ ಕೊಡಲು ಯತ್ನಿಸಿದವರು. ಅಸ್ಮಿತೆ, ಆತ್ಮಾನುಸಂಧಾನಗಳ ಜೊತೆ ಆತ್ಮಶೋಧನೆ ಮತ್ತು ಆತ್ಮವಿಮರ್ಶೆಗಳಲ್ಲಿಯೂ "ಭಾರತದ ಪರಿಕಲ್ಪನೆ," ಒಡಮೂಡುತ್ತಿದ್ದ ಆ ಕಾಲದ "ಯುಗ ಧರ್ಮ"ವೇ ಗೌರೀಶರ ಗದ್ಯದಲ್ಲಿ ಪ್ರತಿಫಲಿತವಾಗಿದೆ. ಪರಂಪರೆಯ ಬಗ್ಗೆ ಅರಿವು ಮತ್ತು ಅಭಿಮಾನಗಳ ಜೊತೆ ಅದರ ವಿಮರ್ಶೆಯೂ ಅವರ ಯೋಚನಾಕ್ರಮದಲ್ಲಿ ಸೇರಿ ಹೋಗಿದೆ. ಜೀವನಾನುಭವದ ಸ್ಪರ್ಶವಿಲ್ಲದ ಅಮೂರ್ತ ವಿಚಾರಗಳ ಬಗ್ಗೆ ಗೌರೀಶರು ಬರೆದದ್ದು ಅಪರೂಪ. ಪರಂಪರೆಯ ಜೊತೆ ಗೌರೀಶರಿಗೆ ಇದ್ದ ಸ್ವೀಕಾರ ಮತ್ತು ನಿರಾಕರಣೆಗಳ ಬಿಕ್ಕಟ್ಟಿನ ಅನುಸಂಧಾನ ಅವರ ಜನ್ಮಭೂಮಿ ಮತ್ತು ಕರ್ಮಭೂಮಿ ಆಗಿದ್ದ ಗೋಕರ್ಣದ ಜೊತೆಗೆ ಅವರು ಹೊಂದಿದ್ದ ಸಂಕೀರ್ಣ ಸಂಬಂಧದಲ್ಲೇ ವ್ಯಕ್ತವಾಗುತ್ತದೆ. ತೀರ್ಥಕ್ಷೇತ್ರವೂ ಆಗಿರುವ ಗೋಕರ್ಣದಂತಹ ಸಣ್ಣ ಊರಿನಲ್ಲಿ ಮಾಸ್ತರಿಕೆ ಮಾಡಿಕೊಂಡೇ ಗೌರೀಶರು ವಿಶ್ವಾತ್ಮಕ ಸಂಸ್ಕೃತಿಯನ್ನು ಮೈಗೂಡಿಸಿಕೊಂಡಿದ್ದರು ಎನ್ನುವುದಕ್ಕೆ ಅವರ ಬರಹಗಳಲ್ಲಿ ಹೇರಳ ನಿದರ್ಶನಗಳು ಸಿಗುತ್ತವೆ. ಆದರೆ ಅಷ್ಟನ್ನೇ ಹೇಳಿದರೆ ಬರಿದೇ ಬೆನ್ನು ತಟ್ಟುವ ಮೆಚ್ಚುಗೆಯ ಮಾತು ಬಿಟ್ಟು ಅವರ ಕುರಿತು ಏನನ್ನೂ ಹೇಳಿದ ಹಾಗಾಗುವುದಿಲ್ಲ. ಗೌರೀಶರು ಘನವಾದ ಆದರ್ಶಗಳನ್ನು ಪ್ರತಿಪಾದಿಸಿದರು ಎಂಬ ಹೇಳಿಕೆ ಅವರ ಗದ್ಯದ ಅನನ್ಯತೆಯನ್ನಾಗಲೀ, ಅವರ ವೈಚಾರಿಕತೆಯನ್ನಾಗಲೀ ವಿವರಿಸಲಾರದು. ಆದರ್ಶಗಳನ್ನು ಎತ್ತಿಹಿಡಿಯುವ ಭರದಲ್ಲಿ ಗೌರೀಶರು ತಮ್ಮ ವ್ಯಕ್ತಿತ್ವದ ಒಗರು ಮತ್ತು ನೋಟದ ವಿಶಿಷ್ಟತೆಗಳನ್ನು ಯಾವತ್ತೂ ಬಿಟ್ಟುಕೊಟ್ಟವರಲ್ಲ. "ಬಿಷಪ್‌ರಿಗೆ ಹಸ್ತೋದಕ"ವೆಂಬ ಅವರ ಕಿರುಬರಹವೊಂದರ ಉದಾಹರಣೆಯ ಮೂಲಕ ನನ್ನ ಮಾತನ್ನು ಸ್ಪಷ್ಟಪಡಿಸುತ್ತೇನೆ. ಈ ಬರಹದ ಮೇಲೆ ಗೌರೀಶರ ಛಾಪು ಎಷ್ಟು ಅಚ್ಚೊತ್ತಿದೆ ಎಂದರೆ, ಅವರಲ್ಲದೆ ಬೇರೆ ಯಾರಿಂದಲೂ ಇಂತಹದ್ದನ್ನು ನಿರೀಕ್ಷಿಸಲು ಸಹ ಸಾಧ್ಯವಿಲ್ಲ. ಆ ಬರಹದಲ್ಲಿ ಅವರು ನಿರೂಪಿಸುವ ಘಟನೆ ಗೋಕರ್ಣದಲ್ಲಿ ಅಲ್ಲದೆ ಬೇರೆ ಎಲ್ಲಿಯೂ ಸಂಭವಿಸುವುದು ಸಾಧ್ಯವಿಲ್ಲ. ಸ್ವಾತಂತ್ರ್ಯ ಚಳವಳಿಯ ಹುರುಪು ಮಾಗದ 50 ರ ದಶಕದ ಮೊದಲ ದಿನಗಳಲ್ಲದೆ ಬೇರಾವ ಕಾಲದಲ್ಲೂ ಅಂತಹದ್ದೊಂದು ನಡೆಯಲು ಸಾಧ್ಯವಿಲ್ಲ. ಇಷ್ಟಕ್ಕೂ ಗೌರೀಶರು ಆ ಬರಹದ ಮೂಲಕ ನಮಗೆ ಮನಗಾಣಿಸಲು ಯತ್ನಿಸಿದ್ದು ಸರ್ವಧರ್ಮಸಮಭಾವದ ಒಂದು ವಿಶ್ವಾತ್ಮಕ ಮೌಲ್ಯವನ್ನು. ಗೌರೀಶರು ಅಲ್ಲಿ ಸ್ವಂತ ಅಭಿಪ್ರಾಯದ ಒಂದು ಮಾತನ್ನೂ ಬರೆದಿಲ್ಲ. 1950 ರ ಸುಮಾರಿಗೆ ಗೋಕರ್ಣದಲ್ಲಿ ಹೊಸತಾಗಿ ಆರಂಭಗೊಂಡಿದ್ದ ಅಂಬರಚರಖಾ ವರ್ಗಗಳ ಕಾರ್ಯಾಲಯದ ಉದ್ಘಾಟನೆಗೆ ಮುಂಬಯಿಯಿಂದ ಹಿರಿಯ ಗಾಂಧಿವಾದಿ ಹಾಗೂ ಕ್ರೈಸ್ತ ಧರ್ಮಗುರು ಬಿಷಪ್ ಲೆಷ್ ಬರುತ್ತಾರೆ. ಅವರು ಉಳಿದುಕೊಂಡಿರುವುದು ಗೋಕರ್ಣದ ಮಹಾಬಲೇಶ್ವರ ದೇವಸ್ಥಾನದ ಹಿರಿಯ ಅರ್ಚಕ ಶೇಷಂಭಟ್ಟ ಮುಳೆಯವರಲ್ಲಿ. ಅಂದು ಶೇಷಂಭಟ್ಟರ ತಂದೆಯ ಶ್ರಾದ್ಧ ದಿನ. ಲೆಷ್‌ರಂತಹ ಮಹಾನುಭಾವರು ಆ ದಿನವೇ ತಮ್ಮ ಅತಿಥಿಗಳಾಗಿ ಬಂದದ್ದರಿಂದ ಭಾವಾವಿಷ್ಟರಾದ ಶೇಷಂಭಟ್ಟರು ಅವರಿಗೆ ಹಸ್ತೋದಕ ಕೊಟ್ಟು, ದಕ್ಷಿಣೆ ಇತ್ತು ಉದ್ದಂಡ ನಮಸ್ಕಾರ ಮಾಡುತ್ತಾರೆ. ಕಟ್ಟಾಮಡಿಬ್ರಾಹ್ಮಣ ಆಚರಣೆಯಾಗಿರುವ ಶ್ರಾದ್ಧದಲ್ಲಿ ಕುಲಪುರೋಹಿತರಿಗೆ ಮಾತ್ರ ಸಲ್ಲುವ ಮರ್ಯಾದೆ ಇದು. ಕ್ರೈಸ್ತ ಗುರು ಲೆಷ್ ಗಾಂಧಿಭಕ್ತರಾಗಿದ್ದರು ಎಂಬ ಕಾರಣಕ್ಕೆ ಶೇಷಂಭಟ್ಟರಿಗೆ ಅವರು ಜಗದ್ಗುರುವಿನಂತೆ ಕಂಡರು. ಬಿಷಪ್ ಲೆಷ್‌ರ ಬಗ್ಗೆ ಹೇಳುವಾಗ ಗೌರೀಶರು ಗೋಕರ್ಣದಲ್ಲಿ ಅಸ್ತಿ ವಿಸರ್ಜನೆ ಮಾಡುವ ತಾಮ್ರಪರ್ಣಿಕುಂಡದಲ್ಲಿ ಮಹಾತ್ಮ ಗಾಂಧಿಯವರ ಚಿತಾಭಸ್ಮವನ್ನೂ ವಿಸರ್ಜಿಸಲಾಗಿತ್ತು ಎಂದೂ, ಲೆಷ್ ಅವರು ಆ ಸಂದರ್ಭದಲ್ಲೂ ಗೋಕರ್ಣಕ್ಕೆ ಬಂದಿದ್ದರು ಎಂದೂ ನೆನಪು ಮಾಡಿಕೊಳ್ಳುತ್ತಾರೆ.

ಬಿಷಪ್ ಲೆಷ್‌ರನ್ನು ಶೇಷಂಭಟ್ಟ ಮುಳೆ ಗೌರವಿಸಿದ ಬಗೆ ಹಾಗೂ ಅದನ್ನು ಸಮ್ಮತಿ ಮತ್ತು ಮೆಚ್ಚುಗೆಯಲ್ಲಿ ಗೌರೀಶರು ದಾಖಲಿಸಿದ ರೀತಿ ನನಗೆ ಒಂದು ಸಾಂಸ್ಕೃತಿಕ ನಿಲುವು ಅಥವಾ gestureನಂತೆ ಕಂಡಿದೆ. ಬೈಬಲ್‌ನ ಅತ್ಯಂತ ಹೃದಯವಿದ್ರಾವಕ ಪ್ರಸಂಗವಾಗಿರುವ ಯೇಸುವಿನ ದೇಹತ್ಯಾಗವನ್ನು ವಸ್ತುವಾಗಿಸಿಕೊಂಡು ದಿ. ಮಂ.ಮಂ. ಗೋವಿಂದ ಪೈಗಳು ಕನ್ನಡದಲ್ಲಿ 'ಗೊಲ್ಗೊಥಾ' ಖಂಡಕಾವ್ಯವನ್ನು ರಚಿಸಿದ್ದು ಕೂಡ ಇಂತಹದ್ದೇ ಸಾಂಸ್ಕೃತಿಕ ನಿಲುವು. ಈ ಸಂಕಲನದಲ್ಲಿರುವ ಗೌರೀಶರ ಎರಡು ಲೇಖನಗಳು, "ಯೇಸು ಸಿಲುಬೆಗೇರಿದ್ದು ಹೇಗೆ?" ಮತ್ತು "ಯೇಸುವಿನ ಯಾಚನೆ"ಗಳು ಸಹ ಇದೇ ನಿಲುವಿನ ಅಭಿವ್ಯಕ್ತಿ. ಕರಾವಳಿಯ ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಬೈಬಲ್ ಆಧಾರಿತ ಯಕ್ಷಗಾನ ಬಯಲಾಟದ ಪರಂಪರೆ ಇದೆ. ಸ್ವಾತಂತ್ರ್ಯ ಹೋರಾಟಗಾರರೂ, ಸುಪ್ರಸಿದ್ಧ ಯಕ್ಷಗಾನ ಕಲಾವಿದರೂ ಆಗಿದ್ದ ಮಲ್ಪೆ ಶಂಕರನಾರಾಯಣ ಸಾಮಗರು ನಿರ್ವಹಿಸುತ್ತಿದ್ದ ಅನೇಕ ಪೌರಾಣಿಕ ಪಾತ್ರಗಳ ಜೊತೆ ಅವರ ಯೇಸುಕ್ರಿಸ್ತನ ಪಾತ್ರ ಹೆಸರುವಾಸಿಯಾಗಿದ್ದಿತು. ಸಾಮಗರದ್ದೂ ಇದೇ ಸಾಂಸ್ಕೃತಿಕ ನಿಲುವು. ಆದರೆ ಇಷ್ಟನ್ನೇ ಹೇಳಿ ಈ ವೃತ್ತಾಂತವನ್ನು ನಿಲ್ಲಿಸಿದರೆ ಅದು ಆಧುನಿಕ ಕನ್ನಡ ಸಂಸ್ಕೃತಿಯ ಭಾಗಶಃ ನಿರೂಪಣೆಯಷ್ಟೇ ಆದೀತು. ಕಳೆದ ವರ್ಷ, ದಕ್ಷಿಣ ಕನ್ನಡ ಜಿಲ್ಲೆಯ ಹಳೆ ಅಂಗಡಿ ಎಂಬ ಕಡಲತೀರದ ಸಣ್ಣ ಊರಿನಲ್ಲಿ ಜಿಲ್ಲೆಯ ಹೊರಗಿನವರಿಗೆ ವಿಲಕ್ಷಣವೆಂದು ತೋರುವ, ಆದರೆ ಇಲ್ಲಿ ಅಷ್ಟೇನೂ ವಿಶೇಷವೆನ್ನಿಸದ ವಿದ್ಯಮಾನವೊಂದು ಸಂಭವಿಸಿತು. ಆ ಊರಿನ ಹಿರಿಯ ಪ್ರಾಥಮಿಕ ಶಾಲೆಯನ್ನು 19 ನೆಯ ಶತಮಾನದ ಅಂತ್ಯದ ಸುಮಾರಿಗೆ ಕ್ರೈಸ್ತ ಮಿಷನರಿಗಳು ಸ್ಥಾಪಿಸಿದ್ದು, ಹಲವು ವರ್ಷಗಳ ಹಿಂದೆಯೇ ಅದು ತನ್ನ ಶತಮಾನೋತ್ಸವವನ್ನು ಆಚರಿಸಿದೆ. ಹಳೆ ಅಂಗಡಿ ಮತ್ತು ಆಸುಪಾಸಿನ ಬಡ ವಿದ್ಯಾರ್ಥಿಗಳಿಗೆ ಅನುಕೂಲವಾಗಿರುವ ಏಕಮಾತ್ರ ಶಾಲೆ ಅದು. 2009 ರ ಸಾಲಿನ ಈ ಶಾಲೆಯ ವಾರ್ಷಿಕೋತ್ಸವದಲ್ಲಿ 'ಯೇಸು ಕ್ರಿಸ್ತ ಮಹಾತ್ಮೆ' ಎಂಬ ಯಕ್ಷಗಾನ ಪ್ರಸಂಗವೊಂದನ್ನು ವಿದ್ಯಾರ್ಥಿಗಳು ಆಡಿ ತೋರಿಸುವುದು ಎಂದು ನಿಗದಿಯಾಗಿತ್ತು. ವಿದ್ಯಾರ್ಥಿ ಕಲಾವಿದರಿಗೆ ತಾಲೀಮು ಮಾ[...] ವೃತ್ತಿನಿರತ ಕಲಾವಿದರನ್ನು ನೇಮಿಸಲಾಗಿತ್ತು. [...] ವಾರ್ಷಿಕೋತ್ಸವಕ್ಕೆ ಕೆಲವು ದಿನಗಳ ಮೊದಲು, ಉ[...] ಒಂದು ಯುವ ಸಂಘಟನೆಯವರು ವಿದ್ಯಾರ್ಥಿಗಳ ಹೆ[...] ಮನೆಮನೆಗೆ ಹೋಗಿ, ಹಿಂದೂ ವಿದ್ಯಾರ್ಥಿಗಳು [...] ಯಕ್ಷಗಾನ ಪ್ರಸಂಗದಲ್ಲಿ ಪಾತ್ರ ಮಾಡಬಾರದು ಎ[...] ತಾಕೀತು ಮಾಡಿದರು. ಸಮಾರಂಭದಲ್ಲಿ ಗಲಾಟೆ [...] ಬಹುದು ಎಂದು ಹೆದರಿ ಶಾಲೆಯ ಆಡಳಿತ ಮಂ[...] ಯವರು, ವಾರ್ಷಿಕೋತ್ಸವವನ್ನೇ ರದ್ದು ಮಾಡಿದರು. [...] ಘಟನೆ ನಡೆಯುವುದಕ್ಕೆ ಒಂದೆರಡು ತಿಂಗಳ ಮೊದ[...] ದ.ಕ., ಉಡುಪಿ ಜಿಲ್ಲೆಗಳೂ ಸೇರಿದಂತೆ, ರಾಜ್ಯದ ಹಲ[...] ಕ್ರೈಸ್ತ ಪ್ರಾರ್ಥನಾ ಮಂದಿರಗಳ ಮೇಲೆ ದಾಳಿ ನಡೆದ[...] ಸಹ ನಾವು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬೇ[...] ಆಗ ಮಾತ್ರ ಆಧುನಿಕ ಕನ್ನಡ ಸಂಸ್ಕೃತಿಯ ಈ ವೃತ್ತಾ[...] ಅದರ ವೈರುಧ್ಯಗಳ ಸಮೇತ ಸಂಪೂರ್ಣವಾಗುವು[...] ಈ ದಾಳಿ ನಡೆಸಿದವರು ದೂರ ದೇಶದಿಂದ ಬಂದವ[...] ಅವರೂ ಕನ್ನಡಿಗರು ಮತ್ತು ಜನಸಾಮಾನ್ಯರು. [...] ಹಿನ್ನೆಲೆಯಲ್ಲಿ ಗೌರೀಶರ "ಬಿಷಪ್‌ರಿಗೆ ಹಸ್ತೋದಕ" ಮ[...] ಓದನ್ನು ಬಯಸುತ್ತದೆ. ಆ ಬರಹದ ಮುಗ್ಧತೆ, ಉ[...] ಮತ್ತು ನಿರ್ವ್ಯಾಜ ಅಂತಃಕರಣ ಮೊದಲ ಓದಿಗೇ ನಮ[...] ಹೊಳೆದುಬಿಡುತ್ತದೆ. ಆದರೆ ತುಸು ಎಚ್ಚರವಿಟ್ಟು ಓದಿ[...] ತಿಳಿನೀರಕೊಳದಂತೆ ಇರುವ ಅದರ ಗದ್ಯದಲ್ಲಿ ನ[...] ಕಾಲದ ರಕ್ತಸಿಕ್ತ ಮುಖವೂ ಕಂಡೀತು.

ಗೌರೀಶರಿಗೆ ಅವರ ಸಮಕಾಲೀನರಾಗಿದ್ದ ಹಿರಿ[...] ಕನ್ನಡ ಸಾಹಿತಿಗಳ ಜೊತೆ ಸ್ನೇಹದ ಸಂಬಂಧವಿತ್ತು; ಸಂಸ್ಕೃ[...] ವ್ಯಾಸ, ವಾಲ್ಮೀಕಿ, ಕಾಳಿದಾಸಾದಿ ಕವಿಗಳ ಜೊತೆ ಓದಿ[...] ಅನುಸಂಧಾನವಿತ್ತು, ಈ ಅನುಸಂಧಾನ ಸದಭಿರುಚಿ[...] ಓದನ್ನೂ ಮೀರಿ, ಪಾಂಡಿತ್ಯಕ್ಕೆ ಮಾತ್ರ ಸಲ್ಲುವ ಮೌಲ್ಯ[...] ಗಳನ್ನು ಪಡೆದುಕೊಳ್ಳಬಹುದೇ ಹೇಗೆ ಎಂಬುದನ್ನು ಸಂಸ್[...] ವಿದ್ವಾಂಸರೇ ಹೇಳಬೇಕು. ಅದು ನನ್ನ ಅಳವಿಗೆ ಮೀರಿ[...] ಹಾಗಾಗಿ ಈ ವಿದ್ವತ್ ಪರೀಕ್ಷೆಯಲ್ಲಿ ಗೌರೀಶರನ್ನು ಪಾ[...] ಮಾಡಿಸುವ ಉಸಾಬರಿಗೆ ನಾನು ಹೋಗುವುದಿ[...] ಅವರಿಗಿಂತ ತುಂಬ ಕಿರಿಯನಾಗಿರುವ ನನಗೆ [...] ಯೋಗ್ಯತೆಯೂ ಇಲ್ಲ. ಇಷ್ಟಕ್ಕೂ ಆ ಪ್ರಯಾಸವಾದರ[...] ಯಾಕೆ ಬೇಕು? ಗೌರೀಶರ ಯಾವ ಬರಹದಲ್[...] ಪಾಂಡಿತ್ಯದ ಅಹಮಿಕೆ ಇಲ್ಲ. ಒಂದೆಡೆ, ಅವರು ತಮ್ಮ[...] "ಅರ್ಧಶ್ಲೋಕಪಂಡಿತರು" ಎಂದೇ ಕರೆದುಕೊಂಡಿದ್[...] (ವಾಕ್ಯ ವಿಡಂಬನೆ 3). ಗೌರೀಶರ ಬರವಣಿಗೆಯ ಇನ್ನೊಂ[...] ವೈಶಿಷ್ಟ್ಯವನ್ನೂ ನಾವು ಈ ಸಂದರ್ಭದಲ್ಲಿ ಅಗ[...] ಗುರುತಿಸಬೇಕು. ತನ್ನ ಬರಹಗಳಲ್ಲಿ ಪ್ರಸ್ತಾಪಿತವಾಗಿರು[...] ಯಾವುದೇ ವಿಚಾರವನ್ನಾಗಲೀ, ಹೊಸದಾಗಿ, ತನ್ನದೇ ಸ್ವ[...] ಎಂಬಂತೆ ಓದುಗರ ಮುಂದೆ ಇಡುವ ಗತ್ತು ಅವರ[...] ಎಂದೂ ಇರಲಿಲ್ಲ. ಈಗಾಗಲೇ ಯಾರಿಂದಲೋ ಮೊದ[...] ಗೊಂಡು ಇನ್ನೂ ತನ್ನ ಅಂತಿಮ ಮಜಲನ್ನು ತಲುಪ[...] ಇರುವ ವಾಗ್ವಾದವೊಂದರಲ್ಲಿ ತಾನು ನಡುವೆ ಬಾ[...] ಹಾಕುತ್ತಿದ್ದೇನೆ ಎಂಬ ಧ್ವನಿ ಗೌರೀಶರ ಎಲ್ಲ ಬರಹಗಳಲ್[...] ಸ್ಥಾಯಿಯಾಗಿ ಇರುವಂತಹದ್ದು. ಈ ಅರ್ಥದಲ್ಲಿ ಅವ[...] ಅಮಾರ್ತ್ಯ ಸೆನ್ ಹೇಳುವ "The argumentativ[...] Indian"ನ ಪರಂಪರೆಗೆ ಸೇರಿದವರು. ಉದಾಹರಣೆ[...] "ವಾಲ್ಮೀಕಿ ತೂಕಡಿಸಿದಾಗ-1" ಎಂಬ ಶೀರ್ಷಿಕೆ[...] ಪ್ರಬಂಧದ ಮೊದಲ ಸಾಲುಗಳನ್ನು ನೋಡಿ:

"ಇತ್ತೀಚೆಗೆ ಶ್ರೀರಾಮನ ವನವಾಸದ ಹಿಂದಿ[...] ಪ್ರೇರಣೆಯ ವಿಷಯದ ಒಂದು ಉದ್ಬೋಧಕ ಲೇಖನ[...] ಉದಯವಾಣಿಯ ರವಿವಾರದ ಸಂಚಿಕೆಯಲ್ಲಿ ಪ್ರಕ[...] ವಾಯಿತು. ಅದನ್ನು ಓದಿದಾಗ ನನ್ನ ಮನಸ್ಸು ನೆನಪಿ[...] ಓಣಿಯಲ್ಲಿ ಹಿಂದೆ ಓಡಿತು. 20 ವರ್ಷಗಳ ಹಿಂ[...] ಹೊನ್ನಾವರದ ಅಂದಿನ ಜನತಾ ಸಾಪ್ತಾಹಿಕದಲ್ಲಿ ನಾನ[...] ಒಂದು ಲೇಖಮಾಲೆಯನ್ನು ಪೋಣಿಸಿದ್ದೆ- 'ವಾಲ್ಮೀ[...] ತೂಕಡಿಸಿದಾಗ-ಶ್ರೀರಾಮ ತಪ್ಪಿಬಿದ್ದ!' ಇದು ಆ ಮಾಲೆಯ[...] ಶೀರ್ಷಿಕೆ ಮತ್ತು ಉಪಶೀರ್ಷಿಕೆ ಆಗಿತ್ತು.

ಹಿರಿಯ ಪತ್ರಿಕೋದ್ಯಮಿಗಳೂ ಕವಿಗಳೂ ಆದ ದಿ[...] ಶ್ರೀ ಪಾಂಡೇಶ್ವರ ಗಣಪತಿರಾಯರ ಸಂಪಾದಕತ್ವದ[...] ನಡೆಯುತ್ತಿದ್ದ ಆ 'ಜನತಾ' ಪತ್ರಿಕೆಯಲ್ಲಿ ನನ್ನ ಬರಹದಿಂ[...] ಸಾಕಷ್ಟು ಕೆರಳಿದ ಪ್ರತಿಕ್ರಿಯೆಗಳು ಶ್ರೀರಾಮಭಕ್ತರಿಂ[...] ಬಂದವು. ಆದರೆ ಸೂಕ್ತ ಸಮರ್ಪಕ ಖಂಡನೆ ಬರೆಯಲು [...] ತೊಂದರೆ ಪಟ್ಟವರು ಯಾರೂ ಇಲ್ಲ!"


ಉದ್ಧೃತದ ಎರಡನೆಯ ಪ್ಯಾರಾದ "ಶ್ರೀರಾಮ ಎಂಬ ನುಡಿಗಟ್ಟನ್ನು ಬಳಸಿದಾಗ ಮುಂದೆ ಅದು ಕೊಂಡ ಘನಘೋರ ಅರ್ಥಗಳು ಗೌರೀಶರಿಗೆ ರಲಿಕ್ಕಿಲ್ಲ. ಆದರೆ ಕಳೆದ ಎರಡು ದಶಕಗಳಲ್ಲಿ ನ್ನೇ ಬೆಚ್ಚಿಬೀಳಿಸಿದ ರಾಮಭಕ್ತರ ಹಠ ಮತ್ತು ನಗಳ ಮುನ್ಸೂಚನೆ ಅವರಿಗೆ ಸಿಕ್ಕಿರಬಹುದು. ಈ ದಿ ಭಯಂಕರ ರಾಮಭಕ್ತರು, ಮೊದಲು ಶಬ್ದಾರ್ಥ, ರ್ಥಗಳ ಮೂಲಭೂತವಾದಿಗಳಾಗಿ ನಂತರ ಧಾರ್ಮಿಕ ಭೂತವಾದಿಗಳೂ ಆಗಿ ಬೆಳೆದುನಿಂತವರು. ತಮ್ಮ ನ್ನೂರು ರಾಮಾಯಣಗಳು' ಎಂಬ ಖ್ಯಾತ ಪ್ರಬಂಧ ನರಲ್ಲಿ ದಿ.ಎ.ಕೆ.ರಾಮಾನುಜನ್ ಭಾರತ ಉಪಖಂಡ ಆಗ್ನೇಯ ಏಷ್ಯಾದ ವಿವಿಧ ದೇಶಗಳಲ್ಲಿ ಯಣದ ನೂರಾರು ವಕ್ತವ್ಯಗಳು ಇರುವುದನ್ನೂ ಳಲ್ಲಿ ಹಲವು ವಕ್ತವ್ಯಗಳು ಒಂದು ಇನ್ನೊಂದಕ್ಕೆ ವ್ಯತಿರಿಕ್ತವಾಗಿರುವುದನ್ನು ಸೋದಾಹರಣ ನಿರೂಪಿಸಿ ರಾಮಾಯಣ ಒಂದು ಮೂಲಪಾಠ–ವಾಲ್ಮೀಕಿ ಯಣ ಮತ್ತು ನಂತರ ಅದರ ವಿವಿಧ ಆವೃತ್ತಿಗಳು, ಗಳು, ಪಾಠಾಂತರಗಳು, ಭಾಷಾಂತರಗಳು ಈ ಮಣಿಕೆಯಲ್ಲಿ ಮೈತಳೆದ ಕಾವ್ಯ ಎಂಬ ರೂಢಮೂಲ ವನ್ನೇ ರಾಮಾನುಜನ್ ತಿರಸ್ಕರಿಸುತ್ತಾರೆ. ಆ ಕ್ಕೇನೇ ಅವರು ರಾಮಾಯಣದ ಪಠ್ಯ ಮತ್ತು ಅದರ ಪಾಠಾಂತರಗಳು ಎಂದು ಹೇಳದೆ ವಕ್ತವ್ಯಗಳು ನ ನಿರೂಪಣೆ) ಎಂಬ ಶಬ್ದವನ್ನು ಬಳಸುತ್ತಾರೆ. ಕಾವ್ಯದ ಹಲವು ವಕ್ತವ್ಯಗಳು ಅಂದರೆ ಹಲವು ಪಣೆಗಳು ಮತ್ತು ಅರ್ಥೈಸುವಿಕೆಗಳು ಮಾತ್ರವಲ್ಲ ಳಿಕೆ ಅವುಗಳೆಲ್ಲದರ ಸಹಬಾಳ್ವೆ ಕೂಡ. ರಾಮಾಯಣ ಮಹಾಭಾರತದಂತಹ ಕಾವ್ಯಗಳಲ್ಲಿ ಮಾತ್ರ ಇದು ಅವು ಕಾವ್ಯಗಳಾಗಿರದೆ ಶಾಸ್ತ್ರ ಅಥವಾ ಪಾರಾಯಣ ಗಳಾಗಿದ್ದರೆ ಅವಕ್ಕೆ ಈಗ ಕಾಣುವಂತಹ ಬಹುಭಾಷಾ, ವಚನಿಸ್ವರೂಪ ಖಂಡಿತ ಇರುತ್ತಿರಲಿಲ್ಲ. ಗೌರೀಶ್ ಕಿ ತೂಕಡಿಸಿದಾಗ 1 ಮತ್ತು 2','ದಶರಥನ ದಿರು', 'ಅಹಲ್ಯೋದ್ಧಾರ' ಹಾಗೂ 'ಶೂರ್ಪನಖೀ ಗ'- ಈ ಪ್ರಬಂಧಗಳಲ್ಲಿ ಅವರು ಕೇಳಿದ ಪ್ರಶ್ನೆಗಳು ನಿಂದ ಮೊದಲ್ಗೊಂಡು ವಿವಿಧ ಪಾತ್ರಗಳ ಕುರಿತ ನಡೆಸುವ ಜಿಜ್ಞಾಸೆ ಮತ್ತು ಕವಿಯ ಮನೋಗತದ ಅವರು ಎತ್ತುವ ಸಂದೇಹಗಳು, ರಾಮಾಯಣದ ಹುವಚನಿ ಪರಂಪರೆಯ ಭಾಗವೇ ಆಗಿದೆ. ಯಣ ಐತಿಹಾಸಿಕ ನಿರ್ದಿಷ್ಟತೆ ಉಳ್ಳ ದಾಖಲೆಗ್ರಂಥ ಪ್ಪರೆ ಅದರ ಪಾತ್ರ ಚಿತ್ರಣದ ಕುರಿತು ಭಿನ್ನ ಮತದ ಇರುತ್ತಿರಲಿಲ್ಲ. ತಮ್ಮ 'ವಾಲ್ಮೀಕಿ ತೂಕಡಿಸಿದಾಗ-2' ಧದಲ್ಲಿ ಗೌರೀಶರು ಇದೇ ಅಭಿಪ್ರಾಯವನ್ನು ತ್ತಾರೆ. 'ಶ್ರೀರಾಮಚಂದ್ರ ಆದರ್ಶ ಮಹಾಪುರುಷನು ವಲ್ಲ, ಶ್ರೀ ವಿಷ್ಣುವಿನ ಅವತಾರವೇ ಎಂಬ ಕ್ತಿಗಳ ಸಮನ್ವಿತ ಭೂಮಿಕೆ ನನ್ನದಲ್ಲ. ನಾನೊಬ್ಬ ನಾಸ್ತಿಕ, ಧರ್ಮಾಧರ್ಮ ಪಾಪಪುಣ್ಯಗಳ ಸೂಕ್ಷ್ಮಕ್ಕಿಂತ ವಿಯ ಮಾನಸ ಸೃಷ್ಟಿಯ ವಾಕ್ಯಕಾವ್ಯಾಸತ್ಯವೇ. ನನಗೆ ಚಾರದಲ್ಲಿ ಮುಖ್ಯ. ಹಾಗೂ ಪ್ರಸ್ತುತ ವಿಷಯಕ್ಕೆ ವಾಲ್ಮೀಕಿಯೊಬ್ಬನೇ ಆಧಾರ. ಆತ ರೂಪಿಸಿದ ಮನ ವ್ಯಕ್ತಿಚಿತ್ರವೇ ಅದಕ್ಕೆ ಆಶ್ರಯ. ಅವತಾರವೆಂದು ಸಲಿ, ಮಹಾಪುರುಷನೆಂದು ಮನ್ನಿಸಲಿ ಅಥವಾ ಕಾವ್ಯದ ನಾಯಕ ಪಾತ್ರವೆಂದು ಮೆಚ್ಚಲಿ–ನಾವು ನನ್ನು ಹೇಗೆ ಕಂಡರೂ ಆದಿಯಲ್ಲಿಯೂ, ಅಂತ್ಯ ಯೂ (ಮಧ್ಯದಲ್ಲಿಯೂ ಕೂಡಾ) ಆತ ವಾಲ್ಮೀಕಿಯ ."

ರಾಮಾಯಣದ ಕುರಿತು ಗೌರೀಶರು ತಳೆದ ನಿಲುವು ದ ಅಲ್ಲೇ ಕಟ್ಟುವೆವು' ಎಂದು ದೇಶಾದ್ಯಂತ ದೊಂಬಿ ನಡೆಸಿದ ರಾಮಭಕ್ತರ ಹಠಕ್ಕಿಂತ–ಅದು ಭಕ್ತಿ ಕೂಡಾ ಅಲ್ಲ– ಭಿನ್ನವಾದದ್ದು. ಈಗಿನ ಉತ್ತರ ಪ್ರದೇಶ ರಾಜ್ಯದ ಪೂರ್ವದಲ್ಲಿರುವ ಫೈಜಾಬಾದ್‌ನಗರದ ಒಂದು ಬಡಾವಣೆ ಯಾಗಿರುವ ಅಯೋಧ್ಯೆಯೇ ರಾಮ ಹುಟ್ಟಿದ ಸ್ಥಳ ಎಂದು ಸದ್ದಿ ರಾಮಭಕ್ತರು ಗಲಾಟೆ ಎಬ್ಬಿಸಿದಾಗ ಕೇರಳದ ಮಾಜಿ ಮುಖ್ಯಮಂತ್ರಿ ಇ.ಕೆ.ನಯನಾರ್ 'ಅಯೋಧ್ಯೆ ಉತ್ತರ ಪ್ರದೇಶದಲ್ಲಿದೆಯೇ? ರಾಮ ಹುಟ್ಟಿದ್ದು ಕೇರಳದಲ್ಲಿ ಎಂದು ಇದುವರೆಗೆ ನಾನು ತಿಳಿದಿದ್ದೆ!' ಎಂದು ಉದ್ಗರಿಸಿದ್ದರಂತೆ. ನಯನಾರ್ ಕಮ್ಯುನಿಸ್ಟರಾದರೂ ರಾಮನನ್ನು ಪುರಾಣಪುರುಷನೆಂದೇ ಭಾವಿಸಿದ್ದರು. ರಾಮಾಯಣ ಇತಿಹಾಸವಾಗಿರದೆ ಕಾವ್ಯವಾಗಿರುವುದರಿಂದಲೇ ಗೋಕರ್ಣದ ಸ್ಥಳಪುರಾಣವೂ ಸೃಷ್ಟಿಯಾಗಿದೆ. ಗೌರೀಶರೂ ಅದನ್ನು ಕಾವ್ಯವೆಂದೇ ಓದುವ ಮತ್ತು ಅರ್ಥೈಸುವ ಪರಂಪರೆಯನ್ನು ಮುಂದುವರೆಸಿದ್ದಾರೆ. ಭೂಪಟದಲ್ಲಿ ಬೆರಳಿಟ್ಟು ಗುರುತಿಸಬಹುದಾದ ಉತ್ತರಪ್ರದೇಶ ರಾಜ್ಯದ ಒಂದು ಊರೇ ರಾಮ ಹುಟ್ಟಿದ ಸ್ಥಳ ಎಂದು ಹಠ ಹಿಡಿಯುವ ಹಾಗೆ ರಾಮಾಯಣಕ್ಕೂ ಒಂದು ಮೂಲ ಪಾಠವಿದೆ; ಅದು ಸಂಸ್ಕೃತದ ವಾಲ್ಮೀಕಿ ರಾಮಾಯಣವೇ ಹೊರತು ಇನ್ನಾವ ಪಾಠವೂ ಅಲ್ಲ ಮತ್ತು ಆ ಪಾಠಕ್ಕೆ ಒಂದು ಪ್ರಶ್ನಾತೀತ ವಾದ ಅರ್ಥವಿದೆ ಎಂದು ಹಠ ಹಿಡಿಯುವ ವಿದ್ವಾಂಸರೂ ಈಗೀಗ ಹೆಚ್ಚಾಗುತ್ತಿದ್ದಾರೆ. ಅವರು ರಾಮಾಯಣ ಕಾವ್ಯದ ಅರ್ಥಶುದ್ಧಿಯ ವಾರಸುದಾರಿಕೆಯ ಜೊತೆ ಭಾರತೀಯ ಸಂಸ್ಕೃತಿಯ ಉಸ್ತುವಾರಿಯನ್ನೂ ವಹಿಸಿ ಕೊಂಡಿದ್ದು ಗೌರೀಶರಂತಹವರ ಭಿನ್ನಮತೀಯ ಚಿಂತನೆಗಳನ್ನೇ ವಿದ್ರೋಹವೆಂದೋ ಪಶ್ಚಿಮ ಪ್ರಣೀತವೆಂದೋ ಹೀಗೆಳೆಯುವುದು ಅವರ ಸಂಸ್ಕೃತಿ ರಕ್ಷಣೆಯ ವಿಧಾನವಾಗಿದೆ. ಸಮಾನತೆ, ಸಮಾಜವಾದ, ಪ್ರಜಾಪ್ರಭುತ್ವ ಮತ್ತು ಸರ್ವಧರ್ಮ ಸಮಭಾವಗಳು ಗೌರೀಶರು ನೆಚ್ಚಿದ ಆದರ್ಶಗಳು. ಗೋಕರ್ಣದ ಮಹರ್ಷಿದೈವದಾತರಲ್ಲಿ ಅವರಿಗೆ ಗೌರವವಿದ್ದರೆ, ತಮ್ಮದೇ ಜಿಲ್ಲೆಯ ಸಮಾಜವಾದಿ ಧುರೀಣ ದಿನಕರ ದೇಸಾಯಿಯವರ ಬಗ್ಗೆ ಆದರಾಭಿಮಾನಗಳಿದ್ದವು. ಹಾಗಾಗಿ ಚಿಂತನೆಯಲ್ಲಿ ವಿದ್ರೋಹಿ ಎಂದು ಹೇಳಿದರೆ ಗೌರೀಶರ ಬಗೆಗಂತೂ ಅದು ಮೂದಲಿಕೆಯ ಮಾತಾಗ ಬಾರದು. ಮಾರ್ಕ್ಸ್, ರಸೆಲ್, ಡಾರ್ವಿನ್, ವಿಲ್‌ಡ್ಯೂರಂಟ್ ಮೊದಲಾದ ಮಹನೀಯರನ್ನು ಋಷಿ ಸಮಾನರು ಎಂದು ಭಾವಿಸಿದ್ದ ಗೌರೀಶರ ಬಗ್ಗೆ ಪಶ್ಚಿಮ ಬುದ್ಧಿಯವರು ಎಂಬ ಮಾತು ಸಹ ಅವಹೇಳನವಲ್ಲ. ಆದರೆ ಹೀಗೆ ಟೀಕಿಸುವವರ ವಾಗ್ದಾಳಿಗಳ ಎದುರು ಗೌರೀಶರ ಪರವಾಗಿ ಬ್ಯಾಟ್ ಮಾಡಬೇಕಾದ ಅವಶ್ಯಕತೆ ಇಲ್ಲ. 'ಋತುಗಾನ' ಎಂಬ ತಮ್ಮ ಪ್ರಬಂಧದಲ್ಲಿ ಅವರು ತಮ್ಮ ಲೋಕದೃಷ್ಟಿಯನ್ನು ಹೀಗೆ ವಿಶದಪಡಿಸಿದ್ದಾರೆ: 'ಜಗತ್ತಿನಂತೆಯೇ ಧರ್ಮವೂ ಪರಿವರ್ತನಶಾಲಿ. "ಜಗತ್ತಿನಲ್ಲಿ ಜಂಗಮವೊಂದೇ ಸ್ಥಾವರ" ಈ ಮಾತು ಗೌರೀಶರ ಮ್ಯಾನಿಫೆಸ್ಟೋದಂತಿದೆ. ಬಸವನ ಸುಪ್ರಸಿದ್ಧ ವಚನವೊಂದರ ಜಂಗಮ, ಸ್ಥಾವರಗಳ ಪರಿಕಲ್ಪನೆಯನ್ನು ಈ ಪ್ರಬಂಧದಲ್ಲಿ ಅವರು ಗ್ರೀಕ್ ತತ್ವಜ್ಞಾನಿ ಅರಿಸ್ಟಾಟಲ್ ಹೇಳಿದ ಬಡಗಿಯ ಚಾಕುವಿನ ವೃತ್ತಾಂತದ ಮೂಲಕ ಬೆಳೆಸುತ್ತಾರೆ. ಆ ಬಡಗಿ ತನ್ನ ಬಳಿ ಇರುವ ಚಾಕು ಬಹಳ ಹಳೆಯದು ಎಂದು ಹೇಳಿಕೊಳ್ಳು ತ್ತಿದ್ದ."ಒಮ್ಮೊಮ್ಮೆ ಅದರ ಹಿಡಿ ಬದಲಾಯಿಸಿದ್ದೇನೆ. ಅದರ ಅಲಗನ್ನೂ ಕೆಲವು ಸಲ ಸಾಣೆ ಹಿಡಿದಿದ್ದೇನೆ. ಆದರೆ ಚಾಕು ಮಾತ್ರ ಅದೆ" ಎಂಬುದು ತನ್ನ ಚಾಕುವಿನ ಕುರಿತ ಅವನ ವಿವರಣೆ. "ನಮ್ಮ ಸನಾತನವೆಂಬ ಸಂಪ್ರದಾಯವೂ ಅದೇರೀತಿ ಸದಾ ಹೊಸತಿಗೆ ಅನುವು ಮಾಡಿಕೊಡುತ್ತಿರುತ್ತದೆ" ಎಂದು ಗೌರೀಶರು ಹೇಳುತ್ತಾರೆ. ಪರಿವರ್ತನಶಾಲಿಯೂ ಚಲನಶೀಲವೂ ಆಗಿರುವ ಸಂಪ್ರದಾಯದ ಜಂಗಮಸ್ವರೂಪವನ್ನು ಸ್ಪಷ್ಟಪಡಿಸಲು ಗೌರೀಶರು ತಮ್ಮ ಪ್ರಬಂಧದಲ್ಲಿ "ನದಿಯು ಇರುತ್ತದೆ. ಆದರೆ ಅದರ ನೀರು ಪ್ರತಿಕ್ಷಣವೂ ಬದಲಾಗುತ್ತಲೇ ಇರುತ್ತದೆ" ಎಂಬ ಹೋಲಿಕೆಯನ್ನು ಕೊಡುತ್ತಾರೆ. ಈ ಮಾತಿನ ಮೂಲವಿರುವುದು ಪ್ರಾಚೀನ ಗ್ರೀಕ್ ಚಿಂತಕ ಹೆರಾಕ್ಲಿಟಸ್‌ನ "ಒಂದು ನದಿಗೆ ಎರಡು ಸಲ ಕಾಲಿಡಲು ಸಾಧ್ಯವಿಲ್ಲ" ಎಂಬ ಹೇಳಿಕೆಯಲ್ಲಿ: ಇದನ್ನೇ ಮುಂದೆ ಬೌದ್ಧ ಮಾಧ್ಯಮಿಕರು ಈ ಪ್ರಕಾರವಾಗಿ ವಿಸ್ತರಿಸಿದರು.

ಒಂದು ನದಿಗೆ ಎರಡು ಸಲ ಕಾಲಿಡಲು ಸಾಧ್ಯವಿಲ್ಲ

ಹಾಗೆ ಕಾಲಿಟ್ಟ ಮನುಷ್ಯ ಒಬ್ಬನೇ ಅಲ್ಲ; ಬೇರೆ ಬೇರೆಯೂ ಅಲ್ಲ

ಎರಡು ಸಲ ಕಾಲಿಟ್ಟ ನದಿ ಒಂದೇ ಅಲ್ಲ; ಬೇರೆ ಬೇರೆಯೂ ಅಲ್ಲ



ಎರಡು ಸಲ ಕಾಲಿಟ್ಟ ಪರಿಸ್ಥಿತಿ ಒಂದೇ ಅಲ್ಲ; ಬೇರೆ ಬೇರೆಯೂ ಅಲ್ಲ

ಎರಡು ಸಲ ಕಾಲಿಟ್ಟಾಗ ಆದ ಪರಿಣಾಮ ಒಂದೇ ಅಲ್ಲ; ಬೇರೆ ಬೇರೆಯೂ ಅಲ್ಲ

ಈ ಲೋಕ ಜೀವನ ಜಂಗಮ, ಅದನ್ನು ಗ್ರಹಿಸುವ ನಮ್ಮ ಪ್ರಜ್ಞೆಯೂ ಜಂಗಮ ಎಂಬ ತಿಳಿವಳಿಕೆ ಪೂರ್ವದ್ದೆ? ಪಶ್ಚಿಮದ್ದೇ? ಅದು ಯಾವ ದಿಕ್ಕಿನಿಂದಲೇ ಬಂದಿರಲಿ, ಸಮಾಜವನ್ನು ಮೂಲಭೂತವಾದದ ವಿಕಾರಗಳಿಂದ ರಕ್ಷಿಸುವ ಔಷಧ ಗುಣವಿರುವುದು ಈ ಬಗೆಯ ಲೋಕ ಗ್ರಹಿಕೆಗೆ ಮಾತ್ರ. ಮೂಲಭೂತವಾದ ಮತ್ತು ಇನ್ನು ಹಲವು ಬಗೆಯ ಹಠವಾದಗಳು ನಾಡಿನಲ್ಲಿ ತಲೆದೋರುವ ಮೊದಲೇ ಗೌರೀಶರು ಅವುಗಳ ಕೆಡುಕನ್ನು ಅರಿತಿದ್ದರು. 'ಹಿಂದೂತ್ವ?' ಎಂಬ ಪ್ರಶ್ನಾರ್ಥಕ ಚಿಹ್ನೆ ಸಮೇತ ಶೀರ್ಷಿಕೆಉಳ್ಳ ಅವರ ಒಂದು ಪ್ರಬಂಧ ಸಾವರ್ಕರ್‌ರ 'ಹಿಂದೂತ್ವ' ಮತ್ತು 'ಹಿಂದೂರಾಷ್ಟ್ರ'ದ ಚಾರಿತ್ರಿಕ ತಳಹದಿಯೇ ಭದ್ರವಾಗಿಲ್ಲವೆಂದು ಪ್ರತಿಪಾದಿಸುತ್ತದೆ. 'ವಾಕ್ಯವಿಡಂಬನೆ-2' ಎಂಬ ತನ್ನ ಒಂದು ಪ್ರಬಂಧದಲ್ಲಿ ಅವರು ಆರೆಸ್ಸೆಸ್‌ನ ಹಿಂದೂ ರಾಷ್ಟ್ರ ಸಿದ್ಧಾಂತವನ್ನು 'ಭಾವೋದ್ರೇಕದ ತರ್ಕವಾದ' ಎಂದು ತಿರಸ್ಕರಿಸುವುದರ ಜೊತೆ ಗಾಂಧೀಜಿಯವರ ಕೆಲವು ಧೋರಣೆಗಳನ್ನೂ ಖಂಡಿಸುತ್ತಾರೆ. 'ಭಗವದ್ಗೀತೆ ಅಹಿಂಸೆಯನ್ನು ಬೋಧಿಸುತ್ತದೆ, ಬಿಹಾರ ಭೂಕಂಪ ಸವರ್ಣೀಯ ಹಿಂದೂಗಳು ಹರಿಜನರನ್ನು ದೂರವಿಟ್ಟುದರ ಪ್ರಾಯಶ್ಚಿತ್ತ ಇವೇ ಮುಂತಾದ ಗಾಂಧೀಜಿಯವರ ಖಡಾಖಂಡಿತ ಅಭಿಪ್ರಾಯಗಳು ಮೊಂಡುವಾದವೆಂದೇ ಗೌರೀಶರು ಭಾವಿಸುತ್ತಾರೆ. ಸೂಕ್ಷ್ಮವಾಗಿ ನೋಡಿದರೆ ಅವರು ಯಾವ ತತ್ವಗಳ ನೆಲೆಗಟ್ಟಿನಿಂದ ಸಾವರ್ಕರ್ ಮತ್ತು ಆರೆಸ್ಸೆಸ್ ಸಿದ್ಧಾಂತಗಳನ್ನು ವಿರೋಧಿಸಿದರೋ, ಅದೇ ನೆಲೆಗಟ್ಟಿನಿಂದ ಗಾಂಧೀವಾದದ ಕೆಲವು ಹಠಮಾರಿ ನಿಲುವುಗಳನ್ನೂ ವಿರೋಧಿಸಿರುವುದು ಕಂಡುಬರುತ್ತದೆ.


ಸಮಾಜವಾದದ ವಿಮೋಚನೆಯ ಭರವಸೆಯಲ್ಲಿ ನಂಬಿಕೆ, ಪ್ರಜಾಪ್ರಭುತ್ವಕ್ಕೆ ಬದ್ಧತೆ ಹಾಗೂ ಮಾನವತಾವಾದೀ ದೃಷ್ಟಿಕೋನ–ಇವು ಗೌರೀಶರ ಬರಹಗಳ ತಾತ್ವಿಕ ನೆಲೆ. ಈ ನೆಲೆಯಿಂದಲೇ ಅವರ ಗಾಂಧೀಜಿಯವರ ಕೆಲವು ನಿಲುವುಗಳನ್ನು ಹಾಗೂ ಸಾವರ್ಕರ್‌ರ ಹಿಂದೂತ್ವ ಸಿದ್ಧಾಂತವನ್ನು ವಿರೋಧಿಸುವುದರ ಜೊತೆ ಜಾತಿ ಸಮಾನತೆಯ ಮೌಲ್ಯವನ್ನೂ ಎತ್ತಿ ಹಿಡಿದರು. 'ಮಣಿಯ ಮೈಲಿಗೆ' ಎಂಬ ಪ್ರಬಂಧದಲ್ಲಿ ಅವರು ಜಾತಿಪದ್ಧತಿಯ ಮಡಿಮೈಲಿಗೆ ಮತ್ತು ಮೇಲುಕೀಳುಗಳ ತಾರತಮ್ಯ ಅನಾದಿಕಾಲದಿಂದ ಇಂದಿನವರೆಗೆ ಸಮಾಜದ ಎಲ್ಲ ಸ್ತರಗಳಲ್ಲೂ ವ್ಯಾಪಿಸಿರುವುದನ್ನು ಪರಿಶೀಲಿಸುತ್ತಾರೆ. ಗುಣಕ್ಕೆ ಮತ್ಸರವಿಲ್ಲವೆಂಬ ಮಾತಿನಂತೆ ಗೌರೀಶರು, ಸಾವರ್ಕರ್‌ರ ಸಿದ್ಧಾಂತಗಳನ್ನು ತಿರಸ್ಕರಿಸಿದರೂ ಜಾತಿವಿನಾಶದ ಕುರಿತು ಅವರು ನಡೆಸಿದ ಪ್ರಯೋಗಗಳನ್ನು ಮನಸಾರೆ ಮೆಚ್ಚಿಕೊಳ್ಳುತ್ತಾರೆ. 'ಬ್ರಾಹ್ಮಣೀಕರಣ' ಎಂಬ ಇದೇ ವಿಷಯ ಕುರಿತ ತಮ್ಮ ಇನ್ನೊಂದು ಪ್ರಬಂಧದಲ್ಲಿ ಅವರು ಉತ್ತರ ಕನ್ನಡ ಜಿಲ್ಲೆಯ ಕೆಳಜಾತಿವರ್ಗಗಳವರು ಪುರೋಹಿತಶಾಹಿಯ ಆಚಾರವಿಚಾರಗಳನ್ನು ಅನುಕರಿಸುತ್ತಿರುವುದರ ಬಗ್ಗೆ ವಿಷಾದಿಸುತ್ತಾರೆ. ಈ ಅನುಕರಣೆ ಮನೋದಾಸ್ಯವೇ ಹೊರತು ಸಮಾನತೆಯ ಸೋಪಾನವಲ್ಲವೆಂಬುದು ಅವರ ಅಳಲು. ಈ ಸಮಾಜದ ಶ್ರೀಸಾಮಾನ್ಯ ಮಾತ್ರವಲ್ಲ, ಕಟ್ಟಕಡೆಯ ಮನುಷ್ಯನನ್ನು ಸಹ ಲಕ್ಷ್ಯದಲ್ಲಿಟ್ಟುಕೊಂಡು ಗೌರೀಶರು ಬಹಳ ಹಿಂದೆಯೇ ಸಂಸ್ಕೃತ ಎಂದೂ ಈ ದೇಶದ ಜನ ಭಾಷೆ ಆಗಬಾರದು" ಎಂದು ವಾದಿಸಿದ್ದರು ('ಸಂಸ್ಕೃತದ ಸಂಕಟ' ಎಂಬ ಪ್ರಬಂಧದಲ್ಲಿ). ಹಾಗೆ ವಾದಿಸಿಯೂ ಅವರು ಸಂಸ್ಕೃತದ ಅಭಿಜಾತ ಸಾಹಿತ್ಯದ ಓರ್ವ ರಸಿಕ ಓದುಗರಾಗಿದ್ದರು.

ಗೌರೀಶರ ವ್ಯಕ್ತಿತ್ವದ ಈ ಪರಿಪಾಕ ಅವರ ಬರಹಗಳಲ್ಲಿ ವ್ಯಕ್ತವಾಗುತ್ತದೆ. ತಮ್ಮ ಒಂದು ಪ್ರಬಂಧದಲ್ಲಿ ಅವರು 'ನವಮೈಸೂರು ರಾಜ್ಯದಲ್ಲಿ ಬಂಗಾರಕ್ಕಿಂತ ಉಕ್ಕಿಗೆ ಪ್ರತಿಷ್ಠೆ ಹೆಚ್ಚಾಗಬೇಕು, ಭಾವನೆಗಿಂತಲೂ ಬುದ್ಧಿಗೆ ಹೆಚ್ಚು ಪ್ರಾಶಸ್ತ್ಯ ಸಿಗಬೇಕು" ಎಂದಿದ್ದರು. ಅವರು ಎಂದೂ ಒಣವೈಚಾರಿಕರಾಗಿರಲಿಲ್ಲ. ತಮ್ಮ ಊರು ಒಂದು ಪುರಾಣ ಪ್ರಸಿದ್ಧ ಕ್ಷೇತ್ರವೆಂಬ ಅಭಿಮಾನ ಅವರಲ್ಲಿ ಧಾರಾಳ ಇದ್ದಿತು; ಊರವರ ಬಗೆಗೂ ಅವರಿಗೆ ಅಷ್ಟೇ ಪ್ರೀತಿ, ಗೌರವಗಳಿದ್ದವು. ತಮ್ಮ ಊರ ಜನರ ರಸಿಕತೆ–ಅರಸಿಕತೆ, ಪೆದ್ದುತನಗಳನ್ನೆಲ್ಲ ಅವರು ಹತ್ತಿರದಿಂದ ಕಂಡು ಬಲ್ಲವರಾಗಿದ್ದರು. ಗೋಕರ್ಣ ಅವರಲ್ಲಿ ಪ್ರೀತಿಯಷ್ಟೇ ಹೇವರಿಕೆಯನ್ನೂ ಹುಟ್ಟಿಸಿರಬಹುದು. ಅವರು ತಮ್ಮ ಕಾಲದ ಬದುಕಿನ ಬಗೆಗೆ ವ್ಯಾಮೋಹಿಯಾಗಿದ್ದುದರ ಜೊತೆಗೆ ಅದರ ವಿಮರ್ಶಕರೂ ಆಗಿದ್ದರು. ಗೌರೀಶರ ಅಧಿಕೃತ ಆತ್ಮಚರಿತ್ರೆ ಇಲ್ಲದಿರುವುದರಿಂದ ಅವರ ಬರಹಗಳಿಂದಲೇ ನಾವು ಅವರ ವ್ಯಕ್ತಿತ್ವದ ಚಿತ್ರವನ್ನು ಕಟ್ಟಿಕೊಳ್ಳಬೇಕಾಗಿದೆ. ❖

ಹಜಾರೆ ಉಪವಾಸವೂ ಮತ್ತದರ ಪ್ರಾಯೋಜಕರ ಆತಂಕಗಳೂ...

ಪುಸ್ತಕ ಪರಿಚಯ


• ಚಂದ್ರಶೇಖರ್ ಐಜೂರ್



ಜನಲೋಕಪಾಲ್ ಮಸೂದೆಯ ಹೆಸರಿನಲ್ಲಿ ಅಣ್ಣಾ ಹಜಾರೆ ಮತ್ತವರ ಡನಾಡಿಗಳು ನಡೆಸುತ್ತಿರುವ ಹೋರಾಟದ ನಿಜವಾದ ಮುಖ ದುಕೊಳ್ಳುತ್ತಿರುವಾಗಲೇ 'ಭ್ರಷ್ಟಾಚಾರ ವಿವಿಧ ನೋಟ' ಎಂಬ ಕೃತಿಯೊಂದು ಕಟಗೊಂಡಿದೆ. ಅತಿ ಕಡಿಮೆ ಅವಧಿಯಲ್ಲಿ ಈ ಕೃತಿ ಪ್ರಕಟಗೊಂಡಿದ್ದ ದಲೋ ಏನೋ ಅಲ್ಲಲ್ಲಿ ತಪ್ಪುಗಳು, ದ್ರಣ ದೋಷಗಳು ಉಳಿದುಹೋಗಿವೆ. ವರೂ ದೇವನೂರು, ಬರಗೂರು, ಅಮಿನ್ ಟ್ಟು, ಅನಂತಮೂರ್ತಿ, ಶಿವಮೂರ್ತಿ ರುಘಾ ಶರಣ, ಕುಲದೀಪ್ ನಯ್ಯರ್, ಗರಿಕಾ ಘೋಷ್ ಮೊದಲಾದವರ ಬಸಗಳ ಕಾರಣದಿಂದಾಗಿ ಈ ಕೃತಿ ಈ ಕ್ತಿನ ಸಾಂದರ್ಭಿಕ ಮಹತ್ವವನ್ನು ಪಡೆದುಕೊಂಡಿದೆ.

ಜನಲೋಕಪಾಲ್ ಮಸೂದೆಯ ಶಕ್ತಿ ಮತ್ತು ಮಿತಿಗಳನ್ನು ಬರಗೂರರು ಶ್ಲೇಷಿಸಿದರೆ, ದೇವನೂರರು 'ಕಪ್ಪು ಹಣ ಎಲ್ಲಿರುತ್ತದೆಯೋ ಅದು ಪೂಜ್ಯಸ್ಥಳ ಗುತ್ತದೆ. ದುರಂತ ಅಂದ್ರೆ ಮಠಗಳು, ಕೆಲ ದೇವಾಲಯಗಳು ಕಪ್ಪು ದ ಪೂಜಾ ಸ್ಥಳಗಳಾಗಿ ಬಿಡುತ್ತಿವೆ. ಹಾಗಾಗಿ ಜನ, ರಾಜಕಾರಣಿಗಳು ಪ್ರಾರ್ಥನವನ್ನು ಪೂಜಿಸಲಿಕ್ಕೆ ಮುಗಿಬೀಳುತ್ತಿದ್ದಾರೆ. ಕಪ್ಪು ಹಣಕ್ಕೆ ಪೂಜಾ ಸ್ಥಾನ ಸಿಕ್ಕುತ್ತಿರುವುದರಿಂದ ಅದರ ಮದ ನೆತ್ತಿಗೇರಿ ರಾಜಕೀಯ ನಡೆಸಲಿಕ್ಕೂ ಹಾಕುತ್ತಿದೆ' ಎಂದು ವಿಷಾದ ವ್ಯಕ್ತಪಡಿಸುತ್ತಾರೆ. ದಿನೇಶ್ ಅಮಿನ್‌ಮಟ್ಟು ದು 'ಅಣ್ಣಾ ಹಜಾರೆ ಅವರ ಸತ್ಯಾಗ್ರಹಕ್ಕಾಗಿ ಸಂಗ್ರಹ ಮಾಡಿದ ಹಣದ ಮೊತ್ತ 82.88 ಲಕ್ಷ ರೂಪಾಯಿ. ಅದರಲ್ಲಿ ಉದ್ಯಮಿಗಳಿಂದ ಸಂಗ್ರಹವಾದ ದೇಣಿಗೆಯ ಒಟ್ಟು ಮೊತ್ತ 46.50 ಲಕ್ಷ ರೂಪಾಯಿ. ಅಂದರೆ ಸತ್ಯಾಗ್ರಹಕ್ಕೆ ಖರ್ಚಾದ ಹಣದಲ್ಲಿ ಅರ್ಧಕ್ಕಿಂತಲೂ ಹೆಚ್ಚಿನ ಹಣ ನೀಡಿದವರು ಉದ್ಯಮಿಗಳು. ಭ್ರಷ್ಟಾಚಾರದ ವಿರುದ್ಧದ ಹೋರಾಟದ ಗಮನವನ್ನು ಸಂಪೂರ್ಣವಾಗಿ ರಾಜಕಾರಣಿಗಳು ಮತ್ತು ಅಧಿಕಾರಿಗಳ ಕಡೆ ಕೇಂದ್ರೀಕರಿಸಿ ತಮ್ಮ ಕಡೆ ಯಾರೂ ಕಣ್ಣು ಹಾಯಿಸದಂತೆ ಮಾಡುವುದು ಇದರ ಹಿಂದಿನ ಹುನ್ನಾರವೇ?' ಎಂದು ಪ್ರಶ್ನಿಸುತ್ತಲೇ ಜನಲೋಕಪಾಲ 'ಸರ್ವರೋಗ'ಕ್ಕೂ ಪರಿಹಾರ ಒದಗಿಸಲಾರದೇನೋ ಎಂಬ ಅನುಮಾನ ವ್ಯಕ್ತಪಡಿಸುತ್ತಾರೆ.

ಅಣ್ಣಾ ಎದುರು ಹಾಕಿಕೊಂಡಿರುವ ಶತ್ರುವಿಗಿಂತಲೂ ತಮ್ಮ ಸುತ್ತ ಬಿಟ್ಟುಕೊಂಡಿರುವ ಮಿತ್ರರತ್ತಲೇ ಈಗ ಎಲ್ಲರ ಗುಮಾನಿಯ ಕಣ್ಣುಗಳು ನೆಟ್ಟಿವೆ. ನರೇಂದ್ರ ಮೋದಿಯಂತಹ ನರಹಂತಕನನ್ನು ಅಭಿವೃದ್ಧಿ ಹೆಸರಿನಲ್ಲಿ ಕೊಂಡಾಡುವ ಅಣ್ಣಾ ಹಜಾರೆ, ಆಧ್ಯಾತ್ಮ ಮತ್ತು ಯೋಗದ ಹೆಸರಿನಲ್ಲಿ ಜನರ ನೆತ್ತರು ಹೆಕ್ಕಿ ಲೂಟಿಗಿಳಿದಿರುವ ರವಿಶಂಕರ್, ಬಾಬಾ ರಾಮ್‌ದೇವ್ ತರಹದ ಡೋಂಗಿಗಳ ಬಗ್ಗೆ ಮೃದು ಧೋರಣೆ ತಳೆದಿರುವುದು ಅನೇಕರ ಆಕ್ರೋಶಕ್ಕೆ ಕಾರಣವಾಗಿದೆ.



ಉಪವಾಸದ ಹೆಸರಿನಲ್ಲಿ ಯಾರನ್ನಾದರೂ ಸುಲಭದ ರೇಟಿಗೆ ಬ್ಲಾಕ್‌ಮೇಲ್ ಮಾಡಬಹುದೆಂಬ ಹೊಸ ಪಾಠವೊಂದನ್ನು ಅಣ್ಣಾ ಹಜಾರೆ ದೇಶದ ಜನತೆಗೆ ಮುಕ್ತಟೆಯಾಗಿ ಹೇಳಿಕೊಡಲು ಮುಂದಾದಂತೆ ಕಾಣುತ್ತಿದೆ. ಹಜಾರೆ ಉಪವಾಸಕ್ಕೆ ದೊಡ್ಡಮಟ್ಟದಲ್ಲಿ ಪ್ರಾಯೋಜಕತ್ವ ಒದಗಿಸಿದ ಕಾರ್ಪೊರೆಟ್ ಕಳ್ಳರ ಅಂಡಿಗೆ ಭ್ರಷ್ಟಾಚಾರಕ್ಕಿಂತಲೂ ಈಗ ಜಾರಿಯಲ್ಲಿರುವ ಮೀಸಲಾತಿ ಹೆಚ್ಚು ಬಿಸಿ ಮುಟ್ಟಿಸಿದೆಯೆಂದು ಕಾಣುತ್ತದೆ. ಹಜಾರೆ ಹೋರಾಟಕ್ಕೆ ಸರ್ಕಾರವೇನಾದರೂ ಮಣಿದರೆ ಆಗ ಕಾರ್ಪೊರೆಟ್ ಕುಳಗಳು, ಕೇಜ್ರಿವಾಲಾಗಳು, ಬೇಡಿಗಳು, ಬಾಬಾಗಳು, ಶ್ರೀಶ್ರೀಗಳು ಅಣ್ಣಾ ಕೈಗೆ ಕೊಡುವ ಹೊಸ ಇಶ್ಯೂ 'ಮೀಸಲಾತಿ ನಿರ್ಮೂಲನಾ ಕಾಯ್ದೆ'. ಅದು ಸಾಮಾಜಿಕ ನ್ಯಾಯದ ಕತ್ತು ಹಿಚುಕುವ ಕೆಲಸ.

ಭ್ರಷ್ಟಾಚಾರ ವಿವಿಧ ನೋಟ
ಸಂಪಾದಕರು: ಕೆ.ಎಸ್.ನಾಗರಾಜ್
ಪ್ರಕಾಶಕರು: ಭಾರತ ಯಾತ್ರಾ ಕೇಂದ್ರ,
ನಂ.566/4, 25ನೇ 'ಸಿ' ಕ್ರಾಸ್, 6ನೇ ಬ್ಲಾಕ್,
ರಾಜಾಜಿನಗರ, ಬೆಂಗಳೂರು-10
ಪುಟಗಳು: 101, ಬೆಲೆ: ರೂ.30, ಪ್ರಕಟಣೆ: 2011

ಹೆಚ್ಚು ಮಕ್ಕಳನ್ನು ಹಡೆಯಿರಿ ಎನ್ನುತ್ತಿರುವ ಮೂರ್ಖರು

ಸುಮಾರು ಐವತ್ತು ವರ್ಷಗಳ ಹಿಂದೆ ಒಮ್ಮೆ ಕಾಸರಗೋಡಿಗೆ ಹುಲಿ ಬಂದು ಒಂದು ಮನೆಯೊಳಗೆ ನುಗ್ಗಿ ಅನಾರೋಗ್ಯದಿಂದ ಮಲಗಿದ್ದ ಓರ್ವ ಚಿಕ್ಕ ಹುಡುಗಿಯ ಮೇಲೆ ಆಕ್ರಮಣ ಮಾಡಿತ್ತು. ಬಳಿಕ ಅದು ಹೇಗೊ ಒಂದು ಕೋಣೆಯೊಳಗೆ ನುಗ್ಗಿದಾಗ ಹೊರಗಿನಿಂದ ಬಾಗಿಲು ಬಂದ್ ಮಾಡಿ ಚಿಲಕ ಹಾಕಿ ಊರಲ್ಲಿದ್ದ ಓರ್ವ ಹೆಸರಾಂತ ಬೇಟೆಗಾರನಿಗೆ ಸುದ್ದಿ ತಿಳಿಸಿ, ಆತನು ಮಾಡಿನ ಮೇಲೆ ಹತ್ತಿ ಆ ಹುಲಿಯನ್ನು ಗುಂಡಿಟ್ಟು ಕೊಂದುಹಾಕಿದ್ದನು. ಬಳಿಕ ಹುಲಿಯ ಮೃತದೇಹದೊಡನೆ ಆತನ ಮೆರವಣಿಗೆಯೂ ನಡೆಯಿತೆಂಬುದು ನನ್ನ ನೆನಪು. ಆಗ ಈ ವಿಷಯ ಬಹಳ ದಿನಗಳವರೆಗೆ ಊರಿನಲ್ಲಿ ಸುದ್ದಿಯಾಗಿತ್ತು. ಇದನ್ನು ಯಾಕೆ ಬರೆಯಬೇಕಾಯಿತೆಂದರೆ ಇಂದು ಆಗಾಗ ಚಿರತೆಗಳೂ, ಕಾಡಾನೆಗಳೂ ನಾಡೊಳಗೆ ನುಗ್ಗಿ, ಬೆಳೆ ನಾಶ ಮಾಡಿ ಜನರನ್ನು ಭಯಭೀತರಾಗಿಸಿ ಅವರ ನೆಮ್ಮದಿ ಕೆಡಿಸುತ್ತಿರುವುದು ತೀರಾ ಸಾಮಾನ್ಯವೆಂಬಂತಾಗಿದೆ.

ಕಾಡಿನ ಮೃಗಗಳು ಯಾಕೆ ನಾಡೊಳಗೆ ಬರುತ್ತಿವೆ? ಯಾಕೆಂದರೆ ಕಾಡಿನ ಮೃಗಗಳು ನೆಮ್ಮದಿಯಿಂದಿರುತ್ತಿದ್ದ ಕಾಡುಗಳು ಇಂದು ನಾಶವಾಗುತ್ತಿವೆ. ಕಾಡು ಪ್ರಾಣಿಗಳಿಗೆ ಕಾಡಿನಲ್ಲಿ ಸಾಕಷ್ಟು ಆಹಾರ ದೊರೆಯುತ್ತಿಲ್ಲ. ಅವುಗಳು ಆಹಾರ ಹುಡುಕಿಕೊಂಡು ನಾಡಿಗೆ ಬರುವಂತಾಗಿದೆ ಮಾತ್ರವಲ್ಲ, ಈ ಕಾಡುಪ್ರಾಣಿಗಳ ಸಂಖ್ಯೆಗಳೂ ಇಳಿಮುಖವಾಗುತ್ತಿವೆ.

ಇಂದು ಭೂಮಿಯ ಮೇಲಿನ ಜನಸಂಖ್ಯೆ ಆರುನೂರು ಕೋಟಿಯನ್ನು ಮೀರುತ್ತಿದೆ. ಅರವತ್ತು ವರ್ಷಗಳ ಹಿಂದೆ ನಮ್ಮ ದೇಶದ ಜನಸಂಖ್ಯೆ 43 ಕೋಟಿ ಎಂದು ನಮಗೆ ಶಾಲೆಯಲ್ಲಿ ಕಲಿಸಲಾಗಿತ್ತು. ಇಂದು ಕೇವಲ ಐವತ್ತು ವರ್ಷಗಳಲ್ಲಿ ಈ ಜನಸಂಖ್ಯೆ ಮೂರು ಪಾಲು ಅಧಿಕಗೊಂಡಿದೆ. ಕಾಡು ಇದ್ದಲ್ಲಿ ಜನವಸತಿ ಬೆಳೆಯುತ್ತಿದೆ. ಆಹಾರ ಬೆಳೆಯುವ ಕೃಷಿ ಭೂಮಿಯನ್ನು ನಗರಗಳು ನುಂಗುತ್ತಾ ಕಾಂಕ್ರೀಟ್ ಕಾಡನ್ನು ಸೃಷ್ಟಿಸುತ್ತಿವೆ. ನದಿಗಳು ಕೊಳಚೆ ನೀರು ಹರಿಯುವ ತಾಣಗಳಾಗಿವೆಯಲ್ಲದೆ ನದಿಗಳ ನೀರೂ ಬತ್ತತೊಡಗಿದೆ ಮಾತ್ರವಲ್ಲ, ಅಂತರ್ಜಲ ಮಟ್ಟ ಕುಸಿಯುತ್ತಿದೆ. ಕೃಷಿ ಭೂಮಿ ಇದ್ದರೂ ಕೃಷಿಕರು ಕೃಷಿಯ ಖರ್ಚು ಭರಿಸಲಾಗದೆ ನಗರ ಸೇರುತ್ತಿದ್ದಾರೆ. ಜನಸಂಖ್ಯೆ ಈ ರೀತಿ ದ್ವಿಗುಣಗೊಳ್ಳುತ್ತಾ ಹೋದರೆ ಇನ್ನು ಕೆಲವೇ ವರ್ಷಗಳಲ್ಲಿ ಮನುಷ್ಯರು ಆಹಾರಕ್ಕಾಗಿ ಪರದಾಡಬೇಕಾದ ಪರಿಸ್ಥಿತಿ ಎದುರಾಗಬಹುದು. ಇರುವುದೊಂದೇ ಭೂಮಿ. ನಮ್ಮ ಮುಂದಿನ ಪೀಳಿಗೆಗಾಗಿ ಈ ನೀರು ಮತ್ತು ನೆಲವನ್ನು ಬಿಟ್ಟು ಹೋಗಬೇಕಾದ ಜವಾಬ್ದಾರಿ ನಮ್ಮ ಮೇಲಿದೆ. ಜನಸಂಖ್ಯಾ ಸ್ಫೋಟದ ಕುರಿತು ವಿಜ್ಞಾನಿಗಳು ನಮ್ಮನ್ನು ಎಚ್ಚರಿಸುತ್ತಲೇ ಇದ್ದಾರೆ. ಧ್ರುವ ಪ್ರದೇಶದಲ್ಲಿ ಹಿಮ ಕರಗುತ್ತಿದೆ; ಭೂಮಿ ಬಿಸಿಯಾಗುತ್ತಿದೆ. ಅಂದರೆ ಭೂಮಿಯ ಆಯುಷ್ಯ ಕಮ್ಮಿಯಾಗುತ್ತಿದೆಯೇ?

ಈ ಕುರಿತು ಯಾರೂ ತಲೆ ಕೆಡಿಸಿಕೊಳ್ಳುತ್ತಿಲ್ಲ. ಎಲ್ಲರಿಗೂ ತಮ್ಮ ಸಂಪತ್ತನ್ನು ದ್ವಿಗುಣಗೊಳಿಸಿಕೊಳ್ಳುವುದು ಹೇಗೆಂಬ ಒಂದೇ ಚಿಂತೆ. ನಮ್ಮ ಕೆಲವು ಮೂಲಭೂತವಾದಿ ಸಂಘಟನೆಗಳಿಗೆ ಇನ್ನೂ ಒಂದು ಚಿಂತೆ ಇದೆ; ಜನರು ಕುಟುಂಬ ಯೋಜನೆ ಕೈಗೊಳ್ಳದಂತೆ, ಜನಸಂಖ್ಯೆ ಆದಷ್ಟು ಹೆಚ್ಚಾಗುವಂತೆ ಮಾಡುವುದು ಹೇಗೆಂಬ ಒಂದು ಚಿಂತೆ ಈ ಜನರನ್ನು ಕಾಡುತ್ತಿದೆ. ಈ ಸಂಘಟನೆಗಳು ಜನರಲ್ಲಿ ಜಾಗೃತಿ ಮೂಡದಂತೆ ಕುಟುಂಬ ಯೋಜನೆಯ ವಿರುದ್ಧ ಲೇಖನಗಳನ್ನು ಪ್ರಕಟಿಸಿ, ಮಹಿಳೆಯರನ್ನು ಮತ್ತಷ್ಟು ಅಂಧಕಾರಕ್ಕೆ ತಳ್ಳಲು ಪ್ರಯತ್ನಿಸುತ್ತಿವೆ. ಮಕ್ಕಳು ದೇವರ ಕೊಡುಗೆಯೆಂದೂ, ಮಕ್ಕಳ ಹುಟ್ಟನ್ನು ತಡೆಯಬಾರದೆಂದೂ ಇವರ ಬೋಧನೆಯಾಗಿದೆ. ಕೆಲವು ವರ್ಷಗಳ ಹಿಂದೆ ಇಂತಹ ಬೋಧನೆ ಕೇಳಿದ ಅನಕ್ಷರಸ್ಥ ಮಹಿಳೆಯೋರ್ವಳು "ಮಕ್ಕಳನ್ನು ಹೆತ್ತು ಸಾಕುವ ಕಷ್ಟ ಈ ಮೌಲವಿಗಳಿಗೇನು ಗೊತ್ತು? ಅವುಗಳು ಹೇಲು, ಮೂತ್ರ ಬಾಚಲು ಇವರು ಬರುತ್ತಾರಾ?" ಎಂದು ನನ್ನೊಡನಂದಿದ್ದರು. ಹುಟ್ಟಿದ ಮಕ್ಕಳಿಗೆ ಸಮನಾಗಿ ಆಹಾರ ಮತ್ತು ಶಿಕ್ಷಣ ನೀಡಿ ಅವರನ್ನು ಉತ್ತಮ ನಾಗರಿಕರಾಗಿ ಬೆಳೆಸಬೇಕೆಂಬುದು ಪ್ರವಾದಿಗಳ ಬೋಧನೆಯಾಗಿದೆ. ಆಹಾರ, ಶಿಕ್ಷಣ ಯಾವುದೂ ಕೈಗೆಟುಕದಿದ್ದರೂ ಮಕ್ಕಳು ಮಾತ್ರ ಹುಟ್ಟುತ್ತಾ ಇರಲಿ; ಹುಟ್ಟನ್ನು ತಡೆಯಬೇಡಿ ಎಂಬ ಈ ಬೋಧನೆಗೆ ಏನೆನ್ನಬೇಕು? ಹೌದು. ಬಾಂಬು ಹಾಕಿ ಮನುಷ್ಯರ ಕೊಲೆ ಮಾಡಿ ತಾವು ಸ್ವರ್ಗಕ್ಕೆ ಹೋಗಲು ಕೂಡಾ ಮನುಷ್ಯರು ಇರಲೇಬೇಕಲ್ಲ? ವಿಜ್ಞಾನಿಗಳು ಹಾಗೂ ತಜ್ಞ ವೈದ್ಯರೂ ಕೂಡಾ ಈ ಮತಾಂಧ ಸಂಘಟನೆಗಳ ಬೋಧನೆಯನ್ನು ಶಿರಸಾವಹಿಸಿ ನೆರವೇರಿಸುತ್ತಿದ್ದಾರೆ.



ಕಳೆದ ವರ್ಷ ನನಗೆ ತಿಳಿದ ಓರ್ವ ಮಹಿಳೆ ಮೂರನೇ ಹೆರಿಗೆಯ ಬಳಿಕ ಕುಟುಂಬ ಯೋಜನೆಯ ಶಸ್ತ್ರಕ್ರಿಯೆಗಾಗಿ ನರ್ಸಿಂಗ್ ಹೋಂ ಪ್ರವೇಶಿಸಿ ಹೆರಿಗೆಯಾದ ಬಳಿಕ ಈ ಶಸ್ತ್ರಕ್ರಿಯೆ ನೆರವೇರಿಸಬೇಕೆಂದು ಕೇಳಿಕೊಂಡಳು. ಅದಕ್ಕೆ ಆ ಮಹಿಳಾ ವೈದ್ಯೆ ತಾನೀಗ ಆ ಶಸ್ತ್ರಕ್ರಿಯೆ ನೆರವೇರಿಸುವುದಿಲ್ಲವೆಂದು ಆಕೆಯ ಕೋರಿಕೆಯನ್ನು ನಿರಾಕರಿಸಿದಳು. ತಾನು ಹಜ್ ಯಾತ್ರೆ ಮುಗಿಸಿ ಬಂದ ಬಳಿಕ ಈ ಶಸ್ತ್ರಕ್ರಿಯೆ ಮಾಡುವುದನ್ನು ನಿಲ್ಲಿಸಿದ್ದೇನೆಂದಳು. ಇದನ್ನು ಇನ್ನಷ್ಟು ಕೆದಕಿದಾಗ ಇತ್ತೀಚೆಗೆ ಹಲವಾರು ಮುಸ್ಲಿಂ ಮಹಿಳಾ ವೈದ್ಯೆಯರು ಈ ಶಸ್ತ್ರಕ್ರಿಯೆ ನೆರವೇರಿಸುವುದಿಲ್ಲ ಎಂದು ತಿಳಿಯಿತು. ಅದು ಧರ್ಮ ವಿರೋಧಿ ಕ್ರಮ ವೆಂಬುದು ಇವರ ಸಮಜಾಯಿಷಿ. ಆದರೆ ಈ ವೈದ್ಯೆಯರಿಗೆ ಇಬ್ಬರಿಗಿಂತ ಹೆಚ್ಚು ಮಕ್ಕಳಿಲ್ಲ! ಇಂದು ಮುಸ್ಲಿಮೇತರ ವೈದ್ಯೆಯರೂ ಕೂಡಾ ಶಸ್ತ್ರಕ್ರಿಯೆಯಿಂದ ದೂರ ಸರಿಯುತ್ತಿದ್ದಾರೆಂದು ಹೇಳಲಾಗುತ್ತಿದೆ. ಜನಸಂಖ್ಯೆ ಸ್ಫೋಟದ ಕುರಿತು ಇವರಿಗೆ ಕಾಳಜಿಯೇನೂ ಇಲ್ಲ, ವರ್ಷಂಪ್ರತಿ ಹೆರಿಗೆಗೆ ಬಂದರೆ ದೊರೆಯುವ ಆದಾಯಕ್ಕೆ ಕುತ್ತು ಬರಬಹುದು ಎಂಬುದು ಈ ಶಸ್ತ್ರಕ್ರಿಯಾ ವಿರೋಧದ ಹಿಂದಿರುವ ಹುನ್ನಾರವಾಗಿರಬಹುದು. ಬೀದಿಗೆ ನಾಲ್ಕೈದು ವೈದ್ಯರಿರುವ ಇಂದಿನ ದಿನಗಳಲ್ಲಿ ಜನಸಂಖ್ಯಾ ನಿಯಂತ್ರಣದಿಂದ ವೈದ್ಯರು ನಿರುದ್ಯೋಗಿಗಳಾಗಬಹುದು ಎಂಬ ಭಯವೂ ಇದರ ಹಿಂದಿರಬಹುದು.


ಎಲ್ಲ ವೈದ್ಯರೂ ಹೀಗಿದ್ದಾರೆಂದು ತಿಳಿದುಕೊಳ್ಳಬೇಕಾಗಿಲ್ಲ. ಕೆಲವು ವರ್ಷಗಳ ಹಿಂದೆ ನನ್ನ ಬಳಿಗೆ ಬಂದಿದ್ದ ಮುಸ್ಲಿಂ ಡಾಕ್ಟರೊಬ್ಬರು ತನ್ನ ಬಳಿಗೆ ಬಂದ ಬಡ ಮಹಿಳೆಯರಿಗೆ, ಆಕೆಗೆ ತಿಳಿಯದಂತೆ ಈ ಶಸ್ತ್ರಕ್ರಿಯೆ ನೆರವೇರಿಸುತ್ತಿದ್ದೇನೆಂದರು. ಅವರ ಬಡತನ, ಅವರ ಅಶಕ್ತತೆ ನೋಡಿಕೊಂಡು ತಾನು ಹೀಗೆ ಮಾಡುತ್ತಿದ್ದೇನೆಂದರು. ಬೆಳಕಿನಕಿರಣ ಎಲ್ಲೋ ಒಂದೆಡೆ ಇದ್ದೇ ಇರುತ್ತದಲ್ಲವೇ?

ಉತ್ತರ ಕರ್ನಾಟಕದ ಹಳ್ಳಿಗಳಲ್ಲಿ ಇಂದಿಗೂ ಮಹಿಳೆಯರು ಅನಕ್ಷರಸ್ಥರಾಗಿಯೇ ಇದ್ದಾರೆ. ಕುಟುಂಬ ಯೋಜನೆಯ ಕುರಿತು ಹೆಚ್ಚಿನ ತಿಳಿವಳಿಕೆಯೂ ಇಲ್ಲ, ಹಳ್ಳಿಗಳಲ್ಲಿ ಆಸ್ಪತ್ರೆಗಳೂ ಇಲ್ಲ, ಹೀಗಾಗಿ ಈ ಮಹಿಳೆಯರಿಗೆ ಐದಾರು ಮಕ್ಕಳಂತೂ ಇದ್ದೇ ಇರುತ್ತಾರೆ. ಈಗ ಸರ್ಕಾರ ಹೆಣ್ಣುಮಗು ಹುಟ್ಟಿದ ತಕ್ಷಣ ಅದರ ಹೆಸರಿನಲ್ಲಿ ಹತ್ತು ಸಾವಿರ ರೂಪಾಯಿ ಬ್ಯಾಂಕಿನಲ್ಲಿಡುತ್ತೇವೆಂದ ಬಳಿಕ ಈ ಹೆಂಗಸರು ನಿರಾಳವಾಗಿದ್ದಾರೆನ್ನಲಾಗುತ್ತಿದೆ. ಹುಟ್ಟುವ ಹೆಣ್ಣುಮಕ್ಕಳಿಗೆ ಹತ್ತು ಸಾವಿರ ರೂಪಾಯಿ ಸಿಗುವುದರಿಂದ ಎಷ್ಟು ಹೆಣ್ಣು ಮಕ್ಕಳಾದರೂ ತೊಂದರೆ ಇಲ್ಲ ಎಂಬುದು ಈ ಮಹಿಳೆಯರ ಮನೋಭಾವವಾಗಿರಬಹುದು.

ಜನಸಂಖ್ಯೆ ಸಮಸ್ಯೆಯಲ್ಲ; ನಮ್ಮ ಸಂಪತ್ತು. ಆದುದರಿಂದ ಆದಷ್ಟು ಹೆಚ್ಚು ಮಕ್ಕಳನ್ನು ಹುಟ್ಟಿಸಬೇಕು ಎಂದು ಇಂದು ಕೆಲವು ಮೂಲಭೂತವಾದಿ ಪತ್ರಿಕೆಗಳು ಮತ್ತೊಮ್ಮೆ ಬರೆದು ತಮ್ಮ ತೆವಲು ತೀರಿಸಿಕೊಳ್ಳುತ್ತಿವೆ. ಇದನ್ನು ಓದಿದ ಮಹಿಳೆಯೋರ್ವಳು "ಆ ಲೇಖಕನಿಗೆ ಎಷ್ಟು ಮಕ್ಕಳಿದ್ದಾರೆ ಎಂದು ಕೇಳಿ" ಎಂದು ಸಿಟ್ಟಿನಿಂದ ನುಡಿದಳು. ಇಬ್ಬರಿಗಿಂತ ಹೆಚ್ಚು ಮಕ್ಕಳಿರಬೇಕೆಂದು ಇಂದು ಯಾವ ಮಹಿಳೆಯೂ ಹೇಳಲಾರಳು. ಆದರೆ ಇತ್ತೀಚಿಗಿನ ಒಂದೆರಡು ದಶಕಗಳಿಂದಷ್ಟೇ ಓದಲು ಕಲಿತ ಮುಸ್ಲಿಂ ಮಹಿಳೆಯರ ತಲೆಯೊಳಗೆ ಪತ್ರಿಕೆಗಳ ಮೂಲಕ ಮತಾಂಧತೆಯನ್ನು ತುರುಕಿ ಅವರನ್ನು ಮತ್ತಷ್ಟು ಅಂಧಕಾರಕ್ಕೆ ತಳ್ಳಲು ಕೆಲವು ಪತ್ರಿಕೆಗಳು ಶ್ರಮಿಸುತ್ತಲೇ ಇವೆ.

ಸುಲಭದ ತಲಾಖ್ ಪದ್ಧತಿ ಮತ್ತು ಬಹುಪತ್ನಿತ್ವದಿಂದ ನಮ್ಮ ಮಹಿಳೆಯರು ಈಗಾಗಲೇ ಬಹಳಷ್ಟು ನೋವನ್ನನುಭವಿಸುತ್ತಿದ್ದಾರೆ. ಅವರ ಮೇಲೆ ಮತ್ತಷ್ಟು ಮಕ್ಕಳ ಹೊರೆಯನ್ನು ಹೊರಿಸಿ ಅವರ ಬದುಕನ್ನು ಮತ್ತಷ್ಟು ನರಕವನ್ನಾಗಿಸಬೇಡಿ ಎಂದಷ್ಟೇ ಈ ಸಹೋದರರೊಡನೆ ನನ್ನ ಕೋರಿಕೆಯಾಗಿದೆ.

• ಸಾರಾ ಅಬೂಬಕ್ಕರ್



ಆ ದಿನ ಕಂಡೇ ಕಾಣುತ್ತೇವೆ

ಎಂತಹ ನಿರಂಕುಶ ಪ್ರಭುತ್ವವಿದು
ದರ್ಪದ ಮಹಾರಥರ ಸಿಂಹಾಸನ,
ರತ್ನಖಚಿತ ಪ್ರಭುಗಳ ಕಿರೀಟಕ್ಕೆ
ಬರಸಿಡಿಲು ಅಪ್ಪಳಿಸಬಹುದು
ಆ ದಿನ ಕಂಡೇ ಕಾಣುತ್ತೇವೆ.

ಮಣಿ, ಮುಕುಟ, ಕಿರೀಟಗಳು
ಮಣ್ಣು ಪಾಲಾದವು ಪದ್ಮನಾಭನ
ಗುಪ್ತ ಧನ, ಕನಕ, ಬಯಲಾದವು
ಗದ್ದುಗೆಯ ನಂಟು ಕಡೆತನಕವಲ್ಲ
ಸಿಂಹಾಸನಗಳು ನುಚ್ಚು ನೂರಾಗುವ
ಆ ದಿನ ಕಂಡೇ ಕಾಣುತ್ತೇವೆ.

ನಿರ್ಲಜ್ಜ ಸುಳ್ಳು ಭರವಸೆಗಳು
ವರಸೆ ಮಾತುಗಳ ಪರಮಾವಧಿ
ಗದ್ದುಗೆಗಳ ಬೇರುಗಳು ಅದುರುತ್ತಿವೆ
ಭೂಮಿ ಮೇಲಿನ ಅರಮನೆಗಳು
ಬೆಂಕಿ ಪೊಟ್ಟಣಗಳಂತೆ ಧಗಧಗನೆ
ಕಿಚ್ಚು ಉರಿಯುವ ದೃಶ್ಯದ
ಆ ದಿನ ಕಂಡೇ ಕಾಣುತ್ತೇವೆ.

ಓತಿಕ್ಯಾತದಂತೆ ಬಣ್ಣ ಬದಲಿಸುವ?
ಇವರ ಬಣ್ಣ ಬಯಲಾಗುತ್ತದೆ
ಇಲ್ಲಿಯೇ ನಮ್ಮ ನಿಮ್ಮೆಲ್ಲರ ಮುಂದೆಯೇ
ನಿರಾಕರಿಸಲ್ಪಟ್ಟ ಅಪರಾಧಗಳು
ಸಾಬೀತಾಗುತ್ತವೆ ಎಲ್ಲರ ಮುಂದೆಯೇ
ಬೆತ್ತಲಾಗುತ್ತಾರೆ ಅವರು
ಆ ದಿನ ಕಂಡೇ ಕಾಣುತ್ತೇವೆ.

ಪ್ರಭುಗಳ ನೆತ್ತಿಯ ಮೇಲೆ
ಅಪಾಯದ ಕತ್ತಿ ಬೀಸುತ್ತಿದೆ
ಸುಳ್ಳು ಭರವಸೆಗಳು ಛಿದ್ರವಾಗಿ
ಪುಡಿಪುಡಿಯಾದ ಒಪ್ಪಂದಗಳು
ಗಾಳಿಯಲ್ಲಿ ತರಗೆಲೆಯಾಗಿ ಹಾರುವ
ಆ ದಿನ ಕಂಡೇ ಕಾಣುತ್ತೇವೆ.

• ಡಾ. ಕೆ. ಷರೀಫ

ನೆ ಆಗ್ಲಿ ರೆಡ್ಡಿ ಮಾರಿಕಂಡ ಮಣ್ಣು ತಿರಗ ಬಂದತೇನ್ಲ!

ಮು ಲು ಸೀ ಮೆ

ಹೆಚ್ಚೆಪುರಾಣ

►ಬಿ. ಚಂದ್ರೇಗೌಡ

ಜನಾರ್ದನ ರೆಡ್ಡಿ ಎಂಬ 420 ಆರೆಸ್ಟಾಗಿ ಆಂಧ್ರದ ಸೇರಿದಾಗಿನಿಂದಲೂ ಆತನ ವೃತ್ತಾಂತ ಮಾತನಾಡಿ ಸಾಕಾಗಿದ್ದರು. ಕಡೆಯ ಮಾತೆಂಬಂತೆ ಕಾಳಮಾವ, ಸುರದೋಳು ಒಂದಿನ ತಿರಿತಳೆ ಅನ್ನದು ಇದ್ಮೆ " ಎಂದ.

ನಿಜ ಕಣ ಮಾವ. ಭಾರಿ ಉರುದಿದ್ದ. ಆಲಪನಿಗೆ ಬಂದ್ರೆ ಅರ್ಧರಾತ್ರಿಗೆ ಕ್ವಡೆ ಹಿಡದ ಅಂತರೆ , ಆ ಗಾದೆ ಮಾತು ಇಂತ ನನ್ನ ಮಗನ್ನೋಡೇ ಮು."

ಮೂವತ್ತು ಕೇಜಿ ಚಿನ್ನ ಅಂದ್ರೆ ವಸಿದುಡ್ಡಾಯ್ತೇನ್ಲ" ಸೀರ.

ದಷ್ಟೇ ಅಲ್ಲ ಕಣೊ ಸೀರ ಮಾವ. ನಲವತ್ತು ಮು, ಚಿನ್ನದ ಸಿಮ್ಮಾಸನ, ಕಿರೀಟ, ಯಲ್ಲಾನು ದ್ನಂತೆ."

ರೀಟ ಸಿಮ್ಮಾಸನ ಮಡಿಕಂಡು ಏನು ಮಾಡತಿದ್ದಾ?" ಕಾಳಮಾವ.

ನಿಗನ್ನಿಸಿದಂಗೆ ಆ ನನ್ನ ಮಗ, ನಾನೇ ಕಿಷ್ನ ರಾಯ ಅಂತ ತಿಳಕಂಡು, ತಲಿಗೆ ಕಿರೀಟ ಹಾಯ್ಕಂಡು, ಡಕಂಡು ಕೂತಗತ್ತಿದ್ದನೇನಪ್ಪ. ಯಾಕೆ ಅಂದ್ರೆ ಾಯ್ಲನೂ ಜನಕಿರತದೆ. ಕೆಲವುರು ಮನೆಲಿ ಯಾರೂ ಏನೇನೊ ಅವುತಾರ ಆಡ್ತರೆ. ಇವುನು ನೇನೊ."

ಲವತ್ತು ನೆಕ್ಲೇಸ ಯಾಕ್ ಮಾಡಿಸಿದ್ದಾ? ಒಂದ್ಯರಡು ಸಾಕಾಗ್ತಿರಲಿಲ್ವೆ?" ಎಂದಳು ಜುಮ್ಮಿ.

ನ್ನಾಲೋಚನೆ ನೋಡು ಹ್ಯಂಗದೆ? ಆ ರೆಡ್ಡಿಗೆ ಮೂರು ನಕ್ಲೇಸ್ ಮಾಡಿಸೊ ದುಡ್ಡಿದ್ರೆ ಅಂಗೆ ೋನು. ಸಾವುರಾರು ಕೋಟಿ ರೂಪಾಯಿ ಇರುವಾಗ ಗಡಿಲಿ ಚನ್ನಾಗಿರದ್ನೆಲ್ಲ ಕೊಳ್ಳತನೆ ಕಣೇ. ಅವುನಿಗೆ ಮುಖ್ಯ ಅಲ್ಲ, ಪದಾರ್ಥನೆ ಮುಖ್ಯ. ಅಂಗಾಗಿ ಳದನ್ನೆಲ್ಲ ಕೊಂಡುಬುಟ್ಟ ಅತ್ತಗೆ. ಎಂಟೊಬತ್ತು ದ್ದವಂತೆ. ಲಕ್ಕ ಹಾಕು" ಎಂದು ಉಗ್ರಿ ಹೇಳುವಾಗ ಕೊಂಡ ವಾಟಿಸ್ಸೆ ಶಿಳ್ಳೆ ನಿಲ್ಲಿಸಿ,

ರೋಲ್ಸರಾಯ್ ಕಾರನೂ ಮಡಗಿದ್ನಂತೆ ಕಣೊ ಈಗ ಆ ಕಾರಿನ ಕಂಪನಿಗೂ ಅವುಮಾನಾಯ್ತಲ್ಲ " ಎಂದ.

ಅವ್ಯಾಕವುಮಾನನೋ?"

ಯಾಕೆ ಅಂದ್ರೆ ರೋಲ್ಸರಾಯ್ ಕಾರಿನ ಇತಿಹಾಸ ದ್ರೆ ಮಹಾರಾಜರು, ಜಗದ್ಗುರುಗಳು, ಆಮ್ಯಾಲೆ ಮಾಂಡಲೀಕರಿಗೆ ಮಾತ್ರ ಆ ಕಾರ ಮಾರತಿದ್ರು. ಗಣಿ ಕಳ್ಳರಿಗ್ಯಲ್ಲ ಆ ಕಾರ ಮಾರ್‍ತಿರಲಿಲ್ಲ. ಈಗ ನೋಡು ರೆಡ್ಡಿ ಅನ್ನೊ ಗಣಿ ಕಳ್ಳನಿಗೆ ಕಾರು ಕೊಟ್ಟು ಕಂಪನಿ ತನ್ನೆಸರನೇ ಹಾಳ ಮಾಡಿಕತ್ತು."

"ಕಾಲ ಬದ್ಲಾಗ್ಯದೆ ಕಣೊ ವಾಟಿಸ್ಸೆ. ಕಾರು ಕೊಳ್ಳೋನ ಕತೆ ಕಟಿಗಂಡು ಅವುರಿಗೇನಾಗಬೇಕು? ಅವುರಿಗೆ ಬೇಕಾಗಿದ್ದು ದುಡ್ಡು, ಅದ ಕೊಟ್ಟ, ತಂದ."

"ತಂದ ಸರಿ. ಈಗ್ಯಲ್ಲ ಸಿಬಿಐ ಪಾಲಾಯ್ತಲ್ಲ ಹೇಳು. ಕರ್ನಾಟಕದ ಮಣ್ಣಿನ ದುಡ್ಡಿಂದ ಕರ್ನಾಟಕಕ್ಕೆ ಯಾವ ಲಾಭನೂ ಇಲ್ಲ, ತಿರುಪ್ತಿ ತಿಮ್ಮಪ್ಪನಿಗೆ ಒಳ್ಳೆ ಕಿರೀಟ ಸಿಕ್ತು. ಗಡ್ಕರಿ ಅನ್ನೋ ಕುಂಬಳಕಾಯಿಗೆ ಕತ್ತಿ ಸಿಕ್ತು. ಸುಸುಮ್ಮ ಎಂಬ ಹಸಿಗೆ ಜೀವಮಾನವ್ಯಲ್ಲ ಕುಂತುಗಂಡು ತಿನ್ನುವಷ್ಟು ದುಡ್ಡು ಸಿಕ್ತು. ನಮಿಗೇನು ಸಿಕ್ತಪ್ಪಾ ಅಂದ್ರೆ ಗಣಿ ತೋಡಿರೊ ಗುಂಡಿಗಳು ಸಿಕ್ಕದೊ, ಅಷ್ಟೆ."

"ಆ ನನಮಗ ರೆಡ್ಡಿ ಆಟೊಂತರ ಗಣಿ ಕದಿತಾಯಿರಬೇಕಾದ್ರೆ ಸರಕಾರ ಏನು ಮಾಡ್ತಯಿತ್ಲ?" ಎಂದ ಕಾಳಮಾವ.

"ಸರಕಾರ ಸಪೋರ್ಟು ಮಾಡ್ತಯಿತ್ತು ದೊಡಪ್ಪ. ಈ ರೆಡ್ಡಿ ನನಮಕ್ಕಳು ಕೇಂದ್ರದ ಬಿಜೆಪಿ ಲೀಡ್ರುಗಳನೆ ವಳಗಾಯ್ಕಂಡಿದ್ರು. ಆ ಸುಸುಮ ಅನ್ನೊ ಮಾಯರಾತಿನೆ ಅಂತೆ ಇವುರು ಚೀಣಾ ದೇಸಕೆ ಗಣಿದೂಳ ಮಾರಿಕಳೊ ಪ್ಲಾನ್ ಹೇಳಿಕೊಟ್ಟಿದ್ದು. ಆಗ ಕುಮಾರಣ್ಣ ಮುಖ್ಯಮಂತ್ರಿಯಾಗಿದ್ದ. ಸುಮಾರು ಕಳ್ಳತನ ನ್ಯಡಿತಾಯಿತ್ತು. ಯಾವಾಗ ಎಡೂರಪ್ಪ ಮುಖ್ಯಮಂತ್ರಿಯಾದ್ನೋ ಆಗ ಹಗಲುರಾತ್ರಿ ಗಣಿ ತೋಡಿ ಮಾರಿಕಂಬುಟ್ರು."

"ಎಡೂರಪ್ಪ ತಡಿಯಕ್ಯಾಗಲಿಲವೇ?"

"ಅದ್ಯಂಗೆ ತಡಿತನೆ? ಪಕ್ಷೇತರನ್ನ ಕೊಂಡಕಂಡು ಎಡೂರಪ್ಪ ಸರಕಾರ ಮಾಡಂಗೆ ಸಪೋರ್ಟು ಮಾಡಿದೋರೆ ರೆಡ್ಡಿಗಳು. ಅದ್ಕೆ ಎಡೂರಪ್ಪ ಫುಲ್ ಸಪೋರ್ಟು ಕೊಟ್ಟ. ಆಗ ರೆಡ್ಡಿಗಳು ಗಣಿ ತೋಡಿದಷ್ಟೇ ಅಲ್ಲ, ಇಡೀ ಬಳ್ಳಾರಿ ಜಿಲ್ಲೇಲಿ ನಡೀತಾಯಿರೊ ಬ್ಯಾರೆ ಗಣಿಯಿಂದ ಕಪ್ಪ ವಸೂಲು ಮಾಡಿದ್ರು. ಅದ್ಕೆ ಅಂತ ತಾವು ಹೇಳಿದಂಗೆ ಕೇಳೊ ಡಿ.ಸಿ. ಹಾಕಿಸಿಗಂಡ್ರು, ಎಸ್ಪಿ ಹಾಕಿಸಿಗಂಡ್ರು. ಇಡೀ ಜಿಲ್ಲೆಲಿ ತಾವೇಳಿದಂಗೆ ಕೇಳೊ ಸರಕಾರಿ ಜನಗಳನ್ನಲ್ಲ ನೇಮಕ ಮಾಡಿಕೊಂಡ ಮ್ಯಾಲೆ ಲೂಟಿ ಮಾಡಿಬುಟ್ರು ಕಣ ದ್ವಡಪ್ಪ."

"ಲೂಟಿ ಮಾಡಿದ್ರುವೆ ಬಡಬಗ್ಗರಿಗೆ ದಾನಧರ್ಮ ಮಾಡಬೇಕಾಗಿತ್ತು" ಎಂದ ಸೀರ.

"ಅದ್ಯಂಗೆ ಮಾಡ್ತರೆ ಚಿಗಪ್ಪ, ಯಡಗ್ಯೆಲಿ ಕಾಗೆ ಓಡಸೊ ಜನ ಅವುರು. ಇನ್ನು ಎಡೂರಪ್ಪ ಹೊಳೆಗೆಸಿಕ್ಕಿ ಮನೆಕಳಕಂಡಿರೋರಿಗೆ ಮನೆ ಕಟ್ಟಿಸಿ ಕೊಡನಾ ಅಂತ. ಒಂದು ಲಾರಿಗೆ ಒಂದು ರೂಪಾಯಿ ಸುಂಕ ಹಾಕ್ತಿನಿ ಅಂದ. ಆಗ ಈ ರೆಡ್ಡಿಗಳು ಎಡೂರಪ್ಪನ್ನೆ ತಗಿಯಕ್ಕೆ ಅಂತ ವಂಟಿದ್ರು. ಯಂಗೊ ಉಳುದು ಬದುಕಿದ ಎಡೂರಪ್ಪ ತಿರಗ ಅವುರ ತಂಟಿಗೋಗಲಿಲ್ಲ."

"ಅಷ್ಟೆ ಅಲ್ಲ ಕಣೊ ವಾಟಿಸ್ಸೆ. ಈ ಎಡೂರಪ್ಪ ಯಂತ್ಯಂತ ನಾಟಗ ಆಡಿದ್ದ. ಗಣಿರೆಡ್ಡಿಗಳ ಜೊತೆ ರಾಜಿಯಾದಾಗ 'ಒಂದೇ ಒಂಚೂರು ಅಕ್ರಮ ಗಣಿಗಾರಿಕೆ ನ್ಯಡೀತಾಯಿಲ್ಲ, ರೆಡ್ಡಿಗಳು ಪ್ರಾಮಾಣಿಕರು' ಅಂತಿದ್ದ. ಅದೇ ಅವುರು ತಿರುಗಿ ಬಿದ್ದಾಗ 'ಈ ನಾಡಿನ ಖನಿಜ ಸಂಪತ್ತು ಲೂಟಿಯಾಯ್ತಾ ಅದೆ. ಅದನ್ನ ತಡಿಯಕ್ಯಾಗದೆ ಅಸಹಾಯಕನಾಗಿದ್ದಿನಿ' ಅಂದಿದ್ದ ಗೊತ್ತೆ?"

"ಅದೇನಂತ ಹೊಸ ಮ್ಯಾಟ್ರಲ್ಲ ಬುಡೊ ಉಗ್ರಿ. ಹಿಂದೆ ದ್ಯಾವೇಗೌಡ್ರು ಕೂಡ ಅಂಗೆ ಹೇಳಿದ್ರು."

"ದ್ಯಾವೇಗೌಡೇನೇಳಕ್ಕೆ ಹೋಗಿದ್ದುನ್ಲ?" ಎಂದ ಕಾಳಮಾವ.

"ಸಿಟ್ಟಾಗಬ್ಯಾಡ ದೊಡಪ್ಪ, ರಾಮಕೃಷ್ಣ ಹೆಗಡೆ ಜೊತೆ ಜಗಳಾಡಿಕಂಡಾಗ 'ಹೆಗಡೆಯವರು ನೀರಾವರಿಗೆ ಹೆಚ್ಚು ಹಣ ಕೊಡ್ತಾಯಿಲ್ಲ' ಅಂದಿದ್ರು. ಅದೇ ಹೆಗಡೆ ಜೊತೆ ರಾಜಿಯಾದಾಗ 'ಕರ್ನಾಟಕದ ಯಾರೇ ಮುಖ್ಯಮಂತ್ರಿಗಿಂತ್ಲೂ ಹೆಚ್ಚು ಹಣವನ್ನ ಹೆಗಡೆಯವರು ನೀರಾವರಿಗೆ ಕೊಟ್ಟಿದಾರೆ' ಅಂತಿದ್ರು. ಇದಕೇನೇಳ್ತೀ?"



"ಈ ಟೇಮಲ್ಲಿ ದ್ಯಾವೇಗೌಡುಂದ್ಯಾಕೊ ಸದ್ದಿಲವಲ್ಲಾ?" ಎಂದ ಸೀರ.

"ಅವುರು ಒಂದು ತಿಂಗಳು ಬುಟಗಂಡು ಮಾತಾಡ್ತರಂತೆ ಚಿಗಪ್ಪ. ಗಣಿ ಬಗ್ಗೆ ಏನಾರ ಹೇಳನಾ ಅಂದ್ರೆ ಕುಮಾರಣ್ಣನೂ ಗಣಿಸ್ವೊಣೆವಳಗೆ ಸೇರಿಕಂಡವ್ರುನೆ. ಅಕ್ರಮ ಸೈಟಿನ ದಂಧೆ ಬಗ್ಗೆ ಮಾತಾಡನ ಅಂದ್ರೆ ಸೊಸೆ ಸಿಗಾಯ್ಕಂಡವ್ರುಳೆ. ಅಂತೂ ಎಡೂರಪ್ಪನ ಫ್ಯಾಮಿಲಿ, ದ್ಯಾವೇಗೌಡ ಫ್ಯಾಮಿಲಿ ಒಂದೇ ಜಾಗದಲ್ಲವ್ರುರೆ. ಜನಾರ್ದನ ರೆಡ್ಡಿ ಸ್ಥಿತಿ ನೋಡಿ ನಗಾಡಂಗಿಲ್ಲ."

"ಆದ್ರೆ ಬಿಜೆಪಿಗಳು ಮಾತ್ರ ವಳಗೊಳಗೇ ನಗಾಡ್ತರಂತೆ ಕಣೊ. ಸದಾನಂದ ಗೌಡನಂತೂ 'ನಮ್ಮ ಉಪದ್ರವಗಳ ನಿವಾರಣೆಯಾಯ್ತು' ಅಂತ ಇನ್ನೂ ಅಗಲಾಗಿ ಹಲ್ಲು ಬುಟಗಂಡು ನಗ್ತಾಯಿದ್ದನಂತೆ."

"ಅದರಲ್ಲೇನೊ ವಿಶೇಷ ಉಗ್ರಿ. ರೆಡ್ಡಿಗಳಿಗೆ ತಕ್ಕ ಶಾಸ್ತಿಯಾಗದ ಇಡೀ ಕರ್ನಾಟಕನೆ ಕಾಯ್ತಾಯಿತ್ತು. ಅದರಲ್ಲೂ ಬಿಜೆಪಿಗಳಂತೂ ಹಗಲೂರಾತ್ರಿ ಅವರ ಕೇಡ ಬಯಸ್ತಿದ್ರು ಗೊತ್ತೆ?"

"ಏನು ಕೇಡು ಬಯಸಿದ್ರು ತಾನೆ ಏನ್ಲ ರೆಡ್ಡಿ ಮಾರಿಕಂಡ ಮಣ್ಣು ಬಂದತೇನ್ಲ? ಅವುನಾಸ್ತಿ ಬವುಸ್ಥಿತಿ ತಗಂಡು ಏನು ಮಾಡಕ್ಯಾದತೂ" ಎಂದ ಕಾಳಮಾವ.

"ಹಂಡ್ರೆಡ್ ಪರಸೆಂಟು ಕರಟ್ ದೊಡಪ್ಪ ನೀನೇಳಿದ್ದು. ಗಣಿ ದೂಳು ತಿರಗ ಬರದಿಲ್ಲ. ಆದ್ರೆ ಈ ಬ್ಯಾಂಡಿಕೂಟು ಇಡೀ ಕರ್ನಾಟಕನೆ ಹಾಳು ಮಾಡಿದ. ಆ ಬಳ್ಳಾರಿ ಜನಗಳ ಬಾಡಗೆ ಗೂಂಡಾಗಳ ಮಾಡಿ, ಈಗ ಅವುರ್‍ನೆಲ್ಲ ರೆಡ್ಡಿಗೆ ಸಪೋಟು ಮಾಡಿಕಂಡು ಬಳ್ಳಾರಿಗೆ ಬೆಂಕಿ ಹಚ್ಚವುರೆ."

"ಮಾರಿಕಂಡ ಜನ ಮಾಡಬಾರದ್ನೆ ಮಾಡ್ತರೆ ಕಣೊ. ಯತ್ತ ಮುಂದಾಗಿ ನೋಡಿದರೂ ಇದ್ಯಲ್ಲಾಕ್ಕು ಕಾಂಗ್ರೆಸಿನೋರೆ ಕಾರಣ ಕಣೊ."

"ಕಾಂಗ್ರೆಸ್ಸಿನೋರೆ ಸಿಬಿಐ ಕಳಿಸಿ ರೆಡ್ಡಿ ಹಿಡಿಸಿ ಜೈಲಿಗಾಕಿರುವಾಗ ಅವುರ ತಪ್ಪೇನಿದ್ದತೊ ಉಗ್ರಿ?"

"ಈ ಸೋನಿಗಾಂಧಿ ಅನ್ನೋಳು ಯಾಕಪ್ಪ ಬಳ್ಳಾರಿಗೆ ಬಂದು ಯಲಕ್ಷನ್ನಿಗೆ ನಿಂತಗಬೇಕಾಗಿತ್ತು? ಆಗ ಅವುಳೆದ್ರಿಗೆ ಸುಸುಮ ಸ್ವರಾಜ್ ಬಂದು ನಿಂತಗಂಡ್ರು. ಅವುಳಿಗೆ ಈ ರೆಡ್ಡಿಗಳು ನಾಯಿಮರಿಗಳ ತರ ನ್ಯಾತಬಿದ್ರು. ಅವುಳೇನು ಮಾಡಿದ್ಲು ಅಂದ್ರೆ ಚೀಣಾ ದೇಸಕೆ ಗಣಿದೂಳು ಮಾರಿ ದುಡ್ಡು ಮಾಡದ ಹೇಳಿಕೊಟ್ಲು. ಅದರಿಂದ ರೆಡ್ಡಿಗಳು ಬಳ್ಳಾರಿಲಿ ಬಿಜೆಪಿ ಬ್ಯಳಸಿ, ಸರ್ಕಾರ ಬರಕ್ಕೂ ಕಾರಣ ಆದ್ರು. ಹಿಂಗೆ ಕಾರಣ ಹುಡಿಕ್ಕಂಡೋದ್ರೆ ಕಾಂಗ್ರೆಸ್‌ನೋರು ಕ್ಯೆಯಿ ಕೊಟ್ಟ ಕ್ಯಲಸ ಮಾಡಿರದು ಕಾಣ್ತದೆ."

"ಎಂ.ಪಿ. ಪ್ರಕಾಸುನ್ನ ಬೋದಿದ್ದೋನು ಇದೇ ರೆಡ್ಡಿ ಅಲವೇನ್ಲ?" ಎಂದಳು ಜುಮ್ಮಿ.

"ಊ ಕಣಕ್ಕ. ಈಗ ಜೈಲಲ್ಲಿ ಖೈದಿ ನಂಬರ್ 697 ಅಂತ ಯದೆಮ್ಯಾಲೆ ಸೀಲೊತ್ತಿಸಿಗಂಡಿರೊ ಜನಾರ್ದನ ರೆಡ್ಡಿ ನಮ್ಮ ಎಂ.ಪಿ. ಪ್ರಕಾಶ್ ಕಾಯಿಲೆ ಆಡಿ ಕಂಡಿದ್ದ. ಅದೇ ಪ್ರಕಾಶ್ ಈಗ ಕೈಲಾಸದಲ್ಲಿ ಶಿವನತ್ರ ಡಿಕ್ಸ್‌ಕಷನ್ ಮಾಡ್ತಾ ಅವುನೆ. ರೆಡ್ಡಿ ಹೈದರಾಬಾದಿನ ಚಂಚಲಗಡಾ ಜೈಲಲ್ಲಿ ವಣ ಚಪಾತಿ ತಿಂತಾ ಕೂತವುನೆ. ರಿಯಲಿ ವಂಡ್ರುಫುಲ್ ಸಿಚುಯೇಶನ್."

ವಿರಹಿಗಳ......'



ರಿಲ್ಲೇ ಇದ್ದ ನಾರಣಪ್ಪನ 'ಗದುಗಿನ ಭಾರತ'ವನ್ನು ಅಲ್ಲಲ್ಲಿ ನೋಡುತ್ತಿದ್ದೆ; ಯೊಬ್ಬರನ್ನು ಆಹ್ವಾನಿಸಿ ಕಂತಿನ ಮೇಲೆ ಪೂರ್ತಿ ಹಾಡಿಸಿದರೆ ಎಷ್ಟು ರುತ್ತದೆ ಎಂದುಕೊಂಡೆ. ಕನ್ನಡದಲ್ಲಿ ಓದಲೇಬೇಕಾದ ಮಹಾಕಾವ್ಯಗಳು ಇವೆ. ನಾಲ್ಕು ತಿಂಗಳು ಆಗಾಗ ಕೇಳುತ್ತಾ ಕೂತಲ್ಲಿ ಎಲ್ಲ ಮುಗಿದಿರುತ್ತವೆ. ಲೆ ವಚನಗಳು. ಮಿಕ್ಕ ಕಾವ್ಯದ ಕೆಲವು ಭಾಗಗಳು, ಮುದ್ದಣನ ಗದ್ಯದ ಘಟ್ಟಗಳು, ಶರೀಫ, ಮಧುರಚೆನ್ನ ಇತ್ಯಾದಿಯಾಗಿ ಯೋಚಿಸುತ್ತಿದ್ದಾಗ ಪ್ಪನ ಎರಡು ಮಾತು ಮತ್ತೆಮತ್ತೆ ಮನಸ್ಸಿಗೆ ಬಂದವು. ಈ ಯೋಗಿಯಂಥ ಕವಿ ನಾರಣಪ್ಪ ತನ್ನ ಕಾವ್ಯದ ಉಪಯೋಗದ ಬಗ್ಗೆ ತ್ತಾ 'ವಿರಹಿಗಳ ಶೃಂಗಾರ' ಎಂದು ಹೇಳುತ್ತಾನೆ. ಅದರ ಶಬ್ದವೈವಿಧ್ಯ ಮತ್ತು ಅರ್ಥಸೂಕ್ಷ್ಮ ನೋಡಿ. ಒದ್ದೆ ಮಲ್ಲಿ ಕೂತ ನಾರಣಪ್ಪ ಈ ಕಾವ್ಯವನ್ನು ರಚಿಸುತ್ತಾ ಇದ್ದಕ್ಕಿದ್ದಂತೆ ವಿರಹಿಗಳಿಗೆ ತನ್ನ ಕಾವ್ಯ ಏನನ್ನು ಕೊಡುತ್ತದೆ ಚಿಂತಿಸಿ ಶೃಂಗಾರವನ್ನು ನೀಡುತ್ತದೆ ಅನ್ನುತ್ತಾನೆ. 'ದ್ವಿಜರಿಗೆ ಪರಮವೇದರ ಸಾರ' 'ಮಂತ್ರಿ ಜನಕ್ಕೆ ಬುದ್ಧಿಗುಣ' ಾದ್ದೆಲ್ಲ ಸರಿ; ಅವರಿಗೆ ಅದೆಲ್ಲ ಇಲ್ಲಿ ಸಿಕ್ಕೀತು. ಆದರೆ ಇಲ್ಲಿ ವಿರಹಿಗಳಿಗೆ ಶೃಂಗಾರವಿದೆ.... ಎಂದು ಚಿಂತಿಸುತ್ತಾ ೋ ಕೇಳಿದ್ದ ನಾರಣಪ್ಪನ ಇನ್ನೊಂದು ಮಾತನ್ನು ಮನಸ್ಸು ನೆನೆಯುತ್ತಿದೆ. 'ಸತ್ಕವಿ ನುಡಿಗೆ ಹಾದರವಿಲ್ಲ' ಇದನ್ನು ತ್ತಿರುವವನು ಕುಮಾರವ್ಯಾಸ, ಮಹಾಮಡಿವಂತ ಎಂದು ಕೆಲವರು ತಪ್ಪು ತಿಳಿವ ನಾರಣಪ್ಪ! ಕವಿ ಸತ್ಯವನ್ನು ತ್ತಾನೆ, ಅಂದರೆ ಆತ ವಾಸ್ತವವನ್ನು ಭಾವಿಸಿ ಹೇಳುತ್ತಾನೆ, ಆದ್ದರಿಂದ ಆ ನುಡಿಗೆ ಹಾದರವಿಲ್ಲ, ಅಶ್ಲೀಲತೆ ಇಲ್ಲ, ಅನ್ನಿಸುವುದು ಕವಿಯ ಮನಸ್ಸು ಚಿಲ್ಲರೆಯಾಗಿದ್ದಾಗ, ಕೆಟ್ಟದಾಗಿದ್ದಾಗ; ಕವಿ ಸಂಭೋಗವನ್ನು ವರ್ಣಿಸುವುದೂ ಕ್ರೀಡೆಯನ್ನು ವಿವರಿಸಿದಂತಿರುತ್ತದೆ. ಬೇಂದ್ರೆ ಈ ಬಗ್ಗೆ ಕವನ ರಚಿಸಿದ್ದಾರೆ: "ಕಲ್ಪವೃಕ್ಷ..... ವೃಂದಾವನಂಗಳಲಿ."

ಗೆ ಯೋಚಿಸುತ್ತಾ ಕೂತಿದ್ದಾಗ ಮೊನ್ನೆ ಓದಿದ್ದ ಒಂದು ಮಾತು ನೆನಪಾಯಿತು. ಆಸ್ಕರ್ ವೈಲ್ಡ್ ಎಂಥ ಮತ್ತು ಮೋಹಕ ಕಿಡಿಗೇಡಿ ಎಂಬುದು ನಮ್ಮಲ್ಲಿ ಅನೇಕರಿಗೆ ಗೊತ್ತಿಲ್ಲ. ಮನುಷ್ಯನಾಳದ ದ್ವಂದ್ವಗಳನ್ನು ಮರೆಯಲಾರದ ಹೇಳಿಕೆಗಳನ್ನಾಗಿಸುವುದರಲ್ಲಿ ವೈಲ್ಡ್ ದೊಡ್ಡ ಎಕ್ಸ್‌ಪರ್ಟ್. 'ವಾಂಛಲ್ಯಗಳನ್ನು ನೀವು ಹತ್ತಿಕ್ಕಲು ಯತ್ನಿಸುತ್ತಿದ್ದೀರಾ.... ಬೇಡ. ವಾಂಛಲ್ಯಕ್ಕೆ ಶರಣಾಗಿಬಿಡಿ!' ಎಂದು ಹೇಳುತ್ತಿದ್ದ ಈತ ನೂರಾರು ನಾಣ್ಣುಡಿ ಕೊಟ್ಟಿದ್ದಾನೆ. ಈತ ಸತ್ತು ನೂರು ವರ್ಷವಾಗುತ್ತಾ ಬಂತು. ಈತ ಸಲಿಂಗರತಿಯವನಾಗಿದ್ದ ಎಂದು ದಸ್ತಗಿರಿ ಮಾಡಿ ಜೈಲಿಗೆ ಹಾಕಿದರು; ಆತ ಅವಮಾನಿತನಾಗಿ, ನೊಂದು ತೀರಿಕೊಂಡ. ಮೊನ್ನೆ ಅವನ ಕಾವ್ಯ, ನಾಟಕ, ಲೇಖನಗಳ ಅನನ್ಯ ಗುಣವಿಶೇಷ ಗಮನಿಸಿ ಆತನ ಅಸ್ಥಿಗಳನ್ನು ತೆಗೆದು ಸರಿಯಾದ ಜಾಗದಲ್ಲಿ ಹೂತರು; ಅಪಾರ ಸಂತೋಷ ಕೊಟ್ಟ ವೈಲ್ಡ್‌ಗೆ ಕೃತಜ್ಞತೆ ಸಲ್ಲಿಸಿದರು.

ಈ ವೈಲ್ಡ್ ಕಲ್ಪಿಸಿಕೊಳ್ಳುವುದರಲ್ಲಿ 'ಇರುವುದೆಲ್ಲವ ಬಿಟ್ಟು' ಇರದೆ ಇರುವುದಕ್ಕೆ ತುಡಿಯುವುದರಲ್ಲಿ ನಿಷ್ಣಾತ. ಈತ ಒಮ್ಮೆ ಪ್ರಪಂಚದ ಭೂಪಟ ನೋಡುತ್ತಾ ಮೌನವಾಗಿದ್ದ. "ಯಾಕೆ? ಏನನ್ನ ಹುಡುಕುತ್ತಿದ್ದೀ" ಅಂದರು.

"ಈ ಭೂಪಟದಲ್ಲಿ ಯುಟೋಪಿಯಾ ದೇಶ ಎಲ್ಲಿ?" ಅಂದ ವೈಲ್ಡ್.


"ಅಂಥ ದೇಶವಿಲ್ಲ"

"ಯುಟೋಪಿಯಾ ಇಲ್ಲದ ಭೂಪಟ, ಭೂಪಟವೇ ಅಲ್ಲ" ಅಂದ ವೈಲ್ಡ್.

"ಯುಟೋಪಿಯಾ ಅದರೆ ಆದರ್ಶ ರಾಜ್ಯ, ಕನಸಿನ ರಾಜ್ಯ, ರಾಮರಾಜ್ಯ. ಈ ಕನಸಿನ ರಾಜ್ಯವಿರುವುದು ಮನುಷ್ಯನ ಮನಸ್ಸಿನಲ್ಲಿ. ಅದು ಭೂಪಟದಲ್ಲಿರಬೇಕೆಂಬುದು ವೈಲ್ಡ್‌ನ ಆಶೆ.....

ವಿರಹಿಗಳ ಶೃಂಗಾರ.... ಗದುಗಿನ ನಾರಣಪ್ಪನ ಭಾರತದಲ್ಲಿ ಶೃಂಗಾರರಸ ಕಮ್ಮಿ. ಪ್ರಕೃತಿ ವರ್ಣನೆ ಕಮ್ಮಿ. ಆದರೆ ಈ ಮಹಾಕಾವ್ಯದಲ್ಲಿರುವ ಶೃಂಗಾರರಸ ಮನುಷ್ಯನಾಳದಲ್ಲಿ ಆದರ್ಶ ರಾಜ್ಯ ಇದ್ದಂತೆ....

-ಅಕ್ಟೋಬರ್ 11, 1995



ಭ್ರಷ್ಟಾಚಾರ ವಿರುದ್ಧ ಭ್ರಷ್ಟಾಚಾರ!

ಹುಟ್ಟಿದವರೆಲ್ಲರೂ ಸಭ್ಯ ನಾಗರಿಕರಾಗಿ ಬೆಳೆಯಬೇಕು ಎನ್ನುವುದು ಎಲ್ಲರ ಸದಾಶಯ. ಆದರೆ ಹಾಗೆ ಆಗುವುದಿಲ್ಲ ಎಂಬುದು ವಾಸ್ತವ. ಕೆಲವರು ದುಷ್ಟರಾಗುತ್ತಾರೆ; ಅಪರಾಧ ಮನೋಭಾವ ಬೆಳೆಸಿಕೊಳ್ಳುತ್ತಾರೆ. ಜನಸಂಖ್ಯೆ ಹೆಚ್ಚಿದಂತೆ ಅಂತಹವರ ಸಂಖ್ಯೆಯೂ ವೃದ್ಧಿಸುವುದು ಸಹಜ. ಅದು ಮೊದಲಿನ ಅನುಪಾತದಲ್ಲಿಯೇ ಇರಬೇಕು ಎಂದಿಲ್ಲ, ಸಮ, ಹೆಚ್ಚುಕಡಿಮೆ ಹೇಗಾದರೂ ಇರಬಹುದು. ಅನುಪಾತದಲ್ಲಿ ಕಡಿಮೆ ಇದ್ದರೂ ಸಂಖ್ಯೆಯಲ್ಲಂತೂ ಕಡಿಮೆ ಇರುವುದಿಲ್ಲ. ಆಶ್ಚರ್ಯ ಅಂದರೆ ನಮ್ಮ ದೇಶದಲ್ಲಿ ಈ ನಿಯಮ ಉಲ್ಲಂಘನೆಯಾಗಿದೆ! ರಾಷ್ಟ್ರೀಯ ಅಪರಾಧ ದಾಖಲೆ ಬ್ಯೂರೋ ನೀಡಿರುವ ಅಂಕಿ ಅಂಶ ಇದನ್ನು ಸೂಚಿಸುತ್ತದೆ. **1980** ರಲ್ಲಿ **15194** ದರೋಡೆ ಪ್ರಕರಣಗಳು ದಾಖಲಾಗಿದ್ದರೆ **2009** ರಲ್ಲಿ ದಾಖಲಾಗಿರುವುದು **4586** ಮಾತ್ರ!

ಈ ಪವಾಡ ಹೇಗೆ ಸಾಧ್ಯ ಆಯಿತು? ಹುಟ್ಟುವ ಮಕ್ಕಳಿಗೆ ಸದ್ಬುದ್ಧಿ ನೀಡೇ ಆ ದಯಾಮಯ ಹುಟ್ಟಿಸಿರಲಾರ. ದರೋಡೆ ನಡೆದಾಗ ಪೊಲೀಸರು ಪ್ರಕರಣವನ್ನು ದಾಖಲಿಸಿಕೊಳ್ಳಬೇಕು. ತನಿಖೆ ನಡೆಸಬೇಕು. ಅಪರಾಧಿಗಳನ್ನು ಪತ್ತೆಹಚ್ಚಿ ಶಿಕ್ಷೆ ಕೊಡಿಸಬೇಕು. ಇದೆಲ್ಲ ರೇಜಿಗೆಯ ಕೆಲಸ. ಅದೂಅಲ್ಲದೆ ಅಪರಾಧಿ ಪತ್ತೆಯೇ ಆಗಲಿಲ್ಲ ಎಂದಿಟ್ಟುಕೊಳ್ಳೋಣ. ಪೊಲೀಸರ ಕಾರ್ಯಕ್ಷಮತೆಯನ್ನೇ ದೂಷಿಸುತ್ತಾರೆ. ಅದಕ್ಕ ಹಣೆಪಟ್ಟಿ ಅಂಟಿಸುತ್ತಾರೆ. ಇಲಾಖೆ ಮೇಲಧಿಕಾರಿಗಳು. ಈ ಎಲ್ಲ ಅನಿಷ್ಟಗಳಿಂದ ಪಾರಾಗಲು ಕೆಲವರು ತಮ್ಮ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆಯುವ ದರೋಡೆ ಪ್ರಕರಣಗಳನ್ನು ದಾಖಲಿಸುವುದೇ ಇಲ್ಲ! ಕೆಲವು ಕಡೆ ದರೋಡೆಕೋರರ ಜೊತೆ ಪೊಲೀಸರೇ ಶಾಮೀಲಾಗಿರಬಹುದು! ಇಂತಹವು ಇವುಗಳ ಇಳಿಮುಖ ಆಗಲು ಕಾರಣ ಇರಬಹುದಾ? ಇಲ್ಲ ದರೋಡೆಕೋರರು ನಾಗರಿಕ ಸಮಾಜವನ್ನು ಅಭ್ಯಾಸ ಮಾಡಿರಬಹುದು. ನಾವು ಕಸುಬನ್ನು ಕದ್ದುಮುಚ್ಚಿ ಮಾಡಬೇಕು. ಸಿಕ್ಕಿಬಿದ್ದರೆ ಶಿಕ್ಷೆಗೊಳಗಾಗಬೇಕು. ಇಲ್ಲಿ ನೋಡಿದರೆ ನಮ್ಮ ಕಸುಬಿನವರು ಬಲೇ ಜನ ಇದಾರೆ. ದರೋಡೆ ಮಾಡುತ್ತಾರೆ. ನಯವಾಗಿ ಮಾಡುವುದರಿಂದಲೋ ಏನೋ ಜನರು ಸಮಾಜದ ಗಣ್ಯವ್ಯಕ್ತಿಗಳು ಎಂದೆಲ್ಲ ಮೆರೆಸುತ್ತಿದ್ದಾರೆ. ಕಾನೂನಿಗೆ ಸಿಕ್ಕಿ ನರಳುವುದಕ್ಕಿಂತ ಇವರು ತುಳೀತಿರೋ ಜಾಡೇಘನವಾದದ್ದು ಎನ್ನಿಸಿರಬಹುದು. ಆ ಜಾಡುಬಿಟ್ಟು ಈ ಜಾಡಿಗೆ ಹೊರಳಿಕೊಂಡಿರಬಹುದು.


ಹೀಗೆಲ್ಲ ಯೋಚಿಸುತ್ತಿದ್ದಾಗ 'ಟೀಂ ಅಣ್ಣಾ' ಸದಸ್ಯ ಅರವಿಂದ ಕೇಜ್ರಿವಾಲ ಅವರ ಸಂದರ್ಶನ ಕಣ್ಣಿಗೆ ಬಿತ್ತು. ಅವರೋ ಭಾರೀ ಬುದ್ಧಿವಂತರು. ಅದೇನು ಹೇಳಿದ್ದಾರೆ ನೋಡಾನ ಅಂತಾವ ಕಣ್ಣು ಹಾಯಿಸಿದೆ. ಅದರ ಸಾರಾಂಶಾನ ನನ್ನ ಮಾತಿನಲ್ಲೇ ಇಲ್ಲಿ ಹೇಳ್ತಿದೀನಿ.

'ಭ್ರಷ್ಟಾಚಾರ ವಿರುದ್ಧ ಭಾರತ' 'India Against Corruption' ಅಂತೆಲ್ಲ ಚಳವಳಿ ಹೂಡಿದ್ರಲ್ಲಾ ದೇಶವಾದ ದೇಶ ಎಲ್ಲ 'ಎರಡನೆ ಸ್ವಾತಂತ್ರ್ಯ ಸಂಗ್ರಾಮ'



ಅಂತ ಕೂಗು ಹಾಕ್ತದೆ ಅಂತಿದ್ರಲ್ಲಾ, ಈಸೊಂದು ಕಷ್ಟಪಡ್ತಾವ್ರಲ್ಲ ಇವರಿಗೆ ಹಣ ಎಲ್ಲಿಂದ ಬಂದಾತು ಅಂತಾವ ಜನ ಅನ್ನೋದು ದೇಣಿಗೇನ ನಾಮುಂದು ತಾಮುಂದು ಅಂತ ಮೇಲೆ ಬಿದ್ದು ನೀಡಿದರಂತೆ. ಹಡಬಿ ದುಡ್ಡಿರೋರು ಇಂತೋದ್ರಲ್ಲೆಲ್ಲ ಧಾರಾಳ ಅಲ್ಲವಾ. ಅಂತೋರು ಹಣದ ಹೊಳೇನೆ ಹರಿಸಿದರಂತೆ. 'ಅಣ್ಣೋ ಹಿಂಗೆ ಹಿಂದೆಮುಂದೆ ನೋಡ್ದೆ ದುಡ್ಡ ಬಿಸಾಕ್ತಿದಿಯಲ್ಲಾ' ಅಂತ ಯಾರೋ ಕೇಳಿದ್ದಕ್ಕೆ 'ನಿಂಗೊತ್ತಾಗಕಿಲ್ಲ ಸುಮ್ಕಿರು ಮಗ. ಇಂತೋರೂ ಯಾವಾಗಾರ ಬೇಕಾಯ್ತರೆ' ಅಂದರಂತೆ ಸಾಹುಕಾರ್ರು. ಇದು ಒತ್ತಟ್ಟಿಗಿರಲಿ. ಪ್ರಾಮಾಣಿಕವಾಗಿ ಚಳವಳಿಯಲ್ಲಿ ಭಾಗವಹಿಸಿದ್ದವರಿಗೆ ಹಿಂಗೆ ಸಿಕ್ಕಿಸಿಕ್ಕಿದ ಕಡೆ ಎಲ್ಲ ಕೈ ಒಡ್ಡೋದು ಸರಿ ಕಾಣಿಸಲಿಲ್ಲವಂತೆ. ಇದೇ ಮಾತ ಕೇಜ್ರಿವಾಲಾಗೂ ಕೇಳಿದ್ರಂತೆ. ಅದ್ಕೆ ಅವರು ಏನಪಾ ಹೇಳಿದ್ರು ಅಂದ್ರೆ 'ನಮಗೆ ಸಾವಿರಾರು ಜನ ದುಡ್ಡು ಕೊಡ್ತಾ ಅವ್ರೆ. ಅವರೆಲ್ಲರ ಜಾತಕ ನೋಡಿ ಇಸ್ಕೊಳ್ಳಾಕಾಯ್ತದ' ಅಂದ್ರು. 'ಇಂತೋರತ್ರ ಈಸಿಕೊಳ್ಳಬಾರದಿತ್ತು ಅಂತ ಬೆಳ್ಳು ಮಾಡಿ ತೋರಿಸಿದ್ರೆ ಆಗ ಹೇಳ್ತೀನಿ' ಅಂತಿದ್ದಾಗಲೆ ಕುಂಬಳಕಾಯಿ ಕಳ್ಳ ಅಂದ್ರೆ ಹೆಗಲು ಮುಟ್ಟಿ ನೋಡಿಕೊಂಡ ಅಂತಾರಲ್ಲ ಹಂಗಾಗಿರಬೇಕು. ಜಿಂದಾಲ್ ಗುಂಪು ಥಟ್ಟನೆ ನೆನಪಿಗೆ ಬಂದು 'ಗಣಿ ಹಗರಣದಲ್ಲಿ ಸಿಕ್ಕಿ ಒದ್ದಾಡ್ತಿರೋ ಅಂತೋರಿಂದ ದುಡ್ಡ ತಗಂಡಿದೀರಲ್ಲ ಇದೆಂತ ಭ್ರಷ್ಟಾಚಾರ ವಿರೋಧ ಅಂತೆಲ್ಲ ಜನ ಆಡಿಕೊಳ್ತ ಅವ್ರೆ ಅನ್ನೋದು ನನಗೆ ತಿಳ್ದಿದೆ. ನಾನು ದುಡ್ಡೀಸಿಕೊಂಡಿರೋದು 'ಜಿಂದಾಲ್ ಗ್ರೂಪ್'ನಿಂದ ಅಲ್ಲ, ಅದರ ಓನರು ಸೀತಾರಾಂ ಜಿಂದಾಲ್ ಅವರಿಂದ ಅಂದವ್ರೆ! ಯಾಕೋ ಇದೊಂತರ ನಂ ವಿ. ಸೋಮಣ್ಣಾರ ಲೆಕ್ಕಾಚಾರ ಇದ್ದಂಗದೆ. ಅವ್ರು ಗಣಿ ಹಗರಣದಲ್ಲಿ ನನ್ನ ಹೆಸರಿಲ್ಲ ನನ್ನ ಮಕ್ಕಳೆಸ್ರದೆ, ಮಕ್ಕಳು ಮಾಡಿದ ತಪ್ಪಿಗೆ ಅಪ್ಪನ್ನ ಹೆಂಗೆ ಹೊಣೆ ಮಾಡ್ತೀರಿ, ಎಂದೆಲ್ಲ ಜಬರ್‌ದಸ್ತ್ ವಾದಿ ಮಂತ್ರಿಗಿರಿ ಗಿಟ್ಟಿಸಿಕೊಂಡ್ರಲ್ಲ ಹಂಗೇನೇ ಇದೂ ಇರಂಗದೆ. ಸೋಮಣ್ಣೋರು ಇನ್ಮೇಲೆ 'ಕೇಜ್ರಿವಾಲರೇ ಹಿಂಗೇಳವ್ರೆ' ಅಂತ ಧಾರಾಳವಾಗಿ ಹೇಳಬಹುದು! ಓತಿಕ್ಯಾತನಿಗೆ ಬೇಲಿ ಸಾಕ್ಷಿ ಇದ್ದಂಗಿರ್ತದೆ. ದೊಡ್ ದೊಡ್ಡೋರು ಏನು ಮಾಡಿದರೂ ನಡೀತದೆ.

ಕೇಜ್ರಿವಾಲರು ಪಾರದರ್ಶಕತೆ, ಉತ್ತರದಾಯಿತ್ವ ಅಂತ ಖಂಡತುಂಡವಾಗಿ ಹೇಳ್ತಿರ್ತಾರಲ್ಲ, ಅಲ್ಲೇನಾಗದೆ ಅವರ ಒಂದು ಸ್ವಯಂಸೇವಾ ಸಂಸ್ಥೆಯೋರಿಗೆ 'ಭ್ರಷ್ಟಾಚಾರ ವಿರೋಧ ಭಾರತ' ಚಳವಳಿಗೆ ಅಂತಾವ ಅದ್ಯಾರ್‍ಯಾರೋ ಅದೆಷ್ಟೆಷ್ಟೋ ಹಣ ಕೊಟ್ಟಿದ್ದಾರಂತೆ. ಈಸ್ಕೊಂಡ ದುಡ್ಡಿಗೆ ರಸೀದಿ ಹರೀಬೇಕಲ್ಲ, ಅದ್ನೂ ಹರಿದವ್ರೆ. ಆದ್ರೆ ಅದು ಆ ಸ್ವಯಂಸೇವಾ ಸಂಸ್ಥೆಯ ಹೆಸರಿನಲ್ಲಿದ್ದ ರಸೀದಿಯಂತೆ! ಅವರ ವೆಬ್‌ಸೈಟಲಿ ಈ ಹಣದ ಸುದ್ದೀನೆ ಇಲ್ವಂತೆ! 'ಇದೇನ್ರಿ ಪಾರದರ್ಶಕತೆ, ಉತ್ತರದಾಯಿತ್ವ ಅಂತ ಊರಗಲ ಹರಿಬಿಡೋ ನೀವೇ ಹಿಂಗ್ ಮಾಡಿದೀರಲ್ಲ' ಅಂತ ಕೇಳಿದ್ಕೆ, 'ಕಣ್ತಪ್ಪಿನಿಂದ ಹಿಂಗಾಗೋಗಿದೆ, ಸರಿಪಡುಸ್ತೀನಿ' ಅಂದ್ರಂತೆ! ದೊಡ್ಡೋರ ವ್ಯವಹಾರ.



ಎಚ್.ಎಲ್. ಕೇಶವಮೂರ್ತಿ

ಅಣಕ

ಕಬೀರ್ ಅಂತ ಒಂದು ಸ್ವಯಂಸೇವಾ ಸಂಸ್ಥೆ ... ಅದೂ ಕೇಜ್ರಿವಾಲಾ ಅವರದ್ದೆ. ಅದಕ್ಕೆ ಆಗಾಗ್ಗೆ ಫೋ... ಫೌಂಡೇಷನ್ನಿನಿಂದ ಹಣ ಹರಿಯುತ್ತೆ. 'ಇದರ ವಿ... ಕೊಟ್ಟಿಲ್ಲವಲ್ರೀ ಕೇಜ್ರಿವಾಲರೆ' ಅಂತ ಕೇಳಿದ್ರೆ '... ಹಣ ಹರಿಸೋರು ನೂರಾರು ಅನಿವಾಸಿ ಭಾರತೀಯರ... ಫೋರ್ಡ್ ಫೌಂಡೇಷನ್ ಹಣಾನೂ ಇದೆ... ಸೇರ್‍ಕೊಬುಟ್ಟದೆ. ಬ್ಯಾರೆ ಬ್ಯಾರೆ ಮಾಡಕೆ ಟೈಮಿಲ್ಲ ಅಂ...

ಜನಲೋಕಪಾಲ ಮಸೂದೆ ವ್ಯಾಪ್ತಿಯಿಂದ ಹ... ಸ್ವಯಂಸೇವಾ ಸಂಸ್ಥೆಗಳು ಇರುವುದು ಇ... ಇರಬಹುದಾ....!

ಮಸೂದೆ ಬರಲಿ!

ಅಣ್ಣಾ ಹಜಾರೆ ಅವರ ಉಪವಾಸದ ಒಂಬ... ದಿವಸ. ರಾತ್ರಿ ಸಮಯ. ಜಿಟಿಜಿಟಿ ಮಳೆ ಬೀಳು... ಜನಸಾಗರ ಅಲ್ಲದಿದ್ದರೂ ಸಾಕಷ್ಟು ಸಂಖ್ಯೆಯ ಜನರಿ... ಅವರಲ್ಲಿ ವ್ಯಾಪಕ ಭ್ರಷ್ಟಾಚಾರದಿಂದ ಕ್ರೋಧಗೊಂಡ... ದೇಶದ ಭವಿಷ್ಯದ ಬಗ್ಗೆ ಚಿಂತಿಸುವರು; ಕೆ... ಪ್ರೇಕ್ಷಕರಾಗಿದ್ದವರು; ಜನಸಂದಣಿ ನೋಡಿ ಮೋ... ಮಾಡುವವರು ಎಲ್ಲರೂ ಇದ್ದರು. ಹಿಂದೂ ಪತ್ರಿ... ವರದಿಗಾರ ಇದನ್ನೆಲ್ಲ ಮನಸ್ಸಿನಲ್ಲಿಯೇ ಚಿತ್ರಿಸಿಕೊಂ... ಹೊರಡುವ ಸಮಯ ಆಯಿತು. ಅಲ್ಲಿಂದ ... ಕಿಲೋಮೀಟರು ದೂರದಲ್ಲಿ ಕಾರನ್ನು ನಿಲ್ಲಿಸಿದ್ದರು. ಅ... ತಲುಪಲು ಆಟೋ ಹಿಡಿಯುವುದು ಅನಿವಾರ್ಯ ಆ... ಹಿಡಿದರು. ಕಾರು ನಿಲ್ಲಿಸಿದ್ದ ಸ್ಥಳ ಬಂತು. ಮೀ... ನೋಡುತ್ತಾ ಪರ್ಸ್ ತೆಗೆದರು.

'ಐವತ್ತು ರೂಪಾಯಿ ಕೊಡಿ ಸಾರ್' ... ಆಟೋವಾಲಾ.

ಅರ್ಧ ಕಿಲೋಮೀಟರ್‌ಗೆ ಐವತ್ತು ರೂಪಾ... ಸುಲಿಗೆಯ ಪರಮಾವಧಿ!

ಇವರು ಕೊಡಲು ಒಪ್ಪಲಿಲ್ಲ, ಅವನ ಬಲ... ನಿಲ್ಲಲಿಲ್ಲ.

'ಯಾಕಪ್ಪ ಇಷ್ಟು?'

'ಅರೆ ಆ ಯೋಚನೆ ಬಿಡಿ ಸಾರ್. ಲೋಕಪಾ... ಬಿಲ್ ಪಾಸಾಗಲಿ. ಮೀಟರ್ ತೋರಿಸಿದಷ್ಟೇ ತೆಗೋ... ಅಂತ ನಕ್ಕ ಅವ!

ಐಜೂರ್ ಸಿನಿಕತನ ಸರಿಯಲ್ಲ

ಈ ಸಂಚಿಕೆಯ ಪುಸ್ತಕ ಪರಿಚಯ ಅಂಕಣದಲ್ಲಿ 'ಮೂಕ ಮೈಲಿಗಲ್ಲು' ಕವನ ಸಂಕಲನದ ಬಗ್ಗೆ ಬರೆದಿರುವ ಚಂದ್ರಶೇಖರ ಐಜೂರ್‌ರ ಸಿನಿಕತನ ನೋಡಿ ಬೇಸರವಾಯಿತು.

ಸಿನಿಮಾದ ಹಾಡು - ಸಾಹಿತ್ಯದ ಬಗ್ಗೆ ಐಜೂರರಿಗೆ ಅಸಡ್ಡೆಯಿದ್ದಂತಿದೆ. ಆದರೆ ಅನೇಕ ಸಿನಿಮಾ ಹಾಡುಗಳು ಪಾಪ್ಯುಲರ್ ಆಗುವುದೇಕೆಂದರೆ ಅವುಗಳಲ್ಲಿ ಮಾಮೂಲಿ ಜನರ ಹೃದಯಕ್ಕೆ ತಾಕುವ ಸಾಲುಗಳು, ಫಿಲಾಸಫಿ ಇರುತ್ತವಾದ್ದರಿಂದ ಅಥವಾ ಅವು ಸಂಕೀರ್ಣವಾಗಿರುವುದಿಲ್ಲ, ಆದ್ದರಿಂದ ಸಿನಿಮಾ ಸಾಹಿತ್ಯ ಕೂಡ ಒಂದು ರೀತಿಯ ಕಲಾಭಿವ್ಯಕ್ತಿಯೇ ಹೌದು. ಅವರೆಂದೂ ತಮ್ಮನ್ನು ಕುವೆಂಪು, ಬೇಂದ್ರೆಗಿಂತ ಗ್ರೇಟ್ ಎಂದು ಹೇಳಿಕೊಂಡಿಲ್ಲ, ಅದೇರೀತಿ ಮಣಿಕಾಂತರ 'ಹಾಡು ಹುಟ್ಟಿದ ಸಮಯ', ಅಂಕಣ ಕುತೂಹಲಕಾರಿಯಾಗಿದೆ. ಕವಿಸಮಯ ಎಂಬುದೊಂದು ಇರಬಹುದಾದರೆ ಹಾಡು ಹುಟ್ಟಿದ ಸಮಯ ಏಕಿರಬಾರದು?

ಈ ಹಿಂದೆ 'ಸಂಪಾದಕೀಯ' ಬ್ಲಾಗ್‌ನಲ್ಲಿ ಪತ್ರಕರ್ತರ ಉದ್ಯೋಗ ಪಲ್ಲಾಂತರದ ಬಗ್ಗೆ ಚರ್ಚೆಯಾಗುತ್ತಿದ್ದಾಗಲೂ ಐಜೂರ್ 'ಇದ್ಯಾವ ದೊಡ್ಡ ವಿಚಾರ' ಎಂದು ಸಿನಿಕತನದಿಂದ ಪ್ರತಿಕ್ರಿಯಿಸಿದ್ದರು.

ಆಯಾ ಕ್ಷೇತ್ರದ ಜನರಿಗೆ ಅವರವರ ವೃತ್ತಿ ಸಂಬಂಧಿತ ವಿಚಾರಗಳು ಮುಖ್ಯ ಅನಿಸಿದರೆ ತಪ್ಪೇನಿದೆ ಹೇಳಿ?

ಐಜೂರ್‌ರಂತಹ ಪ್ರತಿಭಾವಂತ ಯುವ ಬರಹಗಾರರು ತಮ್ಮ ಸುತ್ತಲಿನ ವಿದ್ಯಮಾನಗಳನ್ನು ಮುಕ್ತ ಮನಸ್ಸಿನಿಂದ ನೋಡುವಂತಾಗಲಿ. ಸಿನಿಕತನ, ಉಡಾಫೆ ನಮ್ಮ ತಿಳಿವಳಿಕೆಯನ್ನು ಕುಗ್ಗಿಸುತ್ತದೆಯೇ ವಿನಃ ಬೆಳೆಸುವುದಿಲ್ಲ.

-ರವಿಶಂಕರ, ಬೆಂಗಳೂರು

ಅಂತೂ ಹಜಾರೆಯವರ ಭ್ರಷ್ಟಾಚಾರ ವಿರೋಧಿ ಆಂದೋಲನ ಸದ್ಯಕ್ಕೆ ಮುಗಿದಂತೆ ಕಾಣುತ್ತಿದೆ. ಇದರಲ್ಲಿ ಗೆದ್ದವರು ಯಾರು? ಸೋತವರು ಯಾರು? ಎಂಬುದು ಮಿಲಿಯನ್ ಡಾಲರ್ ಪ್ರಶ್ನೆ.

ನನ್ನ ದೃಷ್ಟಿಯಲ್ಲಿ ಗೆದ್ದದ್ದು, ಈ ಚಳವಳಿಯನ್ನು ಒಂದು ಅವಕಾಶವನ್ನಾಗಿ ಬಳಸಿಕೊಂಡು ಪ್ರಚಾರ ಪಡೆದ ಆರ್‌ಎಸ್‌ಎಸ್, ಎಬಿವಿಪಿಯಂತಹ ಬಲಪಂಥೀಯ ಸಂಘಟನೆಗಳು, ನಗರಕೇಂದ್ರಿತ ಮೇಲು ಮಧ್ಯಮವರ್ಗ ಮತ್ತು ಹಣದ ಹಪಾಹಪಿಗೆ ಬಿದ್ದ ನವಸಾಕ್ಷರ ಯುವವರ್ಗ. ಸೋತಿದ್ದು ದಲಿತ, ಅಲ್ಪಸಂಖ್ಯಾತ ಮತ್ತು ರೈತರನ್ನೊಳಗೊಂಡಂತೆ ಇಂಡಿಯಾದ ಎಲ್ಲ ದಮನಿತ ವರ್ಗಗಳು. ಯಾಕೆಂದರೆ ಈ ಚಳವಳಿಯ ಉದ್ದಕ್ಕೂ ಎಲ್ಲೂ ದಲಿತರಾಗಲಿ, ರೈತರಾಗಲಿ, ಅಲ್ಪಸಂಖ್ಯಾತರಾಗಲಿ ಈ ನಾಡಿನ ನಿಜ ಮೂಲನಿವಾಸಿಗಳಾದ ಬುಡಕಟ್ಟು ವರ್ಗಗಳಾಗಲಿ ಕಂಡುಬರಲಿಲ್ಲ. ನರೇಂದ್ರ ಮೋದಿ ಅಂತಹವರು ಸಹ ನಕ್ಸಲರಿಗೆ ಅಹಿಂಸೆಯ ಪಾಠ ಹೇಳುವಂತಾಯಿತು. ಇದು ಈ ಚಳವಳಿಯ ವಿಪರ್ಯಾಸ.

ಇನ್ನೂ ವಿಷಾದವೆಂದರೆ, ಕಳೆದ ಹತ್ತು ವರ್ಷಗಳಲ್ಲಿ ಸಾವಿರಾರು ರೈತರು ಆತ್ಮಹತ್ಯೆಗೆ ಶರಣಾದಾಗ, ಸವರ್ಣೀಯರು ದಲಿತರಿಗೆ ಮಲ ತಿನ್ನಿಸಿ ಬಹಿಷ್ಕಾರ ಹಾಕಿದಾಗ, ಮಣಿಪುರದಲ್ಲಿ ಸಶಸ್ತ್ರ ಪಡೆಯ ವಿಶೇಷಾಧಿಕಾರ ರದ್ದುಪಡಿಸಲು ಇರೋಮ್ ಶರ್ಮಿಳಾ ಉಪವಾಸ ಕೈಗೊಂಡು ವ್ಯವಸ್ಥೆಯ ವಿರುದ್ಧ ಹೋರಾಡುತ್ತಿರುವಾಗ, ಕಾಶ್ಮೀರದಲ್ಲಿ ಅಮಾಯಕರಿಗೆ ಉಗ್ರಗಾಮಿಗಳೆಂಬ ಹಣೆಪಟ್ಟಿ ಕಟ್ಟಿ ಎನ್‌ಕೌಂಟರ್ ಹೆಸರಲ್ಲಿ ಅವರನ್ನು ಹತ್ಯೆಗೈದಾಗ ಜಾಣನಿದ್ರೆಯಲ್ಲಿದ್ದ ಈ ವಿದ್ಯಾವಂತ ಮಧ್ಯಮವರ್ಗ 'ಭ್ರಷ್ಟಾಚಾರ ವಿರೋಧಿ' ಆಂದೋಲನದ ನೆಪದಲ್ಲಿ ಇದೀಗ ಸೆಟೆದು ನಿಂತಿರುವುದು ಅದರ ಮುಖವಾಡವನ್ನು ಕಳಚುವಂತೆ ಮಾಡಿದೆ.

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು.


ಗಾಂಧಿಟೋಪಿ ಹಾಕಿಕೊಂಡು ಜೈಹೋ ಎಂದು ಹಿಸ್ಟೀರಿಯಾ ರೋಗಿಗಳಂತೆ ನೃತ್ಯ ಮಾಡುತ್ತಿದ್ದ ಯುವಕರನ್ನು ಟಿವಿಯಲ್ಲಿ ನೋಡಿದಾಗ ಆ ಯುವಕರ ಮುಗ್ಧತೆಗೆ ಪಾಪ ಅನ್ನಿಸಿತು.

-ಕು.ಸ. ಮಧುಸೂದನ, ರಂಗೇನಹಳ್ಳಿ

ಈ ವಾರದ ತಮ್ಮ ಪತ್ರಿಕೆಯಲ್ಲಿ 'ಮಂಡ್ಯ: ಫ್ಲೆಕ್ಸ್ ಎಮ್ಮೆಲ್ಲೆ ಕ್ಯಾಂಡಿಡೇಟ್‌ಗಳ ಹಾವಳಿ' ಎಂಬ ವರದಿಯ ಬಗ್ಗೆ ಸ್ಪಷ್ಟೀಕರಣ ನೀಡಲು ಬಯಸುತ್ತೇನೆ.

ನಾನು ಹತ್ತಾರು ವರ್ಷಗಳಿಂದ ತಮ್ಮ ಪತ್ರಿಕೆಯನ್ನು ಓದುತ್ತಿದ್ದೇನೆ. ಲಂಕೇಶ್ ಪತ್ರಿಕೆಯ ಜನಪರ ನಿಲುವುಗಳ ಬಗ್ಗೆ ಗೌರವವಿಟ್ಟುಕೊಂಡಿದ್ದೇನೆ. ಆದರೆ ಈ ವಾರದ ವರದಿಯಲ್ಲಿ ನನ್ನ ಮೇಲೆ ತಮ್ಮ ಪತ್ರಿಕೆಯಲ್ಲಿ ತೇಜೋವಧೆ ಮಾಡಿರುವುದು ಸರಿಯಲ್ಲ. ತಮ್ಮ ವರದಿಗಾರರು ಮಾಡಿರುವ ಕೆಲ... ಆರೋಪಗಳು ಸತ್ಯಕ್ಕೆ ದೂರವಾಗಿದೆ ಎಂದು ತಮಗೆ ತಿಳಿಯಬಯಸುತ್ತೇ...

ನಾನು ಹದಿನೈದು ವರ್ಷಗಳ ಹಿಂದೆ ಸೈಕಲ್ ಶಾಪ್ ಇಟ್ಟುಕೊಂಡಿದ್ದು ನಿಜ. ನಾನು ಬಹಳ ಸಂಕಷ್ಟದಿಂದಲೇ ಜೀವನದಲ್ಲಿ ಬೆಳೆದುಬಂದಿದ್ದೇನೆ. ಜೀವನ ನಿರ್ವಹಣೆಗಾಗಿ ಲಾಟರಿ ಮಾರಿದ್ದೇನೆ, ಹಾಲು ವ್ಯಾಪಾರ ಮಾಡಿದ್ದೇನೆ, ಸೈಕಲ್ ಶಾಪ್ ನಡೆಸಿದ್ದೇನೆ. ಈ ರೀತಿ ಹತ್ತಾರು ವೃತ್ತಿಗಳನ್ನು ಮಾಡಿದ್ದೇನೆ. ಎಲ್ಲವೂ ನಿಜ. ಸೈಕಲ್ ಶಾಪ್ ಇಟ್ಟ ಮೇಲೆ ಪಂಕ್ಚರ್ ಹಾಕುವುದೂ ನ... ಕಾಯಕವಲ್ಲವೇ? ಹಾಗಿರುವಾಗ ಪದೇಪದೇ ಪಂಕ್ಚರ್ ಚಿಕ್ಕಣ್ಣ ಎಂದು ಹೇಳುವ ಮೂಲಕ ಹೀಯಾಳಿಸಿದ್ದು ಸರಿಯಲ್ಲವೆಂಬುದು ನನ್ನ ಭಾವನೆ. ನಾನು ಸಿಕ್ಕ ಅವಕಾಶವನ್ನು ಬಳಸಿಕೊಂಡು ಮೇಲೆ ಬಂದಿದ್ದೇನೆ. ಕಳೆದ **18** ವರ್ಷಗಳಿಂದ ಜನತಾದಳ ಪಕ್ಷದಲ್ಲಿದ್ದೇನೆ. ಟಿಕೆಟ್ ಕೊಡುವುದು ಬಿಡುವುದು ಪಕ್ಷದ ಕೆಲಸ. ಆದರೆ ನಾನೆಂದೂ ನನಗೇ ಟಿಕೆಟ್ ಎಂದು ಎಲ್ಲೂ ಹೇಳಿಕೊಂಡು ಬಂದಿಲ್ಲ. ಅಲ್ಲದೆ ಕಳೆದ ನಗರಸಭಾ ಚುನಾವಣೆಯ... ಪಕ್ಷದ ಕೆಲವರು ಸಾಕಷ್ಟು ವಿರೋಧ ವ್ಯಕ್ತಪಡಿಸಿದ್ದರೂ ವಾರ್ಡ್‌ನ ಜನ... ನನ್ನನ್ನು ಗೆಲ್ಲಿಸಿದ್ದಾರೆ. ನನ್ನ ವಾರ್ಡ್‌ನಲ್ಲಿ ಬಹುತೇ... ಸೌಲಭ್ಯಗಳನ್ನು ಒದಗಿಸಲು ಶಕ್ತಿಮೀರಿ ಯತ್ನಿಸಿದ್ದೇನೆ. ನಿರಂತರವಾಗಿ ಎಸ್ಟೇಟ್ ವೃತ್ತಿ ನನ್ನ ಕೈ ಹಿಡಿದಿದೆ. ಹಾಗೆಯೇ ಇತ್ತೀಚೆಗೆ ನಮ್ಮ ಪಕ್ಷದ ಸಂಸದ ಚಲುವರಾಯಸ್ವಾಮಿರವರಿಗೆ **50** ವರ್ಷ ತುಂಬಿದಾಗ ನಡೆದ ಕಾರ್ಯಕ್ರಮಕ್ಕೆ ಅಧಿಕಾರಿಗಳಿಂದ ಹಣ ಎತ್ತಿದ್ದೀರೆಂದು ವರದಿಯಲ್ಲಿದೆ. ಈ ರೀತಿ ಅಧಿಕಾರಿಗಳಿಂದ ಹಣ ಎತ್ತಿ ಕಾರ್ಯಕ್ರಮ ಮಾಡುವ ಹೀನಸ್ಥಿತಿಗಂತೂ ನಾನು ಇಳಿದಿಲ್ಲ.




ನಾನು ಲಂಕೇಶ್‌ರ ಜನಪರ ಕಾಳಜಿ, ನಿಷ್ಪಕ್ಷಪಾತ ನಿಲುವುಗಳನ್ನು ಗೌರವಿಸುವವನು. ಹಾಗೆಯೇ ನಿಮ್ಮ ಸಂಪಾದಕತ್ವದಲ್ಲಿ ಬರುತ್ತಿರುವ ಪತ್ರಿಕೆ ಅದೇ ಆಶಯಗಳನ್ನು ಹೊತ್ತು ಸಾಗುತ್ತಿದೆ. ದಯವಿಟ್ಟು ನನ್ನ ಸ್ಪಷ್ಟೀಕರಣವನ್ನು ಪ್ರಕಟಿಸಬೇಕೆಂದು ವಿನಮ್ರವಾಗಿ ಕೇಳಿಕೊಳ್ಳುತ್ತೇನೆ.

-ಎಂ.ಜೆ. ಚಿಕ್ಕಣ್ಣ, ನಗರಸಭಾ ಸದಸ್ಯರು, ಮಂಡ್ಯ

ಕರಾವಳಿಯಲ್ಲಿ ಪ್ರಜ್ಞಾವಂತ ಸಮಾಜ ಸಂಪೂರ್ಣವಾಗಿ ಸತ್ತಿರುವುದಕ್ಕೆ ಸಾಕ್ಷಿಯಾಗಿ ಉಮರಬ್ಬ, ಇಬ್ರಾಹಿಂ ಹಾಗೂ ರಂಜಿತ್ ಅಂತವರ ಮೇಲೆ ಅಮಾನುಷ ಹಲ್ಲೆಗಳಾಗುತ್ತಿವೆ.


ಹಲ್ಲೆ ಮಾಡುವ ಸಂಘ ಪರಿವಾರದ ಕಟುಕರಿಗೆ ಸಹಮಾನವರಿಗಿಂತ ದನಗಳೇ ಮುಖ್ಯವಾಗಿರುವುದು ದೊಡ್ಡ ವ್ಯಂಗ್ಯ. ಇವರಿಗೆ ದನಗಳ ಮೇಲೆ



ಸ್ಪೀಡ್ ನಾಣಿ!

ಎಸ್. ನಾರಾಯಣ್‌ಗೆ ಅದೆಲ್ಲಿಂದ ಈ ಪಾಟಿ ಎನರ್ಜಿ ಬರುತ್ತೋ ಗೊತ್ತಿಲ್ಲ. ವರ್ಷಕ್ಕೆ ಒಂದು ಸಿನಿಮಾ ಮಾಡುವವರೇ ಹೈರಾಣಾಗಿ ಹೋಗುತ್ತಾರೆ. ಆದರೆ ನಾಣಿ ಒಂದರ ಹಿಂದೆ ಒಂದರಂತೆ ಸಣ್ಣ ಗ್ಯಾಪ್ ಕೂಡಾ ಇಲ್ಲದೇ ರೀಲು ಸುತ್ತುತ್ತಲೇ ಇರುತ್ತಾರೆ. ಇಪ್ಪತ್ತೈದು ದಿನಗಳ ಹಿಂದೆ ನಾಣಿ ಮುನ್ನಾರ್‌ನಲ್ಲಿ 'ಶೈಲೂ' ಚಿತ್ರದ ಚಿತ್ರೀಕರಣವನ್ನು ಎಡೆಬಿಡದೆ ಮಾಡುವುದರಲ್ಲಿ ತಲ್ಲೀನರಾಗಿದ್ದರು. ಈಗ 'ಶೈಲೂ' ಶೂಟಿಂಗ್ ...ಗಿದು ಹದಿನೈದು ದಿನ ಮಾತ್ರ ಕಳೆದಿದೆ. ಈ ಗ್ಯಾಪ್‌ನಲ್ಲಿ ನಾಣಿ ಮೂರು ...ರ್ಷಗಳ ಹಿಂದೆ ಬರೆದಿಟ್ಟಿದ್ದ 'ಮುಂಜಾನೆ' ಚಿತ್ರಕ್ಕೆ ಸಂಭಾಷಣೆ ಬರೆದು ಮುಗಿಸಿದ್ದಾರೆ. ...ಷ್ಟವಲ್ಲ, ಮೊನ್ನೆ ಗಣೇಶ ಹಬ್ಬವಾದ ಮಾರನೇ ದಿನ ಬೆಳಗ್ಗೆ ನಾಲ್ಕೂವರೆ ಹೊತ್ತಿಗೇ ...ಮ್ಮ ಮನೆಯಲ್ಲೇ ಚಿತ್ರದ ಮುಹೂರ್ತವನ್ನು ಮುಗಿಸಿ ಅದೇ ದಿನ ಬಿಡದಿಗೆ ತೆರಳಿ ...ಟಿಂಗ್ ಆರಂಭಿಸಿಯೇ ಬಿಟ್ಟಿದ್ದಾರೆ.

ಅಂದಹಾಗೆ ಈ ಚಿತ್ರದಲ್ಲೂ ಗೋಲ್ಡನ್ ಸ್ಟಾರ್ ಗಣೇಶನೇ ಹೀರೋ. 'ಶೈಲೂ' ...ತ್ರದ ಶೂಟಿಂಗ್ ಸಮಯದಲ್ಲಿ ನಾಣಿ 'ಮುಂಜಾನೆ' ಬಗ್ಗೆ ಗಣೇಶ್‌ಗೆ ಹೇಳಿದ್ದರಂತೆ. ...ಲಿಗೆ ಈ ಕಥೆಯನ್ನು 'ಚೆಲುವಿನ ಚಿತ್ತಾರ'ದ ನಂತರ ಗಣೇಶ್‌ಗಾಗಿಯೇ ...ಡಿಟ್ಟುಕೊಂಡಿದ್ದರಂತೆ ನಾಣಿ. ಆದರೆ ಆ ವೇಳೆಗೆ ಗಣೇಶ್ ಸಿಕ್ಕಾಪಟ್ಟೆ ...ಸಿಯಾಗಿದ್ದರಿಂದ ಈ ಪ್ರಾಜೆಕ್ಟ್ ಅಲ್ಲಿಗೇ ನಿಂತುಹೋಗಿತ್ತಂತೆ. ಈಗ ಅಷ್ಟೇನು ...ಸಿ ಆಗಿಲ್ಲದ ಗಣೇಶ್ ಗ್ರೀನ್‌ಸಿಗ್ನಲ್ ನೀಡಿದ್ದೇ ತಡ ಹಗಲೂರಾತ್ರಿ ಕೂತು ...ಲಾಗು ಬರೆದು, ಸ್ವತಃ ನಾಣಿಯೇ ಸಂಗೀತವನ್ನೂ ಸಿದ್ದಪಡಿಸಿ ಚಿತ್ರೀಕರಣವನ್ನು ...ರಂಭಿಸಿದ್ದಾರೆ. ಗಣೇಶ್ ಕೂಡಾ ತನ್ನ ಮುಂದಿನ ಚಿತ್ರಗಳ ಐವರು ಪ್ರೊಡ್ಯೂಸರ್‌ಗಳನ್ನು ...ಮಂತಿಸಿ ಕಾಲ್‌ಶೀಟ್ ನೀಡಿದ್ದಾರೆ.



ಬಳ್ಳಾರಿ ಕೈದಿ

ಈ ಸಿನಿಮಾ ಮಂದಿ ಸಿಕ್ಕಾಪಟ್ಟೆ ಫಾಸ್ಟು!

ಅತ್ತ ಗಣಿ ಕಳ್ಳ ಜನಾರ್ದನ ರೆಡ್ಡಿ ಚಂಚಲಗುಡಾ ಜೈಲಿಗೆ ಹೋಗಿ ಬಿಸ್ಕೇಟು ತಿನ್ನುತ್ತಾ ಕೂತಿದ್ದಾಗ ಇತ್ತ ನಿರ್ಮಾಪಕ ಸೂರಪ್ಪ ಬಾಬು ಬಳ್ಳಾರಿ ಕಳ್ಳರ ಕುರಿತಾದ ಸಿನಿಮಾಕ್ಕೆ ಟೈಟಲ್ ರಿಜಿಸ್ಟರ್ ಮಾಡಿದ್ದಾರೆ.

ಕನ್ನಡ ಚಿತ್ರರಂಗದಲ್ಲಿ ಬಳ್ಳಾರಿ ಗಣಿ ರೆಡ್ಡಿಗಳ ವಿರುದ್ಧ ಮೊದಲು ದನಿಯೆತ್ತುವ ಧೈರ್ಯ ಮಾಡಿದ್ದು ಇದೇ ಸೂರಪ್ಪ ಬಾಬು. ಕಳೆದ ವರ್ಷ ಬಾಬು 'ಪೃಥ್ವಿ' ಎಂಬ ಸಿನಿಮಾವನ್ನು ನಿರ್ಮಿಸಿದ್ದರು. ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ತರಹದ ಕಮರ್ಷಿಯಲ್ ಹೀರೋನನ್ನು ಹಾಕಿಕೊಂಡು ಅಧಿಕಾರದ ಚುಕ್ಕಾಣಿ ಹಿಡಿದಿದ್ದ ರೆಡ್ಡಿಗಳ ವಿರುದ್ಧ ತಮ್ಮ ಸಿನಿಮಾದ ಮೂಲಕ ಕೂಗೆಬ್ಬಿಸಿದ್ದರು. ಬಳ್ಳಾರಿಯಲ್ಲಿ ನಡೆಯುತ್ತಿರುವ ಅಕ್ರಮ ಗಣಿಗಾರಿಕೆ, ಅದರಲ್ಲಿ ರೆಡ್ಡಿ ಸಹೋದರರ ಪಾತ್ರದ ಬಗ್ಗೆ 'ಪೃಥ್ವಿ'ಯಲ್ಲಿ ಬಿಡಿಬಿಡಿಯಾಗಿ ತೆರೆದಿಟ್ಟಿದ್ದರು. ಜೇಕಬ್ ವರ್ಗೀಸ್ ಈ ಚಿತ್ರವನ್ನು ಅದ್ಭುತವಾಗಿ ನಿರ್ದೇಶಿಸಿದ್ದರು.

ಈಗ ಅದೇ ಸೂರಪ್ಪ ಬಾಬು ಜನಾರ್ದನ ರೆಡ್ಡಿ ಜೈಲು ಪಾಲಾಗುತ್ತಿದ್ದಂತೇ 'ಬಳ್ಳಾರಿ ಕೈದಿ-697' ಎಂಬ ಶೀರ್ಷಿಕೆಯನ್ನು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯಲ್ಲಿ ರಿಜಿಸ್ಟರ್ ಮಾಡಿಸಿದ್ದಾರೆ.

ಸೂರಪ್ಪ ಬಾಬು ಬಳಿ ಸದ್ಯ ಹ್ಯಾಟ್ರಿಕ್ ಹೀರೋ ಶಿವರಾಜ್‌ಕುಮಾರ್ ಅವರ ಕಾಲ್‌ಶೀಟ್ ಇದೆ. ಶಿವಣ್ಣ ಕೂಡಾ ಕಥೆ ಸಿದ್ದಮಾಡಿಕೊಳ್ಳಿ ಎಂದು ಗ್ರೀನ್‌ಸಿಗ್ನಲ್ ನೀಡಿದ್ದಾರೆ. ಅಂದರೆ 'ಬಳ್ಳಾರಿ ಕೈದಿ' ಚಿತ್ರದಲ್ಲಿ ಶಿವಣ್ಣನೇ ನಾಯಕನಾಗಿ ನಟಿಸುತ್ತಾರಾ ಎಂಬ ಗುಮಾನಿ ಈಗ ಗಾಂಧಿನಗರದಲ್ಲಿ ತಲೆ ಎತ್ತಿದೆ.

ರಾಮ ರಾಜ್ಯಂ




ಆಂಧ್ರದಲ್ಲಿ ಬರೋಬ್ಬರಿ 15 ವರ್ಷಗಳ ದೊಡ್ಡ ಗ್ಯಾಪ್‌ನ ನಂತರ ಪೌರಾಣಿಕ ಚಿತ್ರವೊಂದು ಬಿಡುಗಡೆಯಾಗುತ್ತಿದೆ. 1996ರಲ್ಲಿ ಸಿಂಗೀತಂ ಶ್ರೀನಿವಾಸ್ ನಿರ್ದೇಶನದ 'ಕೃಷ್ಣಾರ್ಜುನ ವಿಜಯಂ' ಎಂಬ ಪೌರಾಣಿಕ ಸಿನಿಮಾವೊಂದು ತೆರೆಗೆ ಬಂದಿತ್ತು. ಈ ಚಿತ್ರದಲ್ಲಿ ನಟ ಬಾಲಕೃಷ್ಣ ಹೀರೋ ಆಗಿದ್ದರು. ಈಗ ಅದೇ ಬಾಲಕೃಷ್ಣ ನಟಿಸಿರುವ 'ಶ್ರೀರಾಮ ರಾಜ್ಯಂ' ಈ ತಿಂಗಳ ಅಂತ್ಯಕ್ಕೆ ಬಿಡುಗಡೆಗೊಳ್ಳುತ್ತಿದೆ. ಈ ಚಿತ್ರದಲ್ಲಿ ಸೀತೆಯ ಪಾತ್ರಕ್ಕೆ ಮೊದಲು ಮಾಧುರಿ ದೀಕ್ಷಿತ್ ಆಯ್ಕೆಯಾಗಿದ್ದಳು. ಆದರೆ ಈಗ ಆಕೆಗೆ ವಯಸ್ಸಾಗಿದೆ ಎಂಬ ಕಾರಣಕ್ಕೆ ಆಕೆಯ ಬದಲು ನಯನ್‌ತಾರಾಳನ್ನು ಆಯ್ಕೆ ಮಾಡಿಕೊಂಡರು. "ನಯನ್‌ತಾರಾ ಗ್ಲಾಮರ್ ನಟಿ. ಆಕೆಗೆ ಸೀತಾಮಾತೆ ಪಾತ್ರ ಕೊಟ್ಟರೆ ಹಿಂದೂ ಸಂಸ್ಕೃತಿಗೆ ಧಕ್ಕೆಯಾಗುತ್ತದೆ" ಎಂದು ಒಂದಿಷ್ಟು ಕೋತಿ ಸೈನ್ಯಗಳು ಚೆಡ್ಡಿ ಉದುರಿಹೋಗುವಂತೆ ಎಗರಾಡಿದ್ದವು. ಆದರೂ 85ರ ವಯೋವೃದ್ಧ ನಿರ್ದೇಶಕ ಬಾಪು ಮಾತ್ರ ನಯನಳನ್ನು ಬಿಡಲಿಲ್ಲ!

ಎಲಿಮಂಚಲಿ ಸಾಯಿಬಾಬಾ ಎಂಬ ನಿರ್ಮಾಪಕ ಈ ಚಿತ್ರಕ್ಕಾಗಿ ಸುಮಾರು 32 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಈ ದೊಡ್ಡ ಬಜೆಟ್ ಸಿನಿಮಾದ ಮುಂದೆ ಸಣ್ಣಪುಟ್ಟ ಹೀರೋಗಳು ನಟಿಸಿರುವ ಸಾಧಾರಣ ಚಿತ್ರಗಳು ಗಾಬರಿಗೆ ಬಿದ್ದು ಸೈಡಿಗೆ ನಿಂತಿವೆ.

ನಾಗ್ತಿಗೆ ರಾಕ್ ಕೊಕ್

ಕಳೆದ ಆಗಸ್ಟ್ 15 ರಂದು ಎಲ್ಲವೂ ಸುಸೂತ್ರವಾಗಿ ನಡೆದಿದ್ದರೆ ಅಂದು ನಾಗತಿಹಳ್ಳಿ ಚಂದ್ರಶೇಖರ್ ನಿರ್ದೇಶನದ ಹೊಸ ಚಿತ್ರವೊಂದು ಸೆಟ್ಟೇರಬೇಕಾಗಿತ್ತು. ಆದರೆ ಅದ್ಯಾಕೋ ಏನೋ ಕೊನೇಕ್ಷಣದಲ್ಲಿ ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್ ಅವರಿಗೆ ಈ ಚಿತ್ರದ ಮೇಲೆ ನಂಬಿಕೆ ಮೂಡಿಲ್ಲ. ಅವರು ಈ ಚಿತ್ರವನ್ನು ನಿರ್ಮಿಸುವ ನಿರ್ಧಾರದಿಂದ ಹಿಂದೆ ಸರಿದರು.

ಆದರೆ ನಾಗತಿಹಳ್ಳಿ ಚಂದ್ರಶೇಖರ್ ಅವರಿಗೆ ತಾವು ಬರೆದಿರುವ ಕಥೆ ಮತ್ತು ನಿರ್ದೇಶಿಸಲಿರುವ ಚಿತ್ರದ ಬಗ್ಗೆ ಎಲ್ಲಿಲ್ಲದ ಆತ್ಮವಿಶ್ವಾಸ ಮತ್ತು ನಂಬಿಕೆಯಿದೆ. ಈ ಕಾರಣಕ್ಕಾಗಿಯೇ ರಾಕ್‌ಲೈನ್ ವೆಂಕಟೇಶ್ ಹಿಂದೆ ಸರಿದಿದ್ದನ್ನು ನಾಗತಿಹಳ್ಳಿ ಒಂದು ಸವಾಲಾಗಿ ಸ್ವೀಕರಿಸಿ ತಾನೇ ಬಂಡವಾಳ ಹೂಡಿ ಈ ಚಿತ್ರವನ್ನು ನಿರ್ಮಿಸಲು ಹೊರಟಿದ್ದಾರೆ.




ಅವರಿಗೆ ಶುಭವಾಗಲಿ.

...ದಿಗಂತನ ಲೈಫು ಇಷ್ಟೇನೆ!

ಇತ್ತೀಚಿಗೆ ಸಿನಿಮಾಗಳ ಪ್ರಮೋಷನ್ ಕೆಲಸಗಳು ಎಷ್ಟು ವಿಚಿತ್ರವಾಗಿ ನಡೆಯುತ್ತಿದೆ ...ದರೆ ನಿಜಕ್ಕೂ ನಮ್ಮ ಗಾಂಧಿನಗರದ ಜನರಿಗೆ ತಲೆಯೇ ಇಲ್ಲ ಎನಿಸುತ್ತದೆ.

ಇದಕ್ಕೊಂದು ಸಿಂಪಲ್ ಉದಾಹರಣೆ ಇಲ್ಲಿದೆ: ಇತ್ತೀಚಿಗೆ ಡಿಂಪಲ್ ಸ್ಟಾರ್ ...ಗಂತ್ ನಟಿಸಿರುವ 'ಲೈಫ್ ಇಷ್ಟೇನೇ' ಚಿತ್ರದ ಕ್ಯಾಸೆಟ್ ಬಿಡುಗಡೆ ಸಮಾರಂಭ ...ಯಿತು. ಆ ಸಮಾರಂಭದಲ್ಲಿ ದಿಗಂತ್ ಬಗ್ಗೆ ಆತನ ಸಮ್ಮುಖದಲ್ಲೇ ತಬಲಾ ...ಣಿಯವರು ಕಿರುಹಾಸ್ಯ ನಾಟಕವೊಂದನ್ನು ಮಾಡಿದರು.

ಅದರಲ್ಲಿ ಒಟ್ಟಾರೆಯಾಗಿ ನಾಣಿ ಹೇಳಿ ಮಾಡಿತೋರಿಸಿದ್ದಿಷ್ಟೇ: ಈ ...ಗಂತ್ ಎಂಬ ಸುಂದರ ನಟ ಸಿಕ್ಕಾಪಟ್ಟೆ ಸೋಮಾರಿ, ಇವನು ...ವಾಗಲೂ ಎರಡು ಮೂರು ಹುಡುಗಿಯರ ಜೊತೆಗೆ ಸುತ್ತಾಡ್ತಾ ...ನೆ. ಇವನಿಗೆ ಹುಡುಗಿಯರ ಹುಚ್ಚು ಸಿಕ್ಕಾಪಟ್ಟೆ ಇದೆ. ಕೆಲಸದ ...ಮಯದಲ್ಲಿ ಯಾವಾಗಲೂ ಫೋನ್‌ನಲ್ಲಿ ಹುಡುಗಿಯರೊಂದಿಗೆ ...ಮಾತನಾಡ್ತಾನೆ ಇರ್ತಾನೆ... ಇತ್ಯಾದಿ ಇತ್ಯಾದಿ.



ತಮಾಷೆಯೆಂದರೆ ದಿಗಂತ್ ಇದೆಲ್ಲವನ್ನು ನೋಡಿ ಸಖತ್ ಎಂಜಾಯ್ ಮಾಡಿದ. "ಏನ್ ಸಾರ್, ನಿಮ್ಮನ್ನು ಈ ರೀತಿ ಅವಹೇಳನ ಮಾಡುತ್ತಿದ್ದಾರಲ್ಲ" ಎಂದು ಪತ್ರಕರ್ತರು ದಿಗಂತ್‌ನನ್ನು ಪ್ರಶ್ನಿಸಿದಾಗ "ನನಗೇನೂ ಹಾಗೆ ಅನಿಸುತ್ತಿಲ್ಲ, ಅವರು ನನ್ನ ಅನುಮತಿ ಪಡೆದಿದ್ದಾರೆ" ಎಂದು ನಗುತ್ತಾ ಉತ್ತರಿಸಿದ.

ಹಿಂದೆ ಒಂದು ಕಾಲವಿತ್ತು, ಆಗ ನಾಯಕ ನಟರನ್ನು ಅವರ ಅಭಿಮಾನಿಗಳ ಮುಂದೆ ದೇವರುಗಳಂತೆ ಪ್ರಾಜೆಕ್ಟ್ ಮಾಡುತ್ತಿದ್ದರು. ಸಿನಿಮಾದ ನಟನಟಿಯರು ಹುಲುಮಾನವರಿಗಿಂತ ವಿಭಿನ್ನರು ಎಂಬಂತೆ ಪೋಸು ಕೊಡುತ್ತಿದ್ದರು. ಆದರೀಗ ಸಿನಿಮಾದವರು ತಮ್ಮ ಚಿತ್ರದ ನಾಯಕ ಓರ್ವ ಪೋಲಿ ಹುಡುಗ ಎಂದು ಬಿಂಬಿಸುತ್ತಿದ್ದಾರೆ. ಕಾಲ ಎಷ್ಟು ಬದಲಾಗಿದೆ.

ಆದರೂ, ತನ್ನ ಬಗೆಗಿನ ಗೇಲಿಯನ್ನು ಅತ್ಯಂತ ಕ್ರೀಡಾ ಮನೋಭಾವದಿಂದ ಸ್ವೀಕರಿಸಿದ ದಿಗಂತ್‌ನನ್ನು ಮೆಚ್ಚಬೇಕು.

...ಷ್ಟು ಪ್ರೀತಿಯಿದ್ದಲ್ಲಿ ಜಗದೀಶ್ ಶೆಟ್ಟರಂತಹ ಅಶಕ್ತ ರೈತರ ಬಳಿಯಿರುವ ...ಗಳನ್ನು ಮಾರುಕಟ್ಟೆ ದರದಲ್ಲಿ ಕೊಂಡು ತಮಗೆ ಇಷ್ಟಬಂದ ರೀತಿಯಲ್ಲಿ ...ಹಲಿ.

ಹಲ್ಲೆಗೊಳಗಾದವರ ಮೇಲೆಯೇ ಕೇಸು ಜಡಿಯುವ ಪೊಲೀಸರು ಮನುಷ್ಯ ...ಕ್ಕೆ ಸೇರಿದವರು ಎಂಬ ಬಗ್ಗೆ ನನಗೆ ಅನುಮಾನವಿದೆ. ತಮ್ಮ ಇಂತಹ ...ರ್ಯದಿಂದಲೇ ಇವರು ನಕ್ಸಲೀಯರನ್ನು, ಉಗ್ರಗಾಮಿಗಳನ್ನು ...ಟ್ಟುಹಾಕುತ್ತಾರೆ.


ಇಂತಹ ಪಾಪಕೃತ್ಯಗಳಿಗೆ ಸಂಘಪರಿವಾರದವರಷ್ಟೇ ನಿರ್ಲಿಪ್ತ ಸೆಕ್ಯುಲರ್ ...ದಿಗಳು, ಸೆಕ್ಯೂಲರ್ ಹಣೆಪಟ್ಟಿ ಹೊತ್ತ ಪಕ್ಷಗಳೂ ಕಾರಣವಾಗಿವೆ.

ಅಣ್ಣಾ ಜೈಹೋ ಎಂಬ ಭ್ರಾಮಕ ಸುದ್ದಿಮಾಧ್ಯಮದ ಲೋಕದೊಳಗೆ ...ಮ್ಮ ಜನರ ನೀಚತನದ ಕರಾಳಲೋಕವನ್ನು ಎತ್ತಿ ತೋರಿಸುವ ನಮ್ಮೆಲ್ಲರ ...ಸಾಕ್ಷಿಪ್ರಜ್ಞೆಯಂತಿರುವ ಜಿ. ರಾಜಶೇಖರ್ ಮತ್ತು ಕೆ. ಫಣಿರಾಜ್ ಅವರ ...ಂತಹ ಲೇಖನಗಳನ್ನು ನಾನು ಲಂಕೇಶ್‌ನಲ್ಲಿ ಸದಾ ಹುಡುಕಿ ಓದುವುದು.

-ಸರ್ಜಾಶಂಕರ ಹರಳಿಮಠ, ಶಿವಮೊಗ್ಗ

ಇತರ ರಾಜ್ಯಗಳೊಂದಿಗೆ ಹೋಲಿಸಿದರೆ ಕರ್ನಾಟಕ 60, 70, 80ರ ...ಶಕಗಳಲ್ಲಿ (80-82 ರ ಗುಂಡೂರಾವ್ ಅವರ ಸರ್ಕಾರ ಹೊರತುಪಡಿಸಿ) ...ರಾಜಕೀಯವಾಗಿ ಸಹನೀಯವಾದಂತಹ, ಅನೇಕಬಾರಿ ಮಾದರಿಯಾದಂತಹ, ...ಉತ್ತಮ ಸರ್ಕಾರಗಳನ್ನು ಹೊಂದಿತ್ತು. ಆ ಕಾಲಘಟ್ಟಗಳಲ್ಲಿ ಅನೇಕ ರೀತಿಯ ...ಭ್ರಷ್ಟಾಚಾರ, ಗೂಂಡಾಗಿರಿ, ಜಾತೀವಾದ ನಡೆದಿದ್ದರೂ ಎಂದೂ ಅಗಿನ ಸರ್ಕಾರಗಳು ಬಾಲಿಶತನವನ್ನಾಗಲಿ ತೋರಲಿಲ್ಲ; ಸಾಮಾಜಿಕ ಮತ್ತು ರಾಜಕೀಯ ಅಸಹಾಯಕತೆಗಳನ್ನು ಪ್ರದರ್ಶಿಸಿರಲಿಲ್ಲ.

ಆದರೆ ತಾನು ಭಿನ್ನ ರೀತಿಯ ಪಕ್ಷ ಎಂದು ಹೇಳಿಕೊಂಡು ಅಧಿಕಾರಕ್ಕೆ ಬಂದ ಬಿಜೆಪಿ 2004 ರಿಂದೀಚೆಗೆ ಕಳೆದ 7 ವರ್ಷಗಳಲ್ಲಿ ರಾಜಕೀಯವಾಗಿ, ಸಾರ್ವಜನಿಕವಾಗಿ ರಾಜ್ಯ ಹಿಂದೆಂದೂ ಕಂಡರಿಯದಂತಹ ಅಧೋಗತಿಗೆ, ದುರಂತಮಯ ಸ್ಥಿತಿಗೆ ರಾಜ್ಯವನ್ನು ತಳ್ಳಿದೆ.



'ಆಪರೇಶನ್ ಕಮಲ'ದಂತಹ ಅನೈತಿಕ ಕಾರ್ಯಾಚರಣೆಯ ಮೂಲಕ ತನಗೆ ಜನರ ಬೆಂಬಲವಿದೆ ಎಂಬ ಭ್ರಮೆಯಲ್ಲಿ ಮೆರೆದ ಬಿಜೆಪಿ ಈ ರಾಜ್ಯ ಹಿಂದೆಂದೂ ಕಂಡರಿಯದ ಭ್ರಷ್ಟಾಚಾರದ ಒಂದು ದೊಡ್ಡ ಪರಂಪರೆಯನ್ನೇ ಸೃಷ್ಟಿಸಿದೆ. ಈಗ ಅದರ ತಾತ್ಕಾಲಿಕ ಫಲವನ್ನು ಅನುಭವಿಸುತ್ತಿದೆ. ಕರ್ನಾಟಕದ ಕಳಂಕವಾದ ಭ್ರಷ್ಟ ರೆಡ್ಡಿಗಳ ಪಡೆ ಕಾಲೂರುವಂತಾಗಿದೆ.

ಕರ್ನಾಟಕದ ಮಟ್ಟಿಗೆ ಬಿಜೆಪಿಯ ಸ್ಥಿತಿಯನ್ನು ಭಸ್ಮಾಸುರನ ಸ್ಥಿತಿಗೆ ಹೋಲಿಸಬಹುದು. ಇದಕ್ಕೆ ಪ್ರಮುಖ ವಿರೋಧ ಪಕ್ಷವಾದ ಕಾಂಗ್ರೆಸ್ ಪಕ್ಷದ ಸಂಪೂರ್ಣ ನಿರ್ಜೀವ ಅನಾಯಕತ್ವ, ಕುಮಾರಸ್ವಾಮಿಯವರ ಸೇಡಿನ ರಾಜಕೀಯ ಕಾರಣವೆನ್ನಬಹುದು. ಭ್ರಷ್ಟಾಚಾರದಲ್ಲಿ ತೊಡಗಿ ಈ ರಾಜ್ಯವನ್ನು ಕುಲಗೆಡಿಸಿದ ಯಡಿಯೂರಪ್ಪ ಮತ್ತು ರೆಡ್ಡಿಗಳಿಗೆ ಶಿಕ್ಷೆ ಆಗಲೇಬೇಕು. ಆಪರೇಶನ್ ಕಮಲ'ದ ಮೂಲಕ ಆಯ್ಕೆಯಾದ ಎಲ್ಲ ಶಾಸಕರನ್ನು ವಜಾಗೊಳಿಸಬೇಕು.

- ಬಿ. ಶ್ರೀಪಾದ್‌ಭಟ್, ಬೆಂಗಳೂರು

ಸೆಪ್ಟಂಬರ್ 7ರ ಸಂಚಿಕೆಯಲ್ಲಿ ಪ್ರಕಟಗೊಂಡ ಅರುಂಧತಿ ರಾಯ್ ಅವರ 'ನಾನು ಅಣ್ಣಾ ಆಗಲಾರೆ' ಲೇಖನ ತುಂಬಾ ಅದ್ಭುತವಾಗಿದೆ. ಈ ಲೇಖನವನ್ನು ನಮ್ಮ ಸಮಾಜಶಾಸ್ತ್ರ ಉಪನ್ಯಾಸಕರು ತರಗತಿಗೆ ತಂದು ಅದನ್ನು ಚರ್ಚಿತ ವಿಷಯವಾಗಿ ರೂಪಿಸಿ, ಅಣ್ಣಾ ಹಜಾರೆ ಅವರ ಸರಿ-ತಪ್ಪುಗಳ ಬಗ್ಗೆ ವಿಶ್ಲೇಷಿಸಿದರು.

ಪ್ರತಿ ಬಾರಿಯೂ ಗೌರಿ ಲಂಕೇಶ್ ಪತ್ರಿಕೆಯೇ ನಮ್ಮ ಜ್ಞಾನದ ಭಂಡಾರವಾಗಿ ಚರ್ಚಾ ವಿಷಯವಾಗಿರುವುದು ಸಂತೋಷದ ಸಂಗತಿಯಾಗಿದೆ.

- ಮುಸ್ತಾಫ ಕೆ.ಎಚ್, ಕೊಡಗು


ವ್ಯವಸ್ಥೆ ಒಳ್ಳೆಯತನವನ್ನು ಸಂಪೂರ್ಣ ಬುಡಮೇಲು ಮಾಡಲು ಏನೆಲ್ಲಾ ಅಸ್ತ್ರ ಪ್ರಯೋಗಿಸುತ್ತದೆ ಎನ್ನುವುದಕ್ಕೆ ಸೆಹಲಾ ಮಸೂದ್‌ಳ ಪ್ರಕರಣ ಸಾಕ್ಷಿಯಾಗಿದೆ. ಭ್ರಷ್ಟರ ಕೂಟ ಮಸೂದ್ ಅವರನ್ನು ಬಲಿ ತೆಗೆದುಕೊಂಡು ಅಂತಹ ಕಾರ್ಯದಲ್ಲಿ ಯಾರಾದರೂ ತೊಡಗಿದರೆ ನಿಮಗೂ ಇದೇ ಗತಿ ಎನ್ನುವುದನ್ನು ಪರೋಕ್ಷವಾಗಿ ಹೇಳಿದೆ. ಹಾಗಾದರೆ ಮಾಹಿತಿ ಹಕ್ಕಿನಂತಹ ಕಾನೂನುಗಳು ಇರುವುದು ಕ್ರೈಂಗಳನ್ನು ಹೆಚ್ಚಿಸುವುದಕ್ಕಾ ಎನ್ನುವ ಪ್ರಶ್ನೆ ಮೂಡುತ್ತದೆ.

ಭ್ರಷ್ಟಾಚಾರದ ಬಗ್ಗೆ ಇಷ್ಟಗಲ ಬಾಯಿ ಮಾಡುವ ಬಿಜೆಪಿ ಪಕ್ಷ ತನ್ನದೇ ಆಡಳಿತವಿರುವ ಮಧ್ಯಪ್ರದೇಶದಲ್ಲಿ ಮಾಹಿತಿ ಹಕ್ಕು ಹೋರಾಟಗಾರ್ತಿ ಸೆಹಲಾ ಅವರ ಹತ್ಯೆ ನಡೆದಿರುವುದು ಅದರ ನೀತಿ ಯಾವ ಕಡೆಗೆ ಇದೆ ಎನ್ನುವುದನ್ನು ತೋರಿಸುತ್ತದೆ. ರಾಜ್ಯಸಭಾ ಸದಸ್ಯ ತರುಣ್ ವಿಜಯ್, ಶಾಸಕ ಧ್ರುವ ನಾರಾಯಣ, ಐಜಿಪಿ ಪವನ್ ಶ್ರೀವಾಸ್ತವ್ ಅವರ ಹೆಸರುಗಳು ಈ ಹತ್ಯೆಯ ಹಿಂದೆ ತಳಕು ಹಾಕಿಕೊಂಡಿರುವುದು ಗಮನಿಸಿದರೆ ಅಧಿಕಾರಶಾಹಿ, ಆಡಳಿತಶಾಹಿ ಜೊತೆಗೂಡಿ ಏನೆಲ್ಲಾ ಅವಾಂತರ ಸೃಷ್ಟಿಸುತ್ತಿದೆ ಎನ್ನುವುದು ಕಾಣದಿರದು.

'ಭ್ರಷ್ಟರ ವಿರುದ್ಧ ಹೋರಾಡಿ ಮಡಿದ ಸೆಹಲಾ' ಲೇಖನವನ್ನೋದಿ ಕ್ಷಣಕಾಲ ಅತ್ತುಬಿಟ್ಟೆ. ಸಿರಿವಂತ ಕುಟುಂಬದಿಂದ ಬಂದರೂ ಭ್ರಷ್ಟಕೂಟದ ವಿರುದ್ಧ ಸಮರ ಸಾರಿ ಕಣ್ಮರೆಯಾದ ಸೆಹಲಾ ಮಸೂದ್ ಎಂದಿಗೂ ಅಜರಾಮರ. ಆಕೆಯ ದಾರುಣ ಅಂತ್ಯಕ್ಕೆ ಕಾರಣವಾದ ಕೈಗಳಿಗೆ ಸೂಕ್ತ ಶಿಕ್ಷೆ ಆಗಬೇಕಿದೆ.

- ಹಳ್ಳಿ ಬಸವರಾಜ, ಹಸಮಕಲ್ (ಸಿಂಧನೂರು)

...ಪತ್ರಿಕೆಯು ಈಗಿನ ಮುಖ್ಯಮಂತ್ರಿಯನ್ನು ಯಡಿಯೂರಪ್ಪನ 'ಗುಲಾಮ' ಎಂದು ಕರೆದದ್ದು ಸೂಕ್ತವಾಗಿದೆ. ಇಂತಹ ಸರ್ಕಾರದಡಿ ಪ್ರಜೆಗಳಾದ ನಾವು ಬದುಕಬೇಕಾದ ಸ್ಥಿತಿ ಬಂದಿದೆಯಲ್ಲಾ ಎಂಬ ಬೇಸರ ಕಾಡುತ್ತಿದೆ.



ಮತ್ತೊಂದು ವಿಚಾರ: ನಾವು ವಿಚಾರಿಸಿ, ವಿಚಾರಿಸಿ ಸಾಕಾಗಿಹೋಗಿದೆ. ಅವಮಾನವೂ ಆಗಿದೆ. ದಯವಿಟ್ಟು ...ರಾಮದಾಸ್ ಅವರನ್ನು ಕುರಿತ ಒಂದು ಸುಂದರ ಪುಸ್ತಕವನ್ನು ನೀವು ಪ್ರಕಟಿಸಲೇಬೇಕು. ನಾವೆಲ್ಲ ಸಹಾಯ ಮಾಡಲು ...ಸಿದ್ಧರಿದ್ದೇವೆ. ಈ ಹಿಂದೆ ಬೇರೆಯವರು ಇದರ ಆಲೋಚನೆ ಮಾಡಿದ ಸಂಗತಿಯನ್ನು ಮರೆತುಬಿಡಿ. ಬಹಳ ವರ್ಷಗಳ ...ಹಿಂದೆ ಇಂತಹದ್ದೇ ಪತ್ರವನ್ನು ನಾನು ಬರೆದಿದ್ದರಿಂದ ಲಂಕೇಶರು ಕೂಡಲೆ 'ಪಾಂಚಾಲಿ'ಯನ್ನು ಹೊರತರಲು ಸಹಕರಿಸಿತ್ತು. ...ಅದೀಗ ನೆನಪಿಗೆ ಬರುತ್ತಿದೆ. ಶ್ರೀ ಎಚ್.ಎಲ್.ಕೇಶವಮೂರ್ತಿ ಅವರನ್ನು ಒಂದು ಸಾರಿ ಕೇಳಿ ನೋಡಿ. ರಾಮದಾಸ್ ...ಕುರಿತ ಪುಸ್ತಕದ ಕೆಲಸ ಮುಂದುವರೆಸಿರಿ. ಲೋಕಾಯುಕ್ತರ ವರದಿಯನ್ನೇ ಮಿಂಚಿನವೇಗದಲ್ಲಿ ಜನಸಾಮಾನ್ಯರಿಗೆ ಒದಗಿಸಿದ ...ನಿಮ್ಮ ತಂಡಕ್ಕೆ ರಾಮದಾಸ್ ಅವರನ್ನು ಕುರಿತ ಕೃತಿಯನ್ನು ಪ್ರಕಟಿಸುವುದು ಯಾವ ಕಷ್ಟದ ಕೆಲಸ ಮಾರಾಯರೆ?! ಯಾರೋ ತರುತ್ತಾರೆಂದು ಖಂಡಿತ ಕಾಯಬೇಡಿ. ರಾಮದಾಸ್ ಅವರ ತರಹೇವಾರಿ ಚಿತ್ರಗಳನ್ನು ನೀವು ಸೂಚಿಸಿದ ...ಕೂಡಲೇ ತಲುಪಿಸುವೆನು. ಜೊತೆಗೆ ಸುಂದರೇಶ್ ಸ್ಮಾರಕದ ಎದುರು ಲಂಕೇಶರು ಗೆಳೆಯರೊಂದಿಗೆ ನಿಂತಿರುವ ಚಿತ್ರವೂ ಇದೆ. ಕಳಿಸಲೇನು?

- ನಿಮ್ಮವನೇ ಆದ ಕದಿದಾಳು ಶಾಮಣ್ಣ, ರೈತ, ಭಗವತಿಕೆರೆ.

Regd.No.KA/RNP/BGS/2036/2011-13 Posted at : GPO, Bangalore-01. Fri/Saturday R B P LANKESH, Kannada Weekly Price Rs. 14/- 21-9-2011 RNI No. KARKAN2005



ಪಯಣ ರವಿಯ ಪರದಾಟ

ಡಾ. ರಾಜ್‌ಕುಮಾರ್ 'ಸಿಲ್ಲಿ ಲಲ್ಲಿ' ಧಾರಾವಾಹಿಯನ್ನು ನೋಡಿದಾಗ ಲೆಲ್ಲಾ ಆ ಧಾರಾವಾಹಿಯ ಡಾ. ವಿಠಲ್ ರಾವ್ ಪಾತ್ರಧಾರಿ ರವಿಶಂಕರ್‌ರನ್ನು ನೋಡಿ "'ಭಕ್ತ ಅಂಬರೀಶ' ಸಿನಿಮಾ ಮಾಡಿದರೆ ಅದರಲ್ಲಿ ಈ ಹುಡುಗನಿಗೆ ಒಳ್ಳೆ ಅವಕಾಶ ಕೊಡಬೇಕು" ಎನ್ನುತ್ತಿದ್ದರಂತೆ. ರವಿಶಂಕರ್ ಅವರ ಮಜಬೂತಾದ ಕಾಮಿಡಿ ನಟನೆಗಾಗಿಯೇ ಪ್ರತಿದಿನವೂ ತಪ್ಪದೇ ಆ ಧಾರಾವಾಹಿಯನ್ನು ನೋಡುತ್ತಿದ್ದರಂತೆ. ಡಾ.ರಾಜ್‌ರಂಥ ಮಹಾನ್ ನಟ ತನ್ನ ನಟನೆಯ ಬಗ್ಗೆ ಈ ಪರಿ ಅಭಿಮಾನ ಹೊಂದಿದ್ದರು ಎಂಬ ವಿಚಾರ ರವಿಶಂಕರ್‌ಗೆ ಗೊತ್ತಾಗಿದ್ದೇ ಇತ್ತೀಚೆಗಂತೆ.

ತನ್ನ ಸಹಜ ನಟನೆಯಿಂದ ಈಗ ಅಪಾರ ಜನಪ್ರಿಯತೆ ಪಡೆದಿರುವ ರವಿಶಂಕರ್ ಅದೇಕೋ ಚಿತ್ರರಂಗದಲ್ಲಿ ಮಾತ್ರ ಇನ್ನೂ ಉತ್ತಮ ನೆಲೆ ಕಂಡುಕೊಳ್ಳದೆ 'ಪರದಾಟ' ನಡೆಸುತ್ತಿದ್ದಾರೆ.



ಮೊನ್ನೆ ರಿಲೀಜ್ ಆಗಿ ಅಟ್ಟರ್ ಫ್ಲಾಪ್ ಆಗಿರುವ 'ಜೋಗಯ್ಯ' ಚಿತ್ರದಲ್ಲಿ ಶಿವಣ್ಣನಿಗೆ ಸರಿಗಟ್ಟುವಂತೆ ನಟಿಸಿರುವ ರವಿಶಂಕರ್ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. 'ಪಯಣ' ಚಿತ್ರದ ಮೂಲಕ ಹೀರೋ ಆಗಿ ಎಂಟ್ರಿ ಕೊಟ್ಟ ರವಿ ನಂತರ 'ನಂಜನಗೂಡು ನಂಜುಂಡ' ಸೇರಿದಂತೆ ಒಂದಿಷ್ಟು ಸಿನಿಮಾಗಳಲ್ಲಿ ನಟಿಸಿದರೂ ಯಾವುವೂ ಕೈಹಿಡಿದಿಲ್ಲ. ಸದ್ಯ 'ಹಕ್ಕ ಬುಕ್ಕ' ಎಂಬ ಸಿನಿಮಾದಲ್ಲೂ ನಾಯಕನಾಗಿ ನಟಿಸುತ್ತಿರುವ ರವಿ 'ಪರದಾಟ' ಎಂಬ ಮತ್ತೊಂದು ಸಿನಿಮಾದಲ್ಲೂ ನಟಿಸುತ್ತಿದ್ದಾರೆ. ಇಷ್ಟು ದಿನ ಮ್ಯೂಸಿಕ್ ಡೈರೆಕ್ಟರ್ ಆಗಿದ್ದ ಸಂಗೀತಸಾಗರ್ ಎನ್ನುವ ಯುವಕ ನಿರ್ದೇಶಿಸುತ್ತಿರುವ ಈ ಚಿತ್ರದಿಂದಲಾದರೂ ರವಿಶಂಕರ್ ಎಂಬ ಪ್ರತಿಭಾವಂತನ 'ಪರದಾಟ' ನಿಂತು ಆತನಿಗೆ ಯಶಸ್ಸು ಸಿಗುವಂತಾಗಲಿ.

ಗೋಲ್ಡ್‌ಗೆ ಪವರ್ ಸಾಂಗ್

ಪವರ್ ಸ್ಟಾರ್ ಪುನೀತ್‌ರಾಜ್‌ಕುಮಾರ್ ಮತ್ತು ಗೋಲ್ಡನ್ ಸ್ಟಾರ್ ಗಣೇಶ್ ನಡುವೆ ಎಲ್ಲವೂ ಸರಿಯಿಲ್ಲವಂತೆ ಹೌದೇ? ಗಣೇಶ್‌ನ ಜನಪ್ರಿಯತೆಯನ್ನು ಕಂಡು ಸಹಿಸಲಾಗದ ಪುನೀತ್ ರಾಜ್‌ಕುಮಾರ್ ಕಡೆಯ ಹುಡುಗರು ಆತನಿಗೆ ಗೂಸ ಇಕ್ಕಿದರಂತೆ ನಿಜವಾ? ಗಣೇಶ್ ಕೂಡ ಭಾ ಧಿಮಾಕು ಮಾಡಿ "ನಾನು ಯಾವ ಗಾ ಫಾದರ್ ಇಲ್ಲದೆ ಕನ್ನಡ ಚಿತ್ರರಂಗದಲ್ಲಿ ಗೆ ಎಂದು ಪುನೀತ್‌ಗೆ ಗಣೇಶ್ ಟಾಂ ಕೊಟ್ಟನಂತೆ ಗೊತ್ತಾ? - ಇವೆಲ್ಲ ಗಣೆ ನಟನೆಯ 'ಮುಂಗಾರು ಮಳೆ' ಹಿಟ್ ಆ ಗಾಂಧಿನಗರದಲ್ಲಿ ಕೇಳಿಬಂದ ವ ಇದಾದನಂತರ ಅನೇಕ ಸಮಾರಂಭಗಳಲ್ಲಿ ಹೀರೋಗಳಿಬ್ಬರೂ ಇಂತಹ ಊಹಾ ಗಳನ್ನು ನಿರಾಕರಿಸಿದ್ದರು, ಅನೇಕ ಬಾರಿ ವೇದಿ ಪರಸ್ಪರ ಆಲಂಗಿಸಿ ತಮ್ಮ ನಡುವಿನ ಸ್ನೇಹವನ್ನು ಪ್ರದರ್ಶಿಸಿದ್ದರು. ಈಗ ಅ ವೃತ್ತಿಜೀವನ ಮತ್ತೊಂದು ಮಜಲು ತಲುಪಿದೆ. ಅದೇನೆಂದರೆ ಗಣೇಶ್ ನಟಿಸ 'ಶೈಲು' ಚಿತ್ರದ ಒಂದು ಹಾಡನ್ನು ಪುನೀತ್ ರಾಜ್‌ಕುಮಾರ್ ಹಾ ಗಾಂಧಿನಗರದಲ್ಲಿ ಸಾಮಾನ್ಯವಾಗಿ ಒಬ್ಬ ನಾಯಕ ನಟ ಇನ್ನೊಬ್ಬ ನಾಯಕ ನ ಹಾಡುವುದು ಅಪರೂಪ. ಅದರಲ್ಲೂ ತನಗಿಂತ ಜನಪ್ರಿಯತೆಯಲ್ಲಿ ನೋಡುವುದಿಲ್ಲ ನಟನತ್ತ ಓರ್ವ ಪಾಪ್ಯುಲರ್ ಸ್ಟಾರ್ ತಿರುಗಿಯೂ ನೋಡುವುದಿಲ್ಲ. ಗಣೇಶ್ ಚಿತ್ರಕ್ಕೆ ಪುನೀತ್ ಹಾಡುವ ಮೂಲಕ ತಾನೊಬ್ಬ ಸ್ವಚ್ಛ ಮನಸ್ಸಿನ ಎನ್ನುವುದನ್ನೂ ತೋರಿಸಿದ್ದಾರೆ.



ಧನದಾಹಿ ಪಂಡಿತೆ

ಮೂರು ಬಾರಿ ಫಿಲಂ ಫೇರ್ ಪ್ರಶಸ್ತಿ ಮತ್ತು ಒಂದು ಬಾರಿ ರಾಜ್ಯ ಚಲನಚಿತ್ರ ಪ್ರಶಸ್ತಿಯನ್ನು ಪಡೆದ ಬೊಗಸೆ ಕಂಗಳ ನಾಯಕಿ ರಾಧಿಕಾ ಪಂಡಿತ್ ತುಂಬಾ ಬುದ್ಧಿವಂತೆ ಎಂದೂ, ಕಲಾತ್ಮಕ ಚಿತ್ರಗಳ ಪರ ಒಲವು ಹೊಂದಿದ್ದಾಳೆಂದೂ ನೀವು ಭಾವಿಸಿದ್ದರೆ ನಿಮ್ಮ ಊಹೆ ತಪ್ಪು.

ಮೊನ್ನೆ ಪತ್ರಕರ್ತರೊಂದಿಗೆ ಪ್ರಶಸ್ತಿಗಳ ಬಗ್ಗೆ ಮತ್ತು ಪಾತ್ರಗಳ ಬಗ್ಗೆ ಮಾತನಾಡುತ್ತಿರುವಾಗ ರಾಧಿಕಾ ಪಂಡಿತಳ ನಿಜವಾದ ಬಣ್ಣ ಬಯಲಾಯಿತು. ಆರಂಭದಲ್ಲಿ "ನಾನು ಉತ್ತಮ ಪಾತ್ರಗಳನ್ನು ಆಯ್ಕೆ ಮಾಡುತ್ತೇನೆ. ಅದಕ್ಕೆ ನೂರಕ್ಕೆ ನೂರು ಜೀವ ತುಂಬುವ ಪ್ರಯತ್ನ ಮಾಡುತ್ತೇನೆ. ಇದೇ ನನಗೆ ಪ್ರಶಸ್ತಿ ಬರಲು ಮುಖ್ಯ ಕಾರಣ. ಈ ಪ್ರಶಸ್ತಿಗಳಿಂದಾಗಿ ಜನ ನನ್ನನ್ನು ನೋಡುವ ದೃಷ್ಟಿಕೋನವೂ ಬದಲಾಗಿದೆ. ಪ್ರಶಸ್ತಿಗಳಿಂದಾಗಿ ಒಂದು ಹೊಸ ಜವಾಬ್ದಾರಿ ಕೂಡ ಬಂದಿದೆ" ಎಂದು ಆಕೆ ಹೇಳಿದಾಗ ಈ ಹುಡುಗಿ ಪರವಾಗಿಲ್ಲ ಎಂದೆನಿಸಿತು. ಅಷ್ಟೇ ಅಲ್ಲದೆ ಆಕೆ "ಅತ್ಯುತ್ತಮವಾದ ಕಥಾವಸ್ತುವಿನ ಒಂದು ಚಿತ್ರವನ್ನು ನಾನು ನಿರಾಕರಿಸಿದ್ದೇನೆ. ಆ ಪಾತ್ರ ಮಾಡಿದ್ದರೆ ನನಗೆ ಖಂಡಿತವಾಗಿ ರಾಷ್ಟ್ರ ಪ್ರಶಸ್ತಿ ದೊರಕುತ್ತಿತ್ತು" ಎಂದಾಗ ಕುತೂಹಲವಾಯಿತು. ಯಾವ ಕಾರಣಕ್ಕಾಗಿ ಆ ಪಾತ್ರವನ್ನು ನಿರಾಕರಿಸಿದ್ದೀರಿ ಎಂದು ಹೇಳಿದಾಗ ಈ ಪ್ರಶಸ್ತಿಗಳ ಬಾಲೆ ಹೇಳಿದ್ದೇನು ಗೊತ್ತೇ? "ನಾನು ಆ ಪಾತ್ರದಲ್ಲಿ ಕಾಣಿಸಿಕೊಂಡಿದ್ದರೆ ನನ್ನ ಕಮರ್ಷಿಯಲ್ ಚಿತ್ರ ಜೀವನಕ್ಕೆ ತೊಂದರೆಯಾಗುತ್ತಿತ್ತು, ಆ ಕಾರಣಕ್ಕಾಗಿ ಆ ಚಿತ್ರವನ್ನು ನಿರಾಕರಿಸಿದೆ" ಎಂದಳು!



ರಾಷ್ಟ್ರ ಪ್ರಶಸ್ತಿ ತರುವಂತಹ ಪಾತ್ರವನ್ನು ನಿರ್ವಹಿಸುವುದರಿಂದ ನಿಮ್ಮ ವೃತ್ತಿಜೀವನಕ್ಕೆ ಯಾವ ರೀತಿ ತೊಂದರೆಯಾಗುತ್ತಿತ್ತು ಎಂದು ಕೆಣಕಿದಾಗ ಆಕೆ "ನಾನು ಆ ಪಾತ್ರಕ್ಕಾಗಿ ಮೇಕಪ್ ಇಲ್ಲದೇ ನಟಿಸಬೇಕಾಗುತ್ತಿತ್ತು, ಅಷ್ಟೇ ಅಲ್ಲ ನನ್ನ ಮೈ ಬಣ್ಣವನ್ನು ಕಪ್ಪಗೆ ಮಾಡಬೇಕಾಗುತ್ತಿತ್ತು, ಈ ಚಿತ್ರಕ್ಕಾಗಿ ನಾನು ಎರಡು ಮೂರು ಕಮರ್ಷಿಯಲ್ ಚಿತ್ರಗಳನ್ನು ತ್ಯಾಗ ಮಾಡಬೇಕಾಗುತ್ತಿತ್ತು, ನನ್ನ ಬ್ಯುಸಿ ಷೆಡ್ಯೂಲ್ ನಡುವೆ ನನಗೆ ಇದಕ್ಕಾಗಿ ಸಮಯ ಎಲ್ಲಿದೆ ಹೇಳಿ?" ಎಂದು ಪತ್ರಕರ್ತರನ್ನೇ ಮರುಪ್ರಶ್ನಿಸಿದಳು.

ಒಂದು ವೇಳೆ ಆ ಮೂರು ಕಮರ್ಷಿಯಲ್ ಚಿತ್ರಗಳ ಸಂಭಾವನೆಯನ್ನು ಈ ಚಿತ್ರಕ್ಕಾಗಿ ನೀಡಿದರೆ ನೀವು ಪಾತ್ರ ಮಾಡುತ್ತೀರಾ ಎಂದು ಹೇಳಿದಾಕ್ಷಣ ಆಕೆ "ಅಷ್ಟು ಹಣ ಕೊಟ್ಟರೆ ಖಂಡಿತ ಮಾಡುತ್ತೇನೆ" ಎಂದು ಒಪ್ಪಿಕೊಂಡಳು!

– ಶೆಣೈ

ರಜನಿ–ಕಾಂ

'ದುನಿಯಾ' ವಿಜಯ್ ಮೊಟ್ಟಮೊದಲ ಬಾರಿಗೆ ದ್ವಿಪ ನಟಿಸುತ್ತಿದ್ದಾರೆ. ಅಷ್ಟೇ ಅಲ್ಲ, ವಿಜಿ ಕಾಲೇಜ್ ಸ್ಟೂಡೆಂಟ ಕಾಣಿಸಿಕೊಳ್ಳುತ್ತಿರುವುದೂ ಇದೇ ಮೊದಲು. 'ಕಿರಾತಕ' ನಿರ್ದೇಶಕ ಪ್ರದೀಪ್ ರಾಜ್ ನಿರ್ದೇಶಿಸುತ್ತಿರುವ ಈ 'ರಜನಿಕಾಂತ' ಎಂಬ ಹೆಸರನ್ನಿಟ್ಟಿದ್ದಾರೆ.

ಸಾಮಾನ್ಯವಾಗಿ ಡ್ಯುಯೆಲ್ ರೋಲ್ ಎಂದಾಕ್ಷಣ ಅವಳಿಜ ಕಥೆಯೇ ಆಗಿರುತ್ತದೆ. ಆದರೆ 'ರಜನಿಕಾಂತ' ಚಿತ್ರದಲ್ಲಿ ವರ್ಷ ಅಂತರದಲ್ಲಿ ಜನಿಸಿದ ಇಬ್ಬರು ಸಹೋದರರ ನ ಈಗೋ ಕ್ಲಾಷ್‌ಗಳು, ಕಿತ್ತಾಟಗಳು, ತಾಯಿಯ ಸೆಂಟಿ ಎಲ್ಲವನ್ನೂ ಸೇರಿಸಿ ಕಥೆ ಸಿದ್ಧಪಡಿಸಲಾಗಿದೆಯಂತೆ. ಕೆ. ನಿರ್ಮಿಸುತ್ತಿರುವ ಈ ಸಿನಿಮಾದ ಶೂಟಿಂಗ್ ಆಕ್ಟೋಬರ್ ವಾರದಲ್ಲಿ ಶುರುವಾಗಲಿದೆ.

ನಿರ್ದೇಶಕ ಪ್ರದೀಪ್ ಮೂಲತಃ ಕನ್ನಡದವರೇ ಆದರೂ ದಶಕಗಳ ಕಾಲ ತಮಿಳು ಚಿತ್ರರಂಗದಲ್ಲಿ ಅಸೋಸಿಯೇಟ ದುಡಿದವರು. ಅವರು ನಿರ್ದೇಶಿಸಿದ ಮೊದಲ ಚಿತ್ರ ' ರಿಮೇಕ್ ಆದರೂ ಐವತ್ತು ದಿನ ಓಡಿತ್ತು, ಈಗ ಎರಡನೇ ಸ್ವಂತ ಕಥೆಯನ್ನೇ ಆಯ್ಕೆ ಮಾಡಿಕೊಂಡಿದ್ದಾರೆ.

ದುನಿಯಾ ವಿ

ಪಾಯಿಂಟ್ ಬ್ಲಾಂಕ್

1. ಕನಸುಗಳು ನನಸಾಗಬೇಕೆಂದರೆ: ಕಷ್ಟ ಪಡಬೇಕು, ಶ್ರದ್ಧೆ
2. ನಿಜವಾಗಲೂ ಬ್ಲಾಕ್ ಕೋಬ್ರಾ ಕಂಡ್ರೆ?: ಅದು ಅಂತ ನೋಡ್ತೀನಿ.
3. ಇಬ್ಬರು ಹೆಂಡತಿಯರಿದ್ದರೆ ಜೀವನ: ಶಿವ, ವೆಂಕ ಸುಬ್ರಮಣ್ಯರಿಗೆ ಗೊತ್ತು
4. ಲೋಕಪಾಲ್ ಬೇಕೋ ಜನಲೋಕಪಾಲ್ ಯಾವುದು ಸರಿ ಅಂತಾ ನೀವೇ ಹೇಳಿ.
5. ಮೊನ್ನೆ ಜೈಲಿಗೆ ಹೋದವರು: ಮತ್ತೆ ಬಾರದಿರಲಿ.
6. ಈಗಿನ ಲೋಕಾಯುಕ್ತರು: ಪ್ರಾಮಾ ಇನ್ನೊಂದು ಹೆಸರು.
7. ಸೋನಿಯಾ ಗಾಂಧಿ ಅಥವಾ ಸುಷ್ಮಾ ಸ್ವ ಇಬ್ಬರೂ ಇರಲಿ, ಶಾಂತಿಯಿಂದ ಆಳ್ವಿಕೆ ಮ
8. ಎಮರ್ಜೆನ್ಸಿ ಅಂದ್ರೆ: ಏನಪ್ಪಾ ಹಂಗ ಬಂದ ತಕ್ಷಣ ಹೇಳ್ತೀನಿ.
9. ನನಗೆ ತುಂಬಾ ಇಷ್ಟವಾದವರು: ಜಗತ್ತಿನಲ್ಲಿ ಹುಟ್ಟ ಎಲ್ಲರೂ.
10. ಪದ್ಮಾವತಿ ಅಂದರೆ: ಶ್ರೀಮಾನ್ ವೆಂಕಟೇಶ್ವರನ ಹ

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427,
Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, ...